ಸುಮಧುರ ಮಾಸಿಕ


ಭಾವನಾ


ಜೂನ್ 2001 ರೂ.7






MAGNUM INTERGRAFIKS





ಈಚೆ, ನಾಡಿನ ಅಕ್ಕರೆಯ ಹಿರೀಕ ಎ.ಎನ್. ಮೂರ್ತಿರಾವ್ ಅವರೊಡನೆ ಒಂದು ಆತ್ಮೀಯ ಮಾತುಕತೆಯ ಕಾರ್ಯಕ್ರಮ ಏರ್ಪಟ್ಟಿತ್ತು.

ಪ್ರಶ್ನೆ ಕೇಳಬೇಕೆಂದೇ ಪ್ರಶ್ನೆ ಕೇಳುವವರು, ಉತ್ತರದಲ್ಲಿ ಆಸಕ್ತಿ ಇಲ್ಲದೆ, ತಿಳಿದದ್ದನ್ನು (ಅಥವಾ ಹಾಗೆಂದು ತಿಳಕೊಂಡದ್ದನ್ನು) ತೋರಿಸಲಿಕ್ಕೇ ಪ್ರಶ್ನೆ ಕೇಳುವವರು, ಇಂಥವರೆಲ್ಲರೂ ಅಲ್ಲಿದ್ದರು.



''ಸಾರ್, ನಾನೊಂದು ಪ್ರಶ್ನೆ ಕೇಳ್ತಿದೀನಿ. ಅದರಲ್ಲಿ ಮೂರು ಪ್ರಶ್ನೆಗಳು ಅಡಕವಾಗಿವೆ...'' ಎಂದೊಬ್ಬರು ಭರ್ಜರಿಯಾಗಿ ಆರಂಭಿಸಿದ್ದೇ, ಮೂರ್ತಿರಾವ್ ಮೆಲುದನಿಯಲ್ಲಿ, ''ವಯಸ್ಸಾಯ್ತಪ್ಪ ಒಂದೊಂದೇ ಕೇಳಿ...'' ಎಂದರು.


ತಬ್ಬಿಬ್ಬಾದ ಪ್ರಶ್ನೆಗಾರ ಅಂತೂ ಒಂದು ಪ್ರಶ್ನೆ ಕೇಳಿದರು. ಮೂರ್ತಿರಾಯರು ಉತ್ತರವನ್ನೂ ಕೊಟ್ಟರು. ಪ್ರಶ್ನೆಗಾರರಿಗೆ ಸಮಾಧಾನವಾಗದೆ, ''ನಾನು ಕೇಳಿದ್ದು ಒಂದು, ನೀವು ಹೇಳಿದ್ದು ಇನ್ನೊಂದು, ಇರಲಿ ಬಿಡಿ...'' ಎಂದು ರಿಯಾಯಿತಿ ದನಿಯಲ್ಲಿ ಹೇಳಿದ್ದೇ, ಮೂರ್ತಿರಾವ್ ತಟ್ಟನೆ ಚುರುಕಾಗಿ, ''ಇರಲಿ ಅಂದ್ರೆ ಹೇಗಪ್ಪಾ, ಮತ್ತೊಮ್ಮೆ ಕೇಳಿ... ಪ್ರಯತ್ನಿಸ್ತೀನಿ'' ಎಂದರು.

ಕಾರ್ಯಕ್ರಮದ ಕೊನೆಯಲ್ಲಿ, ''ನಿಮ್ಮ ದೇಹ ಮತ್ತು ಮನಸ್ಸಿನ ಆರೋಗ್ಯದ ಗುಟ್ಟೇನು?'' ಎಂದು ಕೇಳಿದಾಗ ಮೂರ್ತಿರಾವ್ ಹೇಳಿದರು:

''ಮನಸ್ಸು ಚೆನ್ನಾಗಿ ಇಟ್ಕೊಳ್ಳಿ. ನಮ್ಮ ಮನಸ್ಸು ಚೆನ್ನಾಗೇ ಇರುತ್ತೆ. ಸುಮ್ಮನೆ ಅವರ ಬಗ್ಗೆ ಇವರ ಬಗ್ಗೆ ಆಡಿಕೊಂಡು, ಯೋಚಿಸಿಕೊಂಡು, ಅದನ್ನು ಹಾಳು ಮಾಡ್ಕೋತೀವಿ. ಯಾರ ಬಗ್ಗೆ ಹಾಳುಮಾಡಿಕೋತೇವೋ ಅವರು ಮಾತ್ರ ಎಲ್ಲೋ ಮಸಾಲೆ ದೋಸೆ ತಿಂದ್ಕೊಂಡು ಹಾಯಾಗಿರ್ತಾರೆ.''

ಸಂಬಂಧಗಳನ್ನು ಸಹಜವಾಗಿಸಿ, ಯಾತ್ರೆಯನ್ನು ಹಗುರಾಗಿಸಬಲ್ಲ ತಿಳಿವಿನ ತೇಜದ ಈ ತಾತನಿಗೆ ಮಮತೆಯ ವಂದನೆ.

ಸಂಪಾದಕ



ಭಾವ ಲೋಕ

ಕತೆಗಳು

ಶತಮಾನದ ಮೆಲುಕು

ವಿಶ್ವ ಭಾರತಿ

ಕವಿ ಸಮಯ





ಭಾವನಾ

ಅಂಕಣಗಳು

ಸಂಪುಟ -2 ಸಂಚಿಕೆ - 3

ಜೂನ್ 2001

ಪ್ರಕಾಶಕರು, ಮುದ್ರಕರು, ಮಾಲಿಕರು
ವಿಜಯ ಸಂಕೇಶ್ವರ
ಆನಂದ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್

ಸಂಪಾದಕ
ಜಯಂತ ಕಾಯ್ಕಿಣಿ

ಮುಖಪುಟ ಕಲಾಕೃತಿ : ಜಿ. ಕೆ. ಸತ್ಯ

ಸಂಚಿಕೆಯ ಕಲಾವಿದರು : ಸೃಜನ್, ರಾವ್‌ಬೈಲ್, ಇಕ್ಬಾಲ್ ಅಹ್ಮದ್, ಗೀತಾ ಸಾಳುಂಕೆ, ಪ್ರೀತಿ ಸಂಯುಕ್ತಾ, ದೇವದಾಸ್, ಕಮಲಮ್ ಅರಸು, ರಾಮಕೃಷ್ಣ ಸಿದ್ರಪಾಲ, ಬಾಸುಮಾ, ಗಣೇಶ ಕೋಡೂರು, ಎಚ್.ವಿ. ಸಾವಿತ್ರಮ್ಮ, ಪ್ರವೀಣ್ ರಬಕವಿ, ಸೋಮವರದ, ಶೇಷಾದ್ರಿ ಹೊಳವನಹಳ್ಳಿ, ಶಶಿಧರ್, ಭಾವೂ ಪತ್ತಾರ್, ಎನ್.ಆರ್. ಬಡಿಗೇರ್ ಎಸ್. ವಿ. ಪದ್ಮನಾಭ್, ಶ್ರೀಪಾದ್

ಸಂಪಾದಕೀಯ ಕಾರ್ಯಾಲಯ
ನಂ. 38, ಎ.ಎಂ. ರಸ್ತೆ, ಕಲಾಸಿಪಾಳ್ಯಂ ನ್ಯೂ ಎಕ್ಸ್‌ಟೆನ್‌ಷನ್
ಬೆಂಗಳೂರು - 560 002
ಫೋನ್: 2246350, 2226044, 2229102
ಫ್ಯಾಕ್ಸ್: 080-2246349
E-mail: vksbc@ bgl.vsnl.net.in

ಪ್ರಧಾನ ಕಛೇರಿ
ಗಿರಿರಾಜ ಅನೆಕ್ಸ್
ಸರ್ಕ್ಯೂಟ್ ಹೌಸ್ ರಸ್ತೆ, ಹುಬ್ಬಳ್ಳಿ
ದೂರವಾಣಿ: 0836-253656, 253657
ಫ್ಯಾಕ್ಸ್: 0836-253630



ಮೊಗ್ಗಿನ ಜಡೆ

ಜಿಪುಣ ಮುದುಕ

ಒಂದು ಊರಿನಲ್ಲಿ ಸರಸಮ್ಮ, ಗುಂಡಪ್ಪ ಎಂಬ ಮುದುಕ, ಮುದುಕಿ ಇದ್ದರು. ಗುಂಡಪ್ಪ ಜಿಪುಣ ಅಂದ್ರೆ ಜಿಪುಣ. ಸರಸಮ್ಮ ಧಾರಾಳತನ ಅಂದ್ರೆ ಧಾರಾಳತನ. ಗುಂಡಪ್ಪ ಒಂದು ಅಕ್ಕಿ ಕೂಡ ಕೆಳಗೆ ಚೆಲ್ಲಲು ಬಿಡುತ್ತಿರಲಿಲ್ಲ. ಆದರೆ ಸರಸಮ್ಮ ಅರ್ಧ ಕೆ.ಜಿ. ಅಕ್ಕಿಯನ್ನು ಪಕ್ಕದ ಮನೆಗೆ ಧಾರಾಳವಾಗಿ ಕೊಡುತ್ತಿದ್ದಳು. ಮುದುಕಿ ಅಕ್ಕಿಯನ್ನು ಪಕ್ಕದ ಮನೆಗೆ ಕೊಡೋದು ಮುದುಕನಿಗೆ ಗೊತ್ತಿರಲಿಲ್ಲ. ಒಂದು ದಿನ ಸರಸಮ್ಮ ಎಚ್ಚರ ತಪ್ಪಿ ನೆಲಕ್ಕೆ ಬಿದ್ದಳು. ಆಗ ಮುದುಕನಿಗೆ ಏನು ಮಾಡಬೇಕೆಂದು ತೋಚದೆ ಯಾರಾದರೂ ಸಹಾಯ ಮಾಡಿ ಎಂದು ಕಿರುಚಿಕೊಂಡನು. ತಕ್ಷಣ ಪಕ್ಕದ ಮನೆಯವರು ಓಡಿ ಬಂದರು. ಆಮೇಲೆ ಮುದುಕಿಯನ್ನು ಆಸ್ಪತ್ರೆಗೆ ಸೇರಿಸಿ ಸಹಾಯ ಮಾಡಿದರು. ಆಗ ಮುದುಕನಿಗೆ ಬುದ್ಧಿ ಬಂತು. ಜಿಪುಣತನವನ್ನು ಬಿಟ್ಟನು.

ಸೀಮಾ ರಾವ್
11 ವರ್ಷ
ಕೆ.ಜಿ.ಎಫ್.

ಗಿಳಿ

ಹಸಿರು ಬಣ್ಣದ ಗಿಳಿ
ಕೆಂಪು ಕೊಕ್ಕಿನ ಗಿಳಿ
ಅಕ್ಕ ಎಂದು ಕೂಗುತ್ತೆ
ಪಕ್ಕ ಆಟ ಆಡುತ್ತೆ

ಕರಡಿ

ಕುಣಿಯುತ ಬಂತು ಕರಡಿ
ನೋಡುವ ಎಲ್ಲರೂ ಹೊರಡಿ
ಕರಡಿಯ ಕೊರಳಿನ ಸರಪಳಿ
ಜಗ್ಗುತಲಿರುವ ಪ್ರಾಣಿಯು ಯಾವುದು ಹೇಳಿ



ಬಿ.ಟಿ. ಆಶಾರಾಣಿ
ಬಿ.ಎಲ್. ಕೊಪ್ಪಲು, ಹಾಸನ ಜಿಲ್ಲೆ

ಇದು ಮುದ್ದು ಮಕ್ಕಳ ಮುಕ್ತ ಪುಟ. ಮಕ್ಕಳೇ ಬರೆದ ಚಿತ್ರ, ಕಥೆ, ಚುಟುಕ, ಕವಿತೆಗಳಿಗೆ ಸ್ವಾಗತ.

ಮಳೆರಾಯ



ಅಭಯ್ ಜಿ. ಚಿನಿವಾರ್
ಏಳನೆಯ ತರಗತಿ
ಹಾಸನ

ಮಳೆರಾಯ ಮಳೆರಾಯ,
ಬಂದೇಬಿಡು ಮಳೆರಾಯ
ಎಲ್ಲರ ಪ್ರೀತಿಯ ಮಳೆರಾಯ

ಬಿಸಿಲಲ್ಲಿ ಸುಟ್ಟೂ ಸುಟ್ಟೂ,
ಫ್ಯಾನ್ ಕೆಳಗೆ ಕೆಟ್ಟೂ - ಕೆಟ್ಟೂ,
ಕಣ್ಣೆಲ್ಲಾ ಕೆಂಪಾಗೈತಲ್ಲೋ!
ಬೇಗ ಬಾರೋ ಮಹರಾಯ

ಕಾಗದದ ದೋಣಿ ಮಾಡಿದ್ದೇನೆ,
ಖಾರಾ ಪುರಿ ಕಲಸಿದ್ದೇನೆ
ಬಿಸಿ ಚಹ ಕೂಡ ತಯಾರಿದೆಯಲ್ಲೋ!
ಟಪ-ಟಪ ಎಂದು ಇಳಿಯೋ ನನ್ನಪ್ಪ

ಕೆರೆ ಕಟ್ಟೆ ಒಣಗೋಗೈತೆ
ಪ್ರಾಣಿ ಪಕ್ಷಿ ಮೇಲ್ನೋಡ್ತೈತೆ
ಕಪ್ಪೆ ಕೂಡ ವಟರ್ ಅಂತೈತಲ್ಲೋ!
ಈಗ್ಲಾದ್ರು ಬಾರೋ ದಮ್ಮಯ್ಯಾ

ಭಾಜಾ ಭಜಂತ್ರಿ ಬೇಕಾ ನಿನಗೆ?
ಗುಡುಗು ಮಿಂಚು ಇಲ್ವಾ ಜೊತೆಗೆ?
ಹೊಸ ಅಂಗಿ ನಾನೆಲ್ಲಿಂದ ತರಲೋ !
ಹೇಗಿದ್ರೂ, ನನ್‌ರಾಜ, ನೀ ಚೆಂದ ಕಾಣೋ !!

ಸಮೀರ್ ಎ.ಎಂ.
8ನೇ ತರಗತಿ
ಗಾಜನೂರು



ಚಾಲುಕುಡಿ ಟ್ರೇನು

ಚಾಲುಕುಡಿ

ಚೆಂದದ ಹೆಸರು. ಕೇರಳದ ತ್ರಿಚೂರ್‌ನ ಪಟ್ಟಣ. ಪಟ್ಟಣ ಎಂದರೆ ಪಟ್ಟಣ. ಊರು ಎಂದರೆ ಊರು. ಹಳ್ಳಿ ಎಂದರೆ ಹಳ್ಳಿ.

ಚಾಲುಕುಡಿಯಲ್ಲೊಂದು ಬೆಂಗಳೂರಿದೆ. ಬೆಂಗಳೂರಿನಲ್ಲೊಂದು ಚಾಲುಕುಡಿಯಿದೆ. ಚಾಲುಕುಡಿಯಿಂದ ಬೆಂಗಳೂರಿಗೆ ಟ್ರೇನಿನಲ್ಲಿ ಪಯಣಿಸುವಾಗ ಕಣ್ಣೆಂಬ ಲೆನ್ಸು ಅಸಂಖ್ಯ ಸಲ ಕ್ಲಿಕ್ಕಾಗಿದೆ. ತಲೆಯೆಂಬ ಕ್ಯಾಮರಾದಲ್ಲಿ ಸ್ನಾಪ್‌ಗಳಿಗೆ ಮಿತಿಯಿಲ್ಲ. ಮಿದುಳ ಹಾಳೆಗಳಲ್ಲಿ ಚಿತ್ರಗಳು ಚೆಂದವಾಗಿ, ವಕ್ರವಾಗಿ, ಅಸ್ಪಷ್ಟವಾಗಿ ಪ್ರಿಂಟಾಗುತ್ತವೆ. ಕೆಲವು ಶೇಕ್ ಆದ ಚಿತ್ರಗಳು!

ಚಾಲುಕುಡಿಯಿಂದ ಹೊರಟ ಕನ್ಯಾಕುಮಾರಿ ಎಕ್ಸ್‌ಪ್ರೆಸ್ ಕೊನೆಗೆ ಬೆಂಗಳೂರಿಗೇ ಬಂದು ತಲುಪಿರಬಹುದಾದರೂ ಅದು ಉತ್ತರ ಕನ್ನಡದ ಕಿರವತ್ತಿಗೆ ಬಂದಿತ್ತು. ಕವಡಿಕೆರೆಯ ಬರಗೋಡಿ ಮೋರಿ, ಗವೆಗುಳಿ ಮಾಚಣ್ಣನ ಗ್ಯಾರೇಜು, ಜಕ್ಕೊಡೆ ಗದ್ದೆಗಳನ್ನೆಲ್ಲ ತೋರಿಸಿತು ಎಂದರೆ ವಿಚಿತ್ರವೆನಿಸಬಹುದು. ಕಿರವತ್ತಿಗೆ ಟ್ರೇನಿಲ್ಲ!

ಚಾಲುಕುಡಿ ರೈಲ್ವೇ ಸ್ಟೇಷನ್‌ನಲ್ಲಿ ಯಲ್ಲಾಪುರ ಬಸ್ ಸ್ಟ್ಯಾಂಡ್ ಹಮಾಲಿ ಪಾಂಡು ಸಿಕ್ಕಿದ್ದ. ಪಾಂಡು ಎಂದರೆ ಪಾಂಡುವಲ್ಲ. ಮುಖ ಬೇರೆ ಇರಬಹುದು. ಮೈಕಟ್ಟು ಬೇರೆ ಇರಬಹುದು. ಮಲಯಾಳಿ ಮಾತಾಡುತ್ತಿರಬಹುದು. ಆದರೆ ಅವನು ಲಗೇಜ್‌ಗಳನ್ನು ಹಳಿ ದಾಟಿಸಿದ. 25 ರೂಪಾಯಿಗೆ ಒಂದೇ ಒಂದು ರೂಪಾಯಿ ಕಡಿಮೆ ಹಮಾಲಿ ಮುಟ್ಟಲು ಒಪ್ಪಲಿಲ್ಲ. 'ಇಂದು ಯಾರೂ ಗಿರಾಕಿ ಸಿಗಲಿಲ್ಲವಾಗಿ 25 ರೂಪಾಯಿಗೆ ಹಮಾಲಿ ಮಾಡಿದೆ. ಇಲ್ಲದಿದ್ರೆ 50ಕ್ಕೆ ಕಡಿಮೆ ಒಂದು ರೂಪಾಯಿ ಕೊಟ್ಟರೂ ಮುಟ್ಟುತ್ತಿರಲಿಲ್ಲ' ಎಂದ. ಅವನಲ್ಲಿ ಪಾಂಡು ಕಂಡದ್ದೇ ಆಗ.

ಟ್ರೇನು ಅಂದೂ ಬೇಗ ಬರಲಿಲ್ಲ. ಸ್ಟೇಷನ್ ಮುಂದೆ ಕೂಲಿಯೊಬ್ಬ ಕಬ್ಬಿಣದ ಹಳಿಗೆ ಆಯಿಲ್ ಬಡಿಯುತ್ತ ಸಾಗುತ್ತಿದ್ದ. ಆತ ಹಾಗೇ ಹೋದರೆ ಒಂದು ದಿನ ಬೆಂಗಳೂರು ತಲುಪುತ್ತಾನೆ. ಅದಕ್ಕೆ ಎಷ್ಟು ದಿನ ಹಿಡಿಯಬಹುದು ಎಂದು ಲೆಕ್ಕ ಹಾಕುತ್ತಿದ್ದೆ. ನಮಗಿಂತ ಮೊದಲಂತೂ ಮುಟ್ಟಲಿಕ್ಕಿಲ್ಲ ಎಂದು ಸಮಾಧಾನ ಮಾಡಿಕೊಳ್ಳುವಷ್ಟರಲ್ಲಿ ಟ್ರೇನು ಬಂತು.

ಟ್ರೇನು ಹತ್ತುವಾಗ ಮಂಗಳೂರು ನೆನಪಾಯಿತು. ಮೊಟ್ಟಮೊದಲ ಸಲ ನಾನು ಟ್ರೇನು ಹತ್ತಿದ್ದು ಮಂಗಳೂರಿನಲ್ಲಿ.


ಕಿಟಕಿ ಪಕ್ಕದಲ್ಲಿ ಕುಳಿತುಕೊಂಡೆ, ಟ್ರೇನು ಬೆಂಗಳೂರ ಕಡೆಗೆ ಹರಿಯುತ್ತಿತ್ತು. ಸ್ವಲ್ಪವೇ ಹೊತ್ತಿನಲ್ಲಿ ಕಣ್ಣಿಗೆ ಬಿತ್ತು ಒಂದು ಕೊಳಚೆ. ಅಲ್ಲಿ ನನಗೆ ಕಂಡಿದ್ದು ಜಡ್ಡಿ. ಜಡ್ಡಿ ಎಂದರೆ ನಾನು ಮೊದಲ ಸಲ ನೋಡಿದ ಯಲ್ಲಾಪುರದ ಕೊಳಚೆ.

ಟ್ರೇನಿನಲ್ಲಿ ಹೋಗುತ್ತ ನನಗೆ, ಬರಗೋಡಿ ಮೋರಿಯ ಪಕ್ಕದಲ್ಲಿ ಸೌದೆ ಹೊತ್ತು ಹೋಗುವ ಕವಡಿಕೆರೆ ಹೆಂಗಸರು ಸಿಕ್ಕಿದರು. ಇನ್ನೊಂದು ಸ್ಟೇಷನ್‌ಗೆ ತಲುಪುವಾಗ ಹಳಿ ಪಕ್ಕದಲ್ಲಿ ಪೇರಿಸಿಟ್ಟ ಕಬ್ಬಿಣದ

ರಾಡುಗಳು, ಬಾರ್‌ಗಳ ಮಧ್ಯೆ ಗವೆಗುಳಿ ಮಾಚಣ್ಣನ ಗ್ಯಾರೇಜು.

ಪಾಲ್‌ಘಾಟ್ ಬಂತು, ಅದನ್ನು ದಾಟುವಾಗ ಕಂಡ ಮರದ ತುಂಡುಗಳ ರಾಶಿಯಲ್ಲಿ ಕಿರವತ್ತಿಯ ಟಿಂಬರ್ ಡಿಪೋ, ಯಲ್ಲಾಪುರ ರೇಂಜ್ ಆಫೀಸಿತ್ತು. ಮುಂದಿನ ಸ್ಟೇಷನ್‌ನಲ್ಲಿ ಬೇಡುತ್ತ ಕುಳಿತ, ಮಸಿ, ಮುಸುರೆ ಬಳಿದುಕೊಂಡು ಸಿಂಬಳ ಸುರಿಸುತ್ತಿರುವ ಮಕ್ಕಳ ಕಂಗಳಲ್ಲಿ ಸೋಮಾಲಿಯಾ. ಪಕ್ಕದಲ್ಲಿಯೇ ಕೋಲಾ ಕಂಪನಿ ಹೈಟೆಕ್ ಜಾಹೀರಾತಿನಲ್ಲಿ ಅಮೆರಿಕ!

ಟ್ರೇನಿನಲ್ಲಿ ಹೋಗುವಾಗ ನಮಗೆ ಮನೆಯ ಮುಖ ಕಾಣುವುದಿಲ್ಲ. ಬರಿ ಹಿತ್ತಲುಗಳು. ಬರಿ ಹಿಂಬದಿಯ ಬಾಗಿಲುಗಳು. ಯಾವಾಗಲೂ ಟ್ರೇನು ಹಿತ್ತಲಲ್ಲೇ ಪ್ರಯಾಣಿಸುತ್ತದೆ. ಹಾಗೇ ಟ್ರೇನಲ್ಲಿ ಹೋಗುತ್ತಲೇ ಇರುವಾಗ ಬಸ್ಸು ಕಂಡರೆ, ಬಸ್ಸಲ್ಲಿ ಹೋಗುವಾಗ ಟ್ರೇನು ಕಂಡರೆ ಆಗುವಂಥ ಪುಳಕ.


ಗೀತಾ ಸಾಳುಂಕೆ

ಹಿತ್ತಲಾದುದರಿಂದ ಎಲ್ಲಿ ನೋಡಿದರೂ ತಿಪ್ಪೆ ಸುರಿದ ಚಿತ್ರ. ಡೊಂಕಳ್ಳದ ಗಿಡ್ಡಾ ಸಿದ್ದಿಯ ಮನೆಯ ಹಿಂದಿನ ಜರುಕಲಂತೂ ಎಷ್ಟುಸಲ ಕಂಡಿತೆಂದು ಲೆಕ್ಕವಿಲ್ಲ. ಕಟ್ಟೆಯ ಮೇಲೆ ಮಕ್ಕಳ ನೋಡಿದಾಗಲೆಲ್ಲ ಬಾಯಿಪಾತ!

ಕೊಯಿಮತ್ತೂರಿನಲ್ಲಿ ಟ್ರೇನು ನಿಂತುಕೊಂಡಿತು. ಬೂಟುಗಾಲಿನ ದಡಬಡ ಸದ್ದು. ಮಧ್ಯೆ ಗೆಜ್ಜೆಯ ಘಲ್ ಘಲ್! ಕಣ್ತೆರೆದರೆ ನನ್ನ ಪಕ್ಕದಲ್ಲಿ ಒಬ್ಬಳು ಹುಡುಗಿ.

ಅಲ್ಲಿಂದ ನಾನು ಸೆಟೆದು ಕುಳಿತೆ. ಸೀರಿಯ ಸ್ಲಾಗಿ ಖುಷ್ವಂತ್ ಸಿಂಗ್ ಕಥೆ ಓದತೊಡಗಿದೆ. ಕುಳಿತ ಶೈಲಿಯಲ್ಲಿ ಸುಧಾರಣೆಯಾಯಿತು. ಹೊರಕ್ಕೆ ನೋಡುವ ರೀತಿ ಬೇರೆಯಾಯಿತು. ಎದುರಿಗೆ ಕುಳಿತುಕೊಂಡು ನನ್ನೊಡನೆ ಹರಟುತ್ತಿದ್ದ ಪುಟ್ಟಿಯೊಂದಿಗೆ ನನ್ನ ಹರಟೆ ಹೆಚ್ಚು ಗಂಭೀರವಾಯಿತು!

ಪೋಲಿಯೋ ಆಗಿ ಕಾಲು ಸೊಟ್ಟಾದ ಹುಡುಗನೊಬ್ಬ ಕಸ ದೂಡುತ್ತ ಬಂದ. ಪಾಲ್‌ಘಾಟ್‌ನಲ್ಲಿಯೂ ಒಬ್ಬ ಹೀಗೇ ಬಂದಿದ್ದ. ಆದರೆ ಈ ಸಲ ನಾನು ಅವನಿಗೆ ಐದು ರೂಪಾಯಿ ಕೊಟ್ಟೆ. ಅವನೊಂದಿಗೆ ಚೆನ್ನಾಗಿ ಮಾತಾಡಿದೆ. ಅವನ ಕಷ್ಟ ಸುಖ ವಿಚಾರಿಸಿದೆ.

ಎದುರು ಸೀಟಲ್ಲಿ ಕುಳಿತ ಮುದುಕನೊಬ್ಬ ನೀರು ಕೇಳುತ್ತಿದ್ದುದಕ್ಕೆ, ನಾನು ಯಾರಿಗೂ ಕೊಡದೇ ಗುಟ್ಟಾಗಿ ಇಟ್ಟುಕೊಂಡಿದ್ದ ಬಿಸಿಲೇರಿ ಬಾಟಲನ್ನೇ ಧಾರಾಳವಾಗಿ ನೀಡಿದೆ. ಎದುರಿಗೆ ಕುಳಿತಿದ್ದ ಪುಟ್ಟಿಯನ್ನು ಮತ್ತಷ್ಟು ಮುದ್ದಿಸಿದೆ. ಅವಳಿಗೆ ಓಶೋ ಕತೆಯನ್ನು ಇಂಗ್ಲೀಷಿನಲ್ಲಿ ಹೇಳಿ ಸಂಭ್ರಮಪಟ್ಟೆ.

ಅಷ್ಟರಲ್ಲಿ ನಮ್ಮದೇ ಕಂಪಾರ್ಟ್‌ಮೆಂಟ್‌ನಲ್ಲಿ ಇಬ್ಬರ ಮಧ್ಯೆ ಜಗಳ ಶುರುವಾಯಿತು, ಕಾರಣವೇ ಇಲ್ಲದೇ. ಟ್ರೇನಲ್ಲಿ ಸಹ ಪ್ರಯಾಣಿಕನೊಂದಿಗೆ ಜಗಳ ಮಾಡುವುದಕ್ಕೆ ಕಾರಣ ಏನಿರುತ್ತದೆ? ಮಲಯಾಳಿ ಮಲಯಾಳಿಯಲ್ಲಿ ಬಯ್ಯುತ್ತಿದ್ದ. ಇನ್ನೊಬ್ಬ ತಮಿಳಿಗ. ಆತನಿಗೆ ತಮಿಳು ಬಿಟ್ಟರೆ ಬೇರ ಗೊತ್ತಿಲ್ಲ. ನನಗೆ ಎರಡೂ ಭಾಷೆ ಗೊತ್ತಿಲ್ಲ. ಆದರೂ ನಾನೂ ವಿಶ್ವಸಂಸ್ಥೆಯ ಶಾಂತಿದೂತನಂತೆ ಅವರ ಮಧ್ಯೆ ಹೋಗಿ ಸಂಧಾನ ಮಾಡುವ ಪ್ರಯತ್ನ ಮಾಡಿದೆ. ಸಣ್ಣಸಣ್ಣ ಕಾರಣಕ್ಕೆ ಜಗಳ ಮಾಡುವುದು ಎಷ್ಟು ಸಿಲ್ಲಿ ಎಂದು ಇಂಗ್ಲೀಷಿನಲ್ಲಿ ವಿವರಿಸಿದೆ.

ಎದುರಿಗಿದ್ದ ಪುಟ್ಟಿ ಕೇಳಿದಳು, 'ಟ್ರೇನು ಯಾವ ಕಡೆ ಹೋಗುತ್ತಿದೆ?' ಎಂದು. 'ಟ್ರೇನು ಉತ್ತರಕ್ಕೆ ಹೋದಷ್ಟೇ ವೇಗವಾಗಿ ದಕ್ಷಿಣಕ್ಕೆ ಹೋಗುತ್ತಿದೆ' ಎಂದು ಪುಟ್ಟಿಯಲ್ಲಿ ಹೇಳಿ ನಕ್ಕೆ. ಅಷ್ಟರಲ್ಲಿ ಪಕ್ಕದಲ್ಲಿ ಕುಳಿತಿದ್ದ ಹುಡುಗಿ ಸೂಟ್‌ಕೇಸ್ ಎತ್ತಿಕೊಂಡು ಹೊರಟಿದ್ದಳು. ಸೇಲಂ ಸ್ಟೇಷನ್‌ನಲ್ಲಿ ಇಳಿದವಳ ಮುಖವನ್ನು ಕಿಟಕಿಯಿಂದ ನೋಡಿದೆ. ಅವಳಲ್ಲಿ ಜಾನಕಿಯಿದ್ದಳು. ಜಾನಕಿ ನಾನು ಮೊದಲು ಪ್ರೀತಿಸಿದ ಹುಡುಗಿ.

ಸೇಲಂ ದಾಟಿ ಟ್ರೇನು ಹೋಗುತ್ತಿತ್ತು. ನಾನು ಪುನಃ ಕಿಟಕಿಯಿಂದ ಹೊರ ದಿಟ್ಟಿಸತೊಡಗಿದೆ. ಹೇಗೆ ಹೇಗೋ ಕುಳಿತುಕೊಂಡೆ. ಪುಟ್ಟಿಯ ಜೊತೆ ಮಾತಾಡುವುದರಲ್ಲಿ ಉತ್ಸಾಹವಿರಲಿಲ್ಲ. ಖುಷ್ವಂತ್ ಸಿಂಗ್ ಪುಸ್ತಕ ಬ್ಯಾಗು ಸೇರಿತು. ಮುದುಕನಿಗೆ ಸಹಾಯ ಮಾಡುವಲ್ಲಿ ನನಗೆ ಉತ್ಸಾಹ ಉಳಿಯಲಿಲ್ಲ. ತಮಿಳಿಗ ಮತ್ತು ಮಲಯಾಳಿ ಮತ್ತೆ ಜಗಳ ಶುರುಮಾಡಿದ್ದರು. ನಾನು ತಲೆಕೆಡಿಸಿಕೊಳ್ಳಲಿಲ್ಲ.

ನನ್ನ ಕೂದಲು ಕೆದರಿತು. ಇನ್‌ಶರ್ಟ್ ಹಾಳಾಯಿತು. ನನಗೆ ಸರಿ ಮಾಡಿಕೊಳ್ಳುವ ಆಸೆಯಾಗಲಿಲ್ಲ. ಹೊರಗಡೆ ನೋಡುತ್ತ ಕುಳಿತೆ. ಪುನಃ ಸೊಮಾಲಿಯಾ, ಮಾಚಣ್ಣನ ಗ್ಯಾರೇಜು ಮತ್ತು ಕಿರವತ್ತಿ ಟಿಂಬರ್ ಡಿಪೋ... ರಾತ್ರಿಯಾಯಿಯಿತು. ನಿದ್ರೆ ಬಂತು. ಬೆಂಗಳೂರು ಬಂದಾಗ ಬೆಳಗಾಗಿತ್ತು.

ಚಾಲುಕುಡಿಯಿಂದ ಬಂದು ತುಂಬಾ ದಿನಗಳಾಗಿವೆ. ನಾನು ಆಫೀಸಲ್ಲಿ, ಮನೆಯಲ್ಲಿ, ರಸ್ತೆಯಲ್ಲಿ, ಲಿಡೋ ಥಿಯೇಟರಿನಲ್ಲಿ, ಮಣಿಪಾಲ ಸೆಂಟರ್‌ನಲ್ಲೆಲ್ಲ ಯೋಚಿಸುತ್ತಿರುತ್ತೇನೆ. ನನಗೆ ಚಾಲುಕುಡಿಯಿಂದ ಬರುವಾಗ ನನ್ನ ಎದುರಿಗೆ ಯಾರು ಕುಳಿತಿದ್ದರು. ಎನ್ನುವುದು ನೆನಪಿಲ್ಲ. ಚಾಲುಕುಡಿಯಲ್ಲಿ ನನ್ನ ಪಕ್ಕ ಯಾರಿದ್ದರು ಎನ್ನುವುದು ನೆನಪಿಲ್ಲ. ಕೊಯಿಮತ್ತೂರಿನಿಂದ ಸೇಲಂ ತನಕ ನನ್ನ ಪಕ್ಕದಲ್ಲಿ ಕುಳಿತು ಪ್ರಯಾಣಿಸಿದವರ ಮುಖ ನೆನಪಿಲ್ಲ. ಆದರೆ ಅವಳು ಹು...ಡು...ಗಿ ಎನ್ನುವುದು ಮಾತ್ರ ಸ್ಪಷ್ಟವಾಗಿ ನೆನಪಿದೆ.

ನಾನು ಈವರೆಗೆ ಎಲ್ಲೆಲ್ಲೋ ಸುತ್ತಿದ್ದೇನೆ, ಟ್ರೇನಲ್ಲಿ, ಬಸ್ಸಲ್ಲಿ! ನನ್ನ ಪಕ್ಕದ ಸೀಟುಗಳಲ್ಲಿ ಯಾರ್‍ಯಾರೋ ಕುಳಿತಿದ್ದಾರೆ. ನನಗೆ ಅವರ ಮುಖಗಳು ನೆನಪಿಲ್ಲ. ಅವರು ಮುದುಕರೋ, ಹುಡುಗರೋ ಎನ್ನುವುದು ನೆನಪಿಲ್ಲ. ಆದರೆ ಹುಡುಗಿಯೋ ಎಂದು ಮಾತ್ರ ಸ್ಪಷ್ಟವಾಗಿ ನೆನಪಿದೆ. ಅಪ್ರಯತ್ನಪೂರ್ವಕ ನೆನಪಿದೆ. ಅದರಷ್ಟೇ ಖಚಿತವಾಗಿ ಮಧುರೈಗೆ ಹೋಗುವಾಗ ನನ್ನ ಮೈಮೇಲೆ ವಾಂತಿ ಮಾಡಿದ ಹುಡುಗ ಮಾತ್ರ ನೆನಪಿದ್ದಾನೆ.



ಪರಮೇಶ್ವರ ಗುಂಡ್ಕಲ್



ಸಂಗ್ರಹ: ಎಂ.ಎ. ಜಯಚಂದ್ರ

ಬುದ್ಧಿಯ ಬೆಲೆ

ಒಂದು ದಿನ ರಾಜ ಉದ್ಯಾನವನದಲ್ಲಿ ಕುಳಿತಿದ್ದ. ಸಂತೋಷವಾಗಿದ್ದ. ಆಗ ಸೌದೆ ಒಡೆಯೋನು ಬಂದು ನಮಸ್ಕಾರ ಮಾಡಿದ. ರಾಜ 'ಏನಪ್ಪ?' ಅಂದ. 'ಸ್ವಾಮಿ ನನಗೆ ನ್ಯಾಯ ಬೇಕು' ಅಂದ. 'ನಿನಗೇನು ಅನ್ಯಾಯ ಆಗಿದೆ?' ಅಂತ ರಾಜ ಕೇಳಿದ. 'ಸ್ವಾಮಿ ದಿನವೆಲ್ಲ ಬೆವರು ಸುರಿಸಿ ದುಡೀತೀನಿ. ನನಗೆ ನೂರು ರೂಪಾಯಿ ಸಂಬಳ. ಆದರೆ ಒಂದು ಹನಿ ಬೆವರು ಸುರಿಸದ ಅಧಿಕಾರಿಗೆ ಸಾವಿರ ರೂಪಾಯಿ ಸಂಬಳ. ಇದೆಂಥ ನ್ಯಾಯ ಸ್ವಾಮಿ?' 'ಆ ಸಾವಿರ ರೂಪಾಯಿ ಸರದಾರ ಯಾರಪ್ಪ?' 'ಅದೇ ತಮ್ಮ ಮಂತ್ರಿಗಳು.'

ರಾಜ ಸುಮ್ಮನೆ ನಕ್ಕುಬಿಟ್ಟ. ಆಗ ದೂರದಲ್ಲಿ ಕೆಲವು ಎತ್ತಿನಗಾಡಿಗಳು ಹೋಗುತ್ತಿದ್ದವು. ರಾಜ ಆ ಕಡೆ ತಿರುಗಿ, 'ಅವು ಯಾವ ಊರಿನ ಗಾಡಿಗಳು ವಿಚಾರಿಸ್ಕೊಂಡು ಬಾ' ಅಂದ. ಇವನು ಓಡಿಹೋಗಿ, ಬಂದು, 'ಸ್ವಾಮಿ ಅವು ಗಂಗೇನಹಳ್ಳಿಯವಂತೆ' ಅಂದ. 'ಎಲ್ಲಿಗೆ ಹೋಗ್ತಾವಂತೆ?' ಅಂತ ರಾಜ ಕೇಳಿದ. 'ಇದನ್ನ ಕೇಳ್ಲಿಲ್ಲ ಸ್ವಾಮಿ' ಅಂತ, ಮತ್ತೆ ಓಡಿಹೋಗಿ ಕೇಳ್ಕೊಂಡು ಬಂದು ಹೇಳಿದ. ಪುನಃ ರಾಜ ವಿಚಾರಿಸಿದ, 'ಎಷ್ಟು ಗಾಡಿಗಳು ಹೋಗ್ತಾ ಇವೆ?'



ಸೋಮ

ಸೌದೆ ಒಡೆಯೋನು ಪೆಚ್ಚಾದ. ಮತ್ತೆ ಅಷ್ಟು ದೂರ ಓಡಿಹೋಗಿ, ಒಂದು, ಎರಡು, ಮೂರು, ನಾಲ್ಕು... ಅಂತ ಎಣಿಸಿ, 'ಹದಿನೈದು ಗಾಡಿ ಸ್ವಾಮಿ' ಅಂದ. 'ಗಾಡೀಲಿ ಏನೇನು ಹೇರ್ಕೊಂಡು ಹೋಗ್ತಿದಾರಪ್ಪ?' ಅಂತ ರಾಜ ಮತ್ತೆ ಕೇಳಿದ. 'ಬುದ್ಧಿ, ನಾನು ಇದನ್ನ ವಿಚಾರಿಸಲಿಲ್ಲ. ಈಗಲೇ ಹೋಗಿ ಕೇಳ್ಕೊಂಡು ಬರ್ತೀನಿ' ಅಂತ ಹೊರಡೋ ಅಷ್ಟರಲ್ಲಿ ಅಲ್ಲಿಗೆ ಮಂತ್ರಿ ಕುದ್ರೆ ಮೇಲೆ ಬಂದ. ಮಹಾರಾಜರಿಗೆ ನಮಸ್ಕಾರ ಮಾಡ್ದ. ಆಗ ರಾಜ, 'ಮಂತ್ರಿಗಳೇ, ಆ ಗಾಡಿಯವರು ಎಲ್ಲಿಗೆ ಹೋಗ್ತಿದಾರೆ ವಿಚಾರಿಸ್ಕೊಂಡು ಬನ್ನಿ' ಅಂದ.

'ಮಹಾಸ್ವಾಮಿ, ನಾನು ಆ ಕಡೆಯಿಂದಲೇ ಬಂದೆ. ಎಲ್ಲ ವಿಚಾರಿಸಿದ್ದೀನಿ. ಅವರು ಗಂಗೇಸಹಳ್ಳಿಯವರು. ಅಲ್ಲಿಂದ ಇಪ್ಪತ್ತು ಗಾಡಿ ಹೊರಟವು. ಎಲ್ಲದರಲ್ಲೂ ಬತ್ತ, ರಾಗಿ, ಜೋಳದ ಮೂಟೆಗಳು. ಐದು ಗಾಡಿ ನಮ್ಮ ಪಟ್ಟಣದ ಪೇಟೆಗೆ ಬಂದವು. ಉಳಿದ ಹದಿನೈದು ಗಾಡಿಗಳು ಪಕ್ಕದ ಊರಿಗೆ ಸಂತೆಗೆ ಹೊರಟಿವೆ. ಅವರೆಲ್ಲ ಸುಂಕ ಕೊಟ್ಟಿದ್ದಾರೆ...' ಇದನ್ನೆಲ್ಲ ಕೇಳಿದ ಸೌದೆ ಒಡೆಯೋನು ಬೆಪ್ಪಾದ. ಏತಕ್ಕೆ ಅವನಿಗೆ ಸಾವಿರ ರೂಪಾಯಿ ಸಂಬಳ ಅನ್ನೋದು ಅರ್ಥವಾಯ್ತು.


ಮಂತ್ರಿ ರಾಜಕಾರ್ಯ ಮಾತನಾಡಿ ಹೋದ. ಆಗ ರಾಜ ಸೌದೆ ಒಡೆಯೋನ ಕಡೆ ತಿರುಗಿ, 'ಅಯ್ಯ, ಶ್ರಮಕ್ಕೆ ಬೆಲೆಯುಂಟು, ಆದರೆ ಬುದ್ಧಿಗೆ ಒಂದು ತೂಕ ಹೆಚ್ಚು ಬೆಲೆ, ಸದ್ಬುದ್ಧಿಗೆ ಇನ್ನೂ ಹೆಚ್ಚು ಬೆಲೆ. ಹ್ಞಾ... ನಿನ್ನ ಜೀವನಕ್ಕೆ ನಿನ್ನ ಸಂಬಳ ಸಾಲದಿದ್ರೆ ತಿಳಿಸು, ಸಂಬಳ ಹೆಚ್ಚಿಸೋಣ' ಅಂದ.

ಬಿ. ಟಿ. ದೇಸಾಯಿ

ಆಕಸ್ಮಾತ್



ಶಂಕರರಾಯ ಬೆಂಗಳೂರಿಗೆ ಬಂದದ್ದು ಇದೇ ಮೊದಲ ಸಲವೇನಲ್ಲ. ಅವನ ಮೂವತ್ತು ವರ್ಷದ ನೌಕರಿಯಲ್ಲಿ ಈ ಊರಿಗೆ ಬಹಳಷ್ಟು ಸಲ ಬಂದಿದ್ದಾನೆ. ಆದರೆ ಇಲ್ಲಿಗೆ ಬಂದ ಸಲಕ್ಕೊಮ್ಮೆ ಆತನಿಗೆ ಒಂದಿಲ್ಲೊಂದು ಸಂಕೋಚ ಕಾಡುತ್ತಲೇ ಇರುತ್ತದೆ. ದೊಡ್ಡ ಊರುಗಳೆಂದರೆ ಅವನಿಗೆ ಯಾವಾಗಲೂ ಹೆದರಿಕೆ, ಯಾವ ಹೊತ್ತಿನಲ್ಲಿ ಏನು ಆಕಸ್ಮಿಕ ಘಟಿಸುವದೋ ಎಂದು. ಅವನು ಸ್ವತಃ ಇರುವದೂ ಹೈದರಾಬಾದಿನಂಥ ದೊಡ್ಡ ಊರಲ್ಲಿ. ಆದರೆ ಹೈದರಾಬಾದಿಗೂ ಭಾರತದ ಇತರ ದೊಡ್ಡ ಊರುಗಳಿಗೂ ಬಹಳ ಅಂತರವಿದೆ. ಆತನು ಹೈದರಾಬಾದಿನಲ್ಲಿರುವದು ದೊಡ್ಡ ಕಂಪನಿಯೊಂದರ ಕ್ವಾರ್ಟರ್ಸ್‌ನಲ್ಲಿ. ಅದು ಪಟ್ಟಣದ ಮುಖ್ಯ ಕೇಂದ್ರದಿಂದ ಸುಮಾರು ಹನ್ನೆರಡು ಕಿಲೋಮೀಟರ್ ದೂರದಲ್ಲಿದೆ. ಶಂಕರರಾಯ ಈ ಊರಿನ ಈ ಕಂಪನಿಯಲ್ಲಿ ಲೆಕ್ಕಪತ್ರದ ವಿಭಾಗದಲ್ಲಿ ಎರಡನೇ ದರ್ಜೆಯ ಲೆಕ್ಕಿಗನೆಂದು ಮೂವತ್ತು ವರ್ಷದ ಹಿಂದೆ ಸೇರಿಕೊಂಡ. ಅಂದಿನಿಂದ ಹಿಡಿದು ಇಂದಿನವರೆಗೆ ಅಲ್ಲಿಯೇ- ಈಗ ಆತ ಮುಖ್ಯ ಲೆಕ್ಕ ಪತ್ರ ತಪಾಸುಗಾರನೆಂದು-ಕೆಲಸ ಮಾಡುತ್ತಿದ್ದಾನೆ. ಕೆಲಸದ ಮೇಲೆ ಆಗಾಗ ತಿರುವನಂತಪುರ, ಮುಂಬಯಿ, ಚೆನ್ನೈನಂಥ ಬೇರೆ ದೊಡ್ಡ ಊರುಗಳಿಗೂ ಮೇಲಿಂದ



ಮೇಲೆ ಹೋಗಬೇಕಾಗುತ್ತದೆ. ಮೇಲಿಂದ ಮೇಲೆ ಎಂದರೆ ವರ್ಷಕ್ಕೊಂದು ಸಲ. ಏಕೆಂದರೆ ಈ ಊರುಗಳಲ್ಲಿಯೂ ಅವನು ಕೆಲಸ ಮಾಡುತ್ತಿರುವ ಕಂಪನಿಯ ಶಾಖೆಗಳಿವೆ. ಆತ ಈ ಊರುಗಳಿಗೆ ಹೋಗಿ ಅಲ್ಲಿ ಆ ಶಾಖೆಗಳ ಹಣಕಾಸಿನ ಲೆಕ್ಕಪತ್ರ, ಪರಿಶೀಲಿಸಿ, ಕಂಪನಿಯ ಹೈದರಾಬಾದಿನ ಹೆಡ್ ಆಫೀಸ್‌ಗೆ ವರದಿ ಒಪ್ಪಿಸಬೇಕಾಗುತ್ತದೆ. ಈ ಸಲ ಆತ ಬೆಂಗಳೂರಿಗೆ ಬಂದದ್ದೂ ಈ ಕೆಲಸಕ್ಕಾಗಿಯೇ. ಹೋಗಿ ಬರಲಿಕ್ಕೆ ತೊಂದರೆಯೇನಿಲ್ಲ. ಕಂಪನಿಯ ಖರ್ಚಿನಲ್ಲಿ ವಿಮಾನದ ಮೇಲೆ ಹೋಗುತ್ತಾನೆ, ಬರುತ್ತಾನೆ. ಇಳಿದುಕೊಳ್ಳಲಿಕ್ಕೆ ದೊಡ್ಡ ಹೊಟೇಲೊಂದರಲ್ಲಿ ಕಂಪನಿಯ ಶಾಖಾ ಆಫೀಸಿನವರೇ ವ್ಯವಸ್ಥೆ ಮಾಡಿರುತ್ತಾರೆ. ವಿಮಾನದಿಂದ ಇಳಿದ ಕೂಡಲೇ ಕಂಪನಿಯ ಕಾರು ಹೊರಗೆ ಅವನಿಗಾಗಿ ಕಾಯುತ್ತಿರುತ್ತದೆ. ಅಲ್ಲಿಂದ ಹೊಟೇಲಿಗೆ ಹೋಗುವದು, ಆಮೇಲೆ ಕಂಪನಿಯ ಶಾಖಾ ಆಫೀಸಿಗೆ ಹೋಗಿ ಅಲ್ಲಿಯ ಕೆಲಸ ಇಡೀ ದಿವಸ ಮಾಡುವದು, ಸಾಧ್ಯವಾದರೆ ಅದೇ ಸಂಜೆ ಮತ್ತೆ ತಿರುಗಿ ಹೈದರಾಬಾದಿಗೆ ಬರುವದು. ಅಕಸ್ಮಾತ್ ಅಂದೇ ತಿರುಗಿ ಬರಲಿಕ್ಕೆ ಆಗದಿದ್ದರೆ, ಆ ದಿನ ಅಲ್ಲಿಯೇ ಉಳಿದು, ಮರುದಿನದ ಮೊದಲನೇ ಫ್ಲಾಯ್ಟ್‌ಗೆ ಹೈದರಾಬಾದಿಗೆ ತಿರುಗಿ ಬರುವದು ಅವನ ರೂಢಿ. 'ಮನೆ ಮೂಳ' ಅನ್ನುತ್ತಾರಲ್ಲ? ಆ ಜಾತಿಯ ಮನುಷ್ಯನೀತ. ಈ ಸಲ ಬೆಂಗಳೂರಿಗೆ ಬಂದದ್ದೂ ಅಂಥದೇ ಕೆಲಸಕ್ಕಾಗಿ.

ಈ ದೊಡ್ಡ ಊರುಗಳೆಂದರೆ ಏಕೆ ಇಷ್ಟು ಹೆದರಿಕೆ? ಏಕೆ ಈ ಮುಜುಗರ? ಈ ಬಗ್ಗೆ ಆತ ಎಷ್ಟೋ ಸಲ ವಿಚಾರ ಮಾಡಿದ್ದಾನೆ. ಆದರೆ ಉತ್ತರ ಹೊಳೆದಿಲ್ಲ. ಬಹುಶಃ ತಾನೊಂದು ಸಾಯ್‌ಕಲಾಜಿಕಲ್ ಕೇಸ್ ಆಗಿರಬೇಕು; ಏನು ಮಾನಸಿಕ ತೊಂದರೆಯೋ? ಗದ್ದಲ, ಗುಂಪು ಎಂದರೆ ಅವನಿಗೆ ಎಲ್ಲಿಲ್ಲದ ಹೆದರಿಕೆ. ರಸ್ತೆಯಲ್ಲಿ ಹೊರಟಾಗ ಎಲ್ಲಿಯಾದರೂ ದೊಡ್ಡ ಗುಂಪು ಕಾಣಿಸಿದರೆ, ಅಥವಾ ಯಾರಾದರೂ ಜಗಳಾಡುತ್ತಿದ್ದರೆ ಹೆದರಿಕೆ-ಕ್ಲಾಸ್ಟ್ರೋಫೋಬಿಯ ಅನ್ನುತ್ತಾರಲ್ಲ?-ಅಂಥದೇನೋ ಅವನನ್ನು ಕಾಡುತ್ತದೆ. ಈ ಬಗ್ಗೆ ಯಾರಾದರೂ ಬಲ್ಲ ಮನಶ್ಶಾಸ್ತ್ರಜ್ಞರನ್ನು ಕೇಳಬೇಕು ಅಂತ ಎಷ್ಟೋ ಸಲ ಅಂದುಕೊಂಡಿದ್ದ. ಆದರೆ ಅದಕ್ಕೆ ಪುರುಸೊತ್ತು ಈವರೆಗೆ ಸಿಕ್ಕಿಲ್ಲ. ಈಗಲೂ ಈ ಬೆಂಗಳೂರಿನಲ್ಲಿಯೂ ಅವನಿಗೆ ಅದೇ ಭಯ. ಹಾಗೆ ನೋಡಿದರೆ ಬೆಂಗಳೂರು ಅವನಿಗೆ ಪರಿಚಯವಿಲ್ಲದ ಊರೇನಲ್ಲ. ಇಲ್ಲಿಯೂ ಅವನ ಪರಿಚಯದವರು ಸಾಕಷ್ಟು ಜನರಿದ್ದಾರೆ. ಸ್ವಂತ ಕಾಕಾನ ಮಗ ರಂಗನಾಥನ ಮನೆಯಿದೆ. ಹೋದ ತಿಂಗಳು ರಂಗನಾಥ ಹೈದರಾಬಾದಿಗೆ ಮಗಳ ಮದುವೆಯ ನಿಶ್ಚಯಕ್ಕೆಂದು ಬಂದಿದ್ದ. ಬಂದಾಗ ಶಂಕರರಾಯನ ಮನೆಗೆ ಮುದ್ದಾಮ್ ಬಂದು ಮದುವೆಗೆ ಆಮಂತ್ರಣ ನೀಡಿದ್ದ. ಆಗ ಶಂಕರರಾಯನನ್ನು ಛೇಡಿಸಿಯೂ ಇದ್ದ: 'ಏನಪಾ, ಶಂಕರಾ. ನೀನು ವರ್ಷಕ್ಕ ಮೂರು ಸರ್ತೇ ಅರೆ ಬೆಂಗಳೂರಿಗೆ

ಬರತೀಯಂತ. ಒಂದ ಸರ್ತೇನರೆ ನಮ್ಮ ಮನಿಗೆ ಬಂದು ಹೋಗಲ್ಲ? ನಾವು ಇನ್ನೂ ಜೀವಂತ ಇದ್ದೇವಿ ಅನ್ನೋದರೆ ನಿನಗ ನೆನಪು ಇರಲಿ! ನಮ್ಮಪ್ಪ, ನಿಮ್ಮಪ್ಪ ಭಾಗಾದೇರು ಇದ್ದಿರಬಹುದು. ಆದ್ರ ನಾನೂ ನೀನೂ ಭಾಗಾದೇರು ಅಲ್ಲಲ್ಲ? ನಿನ್ನ ಆಸ್ತಿಯೊಳಗ ನಾನು ಏನು ಹಕ್ಕು ಕೇಳಿಲ್ಲ. ಇಲ್ಲಿಗೆ (ಅಂದರೆ, ಹೈದರಾಬಾದಿಗೆ) ನಾವು ಬಂದ ಸರ್ತೇಕ್ಕೊಮ್ಮೆ ನಿನ್ನ ಮನೀಗೆ ಬಂದು ಹೋಗತೇವಿ, ಅದರ ಋಣಾ ಆದರೂ ತೀರಿಸಿ ಕೊಳ್ಳೋ ಭಾಗ್ಯ ನಮಗೂ ಕೊಡಪಾ! ಮುಂದಿನ ಸರತೇ ನೀನು ಬೆಂಗಳೂರಿಗೆ ಬಂದೂ ನಮ್ಮ ಮನೀಗೆ ಬರಲಿಲ್ಲಾ ಅಂದರ ನನಗ ಭಾಳ ಸಿಟ್ಟು ಬರ್ತದ ನೋಡು!'

'ಬರ್ತೇನಪಾ, ಮರೀದ ಬರತೇನಿ. ಬರ ಬೇಕು ಅಂದ್ರೂ ಟಾಯಿಮ್ ಸಿಗೋದಿಲ್ಲ, ಅದಕ್ಕ. ನಿಮ್ಮ ಮನೀಗೆ ಬರಬಾರದೂ ಅಂತೇನಿಲ್ಲ. ಅಲ್ಲೆ ಕೆಲಸ ಮುಗದ ಕೂಡ್ಲೆ ಇಲ್ಲೆ ಅರ್ಜಂಟ ಕೆಲಸ ಇರೋದ್ರಿಂದ ತಿರುಗಿ ಬರಬೇಕಾಗತದ' ಎಂದು ರಂಗನಾಥನನ್ನು ಸಮಾಧಾನ ಮಾಡಿದ್ದ.

'ನೀ ಬೆಂಗಳೂರಿಗೆ ಬಂದಾಗ ನಮ್ಮ ಮನೀ ಹುಡುಕಿಕೋತ ಹೊರಡೋದು ಬ್ಯಾಡ. ನೀ ಎಲ್ಲೆ ಯಾವ ಹೊಟೇಲಿನ್ಯಾಗ ಇಳಕೊಂಡೀ ಅಷ್ಟು ತಿಳಿಸಿದರ ಸಾಕು, ರಘು (ರಂಗನಾಥನ ಮಗ) ಕಾರಿನ್ಯಾಗ ನಿನ್ನ ಕರಕೊಂಡು ಬರತಾನ. ಆತ? ನೀ ಸಂಕೋಚದ ಮೊಟ್ಟೆ ಅಂತ ನನಗ ಗೊತ್ತು. ನಮ್ಮ ಮನ್ಯಾಗ ಇರೋದು ಬ್ಯಾಡ ಅನಿಸಿದರ ಮನೀಗೆ ಬಂದು ಬರೇ ಊಟ ಮಾಡಿ ಹೋಗು, ಸಾಕು ಅಷ್ಟ.'

'ಮುಂದಿನ ಸಲ ಬೆಂಗಳೂರಿಗೆ ಬಂದರೆ ತಪ್ಪದೇ ಬರುತ್ತೇನೆ' ಎಂದು ಶಂಕರರಾಯ ಭಿಡೇಕ್ಕೆ ಬಿದ್ದು ಒಪ್ಪಿಕೊಂಡಿದ್ದ.

ಈ ಇಡೀ ದಿನ ಶಾಖೆಯಲ್ಲಿಯ ಲೆಕ್ಕಪತ್ರ ನೋಡಿದ್ದ. ಮಧ್ಯಾಹ್ನ ಶಾಖೆಯ ಮ್ಯಾನೇಜರ್ ತರಿಸಿದ ಊಟ ಮಾಡಿದ. ಸಂಜೆ ಕೆಲಸ ಮುಗಿಸಿದ ಕೂಡಲೇ ಕಾರಿನಲ್ಲಿ ತಿರುಗಿ ಹೊಟೇಲಿಗೆ ಬಂದ. ಇನ್ನು ಮರುದಿನ ಮಧ್ಯಾಹ್ನದವರೆಗೆ ನಿರ್ವಾಹವಿಲ್ಲದೆ ಬೆಂಗಳೂರಿನ ಈ ಗಜಿಬಿಜಿಯಲ್ಲಿರಬೇಕು, ಏಕೆಂದರೆ ತಿರುಗಿ ಹೋಗಲಿಕ್ಕೆ ದಿನಕ್ಕೊಂದೇ ಫ್ಲಾಯ್ಟ್ ಬೆಂಗಳೂರಿನಿಂದ ಹೈದರಾಬಾದಿಗೆ. ಹೊಟೇಲಿಗೆ ತಿರುಗಿ ಬಂದಾಗ ಸಂಜೆ ಇನ್ನೂ ಎಳೆಯದಾಗಿತ್ತು-ಸುಮಾರು ಐದೂವರೆ ಆಗಿರಬೇಕು, ಅಷ್ಟೇ. ಹೊಟೇಲಿನ ರೂಮಿಗೆ ಹೋಗಿ ಸ್ನಾನ ಮಾಡಿದ. ರೂಮ್ ಸರ್ವಿಸ್‌ನಿಂದ ಚಹಾ ತರಿಸಿಕೊಂಡು ಕುಡಿದ. ಮುಂದೆ ಏನು ಮಾಡಲೂ ಹೊಳೆಯದೇ, ಅಂದಿನ ತಂಗಳು ಪೇಪರ್ ಓದುತ್ತ ಕುಳಿತ. ಅದೂ ಬೇಸರ ಬಂತು. ರಾತ್ರಿ ಓದಲೆಂದರೆ ಈ ಹಾಳು ನ್ಯೂಸ್ ಪೇಪರ್ ಬಿಟ್ಟರೆ ಬೇರೆ ಏನೂ ಇಲ್ಲವಲ್ಲ? ಕಾಕಾನ ಮಗ ರಂಗನಾಥನ ನೆನಪು ಬಂತು. ಹಾಗಾದರೆ ಅವನ ಮನೆಗೆ ಹೋಗಿ ಬರೋಣವೇ? ಅಂದುಕೊಂಡ. ಅವನ ಮನೆಯ ಪತ್ತೆ ಡಾಯರಿಯಲ್ಲಿ ಎಲ್ಲಿಯೋ ಬರೆದುಕೊಂಡಿದ್ದರ ನೆನಪು ಬಂದು ಡಾಯರಿ ತೆರೆದು ನೋಡಿದ. ಅರೇ! ಇದು ಬೇರೆ ಡಾಯರಿಯಲ್ಲ! ಅಂದರೆ ರಂಗನಾಥನ ಭೆಟ್ಟಿ ಮತ್ತೆ ಮುಂದೂಡಬೇಕು ಅಂದಂತಾಯಿತು. ಒಂದು ರೀತಿಯಿಂದ ಇದು ಥೊಲೋ ನೆವ ಆಯಿತು. ಅವನ ಪತ್ತೆ ಸಿಕ್ಕಿದ್ದರೆ ಅಲ್ಲಿಗೆ ಹೋಗಿ ಬರಬೇಕಾಗುತ್ತಿತ್ತು. ಮತ್ತೆ ರಂಗನಾಥನ ಆತ್ಮ ಪ್ರಶಂಸೆಯ ಮಾತು ಕೇಳುತ್ತ ಕೂಡುವದು ತಪ್ಪಿತು ಎಂದು ಸಂತೋಷವೇ ಆಯಿತು. ಯಾಕೆಂದರೆ ತನ್ನ ಬಳಗದವರಲ್ಲಿ ರಂಗನಾಥನಂಥಾ ಬಕಾಳ್ಯಾ ಬೇರೇ ಯಾರೂ ಇಲ್ಲ ಎಂದು ಅವನ ಅನುಭವ. ಎದುರಿಗೆ ಸಿಕ್ಕರೆ ಸಾಕು, ತನ್ನ ಮನೆತನದ, ತನ್ನ ಆಸ್ತಿಯ, ಮಕ್ಕಳ ವೈಭವವನ್ನೆಲ್ಲಾ ಹೇಳಿಕೊಳ್ಳುತ್ತಾನೆ; ಬೋರ್ ಮಾಡುತ್ತಾನೆ. ಹೇಗೆ ಅವನ ಮೊದಲನೇ ಮಗ, ಏನು ಅವನ ಹೆಸರು? ರಾಮ ಅಲ್ಲವೇ? ಅಂವ ಆಯ್.ಆಯ್.ಟಿಯಲ್ಲಿ

ಎಲ್ಲದರಲ್ಲಿಯೂ ಫಸ್ಟ್ ಬರುತ್ತಿದ್ದುದು, ಅಳಿಯನ ಪಗಾರವನ್ನು ಅವನ ಕಂಪನಿಯವರು ಒಂದೇ ವರ್ಷದಲ್ಲಿ ಎರಡು ಸಲ ಹೇಗೆ ಮತ್ತು ಏಕೆ ಮೇಲಕ್ಕೇರಿಸಿದರು, ಏರಿಸಬೇಕಾಗಿತು... ಇತ್ಯಾದಿ ಅವನು ಅಂದದ್ದಕ್ಕೆಲ್ಲಾ ತಾನು ಹ್ಞೂಂಗುಟ್ಟುತ್ತ ಕುಳಿತುಕೊಳ್ಳಬೇಕು. ಹಾಗಾದರೆ, ಇಲ್ಲಿ ಕುಳಿತು ಏನು ಮಾಡಲಿ? ರಂಗನಾಥನ ಮನೆಗೆ ಬೇಡವಾದರೆ, ಈಕೆ-ತನ್ನ ಹೆಂಡತಿ, ಸುಶೀಲಾನ ಎರಡನೇ ಅಕ್ಕ ಸುಮತಿ ಇದ್ದಾಳಲ್ಲ? ಆಕೆಯ ಮನೆಗೆ ಹೋದರೆ ಹೇಗೆ? ಹೈದರಾಬಾದಿನಿಂದ ಹೊರಡುವಾಗ ಸುಶೀಲಾ ಹೇಳಿದ್ದಳು ಕೂಡ.

'ನೋಡ್ರಿ, ಹೆಂಗಿದ್ರೂ, ಬೆಂಗಳೂರಿಗೆ ಹೋಗಿರತೀರಿ; ಅಲ್ಲೆ ಅಕ್ಕನ ಮನೀಗಷ್ಟು ಹೋಗಿ ಬರ್ರಿ. ಪಾಪ, ಆಕೀಗೆ ನೀವಂದ್ರ ಭಾಳ ಪ್ರೀತಿ. ನಿಮ್ಮ ಹಂಗ ಆಕೀದೂ ಸಂಕೋಚದ ಸ್ವಭಾವಾನ. ಅದಕ್ಕ ಆಕೀಗೆ ನೀವು ಅಂದ್ರ ಅಷ್ಟು ಅಭಿಮಾನ ಕಾಣಸ್ತದ. ಒಮ್ಮೆ ಹೋಗಿ ಬರ್ರಿ. ಅವರ ಮನ್ಯಾಗ ಊಟನೋ ಛಾನೋ ಮಾಡಿ ಬರ್ರಿ. ನಮ್ಮ ಮದುವಿ ಗೊತ್ತು ಮಾಡಿದಾಕೀನ ಆಕಿ, ನೆನಪದ ಇಲ್ಲೋ? ಹೋಗುತ್ತೇನೆ' ಎಂದು ಶಂಕರರಾಯ ಹೆಂಡತಿಗೆ ಮಾತು ಕೊಟ್ಟಿದ್ದ. ಆದರೆ ಅಲ್ಲಿಗೆ ಹೋಗಲೂ ಬೇಸರ ಬಂತು. ಅವರಲ್ಲಿಗೆ ಹೋಗಿ ತಾನು ಮಾಡುವದಾದರೂ ಏನು? ಅವರ ಉಪಚಾರ, ಅತಿಥ್ಯವನ್ನು ಮನೆ ಅಳಿಯನಂತೆ ಮಾಡಿಸಿಕೊಳ್ಳುತ್ತ, ಅವರು ಆಡಿದ ಮಾತಿಗೆ ಹ್ಞೂಂಗುಡುತ್ತ ಕುಳಿತುಕೊಳ್ಳಬೇಕು. ಆ ಹೆಣ್ಣುಮಗಳು ಏನೇನೋ ಮಾತಾಡುತ್ತಿರುತ್ತಾಳೆ. ತನ್ನ ಮಕ್ಕಳ ಬಗ್ಗೆ, ಅವರು ತನ್ನ ಆಶೆ, ಅಪೇಕ್ಷೆಗಳನ್ನು ಪೂರೈಸದ್ದರ ಬಗ್ಗೆ, ತನ್ನ ಗಂಡ ಆಫೀಸಿನ ಆ ಯಾವುದೋ ಟೈಪಿಸ್ಟ್ ಕೂಡ ನಡೆಸಿದ ರೊಮ್ಯಾನ್ಸ್ ಬಗ್ಗೆ, ಮೂರನೇ ಮಗಳು, ಏನು ಆಕೆಯ ಹೆಸರು? ಹ್ಞಾಂ, ಮಂಗಳಾ, ಆಕೆಯ ಗಂಡನಿಗೆ ಅಮೇರಿಕಾದಲ್ಲಿ ನೌಕರಿ ಸಿಕ್ಕದ್ದರ ಬಗ್ಗೆ, ಇನ್ನೂ ಏನೇನೋ ನೆನಪಿಗೆ ಬರಲಾರದ, ನೆನಪಿಸಿಕೊಳ್ಳಲಿಕ್ಕೆ ಬೇಸರ ಬರುವಂಥ ಮಾತಾಡುತ್ತಿರುತ್ತಾಳೆ. ಅದಕ್ಕೆಲ್ಲ ತಾನು 'ಹ್ಞೂಂ', 'ಹೌದ?', 'ಹಿಂಗ?', 'ಅಲ್ಲದ ಏನು?' ಇತ್ಯಾದಿ ಸ್ಟಾಕ್ ರಿಸ್ಪಾನ್ಸ್ ನೀಡುತ್ತ ಕುಳಿತುಕೊಳ್ಳಬೇಕು. ಆದರೆ ಒಂದು ಮಾತು. ಸುಮತಿ ಒಳ್ಳೇ ಕುಕ್. ಅವಳ ಕೈ ಅಡುಗೆ ಊಟ ಮಾಡುವದೇ ಒಂದು ಭಾಗ್ಯ. ಸರಿ, ಅಲ್ಲಿಗಾದರೂ ಹೋಗಿ ಬರಲೇ? ಎಂದು ಡ್ರೆಸ್ ಮಾಡಿಕೊಳ್ಳತೊಡಗಿದ. ಆದರೆ ಸುಮತಿಯ ಮನೆಯಿರುವದು ಅದೆಲ್ಲೋ ಕತ್ತರಿಗುಪ್ಪದ ಆರನೇಯದೋ ಎಂಟನೇಯದೋ ಒಳರಸ್ತೆಯಲ್ಲಿ. ಅಲ್ಲಿ ಈಗ ಹೋಗಿ ಬರಬೇಕಾದರೆ ರಾತ್ರಿ ಹನ್ನೊಂದೋ ಹನ್ನೆರಡೋ ಆಗಬಹುದು. ಅವರಲ್ಲಿ ರಾತ್ರಿ ಕಳೆಯುವದಂತೂ ಅಸಾಧ್ಯ. ಷಡ್ಡುಕ ಊರಲ್ಲಿದ್ದಾನೋ ಇಲ್ಲವೋ ಗೊತ್ತಿಲ್ಲ. ಆತ ಮಹಾ ಸಂಶಯದ ಮೊಟ್ಟೆ. ತಾನು-ಕಳ್ಳಸೂಳೇಮಗ-ಬೇರೆ ಹೆಂಗಸರೊಡನೆ (ಉದಾ. ತನ್ನ ಆಫೀಸಿನ ಟೈಪಿಸ್ಟ್‌ನ ಕೂಡ) ಚಕ್ಕಂದ ಮಾಡಬಹುದು, ಬೇರೆ ಗಂಡಸರು ತನ್ನ ಹೆಂಡತಿಯ ಕೂಡ ನಾಲ್ಕು ಸಲುಗೆಯ ಮಾತು ಆಡಿದರೆ ಸಾಕು. ಪಾಪ, ಆಕೆಯನ್ನು ಮೈ ಹುಳೇ ಹೊಡೆಯುತ್ತಾನಂತೆ. ಈ ಜಗತ್ತಿನಲ್ಲಿ, ಅದೂ ಈ ಇಪ್ಪತ್ತನೇ ಶತಮಾನದಲ್ಲಿ ಇನ್ನೂ ಅಂಥ ಗಂಡಂದಿರು ಇದ್ದಾರೆಂದರೆ ಆಶ್ಚರ್ಯವಲ್ಲವೇ? ಅಂದರೆ, ಒಟ್ಟಿನ ತಲೆಯ ಮೇಲೆ ಸುಮತಿಯ ಮನೆಗೂ ಹೋಗಲಿಕ್ಕೆ ಆಗುವದಿಲ್ಲವೆಂದಂತಾಯಿತು. ಅಡ್ಡೀಯಿಲ್ಲ. ಹಾಗಾದರೆ, ಯಾವುದಾದರೂ ಒಂದು ಪುಸ್ತಕದ ಅಂಗಡಿಗೆ ಹೋಗಿ ಒಂದೆರಡು ಪುಸ್ತಕ ಏಕೆ ಖರೀದಿ ಮಾಡಬಾರದು? ಫ್ರೆಡ್ರಿಕ್ ಫಾರ್ ಸಾಯ್‌ಥ್‌ನ ಹೊಸದೊಂದು ಥ್ರಿಲ್ಲರ್ ಬಂದಿದೆಯಂತೆ; ಹೋಗಿ ನೋಡಲೇ ಅಂದುಕೊಂಡ. ಎದ್ದು ರೂಮಿನಿಂದ ಹೊರಗೆ ಬಂದು, ಹೊಟೇಲಿನ ಅಂಗಳದಲ್ಲಿ ಖಾಲೀ ಕಾಯುತ್ತ ನಿಂತಿದ್ದ ಆಟೋ ಒಂದರಲ್ಲಿ ಕುಳಿತು, ಕೆಂಪೇಗೌಡ

ಸರ್ಕಲ್ಲಿಗೆ ಬಂದು, ದೊಡ್ಡ ಪುಸ್ತಕದಂಗಡಿಯೊಂದನ್ನು ಹೊಕ್ಕ.

ಅಂಗಡಿಯಲ್ಲಿ ನೀಟಾಗಿ ಹಚ್ಚಿ, ಶೆಲ್ಫ್ ಮೇಲೆ ಇಟ್ಟ ಇಂಗ್ಲಿಷ್, ಕನ್ನಡ ಪುಸ್ತಕಗಳನ್ನು ನೋಡುತ್ತ ಸುತ್ತ ತಿರುಗಾಡತೊಡಗಿದ. ಫಾರ್‌ಸಾಯ್‌ಥ್‌ನ ಪುಸ್ತಕ ಸಿಗಲಿಲ್ಲ. ಬದಲಿ ಬೇರೆ ಯಾವುದೋ ಒಂದು ಈ ಮೊದಲು ಓದಿದ ಹಳೇ ಅಗಾಥಾ ಕ್ರಿಸ್ತೀ ಪುಸ್ತಕ ಕೊಂಡುಕೊಂಡ. ಹೊರಗೆ ಹೋಗಿ ಯಾವುದಾದರೂ ಒಂದು ಹೊಟೇಲಿನಲ್ಲಿ ಒಂದಿಷ್ಟು ತಿಂಡಿ ತಿಂದು ತಿರುಗಿ ಹೋದರಾಯಿತೆನ್ನುವಷ್ಟರಲ್ಲಿ...


ಎಷ್ಟೋ ದಿನದಿಂದ ನೆನಪಿಸಿಕೊಳ್ಳಬೇಕೆಂದುಕೊಂಡು, ಪಳೆಕ್ಕೈಗೆ ಸಿಗಲಾರದ್ದಕ್ಕೆ ಬೇಸತ್ತು, ಏನು ನೆನೆಸಿಕೊಳ್ಳುತ್ತಿದ್ದೇನೆ ಅನ್ನುವದೂ ಮರೆತು ಹೋದಾಗ, ಮರೆತ ಆ ಮಾತು ಫಕ್ಕನೆ ಕನಸಿನಲ್ಲಿ ಒಡಮೂಡಿದಂತೆ, ಹಳೆಯ ನೆನಪಿನ ದನಿಯೊಂದು ಹಿಂದಿನಿಂದ ಕಿವಿಗೆ ಬಿತ್ತು. ದನಿ ಪರಿಚಿತವಾದದ್ದು, ಬಹಳ ಪರಿಚಿತ! ಆದರೆ ಈ ದನಿಯಲ್ಲೂ ಬಹಳಷ್ಟು ಬದಲಾವಣೆಗಳಾಗಿವೆ. ತನಗೆ ನೆನಪಿದ್ದದ್ದು ಎಳೆವರೆಯದ ಹುಡುಗನ ದನಿ. ಅದು ವಯಸ್ಕವಾಗಿ, ಬಲಿತು, ಮಾಗಿ, ಧಾಟಿಯಲ್ಲೂ ಸ್ವಲ್ಪ ಬದಲಾಗಿದೆ. ಆದರೆ ಅದು ಮೂಲತಃ ತನ್ನ ತಾಲೂಕು, ಹಾವೇರಿಯ ಕನ್ನಡದ ದನಿ. ಅಗಡಿ, ಗುತ್ತಲ, ಹೊಸರಿತ್ತಿಯ ಬ್ರಾಹ್ಮಣ ದನಿ. ತಿರುಗಿ ನೋಡಿದ. ತನ್ನಷ್ಟೇ ವಯಸ್ಸಿನ ತೆಳ್ಳಗಿನ ವ್ಯಕ್ತಿಯೊಬ್ಬ ಪುಸ್ತಕದಂಗಡಿಯ ಸೇಲ್ಸ್ ಹುಡುಗಿಯ ಕೂಡ ನಗುತ್ತ ಮಾತಾಡುತ್ತಿದ್ದ.

'ಇಲ್ಲೆ ನೋಡು, ರಮಣೀ, ನನ್ನ ಹಂಗ ಎಷ್ಟೋ ಜನ ಇಲ್ಲಿಗೆ ಬರತಾರ. ಅವರು ಎಲ್ಲಾರನೂ ನಾನ ಅಂತ ತಿಳಕೋತೀಯೇನು?'

'ಇಲ್ಲಾ ಸಾರ್, ಮೊನ್ನೆ ನಿಮ್ಮ ಹಾಗೇನೇ ಒಬ್ರು ಇಲ್ಲಿಗೆ ಬಂದ್ರು, ನೀವೇನೇ ಅಂತ ನೋಡ್ಬೇಕೂ ಅನ್ನೋವಾಗ ಹೋಗೇಬಿಟ್ರು. ನೀವು ನಮ್ಮ ಶಾಪ್‌ಗೆ ಬಂದ್ರೆ, ನನ್ನನ್ನ ನೋಡದದೆ ಹೋಗೋಲ್ವಲ್ಲ? ಆದ್ರೆ, ಇವ್ರು ಹೀಗೆ ಯಾಕೆ ಹೋದ್ರೂ, ಅಂತ ನನಗೆ ಬೇಜಾರಾಯ್ತು, ಸಾರ್. ಅದಕ್ಕೇ ಕೇಳ್ದೆ. ತಪ್ಪು ತಿಳೀಬೇಡೀ ಸಾರ್!'

'ಇಲ್ಲವ್ವಾ, ನಾ ಯಾಕ ತಪ್ಪು ತಿಳಕೊಳ್ಳಲಿ? ನೀ ಏನು ನನಗ ಅರೀದಾಕೀನ? ನೀನು ಇಷ್ಟು ಹುಡುಗಿ ಇದ್ದಾಗಿಂದ ನೋಡಿಕೋತ ಬಂದೇನಿ. ಅವರು ಯಾರೋ ಬ್ಯಾರೆ ಇರಬೇಕೇಳು.'

ಶಂಕರರಾಯ ಆ ವ್ಯಕ್ತಿಯನ್ನು ದಿಟ್ಟಿಸಿ ನೋಡಿದ, ಲಕ್ಷಗೊಟ್ಟು ನೋಡಿದ. ಈತ ತನ್ನ ಹಳೆಯ ಗೆಳೆಯ ಅಚ್ಯುತ ಅಲ್ಲವೇ? ಹೌದೇ? ಅಚ್ಯುತನೇ ಆಗಿದ್ದರೆ ಎಷ್ಟು ಬದಲಾಗಿದ್ದಾನಲ್ಲ? ಮೊದಲಿನಂತೆಯೇ ತೆಳ್ಳಗೇ ಇದ್ದಾನೆ ಖರೆ, ಆದರೆ ಹೊಟ್ಟೆ ಬಂದಿದೆ, ಕಣ್ಣಿಗೆ ದಪ್ಪ ಚಾಳೀಸು, ತಲೆಯ ಮೇಲಿನ ಕೂದಲು ಸುತ್ತಲೂ ಕಂಸ ಹಾಕಿದಂತೆ. ನಡುವೆ ಮಿರಿಮಿರೀ ಮಿಂಚುವ ಕಂದು, ಬೋಳು ಬೋಳು. ಗಲ್ಲದ ಚಕ್ಕು ಕೂತಿವೆ. ಇವನು ಅಚ್ಯುತ ಇರಲಿಕ್ಕೆ ಸಾಧ್ಯವೇ? ತಾನು ನೋಡಿದ ಅಚ್ಯುತ ಹೀಗಿರಲಿಲ್ಲ. ಆತ, ತನ್ನ ಹಾಯ್‌ಸ್ಕೂಲಿನ ಗೆಳೆಯ ಅಚ್ಯುತ, ಒಳ್ಳೇ ದಷ್ಟಪುಷ್ಟ ಹುಡುಗ. ಒಳ್ಳೇ ಹುರಿಕಟ್ಟು ಮೈ, ಹದಿನಾರು ವರ್ಷಕ್ಕೇ ಆತನಿಗೆ ಭರ್ಜರೀ ಮೀಸೆ ಇತ್ತು. ಈಗಲೂ ಮೀಸೆ ಇದೆ, ಆದರೆ ಪೆಳ್ಳಗಾಗಿದೆ, ಮೊದಲಿನಷ್ಟು ಪುಷ್ಟವಾಗಿ ಹುರಿಕಟ್ಟಾಗಿಲ್ಲ. ಮೀಸೆಯು ಎಳೆ ಎಳೆಯಾಗಿ ಕಲ್ಲು ನಾರಿನ ತುಂಡಿನಂತೆ ಮೂಗಿನ ಕೆಳಗೆ ಹತ್ತಿಕೊಂಡಿದೆ. ಈತ ಆ ತನ್ನ ಹಳೆಯ ಗೆಳೆಯ, ಆತ್ಮೀಯ ಮಿತ್ರ, ತನ್ನ ಜೊತೆಯ ಒಡನಾಡಿ, ಜಗಳಗಂಟ, ಜೋಕುಮಾರ, ಕಂಡ ಹುಡುಗಿಯರಿಗೆಲ್ಲ ಕಣ್ಣು ಹೊಡೆಯುವ ಭಯಂಕರ ರಸಿಕ ಅಚ್ಯುತ ಆಗಿರಲು ಸಾಧ್ಯವೇ? ಯಾಕಿರಬಾರದು? ಅಚ್ಯುತ ಮತ್ತು ತನ್ನ ಸಂಪರ್ಕ ತಪ್ಪಿ ಎಷ್ಟೋ ವರ್ಷಗಳಾದವು. ತಾನು ಹಾವೇರಿಯಲ್ಲಿ ಹಾಯ್‌ಸ್ಕೂಲು ಮುಗಿಸಿ ಮುಂದೆ ಧಾರವಾಡಕ್ಕೆ ಕಾಲೇಜಿಗೆ ಹೋದ. ಅಚ್ಯುತನ ತಂದೆ ತಾಲೂಕು



ಕಚೇರಿಯಲ್ಲಿ ಕಾರಕೂನರಾಗಿದ್ದರು. ಯಾವುದೋ ಲಂಚದ ಪ್ರಕರಣವೊಂದರಲ್ಲಿ ಸಿಕ್ಕುಬಿದ್ದರು. ಇದು ಶಂಕರರಾಯ (ಆಗಿನ ಶಂಕರ್ ಖಾಸ ನೀಸ) ಎಸ್ಸೆಸ್ಸೀ ಮಾಡುತ್ತಿದ್ದಾಗ ಆಯಿತು. ಮುಂದೆ ಆರು ತಿಂಗಳಲ್ಲಿ ಅಚ್ಯುತನ ಅಪ್ಪ ಹಾವೇರಿಯಲ್ಲಿಯ ತಮ್ಮ ಮನೆ ಕಿತ್ತಿ, ಸ್ವಂತ ಹಳ್ಳಿ ಕೊರಟಗಿಗೆ ಹೋದರು. ಅಲ್ಲಿ ಇದ್ದುಬಿದ್ದ ಸ್ವಲ್ಪ ಜಮೀನನ್ನು ಸಾಗುಮಾಡಿಕೊಂಡು ಇದ್ದರಂತೆ. ಅಚ್ಯುತನಿಗೆ ಇನ್ನಿಬ್ಬರು ತಮ್ಮಂದಿರಲ್ಲದೆ ಇಬ್ಬರು ತಂಗಿಯರೂ ಇದ್ದರು. ಮುಂದೆ ಎರಡೇ ವರ್ಷಕ್ಕೆ ಅಪ್ಪನೂ ತೀರಿಹೋದನಂತೆ. ಮನೆಯ ಎಲ್ಲ ಜವಾಬ್ದಾರಿ ಅಚ್ಯುತನ ಮೇಲೆ ಬಿತ್ತು. ಶಂಕರ ರಾಯ ಎಸ್ಸೆಸ್ಸೀ ಮುಗಿಸಿದ ಮುಂದಿನ ವರ್ಷ ಅಚ್ಯುತನೂ ಎರಡನೇ ಸಲ ಪರೀಕ್ಷೆಗೆ ಕುಳಿತು ಪಾಸ್ ಆದನಂತೆ. ಮುಂದೆ ಕಾಲೇಜಿಗೆ ಹೋಗಲಿಕ್ಕೆ ಆಗಲಿಲ್ಲ. ಪಾಪ, ಬಡತನದಲ್ಲಿ ಅದು ಹೇಗೆ ಸಾಧ್ಯ? ಮುಂದೆ ಹರಪನಹಳ್ಳಿಗೋ ಎಲ್ಲಿಗೋ ಮನೆ ಕಿತ್ತಿಕೊಂಡು ಹೋದನಂತೆ. ಅಲ್ಲಿ ತನ್ನ ಸೋದರಮಾವನ ಮಗಳನ್ನು ಮದುವೆ ಯಾಗಿ, ಮಾವನ ಆಸರೆಯಿಂದ ಯಾವುದೋ ನೌಕರೀ ಮಾಡುತ್ತಿದ್ದಾನೆ ಎಂದು ಶಂಕರರಾಯ ಅವರಿವರಿಂದ ಕೇಳಿ ತಿಳಿದ ಸುದ್ದಿ. ಹಾಯ್ ಸ್ಕೂಲಿನಲ್ಲಿ ಇದ್ದಾಗ ಒಂದು ಸಲ ಇಬ್ಬರೂ ಗುಟ್ಟಾಗಿ ಹೋಗಿ ಚವ್ಹಾಣ ಸ್ಟುಡಿಯೋದಲ್ಲಿ ಫೋಟೋ ತೆಗೆಸಿಕೊಂಡಿದ್ದರು. ಗುಟ್ಟಾಗಿ ಯಾಕೆ ಫೋಟೋ ತೆಗೆಸಿಕೊಂಡರೋ ಅದು ಇವತ್ತಿನ ವರೆಗೂ ಶಂಕರರಾಯಗೆ ಅರ್ಥವಾಗಿಲ್ಲ. ಫೋಟೋ ಅಂತೂ ತೆಗೆಸಿಕೊಂಡಿದ್ದರು. ಇಬ್ಬರ ಹತ್ತಿರವೂ ಒಂದೊಂದು ಪ್ರತಿ ಇತ್ತು ಆ ಫೋಟೋದ್ದು. ಈಗಲೂ ತನ್ನ ಮನೆಯಲ್ಲಿ ಹಳೇ ಆಲ್ಬಮ್ಮಿನಲ್ಲಿ ಶಂಕರರಾಯನ ಬಾಲಲೀಲೆಗಳ ಸೆಕ್ಷನ್ನಿನಲ್ಲಿ ತನ್ನ ಮತ್ತು ಅಚ್ಯುತನ ಫೋಟೋ ಇದೆ. ಇಬ್ಬರೂ ಪರಸ್ಪರ ಹೆಗಲ ಮೇಲೆ ಕೈಹಾಕಿ, ಫೋಟೋ ತೆಗೆಸಿಕೊಳ್ಳಲೆಂದೇ ಮುದ್ದಾಮ್ ನಕ್ಕ ನಗೆ ಯೊಂದಿಗೆ ಮಸುಕಾದ ಫೋಟೋ ಇದೆ. ಹೋದ ವರ್ಷ ಕಪಾಟು ಸ್ವಚ್ಛ ಮಾಡುವಾಗ ಆ ಫೋಟೋ ನೋಡಲು ಒಂದು ಅವಕಾಶ ವಾಯಿತು. ಫೋಟೋ ಕೈಗೆತ್ತಿಕೊಂಡು ಶಂಕರ ರಾಯ, ಭಾವುಕನಾಗಿ ಅದನ್ನೇ ನೋಡುತ್ತ ಕುಳಿತುಬಿಟ್ಟ. ಹೆಂಡತಿಗೆ ಸಂಶಯ ಬಂತು, ಇವರು ಹೀಗೇಕೆ ಮಾಡುತ್ತಿದ್ದಾರೆಂದು. ಮುಂದೆ ಆತ ಹೇಳಿದ: ಆ ಫೋಟೋ ಯಾರದು? ಏನು? ಯಾಕೆ? ಹೇಗೆ? ಇತ್ಯಾದಿ ಎಲ್ಲ ಹೇಳಿದ.

'ಇಂವಾ ನನ್ನ ಹಾಯ್‌ಸ್ಕೂಲ್ ಗೆಳೆಯಾ, ಅಚ್ಯುತ. ಪಾಪ, ಭಾಳ ಬಡವ. ಅವರ ಅಪ್ಪ ಕಚೇರಿಯೊಳಗ ಕ್ಲಾರ್ಕ್ ಇದ್ದ. ಮನೀ ತುಂಬಾ ಮಕ್ಕಳು. ಅಂಥಾ ಆಸ್ತೀನೂ ಇದ್ದಿದ್ದಿಲ್ಲ ಅನ್ನು. ಅವರ ಊರು ಹಾವೇರೀ ಹತ್ರ, ಕೊರಟಗಿ ಅಂತ. ಅಲ್ಲೆ ಒಂದು ಹತ್ತ ಎಕರೆ ಜಮೀನು ಇತ್ತು ಕಾಣಸ್ತದ. ಅದನ್ನೂ ಊರಾಗ ಯಾರಿಗೋ ಲಾವಣೀ ಮಾಡಲಿಕ್ಕೆ ಕೊಟ್ಟು ಹಾವೇರಿಯೊಳಗ ಕಚೇರಿಯಾಗ ಇದ್ದ. ಮುಂದ ಒಂದು ಲಂಚದ ಪ್ರಕರಣದೊಳಗ ಸಿಕ್ಕು ಬಿದ್ದು ನೌಕ್ರೀ ಕಳಕೊಂಡ, ತಿರುಗಿ ಊರಿಗೆ ಹೋದ ಮನೀ

ಕಿತಗೊಂಡು. ಇದು ಆದಾಗ ಅಚ್ಯುತ ಮತ್ತ ನಾ ಕ್ಲಾಸ್‌ಮೇಟ್ ಇದ್ವಿ. ಅವರ ಅಪ್ಪ ಹಾವೇರಿಯೊಳಗಿನ ಮನೀ ಕಿತ್ತಿದ ಮೌಲ್ಕ, ಪಾಪ, ಅಚ್ಯುತನೂ ಊರಿಗೆ ಹೋಗಬೇಕಾತು. ಓದು ಅರ್ಧಾಕ್ಕ ನಿಲ್ಲಿಸಿ. ಮುಂದ ಏನು ಆತೋ ಗೊತ್ತಿಲ್ಲ. ಆಮ್ಯಾಲ ಅವನ ಸಂಪರ್ಕ ತಪ್ಪಿ ಹೋತು. ನಾನು ಧಾರವಾಡಕ್ಕ ಕಾಲೇಜಿಗೆ ಹೋದೆ. ಮುಂದ ಅಂವಾ ಹರಪನಹಳ್ಳಿಯೊಳಗ ಸ್ವಾದರಮಾವನ ಮನ್ಯಾಗ ಇದ್ದ ಅಂತ ಯಾರೋ ಹೇಳಿದ್ರು. ಮುಂದ ಅಂವಗ ಏನಾತೋ ಗೊತ್ತಿಲ್ಲ. ಅಚ್ಯುತ ಅಂದ್ರ, ನನ್ನ ಅಗದೀ ಜಿಗರೀ ದೋಸ್ತ. ಅಂವಗ ನಾವೆಲ್ಲ 'ಅಚ್ಯಾ' ಅಂತಿದ್ವಿ. ಸ್ವಲ್ಪ ಉಲಕೋಚಿ ಸ್ವಭಾವದಾಂವ. ಯಾವಾಗಿದ್ರೂ, ನಕ್ಕೋತ ಇರತಿದ್ದ; ಮಂದೀನೂ ನಗಸತಿದ್ದ. ಒಳ್ಳೆ ಜೋಕುಮಾರ. ಜೋಕುಮಾರನ ಹಂಗ ಸ್ವಲ್ಪ ಅವನ ಗುಣಾನೂ! ಯಾವುದರ ಹುಡುಗಿ ಕಂಡಳೂ ಅಂದ್ರ, ಆಕೀ ಹಿಂದ ಬೀಳತಿದ್ದಾ. ಹುಡಿಗ್ಯಾರ ಮೈಮ್ಯಾಲ ಬಿದ್ದು ಮಾತಾಡಸತಿದ್ದ. ಹುಡುಗ್ಯಾರೂ ಅಷ್ಟ. ಅಚ್ಯಾ ಅಂದ್ರ, ನಮ್ಮ ಕ್ಲಾಸಿನ್ಯಾಗಿನ ಎಲ್ಲಾ ಹುಡುಗ್ಯಾರಿಗೂ ಒಳ್ಳೇ ಸಲುಗಿ. ಅಂವಾ ಬರೇ ಮಜಾ ಮಾಡಲಿಕ್ಕೆ ಅಷ್ಟ ಅಲ್ಲ, ಆ ಹುಡಗೇರ ಕೆಲಸಾನೂ ಮಾಡಿಕೊಡತಿದ್ದ.'

'ಮತ್ತ, ಓದು, ಬರಾದಾಗ ಹೆಂಗ? ಶಾಣ್ಯಾ ಏನು?'

'ಇಲ್ಲ. ಅಷ್ಟಕಷ್ಟ. ಆದರ ಒಂದು ಸರ್ತೇನೂ ಫೇಲ್ ಆಗ್ಲಿಲ್ಲ. ಅಂವಾ ನಾನೂ ಕೂಡಿ ಗಣಿತ ಮಾಡತಿದ್ವಿ. ನನಗ ಗಣಿತದೊಳಗ ಸ್ವಲ್ಪ ಗತಿ ಇತ್ತು, ಹಿಂಗಾಗಿ ಕ್ಲಾಸಿನ್ಯಾಗ ಗಣಿತದೊಳಗ ನಾನು ಯಾವಾಗಿದ್ರೂ ಫಸ್ಟ್!'

'ಮತ್ತ, ಅಂಥವನ ಸಂಗತೀ ಹೆಂಗ ಬೆಳೀತು ನಿಮ್ಮ ಗೆಳೆತನಾ?'

'ಅದು ಹಿಂಗಾತು. ನಾನು ಅಭ್ಯಾಸದಾಗ ಶಾಣ್ಯಾ ಇದ್ರೂ, ಆಟದೊಳಗ ಹಿಂದ. ನೋಡಲಿಕ್ಕೆ ನಾನು ಪುಡಿ ಆಳಲ್ಲ? ಅದಕ್ಕ ಆಡಲಿಕ್ಕೆ ಒಂದಮುಂದ ನೋಡತಿದ್ದೆ. ಒಂದು ಸರ್ತೆ ಸಾಲಿ ಬಿಡೋದಕ್ಕಿಂತಾ ಮುಂಚೆ ನಾನು ಗ್ರೌಂಡಿಗೆ ಹೋದೆ. ನನ್ನ ಇನ್ನೊಬ್ಬ ಕ್ಲಾಸ್‌ಮೇಟ್ ಶೇಖರ ಅಂತ... ಅಂವನೋ ಅಥವಾ ಮತ್ತಾರೋ ಖಚಿತ ನೆನಪಿಲ್ಲ, ಅಂವನ್ನ ಹುಡುಕಿಕೋತ ಹೋದೆ. ಅಲ್ಲೆ ಕಾಲ್ಚೆಂಡಿನ ಪ್ರ್ಯಾಕ್ಟೀಸು ಮಾಡತಿದ್ದ ಅಚ್ಯಾ ಒಬ್ಬನ. ನನ್ನನ್ನೂ ಆಟಕ್ಕ ಕರದಾ. ನಾನೂ ಚೆಂಡು ಒದೀಲಿಕ್ಕೆ ಸುರುವು ಮಾಡಿದೆ. ಒಮ್ಮೇ ಅಂವಾ ಚೆಂಡು ದೂರ ಹೊಡದಾ, ಅದನ್ನ ಹಿಡೀಲಿಕ್ಕೆ ಅಂತ ಅದರ ಬೆನ್ನು ಹತ್ತಿ ಅದಕ್ಕ ಕಾಲು ಹಾಕಿದೆ, ಜಾರಿ ಹಿಂಬರಕೀ ಬಿದ್ದೆ. ಬೀಳೋವಾಗ ಎಡಗೈ ಬೆನ್ನ ಕೆಳಗ ಸಿಕ್ಕು ಮಣಿಕಟ್ಟಿನ ಹತ್ರ ಮುರೀತು. ನನಗ ಹೆದರಿಕಿ ಬಂತು. ಅಳಲಿಕ್ಕೆ ಹತ್ತಿದೆ ಅಂತ ಕಾಣಸ್ತದ. ಅಚ್ಯಾ ನನ್ನನ್ನ ಮುನಿಸೀಪಾಲ್ಟೀ ದವಾಖಾನಿಗೆ ಕರಕೊಂಡು ಹೋಗಿ ಅಲ್ಲೆ ತನಗ ಗೊತ್ತಿದ್ದ ಒಬ್ಬ ನರ್ಸಿಗೆ ಹೇಳಿ ಪಟ್ಟೀ ಕಟ್ಟಿಸಿದಾ. ಮನೀಗೆ ಬರಲಿಕ್ಕೆ ನನಗ ಹೆದರಿಕಿ ಅನಸತಿತ್ತು. ಅಚ್ಯಾ ಧೈರ್ಯಾ ಹೇಳಿ ಮನೀಗೆ ಕರಕೊಂಡು ಬಂದಾ. ನನಗ ಅಪ್ಪನ ಹೆದರಿಕೆ, ಹಿಂಗಾದದ್ದಕ್ಕ ಎಲ್ಲೆ ಬೈತಾನೋ ಅಂತ. ಮನೀಗೆ ಬಂದು ಮನ್ಯಾಗ ಎಲ್ಲಾನೂ ಹೇಳಿದಾ, ಅಚ್ಯಾ. ಮುಂದ ನನ್ನ ಕೈ ಬರೋಬರಿ ಆತು, ಆ ಮಾತು ಬ್ಯಾರೇ. ಅವತ್ತಿನಿಂದ ಅಚ್ಯಾ ನಾನೂ ಅಗದೀ ಗೆಳೆಯರಾದ್ವಿ.'

'ಮುಂದ?'

'ಅದರ ಮುಂದಿನ ವರ್ಷ ನನಗ ಟೈಫಾಯ್ಡ್ ಜ್ವರಾ ಬಂತು, ನಾನು ಒಂಬತ್ತನೇ ಇಯತ್ತಾಕ್ಕ ಇದ್ದಾಗ. ಇಪ್ಪತ್ತೊಂದು ದಿನದ ಕಟ್ಟಿನ ಜ್ವರಾ. ಮನ್ಯಾಗ ನನ್ನ ಆಶಾನ ಬಿಟ್ಟಿದ್ದರಂತ. ಆ ಇಪ್ಪತ್ತು ದಿನಾನೂ ಅಚ್ಯಾ ನನ್ನ ಸಂಗತೀನ ಇದ್ದ. ಮನಿಗೆ ಬರೇ ಊಟಕ್ಕಷ್ಟು ಹೋಗಿ ಬರತಿದ್ದ. ನನಗ ಔಷಧ ಕೊಡೋದು, ಒಂದೊಂದು ಸರತೆ ನನಗೆ ಎನಿಮಾ ಕೊಡಲಿಕ್ಕೆ ಸಹಿತ ಸಹಾಯ



ಮಾಡತಿದ್ದ. ನಿನಗೆ ಗೊತ್ತದನೋ ಇಲ್ಲೊ, ಟೈಫಾಯ್ಡ್ ಜ್ವರಾ ಬಂದ್ರ ಕೈಕಾಲಿಗೇ ಆಗೋದಿಲ್ಲ. ಅವ್ವನ್ನ ಬಿಟ್ರ ಅಚ್ಯಾ ಒಬ್ಬನ ಏನೂ ನಾಚಿಕಿ ಇಲ್ಲದ ನನ್ನ ಸೇವಾ ಮಾಡಿದ, ಆ ನನ್ನ ಜಡ್ಡಿನ ಟಾಯ್ಮಿಗೆ.'

'ಪಾಪ. ಅಂಥ ಗೆಳೆಯಂದ್ರು ಈಗೆಲ್ಲಿ ಸಿಗತಾರ?'

'ನನಗ ಅಷ್ಟ ಅಲ್ಲ, ಯಾರಿಗೆ ಬೇಕಂದ್ರ ಅವರಿಗೆ ಹೊತ್ತಿಗೆ ಆಗತಿದ್ದ. ಒಮ್ಮೆ ಏನಾತಂದೀ? ಅಲ್ಲೆ ಒಂದು ಕ್ರಿಶ್ಚನ್ ಕುಟುಂಬ ಇತ್ತು. ನನ್ನ ಕೈಗೆ ದವಾಖಾನ್ಯಾಗ ಪಟ್ಟೀ ಕಟ್ಟಿಸಿದಾ ತನ್ನ ಗೊತ್ತಿನ ಒಬ್ಬ ನರ್ಸಿಗೆ ಹೇಳಿ, ಅಂತ ಅಂದ್ನೆಲ್ಲ? ಆ ನರ್ಸಿನ ಮನಿ. ಆಕೀಗೆ ಇಬ್ರು ಮಕ್ಕಳಿದ್ರು ಅವಳೀ ಜವಳೀ. ಜಾನಿ ಅಂತ ಗಂಡು ಮತ್ತು ಒಂದು ಹುಡುಗಿ 'ಮತ್ತಿ' ಅಂತ.'

'ಮತ್ತಿ? ಅದೆಂಥ ಹೆಸರರೀ?'

'ಏನೋ ಗೊತ್ತಿಲ್ಲ. ಮತ್ತಿಗೆ ಆಗ ಹದ್ನೈದು ವರ್ಷ ಇರಬೇಕು. ಯಾರೋ ಆಕೀನ್ನ ಬಸರು ಮಾಡಿಬಿಟ್ರು.'

'ಅಚ್ಯುತ ಅಲ್ಲ, ಹೌದಲ್ಲೋ?'

'ಛೇ, ಅಚ್ಯಾ ಅಷ್ಟು ನೀಚ ಅಲ್ಲ. ಆ ಹುಡುಗಿ ಭಾವೀ ಹಾರಕೊಳ್ಳಿಕ್ಕ ಹೋಗಿದ್ಲಂತ. ಆಕೀನ್ನ ಯಾರೋ ಹೆಂಗೋ ಉಳಿಸಿದರು, ಆ ಮಾತು ಬ್ಯಾರೇ. ಆದ್ರ ಮಜಾ ಅಂದ್ರ ಅಚ್ಯಾ ಆ ನರ್ಸಿಗೆ ಮಾತು ಕೊಟ್ಟಿದ್ನಂತ: ಒಂದು ವ್ಯಾಳೇ ಮತ್ತೀನ ಬಸರು ಮಾಡಿದಂವಾ ಆಕೀನ್ನ ಮದುವಿ ಆಗಲಿಕ್ಕೆ ಒಪ್ಪಲಿಲ್ಲಾ ಅಂದ್ರ, ತಾನ ಆಕೀನ್ನ ಮದುವಿ ಆಗತೇನೀ ಅಂತ. ಮೂರ್ಖ ಅಲ್ಲ?'

'ಮುಂದೇನಾತು? ಮತ್ತ ಆ ಹುಡುಗೀ ತಾಯಿ ಅಚ್ಯುತನ್ನ ನಂಬಿದಳೇನು? ಏನ ಆಗಲಿ, ಕಥಿ ಇಂಟರೆಸ್ಟಿಂಗ್ ಅದ.' ಶಂಕರರಾಯನ ಹೆಂಡತಿ ಸುಶೀಲಾ ಜೋರಾಗಿ ನಕ್ಕಳು.

'ಏನೂ ಆಗಲಿಲ್ಲ. ಆ ಹುಡುಗಿ ಮತ್ತೀದು ಹೊಟ್ಟೀ ಇಳಿಸಿದರಂತ, ಬೆಳಗಾಂವಿಗೋ ಎಲ್ಲಿಗೋ ಕರಕೊಂಡು ಹೋಗಿ. ಮುಂದ ಒಂದ ವರ್ಷದಾಗ ಆಕಿ ಮತ್ತ ಬ್ಯಾರೇ ಯಾರೋ ಒಬ್ಬ ನಾಟಕದವನ ಸಂಗ್ತೀ ಓಡಿಹೋದಳಂತ.'

'ನಿಮಗ ಇದನ್ನೆಲ್ಲಾ ಯಾರು, ಅಚ್ಯುತನ ಹೇಳಿದರೇನು?'

'ಹೌದು.' ಶಂಕರರಾಯ ಸ್ವಲ್ಪ ತಡೆದು, ಉಸಿರುಗರೆದು ಹೇಳಿದ: 'ನನಗ ಕೆಟ್ಟ ಅನಸೋದಂದ್ರ, ಅಂವಗ, ಅಚ್ಯಾಗ, ನಾನು ಏನೂ ಮಾಡಲಿಕ್ಕೆ ಆಗಲಿಲ್ಲಾ ಅಂತ.'

'ಯಾರ ದೈವಕ್ಕ ಯಾರು ಹೊಣೀ? ಪಾಪ, ಈಗೆಲ್ಲಿರತಾರಂತ?'

'ಅದೂ ಗೊತ್ತಿಲ್ಲ. ಬಳ್ಳಾರಿಯೊಳಗ ಯಾವುದೊ ಟ್ರ್ಯಾನ್ಸ್‌ಪೋರ್ಟ್ ಕಂಪನಿಯೊಳಗ ಕಾರಕೂನ ಅಂತ ಕೆಲಸಾ ಮಾಡತಾನ ಅಂತ -ಮೊನ್ನೆ ಧಾರವಾಡಕ್ಕ ಹೋಗಿದ್ವೆಲ್ಲ? ಅಲ್ಲೆ ರಾಮಕೃಷ್ಣ ಅಂತ ಒಬ್ಬರು ನಮಗ ಭೆಟ್ಟೀ ಆಗಿದ್ರಲ್ಲ? ಆ ರಾಮಕೃಷ್ಣ ಮತ್ತು ಅಚ್ಯಾ ಬಳಗ. ಅಂವಾ ಹೇಳಿದ. ಅದೂ ಖಾತ್ರೀ ಗೊತ್ತಿಲ್ಲಾ' ಅಂತ ಹೇಳಿದ.'

ಈಗ ಇಲ್ಲಿ ನಿಂತು ಅಂಗಡಿಯ ಈ ಹುಡುಗಿಯ ಕೂಡ ಹರಟೆ ಹೊಡೆಯುತ್ತಿರುವ ಈ ವ್ಯಕ್ತಿ, ಆ ಅಚ್ಯುತರಾವ್, ಆ ಕುಲಕರ್ಣಿ ಅಚ್ಯಾನೇ ಆಗಿರಬಾರದೇಕೆ? ಹೇಗೆ ಕೇಳುವದು?

ಆದದ್ದಾಗಲಿ, ಕೇಳಿಯೇ ಬಿಡೋಣ ಎಂದು ಶಂಕರರಾಯ ಆ ಮನುಷ್ಯನ ಹತ್ತಿರ ಹೋಗಿ, 'ಎಕ್ಸ್‌ಕ್ಯೂಜ್ ಮೀ. ನೀವು ಅಚ್ಯುತರಾವ್ ಹನುಮಂತರಾವ್ ಕುಲಕರ್ಣಿ ಅಲ್ಲ?'

ಆ ವ್ಯಕ್ತಿ ಗಕ್ಕನೇ ಇವನತ್ತ ತಿರುಗಿ ನೋಡಿ 'ಹೌದು' ಎಂದ. 'ಆದ್ರ, ನೀವು ಯಾರು? ನಿಮ್ಮ ಪರಿಚಯ ಆದ್ಹಂಗಿಲ್ಲ.'

ಶಂಕರರಾಯನ ಮನಸ್ಸಿಗೆ ಖಿಜೀಲ ಅನಿಸಿತು. ಅರೆ! ಅಂಥ ಆತ್ಮೀಯ ಗೆಳೆಯನಾಗಿದ್ದ ಅಚ್ಯಾ, ಈಗ ತನ್ನ ಗುರುತು ಸಹಿತ ಹಿಡಿಯಲಾರದಾದನಲ್ಲ? ಕಾಲವೆಂದರೆ ಇದೇ ಅಲ್ಲವೇ?

'ಪರಿಚಯ ಅದ, ಆದರ ಗುರುತು ಸಿಕ್ಕಿರಲಿಕ್ಕಿಲ್ಲ. ನಾನು ಶಂಕರ ಖಾಸನೀಸ, ಹಾವೇರಿಯೊಳಗ...'

ಶಂಕರರಾಯ ಮಾತು ಇನ್ನೂ ಮುಗಿಸುತ್ತಿದ್ದನೋ ಇಲ್ಲವೋ, ಆ ವ್ಯಕ್ತಿ ಇವನ ಮೇಲೆ ಮುಗಿಬಿದ್ದು, 'ಎಲಾ ಶಂಕರಾ! ಹೆಂಗ ಆಗೀಯಲ್ಲೋ? ಮೊದಲ ಎಷ್ಟು ನಾಜೂಕು ಇದ್ದಿ, ಈಗ ಇದು ಹೆಂಗ ಇಷ್ಟು ದಪ್ಪ ಆಗಿಯೋ? ಬಾತಬಿಟ್ಟೀಯಲ್ಲೋ! ಎಲಾ ನಿನ! ಏನ ಏನ...' ಮುಂದೆ ಮಾತಾಡಲಾಗದೇ ಆ ವ್ಯಕ್ತಿ-ಅಂದರೆ, ಅಚ್ಯುತರಾಯ-ಚಾಳೀಸ ತೆಗೆದು ಕಣ್ಣೊರಸಿಕೊಳ್ಳುತ್ತ ನಿಂತ. ಅದು ಮುಗಿಯುವ ಪುರುಸೊತ್ತಿಲ್ಲದೇ, ಶಂಕರನ ಕೈ ಬಿಗಿಹಿಡಿದು, 'ಎಲ ಎಲಾ, ಎಲ ಎಲಾ!' ಎಂದು ಉದ್ಗರಿಸುತ್ತ, ತಡೆಯದ ಯಾವುದೋ ಆವೇಗದಿಂದ ಶಂಕರರಾಯನನ್ನು ಬಿಗಿಯಾಗಿ ಅಪ್ಪಿಕೊಂಡ. ಟೇಬಲ್ಲಿನ ಹಿಂದೆ ನಿಂತ ಆ ಹುಡುಗಿ, ಈ ಇಬ್ಬರು ವಯಸ್ಕರು ಇದೇನು ಆಟವಾಡುತ್ತಿದ್ದಾರೆ ಎಂದು ಆಶ್ಚರ್ಯದಿಂದಲೋ, ಕುತೂಹಲದಿಂದಲೋ ಅಥವಾ ಕೇವಲ ಚೇಷ್ಟೆಗಾಗಿಯೋ ನಸುನಗುತ್ತ ಅವರನ್ನು ನೋಡತೊಡಗಿದಳು. ಶಂಕರರಾಯಗೆ ಸಂಕೋಚವೆನಿಸತೊಡಗಿತು. ಅಂಗಡಿಯಲ್ಲಿ ಆ ಹುಡುಗಿ ಒಬ್ಬಳೇ ಅಲ್ಲ, ಅಲ್ಲಲ್ಲಿ ಶೆಲ್ಫ್‌ಮೇಲೆ ಇಟ್ಟ ಪುಸ್ತಕಗಳನ್ನು ನೋಡುತ್ತ, ಕೆದಕುತ್ತ ನಿಂತಿದ್ದ ಇನ್ನಿತರ ಗಿರಾಕಿಗಳೂ ಇವರಿಬ್ಬರನ್ನು ದಿಟ್ಟಿಸಿ ನೋಡತೊಡಗಿದರು. ಅಚ್ಯುತನ ಆವೇಗ ಸ್ವಲ್ಪ ಕಡಿಮೆಯಾಯಿತೆಂದು ಗೊತ್ತಾದ ಕೂಡಲೇ ಶಂಕರರಾಯ ಅವನ ಕೈ ಹಿಡಿದು ಹೊರಬಾಗಿಲದತ್ತ ಎಳೆದುಕೊಂಡು ಬಂದ. ಬಂದು, 'ಅಚ್ಯಾ, ನಿನ್ನ ನೋಡಿ ನನಗ ಭಾಳ ಅಂದ್ರ ಭಾಳ ಸಂತೋಷ ಆತು. ಸಾಯೋದಕ್ಕಿಂತಾ ಮುಂಚೇ ಗೆಳೆಯನ ಭೆಟ್ಟಿ ಆಗತದೋ ಇಲ್ಲೋ ಅಂತ ಮನಸಿನ್ಯಾಗ ಕೊರಗತಿದ್ದೆ. ದೇವರು ಕೂಡಿಸಿಕೊಟ್ಟಾ, ಭೆಟ್ಟಿ ಆತು; ಅಕಸ್ಮಾತ್ ಆದ್ರೂ ಭೆಟ್ಟಿ ಆತು. ಬಾ, ಇಲ್ಲೆ ಬ್ಯಾಡ, ಹೊರಗ ಯವುದರೆ ಛಾದಂಗಡಿಗೆ ಹೋಗಿ ಕುತಗೊಂಡು ಮಾತಾಡೋಣಂತ.' ಹೀಗೆಂದು ಅವನನ್ನು ಎಳೆದುಕೊಂಡು ಹೊರಗೆ ನಡೆದ. ಅಚ್ಯುತ ಕುಲಕರ್ಣಿ, ಅವನ ಭುಜ ಹಿಡಿದವನು ಹಾಗೆಯೇ ಅವನ ಬೆನ್ನುಹತ್ತಿ ನಡೆದ.

'ಏನಪಾ, ಈಗ ಏನು ಮಾಡೀ?' ಅಚ್ಯುತ ಕೇಳಿದ.

'ಏನು ಮಾಡಬೇಕು? ಹೈದರಾಬಾದಿನ್ಯಾಗ 'ಅಲಾಯ್ಸ್ ಫ್ಯಾಬ್ರಿಕೇಟರ್ಸ್' ಅಂತ ಒಂದು ಇಂಡಸ್ಟ್ರಿ ಅದ. ಅದರಾಗ ನಾನು ಅಕೌಂಟ್ಸ್ ಆಫೀಸರ್ ಅಂತ ಕೆಲಸ ಮಾಡತೇನಿ. ಈಗ ಇಪ್ಪತ್ತು ವರ್ಷ ಆತು ಅಲ್ಲೆ ಕೆಲಸಾ ಮಾಡಲಿಕ್ಕೆ ಹತ್ತಿ. ಇನ್ನ ಐದು ವರ್ಷಕ ರಿಟಾಯರ್ ಆಗತೇನಿ. ಮಕ್ಕಳು ಇಬ್ಬರೂ-ಗಂಡು ಹುಡುಗರು-ದೊಡ್ಡವರಾಗ್ಯಾರ. ಒಬ್ಬಾಂವಾ ಅಮೇರಿಕಾದಾಗ ಇಲೆಕ್ಟ್ರಾನಿಕ್ಸ್ ಕಲೀಲಿಕ್ಕೆ ಅಂತ ಹೋಗ್ಯಾನ ಹೋದ ವರ್ಷ. ಅಲ್ಲೇ ನೌಕರೀನೂ



ಸಿಗಬಹುದು. ಇನ್ನೊಬ್ಬವನೂ ಸೀ.ಏ. ಮಾಡಲಿಕ್ಕೆ ಹತ್ಯಾನ. ಇನ್ನು ಎರಡು ವರ್ಷಕ್ಕ ಅವನೂ ಕೆಲಸಾ ಸುರುವು ಮಾಡತಾನ. ಇಬ್ಬರದೂ ಮದುವಿ ಆಗಿಲ್ಲ. ಮನ್ಯಾಗ ಅಲ್ಲೆ ನಾನು ಮತ್ತ ನನ್ನ ಹೇಣತಿ, ಎರಡನೇ ಮಗಾ, ಮೂರು ಮಂದಿ ಇದ್ದೇವಿ. ಇನ್ನ ನಿನ್ನ ಸುದ್ದಿ ಏನು?' ಶಂಕರರಾಯ ತನ್ನ ಎಲ್ಲ ವಿವರ ಕೊಟ್ಟ. ಇಬ್ಬರೂ ಪುಸ್ತಕದ ಅಂಗಡಿಯಿಂದ ಹೊರಗೆ ಬಂದಿದ್ದರು. ಅಲ್ಲಿಯೇ ಎದುರಿಗೆ ಕಾಣಿಸಿದ ದೊಡ್ಡ ಹೊಟೇಲ್ ಒಂದರ ಕಡೆಗೆ ಶಂಕರರಾಯ ತಿರುಗುವವನಿದ್ದ. ಅಚ್ಯುತ ಅವನನ್ನು ತಡೆದು,

'ಅಲ್ಲೆ ಬ್ಯಾಡ. ಈ ಬೆಂಗಳೂರಿನವರಿಗೆ ಛೊಲೋ ಛಾ ಮಾಡಲಿಕ್ಕೆ ಬರೋದಿಲ್ಲ. ಬಾ, ನಾ ಒಂದು ಕಡೆಗೆ ಕರಕೊಂಡು ಹೋಗತೇನಿ' ಎಂದು ಅವನನ್ನು ಇನ್ನೂ ಸ್ವಲ್ಪ ಮುಂದೆ ಎಳೆದುಕೊಂಡು ಹೋದ. ಅಲ್ಲಿ ಸಣ್ಣದೊಂದು 'ಮಂಜರಿ ಟೀ ಕಾಫಿ ಕ್ಲಬ್' ಎಂದು ಮಾಸಿದ ಬೋರ್ಡ್ ಹಾಕಿದ್ದ ಅಂಗಡಿಯೊಂದರ ಒಳಗೆ ಕರೆದುಕೊಂಡು ಹೋದ. ಗಲ್ಲೆಯ ಮೇಲೆ ಕುಳಿತ ದಪ್ಪಗಿನ ಮಾಲೀಕ ಅಚ್ಯುತನನ್ನು ನೋಡಿ,

'ಏನು, ಅಚ್ಯುತರಾಯರು! ಅಪುರೂಪ ಆಗಿಬಿಟ್ಟೀರಿ? ನಮ್ಮನ್ನ ಮರತುಬಿಟ್ಟೀರೋ ಹೆಂಗ?' ಎಂದ. ಅಚ್ಯುತ ಅವನ ಕೈ ಕುಲುಕಿ, 'ಛೇ, ನಿನ್ನ ಮರೆಯೋದ, ಸುಬ್ಬಣ್ಣ? ಈಗೀಗ ಇತ್ತಲಾ ಕಡೆ ಬರಲಿಕ್ಕೆ ಆಗಿಲ್ಲ, ಅಷ್ಟ. ಎರಡು ಛೋಲೋ ಛಾ ಕಳಸು. ನನ್ನ ಹಳೇ ಗೆಳೆಯಾ ಇವರು, ಶಂಕರರಾಯ ಅಂತ. ಅವರೂ ನಿನ್ನ ಛಾ ಕುಡದು ಭಲೆ ಅಂದಿರಬೇಕು, ಅಂಥಾ ಛಾ ಕಳಸು.'

ಶಂಕರರಾಯನನ್ನು ಮೂಲೆಯ ಒಂದು ಟೇಬಲ್ಲಿಗೆ ಕರೆದುಕೊಂಡು ಹೋದ. ಅಲ್ಲಿ ಇಬ್ಬರೂ ಎದುರು ಬದುರು ಕುಳಿತುಕೊಂಡ ಮೇಲೆ, ಅಚ್ಯುತ ತನ್ನ ಸುದ್ದಿ ಹೇಳತೊಡಗಿದ.

'ನನ್ನದೇನೂ ಇಲ್ಲಪಾ ಹೇಳಿಕೊಳ್ಳೋ ಅಂಥಾದ್ದು. ಹೋದ ವರ್ಷದ ತನಕ ಒಂದು ಟ್ರಾನ್ಸ್‌ಪೋರ್ಟ್ ಕಂಪನಿಯೊಳಗ ಮ್ಯಾನೇಜರ್ ಅಂತ ಇದ್ದೆ. ಬ್ಯಾಡ ಅನಿಸಿ ನೌಕರೀ ಬಿಟ್ಟು ಈಗ ಮನ್ಯಾಗ ಇದ್ದೇನಿ, ದೇವರನ ನೆನೆಸಿಕೋತ. ಇಬ್ಬರು ಹುಡಿಗೇರದು ಮದುವಿ ಆಗೇದ. ಇದ್ದ ಒಬ್ಬ ಮಗಾ ಮನೀ ಬಿಟ್ಟು ಓಡಿ ಹೋದ. ಎಲ್ಲಿ ಇದ್ದಾನೋ ಪತ್ತೆ ಇಲ್ಲ ಇವತ್ತಿನ ತನಕಾ. ಇದ್ದಾನೋ ಸತ್ತಾನೋ ಅದೂ ಗೊತ್ತಿಲ್ಲ.' ಅಚ್ಯುತ ನಿಟ್ಟುಸಿರು ಬಿಟ್ಟ. ಮುಂದುವರೆಸಿ,

'ಆತು ಬಿಡು. ಅವನ ಮತ್ತ ನಮ್ಮ ದೈವದಾಗು ಏನು ಇತ್ತೋ ಅದು ಆಗತದ. ನೀ ಅರಾಮ ಇದ್ದೀಯಲ್ಲಪಾ?'

'ಹಿಂಗಿದ್ದೇನಿ, ನೋಡು.'

ಚಹ ಬಂದಿತು. ಇಬ್ಬರೂ ಸುಮ್ಮನೆ ಕುಡಿಯತೊಡಗಿದರು.

'ಅಂದ ಹಂಗ, ನೀ ಎಲ್ಲೆ ಉಳಕೊಂಡೀ?' ಅಚ್ಯುತ ಕೇಳಿದ.

'ಇಲ್ಲೆ ಹೊಟೇಲ್ ಮಯೂರ ಅಂತ ಅದ ಅಲ್ಲ? ಅಲ್ಲೆ.'

'ನೀವೇನಪಾ, ದೊಡ್ಡ ಮನಷೇರು! ನಾವು ಸಣ್ಣ ಮಂದಿ ಇಲ್ಲೆ ಇದ್ದೇವಿ ಅನ್ನೋ ಖಬರು ನಿಮಗ ಎಲ್ಲೆ ಇರತದ?' ಆತ ಸ್ವಲ್ಪ ಅನವಶ್ಯಕ ಅಸೂಯೆಯಿಂದ ಅಂದ; ಅಥವಾ ಶಂಕರರಾಯ ಹಾಗೆಂದು ತಿಳಿದುಕೊಂಡ.

'ಹಂಗೇನಿಲ್ಲಪಾ! ನೀ ಈ ಊರಾಗ ಇದ್ದೀ ಅಂತ ನನಗ ಕನಸ ಮನಸಿನ್ಯಾಗ ಹೊಳಿದಿಲ್ಲ. ಗೊತ್ತಿತ್ತೂ ಅಂದ್ರ, ಇದಕ್ಕಿಂತ ಮುಂಚೆ ನಿನ್ನ ಭೆಟ್ಟಿ ಆಗದ ಇರತಿದ್ದೆನೇನು? ಅದಿರಲಿ, ನಾನು ಹೈದರಾಬಾದಿನ್ಯಾಗ ಇದ್ದದ್ದು ನಿನಗ ಗೊತ್ತಿತ್ತೇನು?'

ಅಚ್ಯುತ ಒಲ್ಲದ ಮನಸ್ಸಿನಿಂದೆಂಬಂತೆ ಅಂದ: 'ಗೊತ್ತಿತ್ತು. ಅಂದ್ರ, ಹೋದ ವರ್ಷ ನಮ್ಮ ಸ್ವಾದರ ಮಾವನ ಮಗಾ ರಾಮಕೃಷ್ಣ-ರಾಮಕೃಷ್ಣ ಗೊತ್ತದ ಅಲ್ಲ?-ಭೆಟ್ಟಿ ಆಗಿದ್ದ, ಅಂವ ಇಲ್ಲಿಗೆ

ಯಾವುದೋ ಕೆಲಸಕ್ಕ ಅಂತ ಬಂದಾಗ. ಮಾತಿಗೆ ಮಾತು ಬಂದು, ನೀನು ಹೈದರಾಬಾದಿನ್ಯಾಗ ಯಾವುದೋ ದೊಡ್ಡ ಮಲ್ಟಿನ್ಯಾಶನಲ್ ಕಂಪನಿಯೊಳಗ ದೊಡ್ಡ ಸಾಹೇಬ ಆಗೀ ಅಂತ ಹೇಳಿದ. ನಿನ್ನ ಅಡ್ರೆಸ್ಸು ಅಂವಗೂ ಗೊತ್ತಿದ್ದಿಲ್ಲಂತ. ಸಂತೋಷ. ನೀ ಒಬ್ಬ ಅರೆ ನಮ್ಮ ಹಳೇ ಗೆಳೆಯರ ಪೈಕೀ ನನ್ನ ನೆನಪು ಇಟ್ಟೀಯಲ್ಲ?'

'ಛೇ, ನಿನ್ನ ಮರತೇನ? ನೀನು ಒಂದೆರಡು ಸರ್ತೆ ನನ್ನ ಕನಸಿನ್ಯಾಗ ಬಂದಿದ್ದೆಪಾ. ನನಗ ಘಾಬರಿ ಆಗಿತ್ತು. ನಿನಗ ಗೊತ್ತದ ಅಲ್ಲ, ಯಾರರೆ ಕನಸಿನ್ಯಾಗ ಬಂದರ ಅವರಿಗೆ ಏನಾಗಿರತದ ಅನ್ನೋ ನಂಬಿಕಿ?'

'ನಾ ಅಷ್ಟು ಲಗೂ ಸಾಯೋಂವ ಅಲ್ಲೇಳು. ನಮ್ಮ ಸ್ವಾಮಿಗೋಳು ನನಗ ಎಂಬತ್ತೈದು ವರ್ಷ ಅಂತ ಹೇಳ್ಯಾರ. ಅಂದ್ರ ಇನ್ನೂ ಇಪ್ಪತ್ತು ವರ್ಷ ಅವ. ಈ ಇರೋ ಅಷ್ಟು ವರ್ಷ ಯಾಕ ಸುಮ್ಮನ ಹಾಳು ಮಾಡಿಕೋಬೇಕೂ ಅಂತ ಅಲ್ಲೆ ಇಲ್ಲೆ ಚೂರುಚಾರು ಸಮಾಜದ ಕೆಲಸಾ ಮಾಡತಿರತೇನಿ. ನಮ್ಮ ಕಾಲನಿಯೊಳಗ ಇರೋವರ ಸಲುವಾಗಿ ಎಲ್ಲಾ ಹಬ್ಬದ ಸಮಾರಂಭ ನಾನು ಆರ್ಗನಾಯ್ಜ್ ಮಾಡತೇನಿ. ಮ್ಯಾಲ ಅಲ್ಲೆ ಒಂದು ಗಣಪತಿ ಗುಡಿ ಅದ. ಅದರ ಪೂಜಾ ಮಾಡತೇನಿ. ರೊಕ್ಕಕ್ಕಲ್ಲ, ಹಿಂಗ ಏನೋ. ಕೀರ್ತನಕಾರರನ್ನ ಕರಸಿರತೇನಿ. ನಮ್ಮ ಗುಡ್ಡಪ್ಪ ಮಾಸ್ತರು ಗೊತ್ತಲ್ಲ ನಿನಗ' ಶಂಕರರಾಯ 'ಗೊತ್ತು' ಎಂಬಂತೆ ಗೋಣು ಹಾಕಿದ.

'ಅವರ ಮಗಾ ಚಿದಂಬರ, ಥೊಲೋ ಕೀರ್ತನ ಮಾಡತಾನ. ಅವನ್ನ ಹೋದವಾರ ಕರಿಸಿದ್ವಿ. ದತ್ತ ಚರಿತ್ರ, ಮ್ಯಾಲ ಕೀರ್ತನಾ ಮಾಡಿದ. ಕೇಳಿ ಎಲ್ಲಾರ ಕಣ್ಣಾಗೂ ಭಕ್ತಿಯಿಂದ ನೀರು ಬಂದವು. ಅಷ್ಟು ಥೊಲೋ ಹೇಳತಾನ. ಹಾಡನೂ ಹಂಗ, ಛೆಂದ ಹಾಡತಾನೋ'

ಗೆಳೆಯರಿಬ್ಬರೂ ಸುಮ್ಮನೇ ಕುಡಿಯುತ್ತ ಕುಳಿತರು, ಆಗಾಗ ಒಬ್ಬರೊಬ್ಬರ ಕಣ್ಣು ತಪ್ಪಿಸಿ ಪರಸ್ಪರರನ್ನು ನೋಡುತ್ತ. ಕಣ್ಣು ಕೂಡಿದ ಸಲಕ್ಕೊಮ್ಮೆ ಸುಮ್ಮನೆ ನಸುನಕ್ಕರು-ಹೊಸ ಬಿಸೀ ಗಂಡ ಹೆಂಡಿರಂತೆ. ಮೊದಲಾಗಿದ್ದರೆ, 'ಏನಲೇ, ಯಾಕಲೇ, ಸೂಳೇಮಗನ, ನಿನ್ನಾಪನ' ಇತ್ಯಾದಿ ಒಬ್ಬರನ್ನೊಬ್ಬರು ಸಲುಗೆಯಿಂದ ಬೈಯುತ್ತ ನಗುತ್ತಿದ್ದರು. ಆದರೆ ಕಾಲ ಮತ್ತು ದೇಶ ಪರಸ್ಪರರನ್ನು ಅಪರಿಚಿತವಾಗಿಸಿತ್ತು. ಸಲುಗೆ ಮಾಸಿ, ಎಲ್ಲಿಯೂ ಇಲ್ಲದ ಸಂಕೋಚ ಅವರಿಬ್ಬರನ್ನೂ-ವಿಶೇಷವಾಗಿ ಶಂಕರರಾಯನನ್ನು-ಆವರಿಸಿತ್ತು. ಗೆಳೆಯನ ಮೋರೆಯನ್ನು ಒಂದು ಕ್ಷಣ ಶಂಕರರಾಯ ದಿಟ್ಟಿಸಿ ನೋಡಿದ. ತನಗೇ ಅರಿವಿಲ್ಲದ ಹೆದರಿಕೆಯ, ಸಾವಿನಂತಹ ಛಾಯೆಯೊಂದು ಕವಿದಿತು. ಗಾಬರಿಯಾಗಿ ಶಂಕರರಾಯ ಎದ್ದುನಿಂತ. ಅಚ್ಯುತ ಇನ್ನೂ ಚಹದ ಕೊನೆಯ ಗುಟುಕು ಮುಗಿಸಿದ್ದಿಲ್ಲ. ಗೆಳೆಯ ಹೀಗೆ ಒಮ್ಮೆಲೇ ಎದ್ದದ್ದನ್ನು ನೋಡಿ, 'ಯಾಕೋ? ಏನಾತು? ಏನರ ಮರೆತೀಯೇನು? ಎಲ್ಲಿಗರೆ ಜಲ್ದೀ ಹೋಗಬೇಕಾಗೇದೇನು?' ಅಂದ.

ಸಾವರಿಸಿಕೊಂಡು ಉತ್ತರ ಕೊಡುವ ಮೊದಲೇ, 'ಇಲ್ಲೋ ಅಚ್ಚ್ಯಾ' ಅಂದ. ಮತ್ತೆ ತಾನು ಏನು ಅಂದೆ ಎಂಬ ಖಬರು ಬಂದಕೂಡಲೇ 'ಹೌದಪಾ, ನಾಳೆ ನಮ್ಮ ಆಫೀಸಿನ್ಯಾಗ ಒಂದು ಮೀಟಿಂಗು ಅದ. ಅದರ ಬಗ್ಗೆ ಇಲ್ಲಿಯ ಮ್ಯಾನೇಜರ್‌ಗ ಫೋನ್ ಮಾಡಬೇಕಾಗೇದ, ಅರ್ಜಂಟ್' ಅಂದ. ಅಚ್ಚಣ್ಣ ನಿಧಾನವಾಗಿ ಚಹ ಕುಡಿದು, ಶರ್ಟಿನ ಜೇಬಿನಿಂದ ಕರವಸ್ತ್ರ ಹಿರಿದು, ಬಾಯಿ ಒರೆಸಿಕೊಂಡು ಎದ್ದ.

'ಫೋನ್ ಮಾಡಬೇಕೂ ಅಂದ್ರ, ಇಲ್ಲೆ ಈ



ಅಂಗಡ್ಯಾಗಿಂದ ಮಾಡು. ಮ್ಯಾನೇಜರ್ ಸುಬ್ಬಣ್ಣಗ ನಾ ಹೇಳತೇನಿ' ಅಂದ.

'ಇಲ್ಲಪಾ, ನಮ್ಮ ಮಾತು ಬಾಳ ಹೊತ್ತಿನದು ಆಗಬಹುದು. ಬ್ಯಾಡ ಬಿಡು. ರಾತ್ರಿ ನಾ ಇಳಕೊಂಡ ಹೊಟೇಲ್‌ನಿಂದ ಮಾಡತೇನಂತ.'

ಎಂದು ಶಂಕರರಾಯ ಮಾತು ತೇಲಿಸಲು ಪ್ರಯತ್ನಿಸಿದ. ಆದರೆ ಅಚ್ಚಣ್ಣ ಕೇಳುವವನೇನು?

'ಇಲ್ಲೆ ಕೇಳು, ಶಂಕರಾ. ನೀ ಇಷ್ಟು ವರ್ಷ ಆದಮ್ಯಾಲ ಭೆಟ್ಟಿ ಆಗೀ. ನಿನ್ನ ಹೊಟೇಲ್‌ನ್ಯಾಗ ಇರಲಿಕ್ಕೆ ಬಿಡೋದಿಲ್ಲ. ನೀ ನಮ್ಮ ಮನೀಗೆ ಬರಲಿಕ್ಕೇ ಬೇಕು. ನಡೀ, ನಾನೂ ಬರತೇನಿ, ಇಬ್ಬರೂ ಕೂಡಿ ನೀ ಇಳಕೊಂಡಲ್ಲಿಗೆ ಹೋಗೋಣಂತ. ನಿನ್ನ ಸಾಮಾನೇನವ ತೊಗೊಂಡು ನಮ್ಮ ಮನಿಗೆ ಹೋಗೋಣ.'

ಶಂಕರರಾಯನ ಅಸಹಾಯಕತೆಯನ್ನು ಅಚ್ಚಣ್ಣ ಸಂಕೋಚವೆಂದು ತಿಳಿದ.

'ಮತ್ತ ನೀ ನನ್ನ ಹೇಣತೀನ ಯಾವಾಗ ಭೆಟ್ಟಿ ಆಗೋಂವ? ಆಕೀನ್ನ ನೋಡೋ ಮನಸದನೋ ಇಲ್ಲೊ? ನಮ್ಮ ಮದುವೆಗಂತೂ ನೀ ಇರಲಿಲ್ಲ. ಈಗರೆ ಬಾ. ಆಕೀಗೆ ನಮ್ಮಿಬ್ಬರ ಬಗ್ಗೆ ಏನೇನೋ ಹೇಳೇನಿ. ನಿನ್ನ ನೋಡಬೇಕೂ ಅಂತ ಆಕೀಗೂ ಆಶಾ ಅದ. ಬರತೀಯಾ?'

ಅರ್ಧ ಬೇಡಿಕೆ, ಅರ್ಧ ಅಧಿಕಾರದ ದನಿಯಿಂದ ಅಚ್ಚಣ್ಣ ಕೇಳಿದ. ಶಂಕರರಾಯ ಇಂಥ ಆಕಸ್ಮಿಕಕ್ಕೆ ತಯಾರಿದ್ದಿದ್ದಿಲ್ಲ. ತಪ್ಪಿಸಿಕೊಳ್ಳಲಾರದೆ, 'ಆಗ್ಲೆಪಾ' ಅಂದ. ಗೆಳೆಯರಿಬ್ಬರೂ ಹೊರಗೆ ಬಂದು, ಸಿಕ್ಕ ಆಟೋ ಒಂದನ್ನೇರಿ, ಶಂಕರರಾಯ ಇಳಿದುಕೊಂಡ ಹೊಟೇಲ್‌ಗೆ ಬಂದರು. ಸಾಮಾನು ಕಟ್ಟಿದರು. ಶಂಕರರಾಯ ಮ್ಯಾನೇಜರ್‌ಗೆ ಫೋನ್ ಮಾಡಿ, ಬಿಲ್ ತರಿಸಿ, ಅದನ್ನು ತಂದ ಆಳಿನ ಕೈಯಲ್ಲಿ ಹಣವನ್ನಿತ್ತ. ಜೊತೆಗೆ ಐವತ್ತು ರೂಪಾಯಿ ಟಿಪ್ಸ್ ಇಟ್ಟ. ಅಚ್ಚಣ್ಣ ಇದನ್ನೆಲ್ಲ ನೋಡುತ್ತಿದ್ದ.

'ಏ, ಇದೇನೋ? ನಿನಗ ರೊಕ್ಕ ಹೆಚ್ಚಾಗೇದೇನು? ಅಷ್ಟು ಟಿಪ್ಸ ಇಡತಾರ ಯಾರರೆ?'

ಶಂಕರರಾಯ ತಪ್ಪು ಮಾಡಿದ ಸಣ್ಣ ಹುಡುಗನಂತೆ ನಗುತ್ತ ಅಂದ, 'ಮಹಾರಾಯಾ, ಈ ಹೊಟೇಲ್ ರೂಮ್ ಬುಕ್ ಮಾಡಿದವರು ನಮ್ಮ ಬ್ರ್ಯಾಂಚ್ ಮ್ಯಾನೇಜರ್ರು. ಅವನ ಮರ್ಯಾದೀ ಉಳಿಸಲಿಕ್ಕ ಇಷ್ಟೆಲ್ಲಾ ಪುಕಟ ರೊಕ್ಕಾ ಕೊಡಬೇಕಾಗತದ. ಇಲ್ಲಾ ಅಂದ್ರ ಮುಂದಿನ ಸಲ ನನಗ ಈ ಹೊಟೇಲ್‌ನ್ಯಾಗ ರೂಮು ಸಿಗಲಿಕ್ಕಿಲ್ಲ.'

ಇಬ್ಬರೂ ಇನ್ನೊಂದು ಆಟೋ ತೆಗೆದುಕೊಂಡು ಅಚ್ಚಣ್ಣನ ಮನೆಗೆ ಹೊರಟರು. ಹಾದಿಯಲ್ಲಿ ಶಂಕರರಾಯ ಆಟೋ ನಿಲ್ಲಿಸಿ, ಒಂದಿಷ್ಟು ಹೂ, ಹಣ್ಣು ಕೊಂಡ, 'ಇದೆಲ್ಲಾ ಎದಕ್ಕೊ?' ಎಂದು ಅಚ್ಚಣ್ಣ ಗೊಣಗಿದರೂ.

ಆ ರಾತ್ರಿ ಅಚ್ಚಣ್ಣನ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಅವನ ಹೆಂಡತಿ ಗಂಗಕ್ಕ, ಗಂಡನ ಹಳೆಯ ಗೆಳೆಯನ ಉಪಚಾರಕ್ಕೆಂದು ಶ್ಯಾವಿಗೆ ಪಾಯಸ ಮಾಡಿದಳು ರಾತ್ರಿ ಊಟಕ್ಕೆ. ಜೊತೆಗೆ ಹಪ್ಪಳ, ಸಂಡಿಗೆ-ಸ್ವತಃ ಗಂಗಕ್ಕ ಮನೆಯಲ್ಲಿ ಮಾಡಿದ್ದು-ಇತ್ತು. ಬಹಳಷ್ಟು ಮಾತಾಡಿದವನು ಅಚ್ಚಣ್ಣನೇ. ಶಂಕರರಾಯ ಆಗೀಗನ 'ಹ್ಞೂಂ', 'ಹಿಂಗೇನು?', 'ಅರೆ! ಯಾಕ ಹಂಗಾತು?' ಇತ್ಯಾದಿ ಸ್ಟಾಕ್ ರಿಸ್ಪಾನ್ಸ್ ಕೊಡುತ್ತ ಅಚ್ಚಣ್ಣನೇ ಎಲ್ಲ ಮಾತು ಆಡುವಂತೆ ನೋಡಿಕೊಂಡ. ತನ್ನ ಬಗ್ಗೆ ಏನಾದರೂ ಹೇಳಲೇಬೇಕಾದದ್ದು ಬಂದಾಗ, ಮಾತು ತೇಲಿಸಿ, ಸಪಾರು ಮುಪಾರು ಮಾಡಿಬಿಡುತ್ತಿದ್ದ. ಅಚ್ಚಣ್ಣ ತನ್ನ ಮನೆಯ ಎಲ್ಲ ಸುದ್ದಿ, ತನ್ನ ಗುರುಗಳ ಬಗ್ಗೆ, ಅವರಿಗೆ ತಮ್ಮ ಶಿಷ್ಯರ ಬಗೆಗಿದ್ದ



ಪ್ರೀತಿ-ಅದರಲ್ಲೂ ವಿಶೇಷ ತನ್ನ ಮೇಲೆ-ಎಲ್ಲ ಹೇಳಿದ. ರಾತ್ರಿ ಹನ್ನೊಂದರವರೆಗೂ ಅಜ್ಜಣ್ಣ ಮಾತಾಡುತ್ತಲೇ ಇದ್ದ. ಕೊನೆಗೆ ಗಂಗಕ್ಕನೇ ತಡೆಯಬೇಕಾಯಿತು.

'ಪಾಪ, ಅವರು ಇಡೀ ದಿವಸ ಆಫೀಸಿನ್ಯಾಗ ಕೆಲಸಾ ಮಾಡಿ ದಣಿದಿರತಾರ. ನಿಮ್ಮ ಹಂಗ ರಿಕಾಮ ಚೋಟ ಏನು? ಅವರನ್ನ ಮಲ ಕೊಳ್ಳಲಿಕ್ಕೆ ಬಿಡ್ರಿ, ಇನ್ನು ಸಾಕು. ನಿಮ್ಮ ಮಾತು ನಾಳಿಗೂ ಸ್ವಲ್ಪ ಉಳಿಸಿರಿ.' ಅಂದಳು. ಅಜ್ಜಣ್ಣ ಗೋಡೆಯ ಮೇಲಿನ ಗಡಿಯಾರ ನೋಡಿ,

'ಅರೆ! ಈಗಾಗಲೇ ಹನ್ನೊಂದು ಹೊಡೀತ? ಮಾತಿನ್ಯಾಗ ಹೊತ್ತು ಹೋದದ್ದ ಗೊತ್ತಾಗಲಿಲ್ಲ ನೋಡು.' ಮತ್ತೆ ಹೆಂಡತಿಯತ್ತ ತಿರುಗಿ,

'ಏ ಇಕೀ! (ಆತ ಹೆಂಡತಿಯನ್ನು ಹೆಸರುಗೊಂಡು ಒಂದು ಸಲವೂ ಕರೆಯಲಿಲ್ಲ.) ನನಗ ಅಲ್ಲೆ ರೂಮಿನ್ಯಾಗ ಹಾಸಿಗೀ ಹಾಸು. ನಾನೂ ಶಂಕ್ರನ್ನ ಸಂಗತೀ ಮಲಕೋತೇನಿ' ಅಂದ. ಗಂಗಕ್ಕ ಖೊಕ್ ಎಂದು ನಕ್ಕು, ಶಂಕರರಾಯನನ್ನುದ್ದೇಶಿಸಿ ಅಂದಳು:

'ಇವರು ತಮ್ಮ ಶೋಭನದ ರಾತ್ರಿ, ಸಹಿತ ನನ್ನ ಸಂಗತಿ ಮಲಕೊಳ್ಳಲಿಲ್ಲ. ಮಗ್ಗಲ ಮನ್ಯಾಗಿನ ಮುದುಕಗ ಒಬ್ಬಾಂವಗ ಜೋರು ಜಡ್ಡಾಗಿತ್ತು. ಇಡೀ ರಾತ್ರಿ ಅವನ ಸಂಗತಿ ದವಾಖಾನ್ಯಾಗ ಇದ್ದರು. ಇವತ್ತ ಕೇಳೋದೇನದ? ಹಳೇ ಗೆಳೆಯ ಸಿಕ್ಕಾರ. ಆದರ (ಗಂಡನತ್ತ ತಿರುಗಿ ನೋಡಿ) ನಿಮ್ಮ ಮಾತಿನಿಂದ ಅವರ ನಿದ್ದಿಗೆಡಸಬ್ಯಾಡರಿ' ಎಂದು ಎಚ್ಚರಿಕೆ ಕೊಟ್ಟು ಹಾಸಿಗೆ ಹಾಸಲು ಒಳಗೆ ಹೋದಳು.

ಮರುದಿನ ಶಂಕರರಾಯ ಏಳು ಗಂಟೆಗೆ ಏಳುವ ಹೊತ್ತಿಗಾಗಲೇ ಅಜ್ಜಣ್ಣ ಮನೆಯಿಂದ ಹೊರಬಿದ್ದಿದ್ದ. ಗಂಗಕ್ಕ ಅವನಿಗೆ ಮೋರೆ ತೊಳೆದುಕೊಳ್ಳಲಿಕ್ಕೆ ಬಿಸಿನೀರು ಕೊಟ್ಟು, ಚಹಾ ತಯಾರು ಮಾಡಿ ಇಟ್ಟಿದ್ದಳು. ಶಂಕರರಾಯ ಚಹ ಕುಡಿಯುತ್ತಿರುವಾಗ, ತನ್ನ ಗಂಡ ಮನೆಯಲಿ ಏಕೆ ಇಲ್ಲವೆಂಬುದಕ್ಕೆ ಕಾರಣವನ್ನು ಹೇಳಿದಳು. ಆ ಕಾಲನಿಯಲ್ಲಿ ಇರುವವರಲ್ಲೊಬ್ಬ ಬೆಳಗಿನ ಹೊತ್ತಿಗೆ ಕೃಷ್ಣಾರ್ಪಣ ಆಗಿದ್ದ. ಅವನ ಅಂತ್ಯ ಸಂಸ್ಕಾರದ ತಯಾರಿಗೆಂದು ಅಜ್ಜಣ್ಣ ಹೋಗಿದ್ದ. ಹನ್ನೊಂದು ಗಂಟೆಯಷ್ಟೊತ್ತಿಗೆ ತಿರುಗಿ ಬರುವ ದಾಗಿ ಹೇಳಿದ್ದನಂತೆ. ಮನೆಯಲ್ಲಿ ಶಂಕರರಾಯ ಏನನ್ನೂ ಭಿಡೆ ಮಾಡಿಕೊಳ್ಳಬಾರದೆಂದೂ, ಅವನ ಸ್ನಾನ, ಊಟ ಎಲ್ಲದರ ಜವಾಬ್ದಾರಿ ತನ್ನ ಮೇಲೆ ಹೊರಿಸಿದ್ದಾನೆಂದೂ ಗಂಗಕ್ಕ ಹೇಳಿದಳು.

ಗಂಗಕ್ಕಗೆ ಸುಮಾರು ಅಜ್ಜಣ್ಣನದೇ ವಯಸ್ಸಿರ ಬೇಕು. ಗಲ್ಲಕ್ಕೆ ಅರಿಶಿಣ, ದೊಡ್ಡ ಕುಂಕುಮ ಹಚ್ಚಿಕೊಂಡು ಶಬ್ದಶಃ ಮುತ್ತೈದೆಯಾಗಿದ್ದಳು. ಅಜ್ಜಣ್ಣನ ಮನೆತನದ ಬಡತನ ಅವಳುಟ್ಟ ಸೀರೆ, ಕುಪ್ಪಸ, ಕೊರಳಲ್ಲಿಯ ಬರಿಯ ತಾಳಿಯಲ್ಲಿ ಎದ್ದು ಕಾಣಸುತ್ತಿತ್ತು. ಸ್ವಲ್ಪ ಕೋಲು ಮುಖ, ಚೂಪು ಗದ್ದ, ಆದರೆ ನಕ್ಕಾಗ ಗಲ್ಲದಲ್ಲಿ ಗುಳಿ ಮೂಡುತ್ತಿತ್ತು. ಇವಳು ಸಣ್ಣವಳಿದ್ದಾಗ ಖರೇ ಚಂದ ಇದ್ದಿರಬೇಕು, ಅಂದುಕೊಂಡ ಶಂಕರ ರಾಯ. ಅವನಿಗೆ ದೋಸೆ, ಕಾಫೀ ಉಪಚಾರ ನೀಡುತ್ತ ಗಂಗಕ್ಕ ಅದೂ ಇದೂ ಮಾತಾಡಿದಳು. ತನ್ನ ಮತ್ತು ಅಜ್ಜಣ್ಣನ ಸಂಸಾರ ಸುರುವಾದ ರೀತಿ, ಅದು ಇಲ್ಲಿಯವರೆಗೆ ಹೇಗೆ ನಡೆದು ಬಂದಿದೆ, ಎಲ್ಲದರ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದಳು. ಓಡಿಹೋದ ಮಗನನ್ನು ನೆನೆಸಿಕೊಂಡು ಕಣ್ಣು ಮೂಗು ಒರೆಸಿಕೊಂಡಳು. ಆದರೆ ಒಂದು ಸಲವೂ ಗಂಡನ ಬಗೆಗಾಗಲೀ, ತಮ್ಮ ಬಡತನದ ಬಗೆಗಾಗಲೀ ಒಂದು ಚೂರು ಮಾತೂ ಅವಳ ಬಾಯಿಂದ ಬರಲಿಲ್ಲ. ಗಂಡ ಎದುರಿಗಿ ದ್ದಾಗೆಷ್ಟೋ ಅಷ್ಟೇ ಸಹಜವಾಗಿ ಅವನಿಲ್ಲ ದಾಗಲೂ ಶಂಕರರಾಯನ ಮುಂದೆ ಅಜ್ಜಣ್ಣನ ಚೇಷ್ಟೆ ಮಾಡಿ ನಕ್ಕು, ನಗಿಸಿದಳು.

ಈ ದಂಪತಿಗಳಿಬ್ಬರ ಮಾತು, ಅವರ ಚರ್ಯೆ, ಇರವ ನೋಡಿ ಶಂಕರರಾಯ ಗಲಿಬಿಲಿಗೊಂಡ.

ಅವರ ಮಾತಿಗೆ ಹೇಗೆ ಪ್ರತಿಕ್ರಿಯಿಸಬೇಕೆಂಬುದನ್ನೇ ತಿಳಿಯದಾದ. ತನಗೆ ತಾನೇ ಅಪರಿಚಿತನಾದಂತೆ ಅನಿಸಿತು ಅವನಿಗೆ. ತಾನು ಏನು ಅಂದರೂ,

ಏನು ಸಹಾನುಭೂತಿ, ಅಂತಃಕರುಣೆ, ಪ್ರೀತಿ ತೋರಿಸಿದರೂ ಅದು ಅಪಾರ್ಥಕ್ಕೆಡೆಮಾಡಿ ಕೊಡಬಹುದೆಂದು ಕಳವಳವಾಯಿತು. ಹನ್ನೊಂದರವರೆಗೆ ಅಚ್ಚಣ್ಣ ತಿರುಗಿ ಬರುವದನ್ನೇ ಕಾಯ್ದ. ಹತ್ತೂವರೆ ಸುಮಾರಿಗೆ ಒಬ್ಬ ಹುಡುಗನೊಂದಿಗೆ 'ಅಚ್ಚಣ್ಣಾ ಅವರು ಬರುವದು ಇನ್ನೂ ಎರಡು ಮೂರು ತಾಸು ತಡ ಆಗಬಹುದು, ಆದ್ದರಿಂದ ಶಂಕರರಾಯ ತನ್ನ ಊಟ ಮುಗಿಸಬೇಕು, 'ತನಗಾಗಿ ಕಾಯ ಬಾರದು' ಎಂದು ಹೇಳಿ ಕಳಿಸಿದ್ದ. ಶಂಕರ ರಾಯಗೆ ಹೊರಗೆ ಹೋಗಲು ಒಂದು ನೆವ ಬೇಕಾಗಿತ್ತು. ಸರಿ. 'ವೈನೀ, ನಾ ಮನೀಗೆ ಫೋನು ಮಾಡಬೇಕಾಗೇದ, ಈಗ ಬರತೇನಿ' ಎಂದು ಡ್ರೆಸ್ ಹಾಕಿಕೊಂಡು ನಡೆದ. ಹೋದದ್ದು ಸಮೀಪದ ಟೆಲಿಫೋನ್ ಬೂತ್‌ಗೇನೇ. ಏರ್ ಪೋರ್ಟಿಗೆ ಫೋನ್ ಮಾಡಿ ಹೈದರಾಬಾದಿಗೆ ಮುಂದಿನ ಫ್ಲಾಯ್‌ಟು ಇನ್ನು ಮೂರು ತಾಸಿನಲ್ಲಿ ಇದೆಯೆಂದು ಕಂಡುಕೊಂಡ. ಅಷ್ಟೇ ಅಲ್ಲ. ಆ ಫ್ಲಾಯ್ಟನಲ್ಲಿ ಒಂದು ಸೀಟು ಸಿಗುವದನ್ನೂ ಖಾತ್ರಿ ಮಾಡಿಕೊಂಡ.

ಅರ್ಧ ಗಂಟೆಯ ನಂತರ ತಿರುಗಿ ಬಂದು ಗಂಗಕ್ಕಗೆ ಹೇಳಿದ, 'ವೈನೀ, ಮನೀಗೆ ಅಂದ್ರ ಹೈದರಾಬಾದಿಗೆ ಫೋನ್ ಮಾಡಿದ್ದೆ. ಆಕೀಗೆ (ಅಂದರೆ, ತನ್ನ ಹೆಂಡತಿಗೆ) ಏನೋ ಸೀರಿಯಸ್ ಆಗೇದಂತ. ಹಾಸ್ಪಿಟಲ್‌ಕ್ಕ ಹೋಗ್ಯಾಳಂತ. ಅದಕ್ಕ ನಾ ಈಗ ತಿರುಗಿ ಹೋಗಬೇಕಾಗೇದ' ಎಂದು ಗಂಗಕ್ಕ ಏನು ಹೇಳುವಳೆಂಬುದಕ್ಕೂ ಕಾಯದೇ ತನ್ನ ಸೂಟ್‌ಕೇಸ್ ತಯಾರಿ ಮಾಡ ತೊಡಗಿದ.

'ಒಂದು ತುತ್ತು ಊಟಾ ಮಾಡಿ ಹೋಗ್ರಿ. ಈಗ ಅನ್ನ ಆಗತದ' ಎಂದು ಗಂಗಕ್ಕ ಅಂದರೆ,

'ಬ್ಯಾಡ, ವೈನೀ. ತಡಾ ಆತೂ ಅಂದ್ರ ಫ್ಲಾಯ್ಟ್ ತಪ್ಪಿಬಿಡಬಹುದು' ಎಂದು ತನ್ನ ಸೂಟಕೇಸ್ ಎತ್ತಿಕೊಂಡ.

'ಅಚ್ಚಣ್ಣಗ ಹೇಳ್ರಿ, ನಾ ಹಿಂಗ ಅವಸರದಿಂದ ಹೋಗಬೇಕಾತು. ಕ್ಷಮಾ ಮಾಡೂ ಅಂತ. ಮುಂದಿನ ಸರ್ತೆ ಬಂದಾಗ ಮತ್ತ ತಪ್ಪದ ಮನೀಗೆ ಬರತೇನಿ'

ಎಂದು ಹೊರಟ. ಗಂಗಕ್ಕ,


'ಊರು ಮುಟ್ಟಿದ ಕೂಡ್ಲೆ, ನಿಮ್ಮ ಮನಿಯವರಿಗೆ ಹೆಂಗ ಅದ ಅಂತ ನಮಗೂ ಪತ್ರಾ ಬರೀರಿ. ನಮಗೂ ಕಾಳಜೀ ಆಗೇದ. ಪಾಪ. ಏನು ಆಗೇದೋ?' ಎಂದು ಆತಂಕದಿಂದ ಹೇಳಿದಳು.

'ಆಗ್ಲಿ'

ಶಂಕರರಾಯ ಹೆಚ್ಚಿಗೆ ಮಾತಾಡದೇ ರಸ್ತೆಗೆ ನಡೆದ. ಪುಣ್ಯಕ್ಕೆ ಅಲ್ಲಿಯೇ ಒಂದು ಖಾಲಿ ಆಟೋ ನಿಂತಿತ್ತು. ಅದರಲ್ಲಿ ಕುಳಿತು, 'ಏರ್‌ಪೋರ್ಟಿಗೆ, ಲಗೂ!' ಎಂದ. ಆ ಬೀದಿ ದಾಟಿ ಮುಂದಿನ ದೊಡ್ಡ ರಸ್ತೆಗೆ ತಿರುಗುತ್ತಿರುವಾಗ ಅನ್ನಿಸಿತು: 'ಅರೆ! ನೀವೂ ಹೈದರಾಬಾದಿಗೆ ಬಂದಾಗ ನಮ್ಮ ಮನೀಗೆ ಬರ್ರಿ,' ಅಂತ ಒಂದು ಮಾತು ಅನ್ನಲು ಮರೆತೆನಲ್ಲ? ಎಂದು.

ಮಡದಿ, ಮಕ್ಕಳೊಂದಿಗೆ ಬಿ.ಟಿ. ದೇಸಾಯಿ







ಒಂದು ಗಂಟೆಯ 'ಜೋಡಿ'

ಲಂಡನ್ನಿನ ಅಜ್ಞಾತ ಮಹಿಳೆಗೆ,

ಈ ಕಾಗದದ ದೋಣಿ ಏಳು ಸಮುದ್ರ ದಾಟಿ ನೀನಿದ್ದಲ್ಲಿ ತಲುಪುವುದಿಲ್ಲ, ನನಗೆ ಗೊತ್ತಿದೆ. ಆದರೆ ಇಪ್ಪತ್ತು ವರ್ಷಗಳ ಹಿಂದೆ ಒಂದು ಗಂಟೆ ಮಾತ್ರ ನನ್ನ 'ಜೋಡಿ'ಯಾಗಿದ್ದ ನಿನ್ನ ಋಣ ಇನ್ನು ಹೇಗೆ ಮನ್ನಿಸಲಿ?

ನಾನು ಯಾವುದೋ ಕೆಲಸಕ್ಕಾಗಿ ಲಂಡನ್ನಿಗೆ ಬಂದಿದ್ದೆ. ಅಲ್ಲಿಯ ನ್ಯಾಶನಲ್ ಥಿಯೇಟರ್ ನಾಟ್ಯಗೃಹದಲ್ಲಿ ಒಂದು ಸುಪ್ರಸಿದ್ಧ ನಾಟಕ ಅತ್ಯಂತ ಯಶಸ್ವಿಯಾಗಿ ಓಡುತ್ತಿತ್ತು. ಆ ದಿನವಂತೂ ಆ ನಾಟಕದ ಕೊನೆಯ ಪ್ರಯೋಗ. ಪ್ರೇಕ್ಷಾಗೃಹ ತುಂಬಿ ತುಳುಕುತ್ತಿತ್ತು.

ಇಂಗ್ಲೆಂಡಿನಲ್ಲಿ ಯಶಸ್ಸು ಕಂಡ ನಾಟಕ ನೋಡಬೇಕಾದರೆ ಪ್ರಯೋಗದ ಹಲವಾರು ವಾರ ಮೊದಲೇ ತಿಕೀಟು ಕೊಂಡುಕೊಳ್ಳಬೇಕು. ಆದರೂ ಪ್ರಯೋಗದ ದಿವಸ ಅನಿವಾರ್ಯ ಕಾರಣಗಳಿಂದಾಗಿ ನಾಟಕ ನೋಡಲು ಅಸಮರ್ಥರಾದವರು, ಆಟ ಆರಂಭವಾಗುವ ಕೆಲ ಸಮಯ ಮೊದಲು, ತಮ್ಮ ತಿಕೀಟುಗಳನ್ನು ಮರಳಿಸುತ್ತಾರೆ. ಹೀಗೆ ವಾಪಸ್ಸಾದ ತಿಕೀಟುಗಳನ್ನು ಕೊಂಡುಕೊಳ್ಳುವ ಆಸೆಯಿಂದ ಬಂದ ರಸಿಕರದೇ ಒಂದು ಸಾಲು ನಿಂತಿರುತ್ತದೆ. ನೀನೂ ಆ ಸಾಲನ್ನು ಸೇರಿಕೊಂಡೆ. ನಿನ್ನೆದುರಿಗೆ ನಾನು ನಿಂತಿದ್ದೆ. ಮಾತುಕತೆ ಆರಂಭವಾಯಿತು.

ಅಲ್ಲಿ ಇನ್ನೊಂದು ಪದ್ಧತಿ: ಒಂದೇ ತಿಕೀಟು ವಾಪಸ್ಸಾದರೆ ಸಾಲಿನಲ್ಲಿ ನಿಂತ ಒಬ್ಬಂಟಿ ವ್ಯಕ್ತಿಗೆ ಮಾರಾಟವಾಗುತ್ತದೆ. ಎರಡು ತಿಕೀಟುಗಳು ಬಂದರೆ ದಂಪತಿಗಳಿಗೆ ಹೋಗುತ್ತದೆ. ಆದ್ದರಿಂದ 'ತಿಕೀಟಿನ ಮಟ್ಟಿಗೆ ನಾವಿಬ್ಬರೂ ಜೋಡಿಯಾಗೋಣ' ಎಂದು ನೀನು ಸೂಚಿಸಿದಾಗ, ನಾನು ಖುಷಿಯಿಂದ ಒಪ್ಪಿಕೊಂಡೆ. ಈ ಒಪ್ಪಂದದಿಂದ ನಮ್ಮ ಮಾತುಕತೆಯಲ್ಲಿ ಸೂಕ್ಷ್ಮವಾಗಿ ನರ್ಮ-ವಿನೋದದ ಛಾಯೆ ಮೂಡಿದ್ದು ನೆನಪಿದೆ. ನಮ್ಮೆದುರಿನ ಸಾಲು ಕರಗಿ ನಾವು ತಿಕೀಟಿನ ಕಿಂಡಿ ತಲುಪಿದಾಗ ನಮಗೆಂಥ ಹಿಗ್ಗು!

ಆದರೆ ಆಗ ಹೊರಳಿ ಬಂದದ್ದು ಒಂಟಿ ತಿಕೀಟು. ಅದರ ಜೊತೆಗೆ ಪ್ರೇಕ್ಷಾಗೃಹವೂ ತುಂಬಿತು. House full! ನಾನು 'ಸರಿ, ನನ್ನ ಅದೃಷ್ಟ' ಎಂದು ಹೊರಡಲನುವಾದೆ. ಆಗ ನೀನು, 'ಈ ತಿಕೀಟು ನಿಮಗೆ. ನಾನು ನಾಟಕ ನೋಡುವದಿಲ್ಲ' ಎಂದೆ. ನಾನು ಚಕಿತನಾಗಿ, 'ಅದು ಹೇಗೆ ಸಾಧ್ಯ? ನೀವು ನನಗಿಂತ ಮೊದಲು ಬಂದವರು. ಸಾಲಿನಲ್ಲಿ ಮುಂದೆ ಇದ್ದವರು!' ಎಂದೆ. 'ಇಲ್ಲ, ನೀವು ಇಂಡಿಯಾದಿಂದ ಬಂದಿದ್ದೀರಿ. ನಾನು ಬೇಕಾದಾಗ ನೋಡಬಲ್ಲೆ' ಎಂದು ನೀನಂದದ್ದಕ್ಕೆ, 'ಛೆ ಛೆ, ಇದು ನಾಟಕದ ಕೊನೆಯ ಪ್ರಯೋಗ. ಕೊನೆ ಸೀಟು!' ಎಂದು ನಾನು ವಾದಿಸುತ್ತಿರುವಾಗಲೇ ನೀನು ತಲೆ ಕೊಡವಿ ಅಲ್ಲಿಂದ ಹೊರಟುಬಿಟ್ಟೆ. ತಿಕೀಟನ್ನು ಮಾರುವವ, 'ನಿಮಗೆ ಬೇಕೋ, ನಿಮ್ಮ ಹಿಂದಿನವರಿಗೆ ಕೊಡಲೋ? ಆಟ ಆರಂಭವಾಗುವುದರಲ್ಲಿದೆ,' ಎಂದಾಗ ಬೇಗ ಬೇಗ ತಿಕೀಟು ಖರೀದಿ ಮಾಡಿ, ನಿನ್ನ ಹಿಂದೆ ಓಡಿದರೆ, ನೀನು ಕಾಣೆಯಾಗಿಬಿಟ್ಟಿದ್ದೆ. ನ್ಯಾಯವಾಗಿ ನಿನಗೆ ಸೇರಬೇಕಾದ ತಿಕೀಟು ನನ್ನ ಕೈಯಲ್ಲಿತ್ತು. ನಿನ್ನ ಹೆಸರನ್ನೂ ಕೇಳಿರಲಿಲ್ಲ.


ಎಚ್.ಪಿ. ಸಾವಿತ್ರಮ್ಮ

ಅಂದು ನೋಡಿದ ನಾಟಕದ ನೆನಪು ಮಾಸಲಾಗಿಬಿಟ್ಟಿದೆ. ಆದರೆ ವಿದೇಶದಿಂದ ಬಂದ ಆಗಂತುಕನಿಗೆ ನೀನು ತೋರಿಸಿದ ಔದಾರ್ಯ-ಸ್ನೇಹ, ಅವಕ್ಕಾಗಿ ಕೃತಜ್ಞತೆ ಸಲ್ಲಿಸಲಿಕ್ಕೂ ಆಗಲಿಲ್ಲವಲ್ಲ ಎಂಬ ಕೊರಗು ಆ ಸಂಜೆಯಷ್ಟೇ ಇಂದಿಗೂ ಹಸಿಯಾಗಿವೆ.

ಬೆಂಗಳೂರು **ಗಿರೀಶ ಕಾರ್ನಾಡ**

ಜತೆಗಿರುವನೆ ಚಂದಿರ?

ಪ್ರಿಯ ಬಡೇ ಮಿಯಾ,

ಕೋಮು ದಳ್ಳುರಿಯ ವಿಕ್ಷಿಪ್ತ ಸನ್ನಿವೇಶದಲ್ಲಿ ವೈಯಕ್ತಿಕ ಬದುಕು ನುಚ್ಚುನೂರಾಗುವ ಮನಕಲಕುವ ಸಂದರ್ಭಗಳನ್ನು ಮನಸ್ಸಿಗೆ ತಟ್ಟುವಂತೆ ತೆರೆದಿಡುವ ನಾಟಕ, 'ಜತೆಗಿರುವನು ಚಂದಿರ'ದ ಮುಖ್ಯ ಪಾತ್ರ ನೀನು. ಇತ್ತೀಚೆಗೆ ಬೆಂಗಳೂರಿನ ಎಸ್‌ಎಸ್‌ಎಂಆರ್‌ವಿ ಕಾಲೇಜಿನ ವಿದ್ಯಾರ್ಥಿಗಳು ರವೀಂದ್ರ ಕಲಾಕ್ಷೇತ್ರದಲ್ಲಿ ಈ ನಾಟಕವನ್ನು ಪ್ರದರ್ಶಿಸಿದರು. ಬ್ರೆಡ್ ಮಾರಿ ಬದುಕುವ ನಿನ್ನ ಪುಟ್ಟ ಕುಟುಂಬ, ಅದಕ್ಕೊದಗುವ ರಾಜಕೀಯ ವಿಪ್ಲವ, ಜತೆಗೆ ಬರುವ

ಪೊಲೀಸ್, ಒಟ್ಟು ನಾಟಕದ ಜಿಗಿಯನ್ನು ಆರಂಭದಿಂದ ಅಂತ್ಯದವರೆಗೂ ಉಳಿಸಿಕೊಂಡು ಬರುತ್ತದೆ. ರಂಗ ಸಜ್ಜಿಕೆ, ಬೆಳಕು, ಸಂಗೀತ ಎಲ್ಲವೂ ಅಚ್ಚುಕಟ್ಟಾಗಿತ್ತು. ನಾಟಕವನ್ನು ಪ್ರದರ್ಶಿಸಿದ ಕಾಲೇಜು ವಿದ್ಯಾರ್ಥಿಗಳು ವೃತ್ತಿಪರ ನಟರಷ್ಟೆ ಸಮರ್ಥವಾಗಿ ನಟಿಸಿದರು. ಆದರೆ ಬಡೇ ಮಿಯಾ, ಈ ನಾಟಕ ಮುಗಿದು ಮನೆಗೆ ಹೋಗುವಾಗ ನನಗೆ ಅರಿವಿಲ್ಲದೆ ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು. ಕಾರಣ ನೀನು ಅನುಭವಿಸುವ ತಲ್ಲಣ, ಸಂಕಟಗಳು ನನ್ನವೂ ಆಗಿದ್ದವು. ಈಗಲೂ ಕೋಮು ಗಲಭೆಗಳಾಗಿ, ಬಿಟಿಎಸ್ ಬಸ್‌ನಲ್ಲಿ ಬರುವಾಗ, ನನ್ನ ಎರಡು ಮಕ್ಕಳು ರಸ್ತೆಯಲ್ಲಿ, ಬಸ್ಸಿನಲ್ಲಿ ಬರುವಾಗ ಏನಾಗಬಹುದೋ ಎನ್ನುವ ಮಾನಸಿಕ ತುಮುಲ ನನ್ನನ್ನು ಕಾಡುತ್ತದೆ. ಇದಕ್ಕೆ ನಿಖರವಾದ ಕಾರಣ ಏನು ಎಂದು ಎಷ್ಟು ಬಾರಿ ಆಲೋಚಿಸಿ ಅರ್ಧಕ್ಕೆ ಬಿಟ್ಟಿದ್ದೆ. ಆದರೆ ಮೊನ್ನೆ ಈ ನಾಟಕ ಮತ್ತೊಮ್ಮೆ ನನ್ನ ನೆನಪಿನ ಗುಡ್ಡೆಯನ್ನು ಕೆದಕಲು ಆರಂಭಿಸಿತು.

ನಿನ್ನ ಒಬ್ಬ ಮಗಳು ಪಂಡಿತನ ಜೊತೆ ಓಡಿಹೋಗುತ್ತಾಳೆ. ಮಗಳ ಮೇಲೆ ಪ್ರೀತಿಯಿದ್ದರೂ ನೀವಿಬ್ಬರೂ, 'ಎಲ್ಲಾದರೂ ಹೋಗು, ಸುಖವಾಗಿರು, ಆದರೆ, ಹೆಚ್ಚು ಹೊತ್ತು ಇಲ್ಲಿರಬೇಡ, ಯಾರಾದರೂ ನೋಡಿದರೆ' ಅನ್ನುವ ಆ ಆತಂಕದ ಸ್ಥಿತಿ... ಆ ಒಂದು ದೃಶ್ಯವನ್ನು ನಾನು ನನ್ನ ಜೀವನಕ್ಕೆ ಬಹಳವಾಗಿ ರಿಲೇಟ್ ಮಾಡಿಕೊಂಡೆ. ಉಮರಬ್ಬ ಸತ್ತು ಸುಮಾರು ಹನ್ನೊಂದು ವರ್ಷಗಳೇ ಕಳೆದಿವೆ. ಆದರೂ ನಾನು, ನನ್ನ ಮಕ್ಕಳು ಇಂದಿಗೂ ಅವರ ಕುಟುಂಬದ ಅವಿಭಾಜ್ಯ ಅಂಗ. ಆದರೆ ಉಮರಬ್ಬ ಸತ್ತ ಗಳಿಗೆಯನ್ನು ಮೆಲುಕು ಹಾಕಿದರೆ ಮೈ ಜುಮ್ಮೆನ್ನುತ್ತದೆ.

ಉಮರಬ್ಬರ ಶವವನ್ನು ಮನೆಗೆ ತರುತ್ತಿದ್ದ ಹಾಗೆ, 'ಬ್ಯಾರೀಸ್ ಅಸೋಸಿಯೇಶನ್'ನ ಸಹೋದರರೆಲ್ಲ ಶವವನ್ನು ಮಂಗಳೂರಿಗೆ ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಿದ್ದರು. ಜೊತೆಗೆ ಸರ್ಕಾರ ಕೂಡ ಅಗತ್ಯವಾದ ಎಲ್ಲ ಸೌಲಭ್ಯಗಳನ್ನು ನೀಡಿತ್ತು. ಇದ್ದಕ್ಕಿದ್ದಂತೆ, ಒಂದು ಮೂಲೆಯಲ್ಲಿ ಅಳುತ್ತಾ ಕೂತಿದ್ದ ನನ್ನನ್ನು ಯಾರೋ ಕರೆದು ಫೋನ್ ಎಂದರು. ನಾನು ರಿಸೀವರ್ ಎತ್ತಿಕೊಳ್ಳುತ್ತಿದ್ದ ಹಾಗೆ, ಉಮರಬ್ಬರ ತಂದೆ, ''ಮಗು, ಆಗಿದ್ದೆಲ್ಲಾ ಆಯಿತು, ಆದರೆ ನೀನು ಶವದ ಜೊತೆಗೆ ಕೃಷ್ಣಾಪುರಕ್ಕೆ ಬರುವುದು ಬೇಡ'' ಎಂದರು. ನನಗಿದು ಉಮರಬ್ಬರ ಸಾವಿಗಿಂತ ದೊಡ್ಡಶಾಕ್! ಆದರೂ, ''ನೋಡಿ, ಅವರನ್ನ ನಾನು ಇನ್ನೊಮ್ಮೆ ನೋಡಲಿಕ್ಕೆ ಸಾಧ್ಯವಿಲ್ಲ, ಆದ್ದರಿಂದ ಅವರನ್ನು ಮಣ್ಣು ಮಾಡುವ ಕಡೆಯ ಗಳಿಗೆಯವರೆಗೂ ನಾನು ಅವರ ಜೊತೆಗಿರಬೇಕು ಎಂದೆ. ಆಗಲೂ ನಮ್ಮ ಮಾವ, ''ಇಲ್ಲಿ ಒಂದು ಸಣ್ಣ ನೆವ ಸಿಕ್ಕರೂ ಹಿಂದು-ಮುಸ್ಲಿಂ ಗಲಭೆ ಆಗುತ್ತೆ, ಸುಮ್ಮನೆ ತೊಂದರೆ ಎಂದರು.''

ನಾನು ಫೋನ್ ಕೆಳಗಿಟ್ಟು, ಎಸಿಪಿ-ಜೆ.ಎ. ಬಾವ, ಉಮರಬ್ಬನವರ ಸೋದರ ಸಂಬಂಧಿ-ಅವರ ಬಳಿ ಬೇಡಿಕೊಂಡೆ, ''ಮಾವ ಹೀಗೆ ಹೇಳ್ತಾಯಿದ್ದಾರೆ, ಆದರೆ ನಾನು ಹೋಗಲೇಬೇಕು.'' ನನ್ನ ಧ್ವನಿಯಲ್ಲಿನ ನಿರ್ಧಾರ, ದುಃಖ ಅವರಿಗೆ ಅರಿವಾಗಿರಬೇಕು. ತಕ್ಷಣವೇ ಒಂದು ಜೀಪಿನಲ್ಲಿ ಎಲ್ಲಾ ಹೊರಡುವ ವ್ಯವಸ್ಥೆಯಾಯಿತು.

ಕೃಷ್ಣಾಪುರ ತಲುಪಿದಾಗ ಸಂಜೆ 6 ಗಂಟೆ. ಆಗತಾನೆ ಶವದ ಸ್ನಾನ ಮುಗಿದಿತ್ತು. ಹೆಂಗಸರು ಒಂದು ಕೋಣೆಯಲ್ಲಿದ್ದರು. ನಾನು ಅಲ್ಲೇ ಇದ್ದೆ. ಒಂದು ಗಂಟೆಯ ನಂತರ ಮನೆಯವರೆಲ್ಲ ಕೊನೆಯ ಬಾರಿ ನನ್ನನ್ನು ಅವರ ಮುಖ ನೋಡಲು ಕರೆದುಕೊಂಡು ಬಂದರು. ನಾನು ಅವರ ಮುಖ ನೋಡುತ್ತಾ ಒಂದಷ್ಟು ಹೊತ್ತು ಕೂರಬೇಕಿತ್ತು, ಮತ್ತೊಮ್ಮೆ ಮುಟ್ಟಬೇಕಿತ್ತು. ಆದರೆ ಎದುರಿಗಿದ್ದ ಮಾವನ ಭಯ ಆ ಎಲ್ಲ ಗಳಿಗೆಯನ್ನೂ ನನ್ನಿಂದ ದೂರಮಾಡಿತ್ತು. ಮರುಗಳಿಗೆಯಲ್ಲಿ

ಶವಪೆಟ್ಟಿಗೆಯನ್ನು ತೆಗೆದುಕೊಂಡು ಹೋದರು. ಅದರ ಹಿಂದೆ ಸಾವಿರಾರು ಜನರು, ರಾಜಕೀಯ ಮುಖಂಡರು, ಕಾರು, ಜೀಪು ಇತ್ಯಾದಿ. ಮತ್ಯಾರೋ ನನ್ನ ಮಗನನ್ನು ಕರೆದುಕೊಂಡು ಹೋಗಿ ಕೊನೆಯ ಹಿಡಿಮಣ್ಣನ್ನು ಹಾಕಲು ಹೇಳಿದರು. ಅವನು ಭಯದಿಂದ ಅಳುತ್ತಾ ಇದ್ದ. ಅಂತೂ ಎಲ್ಲಾ ಕೆಲಸ ಸರಾಗವಾಗಿ ಮುಗಿಯಿತು.


ಮರುಗಳಿಗೆಯಲ್ಲಿ ಮಾವ, ''ನಿಮಗೆ ಮಂಗಳೂರಿನ ಗೆಸ್ಟ್‌ಹೌಸ್‌ನಲ್ಲಿ ವ್ಯವಸ್ಥೆಯಾಗಿದೆ ಹೋಗಿ'' ಎಂದರು. ಸ್ವಲ್ಪ ಹೊತ್ತಲ್ಲೇ ನನ್ನ ಮಗ, ಜಿ.ಎನ್.ಮೋಹನ್, ಸತ್ಯ ಗೆಸ್ಟ್‌ಹೌಸ್‌ಗೆ ಹೋದೆವು. ಅಲ್ಲಿಂದ ಮಾರನೆ ದಿನ ಬೆಂಗಳೂರಿಗೆ ಬಂದೆ. ಖಾಲಿ ಮನಸ್ಸು, ಖಾಲಿ ಮನೆ. ನನ್ನ ದುಃಖದ ಮಡುವಿಗೆ ಕಟ್ಟೆ ಕಟ್ಟಿದ್ದು ನನ್ನ ಮಕ್ಕಳು ಅಮರ್, ಅನುಷಾ.

ಬಡೇ ಮಿಯಾ, ನನಗೆ ಎರಡೂ ಧರ್ಮದ ಬಗ್ಗೆ ಪ್ರೀತಿಯಿದೆ. ನನ್ನ ಮಕ್ಕಳಿಬ್ಬರೂ ಎರಡೂ ಧರ್ಮವನ್ನು ಪ್ರೀತಿಸುತ್ತಾರೆ. ನಮ್ಮ ಕುಟುಂಬದ ಎಲ್ಲಾ ಸದಸ್ಯರು ನಮ್ಮನ್ನು ಪ್ರೀತಿಸುತ್ತಾರೆ. ನನ್ನ ಹಿಂದೂ ಕುಟುಂಬ, ಅವರ ಮುಸಲ್ಮಾನ ಕುಟುಂಬದ ನಡುವೆ ಇಂದಿಗೂ ಪ್ರೀತಿಯಿದೆ. ಆದರೂ ನನ್ನ ಮಾವನಿಗೆ ಒಮ್ಮೊಮ್ಮೆ ಭಯ ಕಾಡುತ್ತದೆ. ಎಲ್ಲಿದ್ದರೂ ಅವರು ನಮಾಜ್ ಮಾಡುವಾಗ ನಮ್ಮ ಮಕ್ಕಳ ಹೆಸರಿನಲ್ಲಿಯೂ ದುವಾ ಮಾಡುತ್ತಾರೆ. ಆದರೂ ಆಗಾಗ ಆಗುವ ಕೋಮುಗಲಭೆ ನನಗೆ ಭಯ-ದುಗುಡಗಳನ್ನು ಹುಟ್ಟಿಸುತ್ತದೆ. 'ಜತೆಗಿರುವನು ಚಂದಿರ'ದ ಚಂದಿರನ ಒಳಗಿರುವ ಮಂಜುಗಡ್ಡೆಯ ಮೊನಚು ನಮ್ಮ ಸಮಾಜದ ವ್ಯಂಗ್ಯ.

ಜಾಗತೀಕರಣದಿಂದ ನಮ್ಮ ಸಂಪ್ರದಾಯ, ಪರಂಪರೆ ನಾಶವಾಗುತ್ತಿದೆ ಎನ್ನುವ ಭಯವಿದ್ದರೂ, ಅದನ್ನು ಉಳಿಸುವ ಭರಾಟೆಯಲ್ಲಿ ಬೀಸುವ ಲಾಠಿಯೂ ಅದೆಷ್ಟು ಅಪಾಯಕಾರಿ?

ಏನೇ ಆಗಲಿ, ಈ ರೀತಿಯ ಇನ್ನಷ್ಟು ನಾಟಕಗಳು ಬರಬೇಕು, ಅವನ್ನು ನಿರ್ದೇಶಿಸುವ ತರುಣ ನಿರ್ದೇಶಕ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಈ ರೀತಿಯ ವಿಷಯಗಳನ್ನು ಗಂಭೀರವಾಗಿ ಆಲೋಚಿಸುವಂತಾಗಬೇಕು. ನೋವನ್ನು ಅನುಭವಿಸಿದವರ ಜೀವನ ಸಂದರ್ಭಗಳು ಹೆಚ್ಚು ಜನರಿಗೆ ತಲುಪಿ, ನಮ್ಮ ಸಮಾಜದಲ್ಲಿ ಪ್ರೀತಿಯ ಅನಿವಾರ್ಯತೆಯ ಅರಿವಾದರೆ ಬದುಕಿನಲ್ಲಿ ನಿಜಕ್ಕೂ 'ಜತೆಗಿರುವನು ಚಂದಿರ'. ಇಲ್ಲದಿದ್ದರೆ 'ಜತೆಗಿರುವನೆ ಚಂದಿರ?' ಎನ್ನುವ ನಿರಂತರ ಪ್ರಶ್ನೆಯೊಡನೆ ಮಾತ್ರ ನಾವು ಬದುಕಬೇಕಾಗುತ್ತದೆ.

ಬೆಂಗಳೂರು — **ಸುಜಾತ ಕುಮಟಾ**



ಬದಲಾದದ್ದು ನೀವೇ?!

ಪ್ರೀತಿಯ ಸರ್,

ನಿಮ್ಮನ್ನು 'ಸರ್' ಎಂದು ಸಂಬೋಧಿಸಲೇ, ಬಂಧು ಎನ್ನಲೇ ತಕ್ಷಣಕ್ಕೆ ಹೊಳೆಯುತ್ತಿಲ್ಲ. ಸಹಕಾರಿ ಬ್ಯಾಂಕೊಂದರ ಮ್ಯಾನೇಜರ್ ಹುದ್ದೆ ಅಲಂಕರಿಸಿರುವ ನೀವು ಯಾವುದೋ ಬಾಂಧವ್ಯದ ಬೆನ್ನುಹತ್ತಿದವರಂತೆ ಮನೆತನಕ ಬಂದು, ನನ್ನನ್ನು ಕರೆದೊಯ್ದು ಕೆಲಸಕ್ಕಿಟ್ಟುಕೊಂಡಿರಿ. ಉತ್ಸಾಹದ ಬುಗ್ಗೆಯಾಗಿದ್ದವಳಿಗೆ ಎಲ್ಲ ಅವಕಾಶ ಕೊಟ್ಟು ಬ್ಯಾಂಕ್ ವ್ಯವಹಾರದಲ್ಲಿ 'ಸವ್ಯಸಾಚಿ'ಯಾಗುವಂತೆ ಮಾಡಿದಿರಿ.



ಮೀನಿನ ಮರಿ ಈಜು ಕಲಿಯುವಷ್ಟೇ ಸಲೀಸಾಗಿ ಎಲ್ಲ ವಹಿವಾಟು ನಿರ್ವಹಿಸುತ್ತಿದ್ದವಳಿಗೆ, ನಿಮ್ಮ ಬ್ಯಾಂಕ್‌ನಲ್ಲಿ ನಡೆಯುತ್ತಿದ್ದ ದುರ್ವ್ಯವಹಾರ, ವಂಚನೆ ನುಂಗಲಾರದ ತುತ್ತಾಗಿಬಿಟ್ಟಿತು. ಈ ಮಧ್ಯೆ ನನ್ನಿಂದಲೂ ಸಣ್ಣ ಪ್ರಮಾದದಿಂದ ಒಂದು ಕಾರ್ಯ ಲೋಪವಾಗಿಬಿಟ್ಟಿತು. ನನ್ನ ಏಳ್ಗೆ ಸಹಿಸಲಾರದೆ ಮಾತ್ಸರ್ಯದಿಂದ ಕುದಿಯುತ್ತಿದ್ದ ಸಹೋದ್ಯೋಗಿಗಳೆಲ್ಲ ಒಂದುಗೂಡಿ, 'ಆಳಿಗೊಂದು ಕಲ್ಲು' ಎನ್ನುವಂತೆ ನನ್ನನ್ನು ನೋಯಿಸಿದರು.

ನನ್ನ ಆತ್ಮವಿಶ್ವಾಸ ಛಿದ್ರ ಛಿದ್ರವಾದ ಆ ಹೊತ್ತಿನಲ್ಲಿ ನಾನು ನಿಮ್ಮಿಂದ ಬಯಸಿದ್ದು, ಸ್ವಲ್ಪ ಸಾಂತ್ವನ, ನನ್ನ ವಿರೋಧಿಗಳ ಬಾಯಿ ಮುಚ್ಚುವಂತೆ ನೀವು ತೋರಬೇಕಾಗಿದ್ದ ಕಿಂಚಿತ್ ಬೆಂಬಲ, ತಪ್ಪು ತಿದ್ದಿಕೊಳ್ಳಲು ಒಂದು ಅವಕಾಶ.

ಆದರೆ ನನ್ನ ನಿರೀಕ್ಷೆಯೆಲ್ಲಾ ತಲೆಕೆಳಗಾಗುವಂತೆ ನೀವು ದಿಢೀರನೆ ಬದಲಾದಿರಿ ಏಕೆ? ನನ್ನ ತಪ್ಪಿಗೆ ಬೆಲೆ ತೆರಲು ನಾನು ಸಿದ್ಧಳಿದ್ದೆ. ಆದರೆ ನಿಮ್ಮ ನಡೆ-ನುಡಿ ನನ್ನನ್ನು ಘಾಸಿ ಗೊಳಿಸಿತು. 'ನನ್ನ ಹಿತಚಿಂತಕರು, ಒಳಿತು ಕೋರುವವರು ಎಂದುಕೊಂಡವರು 'ಷಡ್ಯಂತ್ರ' ಏನಾದರೂ ಮಾಡಿದರೇ? ಬೆನ್ನ ಹಿಂದೆ ಚೂರಿ ಹಾಕಿದರೇ...' ನನ್ನ ಅನುಮಾನ ಸುಳ್ಳು ಮಾಡುವಂತೆ ನೀವು ನಡೆದುಕೊಳ್ಳಲಿಲ್ಲ.

ಪರಿಣಾಮ ನನ್ನ ಬದುಕು, ಕೆರಿಯರ್, ನನಗಿದ್ದ ಕೆಲಸದ ಜಾಣ್ಮೆ, ಒಳ್ಳೆಯ ಹೆಸರು ಎಲ್ಲ ಧೂಳು ತಿಂದವು. ಎಲ್ಲವನ್ನು ಹಣದ ಅಳತೆಗೋಲಿನಿಂದ ಅಳೆಯುವ ನೀವು ನನ್ನ ನೋವಿಗೆ, ಆ ಸಮಯದಲ್ಲಿ ಕ್ಷಣ ಕ್ಷಣವೂ ನಾನು ಅನುಭವಿಸಿದ ಅವಮಾನ, ಅಸಹಾಯಕತೆಗಳಿಗೆ ಎಷ್ಟು ಬೆಲೆ ತೆರಬಲ್ಲಿರಿ?

ಈ ಕಾಗದದ ದೋಣಿ ನಿಮ್ಮಲ್ಲಿ ಪುಟ್ಟದೊಂದು ಪಶ್ಚಾತ್ತಾಪದ ತರಂಗವೆಬ್ಬಿಸಿದರೆ, ಮುಂದೆ ಯಾರೂ ನಿಮ್ಮ ಚಾಣಾಕ್ಷತೆಯ ಬಲಿಪಶುಗಳಾಗದಂತೆ ತಡೆದರೆ ನನಗಷ್ಟೇ ಸಾಕು.

ಮೈಸೂರು

ಹೇಮಾ



ಗೋಪಾಲಕೃಷ್ಣ ಕುಂಟಿನಿ

ಮರದ ಹಕ್ಕಿಯ ಆಗಸ



ಮೊರದ ಕಿವಿ, ಕುಡುತೆ ಬಾಯಿಯ ಸುಮಿತ್ರ, ಸುದ್ದಿ ಇಲ್ಲದೆ ಬಂದು ನಿಂತಾಗ ಆನಂದ ಅವಕ್ಕಾದ.

''ಎಂತ ಮಾರಾಯ್ತಿ, ಪಟಾಪಟ್ ಬಂದೆ?'' ಎಂದವನು ಕೇಳಿದ್ದರಲ್ಲಿ ಆಶ್ಚರ್ಯ, ಕುತೂಹಲವಿತ್ತು.

''ಈ ದರಿದ್ರದವಳು ಇನ್ನು ಸ್ವಲ್ಪ ಹೊತ್ತಿನಲ್ಲಿ ಇವಳ ಗೋಳು ಶುರುಮಾಡ್ತಾಳೆ, ನಾನೋ ಈ ಬಿಕನಾಸಿಗಳ ಅಹವಾಲು ಕೇಳುವುದರಲ್ಲೇ ಆಯುಷ್ಯ ಮುಗಿಸಬೇಕು'' ಎಂಬ ಸಿಟ್ಟು, ಅಸಹನೆಯೂ ಇದ್ದವು.

ಸುಮಿತ್ರ ಬಂದರೆ ಎಲ್ಲರ ಹಾಗಲ್ಲ. ದೊಡ್ಡ ಜನರ ಹಾಗೆ ಸೋಫಾದಲ್ಲಿ ಕಾಲಮೇಲೆ ಕಾಲು ಹಾಕಿ ಕೂರುವಳು. ಸಾಲದ್ದಕ್ಕೆ ಫ್ಯಾನು ಬೇರೆ ಬೇಕು ಅವಳಿಗೆ. ಅದು ಬೇಸಗೆ ಇರಲಿ, ರಂಪಿನ ಮಳೆಗಾಲವಿರಲಿ, ಫ್ಯಾನು ತಿರುಗಿಸಿ ಕೂರುತ್ತಾಳೆ. ಯಾರೂ ಹೇಳಬೇಕಿಲ್ಲ, ಕೇಳಬೇಕಿಲ್ಲ; ಬೇಸುಗೆಯಾದರೆ ಸೆಖೆ ಸೆಖೆ ಎಂದೂ, ಮಳೆಗಾಲವಾದರೆ ನೊರಂಜಿ ಕಚ್ಚಿಕೊಂಡೀತೆಂದೂ ಕಾರಣ ಹೇಳುತ್ತಾಳೆ.

''ಈ ಬಾರಿ ನಾನು ಸ್ಟೇಶನ್ನಿಗೆ ಹೋಗಿ ಪಿಟಿಶನನ್ನು ಕೊಡುವುದಂತ ಮಾಡಿದ್ದೇನೆ'' ಎಂದಳು ಸುಮಿತ್ರ.

"ಕೊಡು" ಎಂದ ಆನಂದ.

ಆನಂದ ಕ್ಯಾಜುವಲ್ಲಾಗಿ ಮಾತನಾಡಿದ್ದು ಸುಮಿತ್ರಳಿಗೆ ಗೋಪ್ಪಾರಿಯ ಹಾಗೆ ಕಂಡಿತು.

"ಹೋದರೆ ಏನಾದೀತೂಂತ ಹೇಳಲಿಕ್ಕೆ ಸಾಧ್ಯವಿಲ್ಲ, ಗೊತ್ತಾಯ್ತಾ" ಎಂದು ಸುಮಿತ್ರ ಗುರ್ ಎಂದಳು.

"ಏನಾಗ್ತದೆ, ಏನೂ ಆಗುವುದಿಲ್ಲ. ನಿನ್ನಂಥವರು ವಾರಕ್ಕೆ ನೂರು ಜನ ಬರ್ತಾರೆ. ಕಡಿದು ಕೊಂದವರನ್ನೇ ಅವರು ಲೆಕ್ಕಕ್ಕಿಡುವುದಿಲ್ಲ, ನಿನ್ನನ್ನು ಎಣಿಸುತ್ತಾರಾ?" ಎಂದ ಆನಂದ.


ಸೋಫಾದಿಂದ ಸರ್ರನೆ ಜಾರಿ ನೆಲದಲ್ಲಿ ಕುಕ್ಕರಿಸಿದಳು ಸುಮಿತ್ರ. ಅವಳೊಂದಿಗೆ ಕಣ್ಣಿಂದ ನೀರ ಹನಿ ಜಾರಿ, ಅವಳಿಗಿಂತ ಮೊದಲೆ ನೆಲಕ್ಕೆ ಬಿದ್ದವು.

ಆನಂದ ಅಂತೂ ಸೋಫಾ ಬಿಟ್ಟೆದ್ದಳಲ್ಲಾ ಎಂಬ ಸಮಾಧಾನದಿಂದ ನೋಡಿದ. ಮನಸ್ಸಿನಲ್ಲೇ, 'ಈ ಕುರೆ ಹೆಣ್ಣು, ಅವಳ ಮೈಮಂಡೆ ಸೋಫಾ ಕವರಿಗೆ ಅಂಟಿದರೆ ನೇತ್ರಾವತಿಗೇ ಹೋಗಿ ತೊಳೆಯಬೇಕು...' ಎಂದುಕೊಂಡ.

"ನಿನ್ನೆ ಕಂಡಾಪಟ್ಟೆ ಮಾಡಿದ" ಎಂದಳು ಸುಮಿತ್ರಾ, ಗೊಗ್ಗರಾಗಿ. ಅವಳ ಧ್ವನಿಯಲ್ಲಿನ ಬಿರುಕು ಅವಳ ಜೀವನದ್ದೇ ಆಗಿತ್ತು ಎಂಬುದನ್ನು ಗ್ರಹಿಸಲು ಆನಂದನಿಗೆ ಹೊಸತಾಗಿ ವಿವರಿಸ ಬೇಕಾದ ಅಗತ್ಯವಿಲ್ಲ.

ಅವನೇನು ಹೊಸಬನೇ ಈ ಊರಿಗೆ?

ಪಡುವಲಾಗಿಂದ ಅವನ ಅಜ್ಜ ಉಟ್ಟ ಬಟ್ಟೆಯಲ್ಲಿ ಈ ಊರಿಗೆ ಬಂದಾಗ, ಈಗಲೂ ಅತ್ತಲಾಗಿ ಇರುವ ಅವನ ಸಂಬಂಧಿಕರೆಲ್ಲಾ ತಲೇವಾರಿ ಹೇಳಿಕೊಂಡು ನಕ್ಕರಂತೆ. ಆ ಪೈಕಿ ಒಂದು ಮಾತು, "ಪಾಪ, ಅವನಿಗೆ ಹೊಗೆ ಹಿಡಿದ ಮನೆಯಲ್ಲಿ ಇರಲಿಕ್ಕೆ ಆಗುವುದಿಲ್ಲಾ; ಏನು ಮಾಡ್ತಾನೆ, ಗೋಡೆ ಕಪ್ಪಾಗುತ್ತಲೇ ಮನೆ ಬದಲಾಯಿಸುತ್ತಾನೆ."



ಹಾಗೆಂದವರು ಈಗಲೂ ಹಾಗೇ ಇದ್ದಾರೆ. ಅದೇ ಸೋಗೆ ಮಾಡಿನ ಮನೆ, ಅದೇ ಬಾಜಿರ ಕಂಬ, ಅದೇ ರೀಪು ಮುರಿದ ಖುರ್ಸಿ... ದೀಪದ ಗೂಡಲ್ಲಿಟ್ಟ ಬುಡ್ಡಿಯ ಹೊಗೆ ಅಯ್ಯಂಗಾರಿ ನಾಮದ ಹಾಗೆ ಗೋಡೆಗೆ ಅಂಟಿದೆ, ಹನಿಹನಿಯಾಗಿ ಸೋರಿದ ಚಿಮಿಣಿ ಎಣ್ಣೆ ಮಣ್ಣಗೋಡೆಯ ಸಾರಣೆಯನ್ನು ಒರಟೊರಟಾಗಿ ತಿಂದಿದೆ.

ಆನಂದನ ಮನೆ ಮಾತ್ರಾ ಹಾಗಿಲ್ಲ. ಮೂಡಲಾಗಿ ಬಂದ ಅವನ ಅಜ್ಜ ಉಟ್ಟ ಬಟ್ಟೆಯಲ್ಲಿ ಬಂದವನು, ಘಸ್ಸಿಗೆ ಮಾಡಿದ್ದು ಕುದುರೆ ಗೂಟದ ಹಾಗೆ ಹರೂಪಾಗಿದ್ದ ಅಡಿಕೆ ಮರಗಳಿಗೆ ಗೆಣಮೆಣಸಿನ ಬಳ್ಳಿ ನೆಟ್ಟದ್ದು. ಗುಡ್ಡದ ಹಲಸಿನ ಮರಗಳನ್ನು ಬಿಡದೆ ಊರಿದ. ಈಗ ಹತ್ತು ವರ್ಷದ ಹಿಂದೆ ಕೊಳೆರೋಗಕ್ಕೆ ಒಂದೂ ಬಳ್ಳಿ ಬಿಡದೆ ಹಳದಿಯಾದ್ರಿ ಸತ್ತವು ನೋಡಿ... ಒಂದೊಂದು ಬಳ್ಳಿ ಎಂದರೆ ಅನೆ ಕಟ್ಟಬಹುದಿತ್ತು, ಅಷ್ಟು ತೋರಕ್ಕಿದ್ದವು.

ಮೆಣಸಾ ಅದು, ಚಿನ್ನ. ಡಕ್ಕಿಗೆ ಹಡಗು, ಮಂಜಿ ಬಂತು ಎಂದರೆ ರೇಟು ಆಯಿತು ಎಂದೇ ಅರ್ಥ. ಪುಂಡ್ಳೀಕ ಪೈಗಳು ಗಾಡಿ ಹೊಡೆಸಿ ಕೊಂಡು ಬಂದರೆ, ಆನಂದನ ಅಜ್ಜಿ ಬಾಳೆಕಾಯಿ ಗುದ್ದಿ, ಬೇಯಿಸಿ, ಒಗ್ಗರಣೆಕೊಟ್ಟು, ಒಂದು ಸೇರು ಉಪ್ಪಿಟ್ಟು ಬಾಳೆಲೆಗೆ ಹರಡಿದರೆ, ಪೈಗಳು ಅಷ್ಟನ್ನೂ ಸ್ವಾಹಾ ಮಾಡಿ, ಮೇಲಿಂದ ಒಂದು ಸೇರು ಬೆಲ್ಲದ ಕಾಫಿಯನ್ನು ಇಳಿಸಿಯೇ ಏಳುವರು. ಅಟ್ಟ ಹತ್ತುವುದು ಮತ್ತೆಯೇ. ಅವರದ್ದೇ ತೂಕ. ಅದನ್ನೆತ್ತಿ ಪಕ್ಕಾಸಿನ ಕೊಂಡಿಗೆ ಸಿಕ್ಕಿಸಿ, ರಾತ್ಲು ಲೆಕ್ಕದಲ್ಲಿ ತೂಗಿ ಪಣವು ಕೈಗಿಡುವರು.

ಅದೇ ಪಣವಿನಲ್ಲಿ ಅಲ್ಲವಾ, ತಾಂಬಾಣ ದಿಂದ ತೊಡಗಿ, ಆ ದೊಡ್ಡ ಪರಾತ, ಕೈಮರಿಗೆ, ಕವುಳಿಗೆ ತೆಗೆದುಹಾಕಿದ್ದು...

ಮೂಡಲಾಗಿ ಹೋಗಿ ಆನಂದನ ಮನೆ ಸುಖವಾಗಿ ದೊಡ್ಡವರಾದರು ಎಂದು ಪಡುವಲಾ ಗಿನ ಕುಟುಂಬಸ್ಥರು ಹೇಳದಿರುವುದಾದರೂ ಹೇಗೆ?

'ಪೈಸೆ ತುಂಬಿರಬಹುದು, ಸುಖ ಮಾತ್ರಾ ಇಲ್ಲ, ಎಲ್ಲಾ ವಿಷಮವೇ' ಎಂದು ಮೂಡಲಾಗಿನ ಆನಂದನ ಮನೆಯವರ ಬಗ್ಗೆ ಪಡುವಲಾಗಿನವರು ಕಾಯಮ್ಮಾಗಿ ಹೇಳುತ್ತಲೇ ಇದ್ದಾರಲ್ಲಾ...

ವಿಷಯ ಹೌದಲ್ಲ ಅದು. ಅದನ್ನು ಆನಂದ ಏನು ಮುಚ್ಚಿಟ್ಟಿದ್ದಾನಾ? ಅವನು ಪಡುವಲಾಗಿ ಕುಟುಂಬಸ್ಥರ ಮನೆಗೆ ಪೂಜೆಗೋ, ದೇವಕಾರ್ಯಕ್ಕೋ, ಹರಿಸೇವೆಗೋ ಜೀಪಿನಲ್ಲಿ ಡರ್‍ರೆಂದು ಹೋಗಿ ಇಳಿದಾಗ, ಸೇರಿದವರೆಲ್ಲಾ ಹುಳುಕ್ಕು ಹುಳುಕಾಗಿ ಮಾತನಾಡುವುದು ಇದನ್ನೇ, 'ಪೈಸೆ ಇರಬಹುದು, ಸುಖ ಉಂಟಾ?'

ಅಪ್ಪ ಗೋಯಿಂದನಿಗೆ ಹುಚ್ಚು ಹಿಡಿಯದೆ ಇರುತ್ತಿದ್ದರೆ ಆನಂದನಷ್ಟು ಸುಖಿಗಳು ಯಾರೂ ಇರುತ್ತಿರಲಿಲ್ಲ. ಅಪ್ಪನಿಗೆ ಹುಚ್ಚು ಹಿಡಿದ ಮೇಲೆ ಅಮ್ಮ ಸಾಂಬ್ರಾಯನೊಂದಿಗೆ ಓಡಿಹೋದಳು.

ಅಸಲು ನಂಬುವ ಸಂಗತಿಯಾ ಇದು?

ಆನಂದನಿಗೀಗ ಹಿರಿವಯಸ್ಸು. ಎಲ್ಲವೂ ಮರೆತ ಪುಟವಾಗಿದೆ. ಅಮ್ಮನ ಬಗ್ಗೆ ಯಾರೂ ಒಟ್ಟಾಗಿ ಕುಳಿತು ಮಾತನಾಡಿದ್ದನ್ನು ಅವನು ಕಂಡಿಲ್ಲ, ಕೇಳಿಲ್ಲ. ಅಪ್ಪನ ಬಗ್ಗೆ, ವಾಸಿಯಾಗದ ಹುಚ್ಚಿನ ಬಗ್ಗೆ ಎಷ್ಟು ಬೇಕಾದರೂ ಮಾತನಾಡು ತ್ತಾರೆ. ಆದರೆ ಅಮ್ಮನ ಬಗ್ಗೆ ಮಾತನಾಡಲೇ ಬಾರದು ಎಂಬ ಅಲಿಖಿತ ನಿರ್ಧಾರಕ್ಕೆ ಮನೆ ಯೊಳಗಿನ ಎಲ್ಲ ಜೀವ ಜಂತುಗಳೂ ಬರಲಿಕ್ಕೆ ಕಾರಣ ಯಾವುದೋ ಗೊತ್ತಿಲ್ಲ.

ಅದೊಂದು ಹೇಸಿಗೆಯ ವಿಚಾರವೆಂದೇ, ಅದನ್ನೆತ್ತಿದ್ದರೆ ಮೈಮನಸ್ಸು ರಾಡಿಯಾಗುತ್ತದೆಂದೇ ಎಲ್ಲರೂ ನಂಬಿದ ಹಾಗಿತ್ತು.

ಈ ದಿನ ಈ ಹೊತ್ತಲ್ಲಿ ಸೋಫಾದ ಕೆಳಗೆ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡು ಕೂತ ಸುಮಿತ್ರಳಲ್ಲಿ ಕೇಳಿಬಿಡಲೇ, ''ಅಮ್ಮ ಹೇಗಿ ದ್ದಾಳೆ?'' ಎಂದು.

ಸುಮಿತ್ರ ಉವಾಚ: ''ನಿನ್ನೆ ಸಂಜೆ ಬೇಗನೇ ಬಂದಿದ್ದ, ಕಂಠಪೂರ್ತಿ ಟೈಟ್ ಆಗಿದ್ದ. ನೀನು ರಂಡೆ, ನಿನ್ನ ರಂಡೆ ಬುದ್ಧಿಯಿಂದಲೇ ಗಂಡನಿಗೆ ಹುಚ್ಚು ಹಿಡಿಯಿತೆಂದ. ನಾನು ಬಾಯಿ ಹಾಕಿದ್ದಕ್ಕೆ ನನ್ನ ತಲೆ ಹಿಡಿದು ಗೋಡೆಗೆ ನೂಕಿದ.''

''.......''

''ರಂಡೆಯೇ ಆಗಿರಬಹುದು, ಅವ ಳಿಂದಲೇ ಗಂಡನಿಗೆ ಹುಚ್ಚು ಹಿಡಿದಿರಬಹುದು. ಅದು ಈಗಲಾ ಇವನಿಗೆ ಗೊತ್ತಾದದ್ದು? ಈ ಹಣ್ಣು ಮುದುಕಿಯಾದ ಮೇಲಾ ಇವನಿಗೆ ನೆನಪಾಗುವುದು?''

''.....''

''ನೀನು ಯಾವುದಕ್ಕೂ ಪಿಟಿಕ್ಕೆನ್ನುವುದಿಲ್ಲ. ನಾನು ಎಂತ ಸಾಯಬೇಕು ಹೇಳು?''

''ನನಗೆ ಗೊತ್ತಿಲ್ಲ, ಒಂದೋ ನಾನು ಗಂಡನನ್ನು ಬಿಟ್ಟು ಹೋಗುತ್ತೇನೆ, ಇಲ್ಲದಿದ್ದರೆ ಅಮ್ಮನನ್ನು ತಂದು ಇಲ್ಲಿ ಬಿಡ್ತೇನೆ.''

ಸುಮಿತ್ರಾ ಒಂದು ಯೋಜನೆಯನ್ನು ವ್ಯವಸ್ಥಿತವಾಗಿ ರೂಪಿಸಿಕೊಂಡೇ ಬಂದಿದ್ದಾಳೆ ಎಂದು ಗೊತ್ತಾಗಲು ಆನಂದನಿಗೆ ಹೆಚ್ಚು ಹೊತ್ತು ಬೇಕಾಗಲಿಲ್ಲ.

ಬಡಕ್ಕನೆದ್ದು ಹೋಗಿ ಸೋಫಾದಲ್ಲಿ ಕುಳಿತ. ಕಾಲಬುಡದಲ್ಲಿ ದಯನೀಯವಾಗಿ ಕುಳಿತ ಸುಮಿತ್ರಾ ಹಾಯಿಸುತ್ತಿರುವ ದೃಷ್ಟಿ ತಪ್ಪಿಸ ಬೇಕೆಂದು ಪ್ರಯತ್ನಿಸಿದ. ಅವಳೋ, ಅವನ ಕಣ್ಣುಗಳಲ್ಲೇ ಉತ್ತರ ಸಿದ್ಧವಿದೆ ಎಂದು ಹಿಂಬಾಲಿಸುತ್ತಿದ್ದಳು, ಮುನ್ನೂರರವತ್ತು ಡಿಗ್ರಿಗೆ ತಲೆಬುರುಡೆ ತಿರುಗಿಸುತ್ತಾ...



ನಾಲ್ಕು ಮಕ್ಕಳನ್ನು ಅಡೆತಡೆ ಇಲ್ಲದೆ ಆರೇ ವರ್ಷಗಳಲ್ಲಿ ಹೆತ್ತು ಹಾಕಿದ ಮೇಲೆ ಅಮ್ಮನಿಗೆ ಏನಾಗಿಹೋಯಿತೋ ಗೊತ್ತಿಲ್ಲ. (ಅಮ್ಮನ ವಿಚಾರ ಯಾವತ್ತೂ ಯಾರೂ ಪ್ರಸ್ತಾಪಿಸ ಬಾರದೆಂಬ ಅಲಿಖಿತ ನಿರ್ಧಾರ ನಿಮಗಾಗಿ ಕೈಬಿಡುತ್ತಿದ್ದೇನೆ)

ಅಪ್ಪ ಗೋಯಿಂದನೋ ಎಂಥಾ ಕೆಲಸಗಾರ. ಹೆಂಡತಿಯನ್ನು, ಮಕ್ಕಳನ್ನು ಪ್ರೀತಿಯಿಂದ ಕಂಡವನೇ. ಅವರ ಪ್ರೀತಿಯನ್ನು ಕಾಮತರ ಸೋಡಾ ಶಾಪಿನ ಚೆಣ್ಣೆರು ವಿವರಿಸಬೇಕು, ಅಥವಾ ಸಿನಿಮಾ ಟಾಕೀಸಿನ ಶೆಟ್ರು ಹೇಳಬೇಕು. ಆ ಕಾಲದಲ್ಲಿ ಸೋಡಾ ಶರಬತ್ತನ್ನು ಒಂದೇ ಗ್ಲಾಸಲ್ಲಿ ಅವರು ಅರ್ಧರ್ಧ ಕಚ್ಚಿ ಕುಡಿಯುವುದಂತೆ, ಆ ಮುಳಿ ಮೂಡಿನ ಟೂರಿಂಗ್ ಟಾಕೀಸಿನಲ್ಲಿ 'ಕಲ್ಲುಸಕ್ಕರೆ' ಪಿಚ್ಚರನ್ನು ಬಾಕ್ಸ್‌ಸೀಟಿನಲ್ಲೇ ಬುಕ್ಕು ಮಾಡಿ ಕೂತು ನೋಡಿದ್ದಂತೆ...

ಗೋಯಿಂದ ಪೇಟೆಗೆ ಬಂದರೆ, ಒಂದು ತುಂಡು ಮಲ್ಲಿಗೆ ಮಾಲೆಯನ್ನು ಸಾಗುವಾನಿ ಎಲೆಯಲ್ಲಿ ಕಟ್ಟಿಸಿಕೊಳ್ಳದೆ ಸೈಕಲ್ ಹತ್ತಿದ್ದುಂಟಾ? ಮಕ್ಕಳಿಗೆ ಹಲ್ಲಿಕೆತ್ತಿ ಪೆಪ್ಪರುಮಿಂಟು ತೆಕ್ಕೊಳ್ಳದೆ ಬಂದದ್ದುಂಟಾ?

ಕೆಲಸದವರ ಹಂಗಿಲ್ಲದೆ ತೋಟದಲ್ಲಿ ಗೆಯ್ಮೆ ಮಾಡಿದವನು ಅವನೊಬ್ಬನೆ. ವಾಯಿದೆ ವಾಯಿದೆಗೆ ಅಡಿಕೆಗೆ ರಾಳಪಾಕ ಹೊಡೆಯಲು ಕೊಂಬಾರು ಮುಟ್ಟಾಳೆ ತಲೆಗಿಟ್ಟು ಮರಕ್ಕೆ ಹತ್ತಿದನೇ. ಟ್ಯಾಂ ಟು ಟ್ಯಾಂ ಕೆಲಸ.

ಆದರೆ ಸಂಜೆಯಾದರೆ ಅಬ್ರಹಾಂನ ಮಾಳಿಗೆಯಲ್ಲಿ ನಾಲ್ಕು ಆಟ ತಿರುಗಿಸದೆ ಇದ್ದರೆ ರಾತ್ರಿ ನಿದ್ದೆ ಹತ್ತಲಿಕ್ಕಿಲ್ಲ. ದಾಡುಬೀಡು ಆಟವೇ ಅಲ್ಲ ಅಂತ ನಗುವನು. ಇಪ್ಪತ್ತೇಳು, ತಪ್ಪಿದರೆ ರಮ್ಮಿ. ಅಬ್ರಹಾಂ, ಗೇಟಿನ ಇಸ್ಮಾಲಿ, ಡೊಂಬಯ್ಯ, ರತ್ನಾಕರ ಪೈ ಮತ್ತೆ ಅಪ್ಪುಚ್ಚ... ದೊಡ್ಡ ಗ್ಯಾಂಗು. ಈಗ ರತ್ನಾಕರ ಪೈ ಬಿಟ್ಟರೆ ಬೇರೆ ಯಾರೂ ಇಲ್ಲ. ದೊಡ್ಡ ಪೈಸೆ ಮಡಗಲಿಕ್ಕಿಲ್ಲ ಚಿಲ್ರೆ, ಪಿಲ್ರೆ.

ಅದು ಬಿಟ್ಟರೆ ಬೇರೆ ಯಾವ ಖಯಾಲಿಗಳೂ ಇರದ ಅಪ್ಪನಿಗೆ ಸಡನ್ನಾಗಿ ಅಪ್ಸೆಟ್ಟಾಗುವಂಥದ್ದು ಏನಾಯಿತು?

ಆನಂದನಿಗೆ ಉತ್ತರ ಸಿಗುವುದಿಲ್ಲ. ಏಕೆಂದರೆ ಅಮ್ಮನ ವಿಚಾರ ಯಾವತ್ತೂ ಯಾರೂ ಪ್ರಸ್ತಾಪಿಸಬಾರದೆಂಬ ಅಲಿಖಿತ ನಿರ್ಧಾರ ಆ ಮನೆಯಲ್ಲಿದೆ.

ಈಗ ಸುಮಿತ್ರಾ ಸೂಚಿಸುತ್ತಿರುವ ಸಲಹೆಯಲ್ಲಿ ನಿಧಾನವಾಗಿ ಅಮ್ಮ ಈ ಮನೆಯೊಳಗೆ ಶಬ್ದವಾಗಿ, ಧ್ವನಿಯಾಗಿ, ಆಕೃತಿಯಾಗಿ ಕೆನೆಗಟ್ಟುತ್ತಿರುವುದು ಆನಂದನಿಗೆ ವೇದ್ಯವಾಗುತ್ತಿದೆ.

ಸುಮಿತ್ರಾ, ಕುಡುಕ ಗಂಡನನ್ನು ತೊರೆಯುವುದಕ್ಕಿಂತ ಅಮ್ಮನನ್ನು ಈ ಮನೆಗೆ ತಂದು ಬಿಡಬಹುದೆಂಬ ಭರವಸೆ ಅವನಲ್ಲಿ ಆಹ್ಲಾದವನ್ನು, ವಿಲಕ್ಷಣ ಸನ್ನಿವೇಶದಲ್ಲಿ ಮೂಡಿಸುತ್ತಿದೆ.

ಮತ್ತೆ ಅಮ್ಮನ ವಿಚಾರ... ಈ ಬಾರಿ ಅಲಿಖಿತ ನಿರ್ಧಾರ ತನ್ನಿಂದ ತಾನೇ ಮುರಿದು ಬಿದ್ದಿದೆ...

ಸಾಂಬ್ರಾಯನೊಂದಿಗೆ ಅಮ್ಮ ಓಡಿ ಹೋದಾಗ ಈ ಸುಮಿತ್ರಾ ಹೊಟ್ಟೆಯಲ್ಲಿದ್ದಳಂತೆ. ತೋಟಕ್ಕೆ ಜರಿದು ಬಿದ್ದ ಆ ಬರೆ ಮಣ್ಣನ್ನು ಜಡಿ ಮಳೆಯಲ್ಲಿ ತೋಡಿಗೆ ಕರಗಿ ಬಿಡುತ್ತ, ನೆನೆದು ನೆನೆದೂ ಚಳಿ ಹಿಡಿದಿದ್ದ ಅಪ್ಪ ಗೋಯಿಂದ, ಆ ಸಂಜೆ ಮನೆಯೊಳಗೆ ಬರುತ್ತಲೇ ಕುಸಿದು ಬಿದ್ದನಂತೆ. ಚಳಿ ಹಿಡಿದಿದೆ ಎಂದು ಅಂಗಾಲಿಗೆ ಬಿಸಿ ಬೂದಿ ಹಾಕಿ ತಿಕ್ಕಿದರಂತೆ, ತಲೆಗೆ ಕಾಸಿದ ಕುಂಕುಮ ಹಾಕಿದರಂತೆ. ಎಚ್ಚರವಾದಾಗ ಮಂಕು ಕವಿದವನಂತೆ ಇದ್ದವನು, ಮೂರೇ ದಿನಗಳಲ್ಲಿ ಓರೆಕೋರೆ ಮಾತನಾಡಲು ತೊಡಗಿದ. ವಾರದೊಳಗೆ ಹುಚ್ಚು ಹಿಡಿದಿರುವುದು ಪ್ರಕಟವಾಯಿತು. ಮಂತ್ರ, ತಾಯಿತ, ಸೊಪ್ಪು, ಬೆತ್ತ ಎಲ್ಲಾ ಆಯಿತು. ಜಾಗದಲ್ಲಿ ಇದ್ದ, ಇಲ್ಲದ ಭೂತಗಳಿಗೆಲ್ಲಾ ಕೋಲ ಕೊಟ್ಟೂ ಆಯಿತು. ಆಸ್ಪತ್ರೆ, ಇಂಗ್ಲೀಷು ಮದ್ದು, ಆಯುರ್ವೇದ ಅದೂ ಆಯಿತು. ಕೊನೆಗೆ ವಿಧಿ ಇಲ್ಲದೆ ಕೋಳದ ಮರಕ್ಕೆ ಹಾಕಿದರು.

ಇದಾದ ಒಂದು ವಾರದಲ್ಲಿ ಅಮ್ಮ ಸಾಂಬ್ರಾಯನೊಂದಿಗೆ ಪರಾರಿಯಾದಳು. ಅಮ್ಮ ಹೆಚ್ಚೆಂದರೆ ಸಾಂಬ್ರಾಯನ ಒಟ್ಟಿಗೆ ಮೂರು ತಿಂಗಳು ಸಂಸಾರ ಮಾಡಿರಬಹುದು, ತೋಡಿಗೆ ಬಿದ್ದ ಬಸ್ಸಲ್ಲಿ ಈ ಸಾಂಬ್ರಾಯನೂ ಇದ್ದು, ಬಾಯಿಗೆ ನೀರಿಲ್ಲದೆ ಸತ್ತ. ಅವನಿಗಾದ ಶಾಸ್ತಿ ಎಂದರೆ ಅದು. ತೋಡಲ್ಲಿ ನೀರೇ ಇರಲಿಲ್ಲ ಎಂದು ಅಜ್ಜ ಹೇಳುತ್ತಿದ್ದ.

ಸುಮಿತ್ರ ಮರದ ದಳಿಗಳ ಮೇಲೆ ಕೈ ಮಡಗಿ ಆನಂದನ ದೃಷ್ಟಿಗಳಿಗಾಗಿ ಹುಡುಕುತ್ತಿದ್ದಳು.

ಆನಂದ ಈಗ ಸೋಫಾದಿಂದಲೂ ಬಡಕ್ಕನೆದ್ದ. ಸುಮಿತ್ರ ಬಂದ ಮೇಲೆ ಮೂರನೇ ಬಾರಿ ಅವನು ಈ ಚಾವಡಿಯೊಳಗೆ ಸ್ಥಳ ಬದಲಿಸುತ್ತಿದ್ದಾನೆ.


ಸೀದಾ ಎದ್ದವನೆ ಅಪ್ಪನ ಕೋಣೆಗೆ ನುಗ್ಗಿ ಅಮ್ಮ ಬರುವ ವಿಚಾರ ಹೇಳಿದರೆ, ಅಪ್ಪ ಧಿಗ್ಗನೆದ್ದು ಕುಳಿತುಬಿಡಬಹುದು, ಹುಚ್ಚು ಜರ್ರನೆ ನೆಲಕ್ಕಿಳಿದು, ಸೈಕಲ್ ಹಿಡಿದು ರಮ್ಮಿ ಆಡಲು ಹೊರಡಲೂ ಬಹುದು ಎಂಬ ವಿಕ್ಷಿಪ್ತ ಆಸೆಯೊಂದಿಗೆ ಚಳಿ ಹಿಡಿದ ಕಾಗೆಯಂತೆ ಬಿದ್ದಿದ್ದ ಅಪ್ಪನೆದುರು ನಿಂತ.

ಹೊರಗೆ ಸುಮಿತ್ರಾ ದಳಿಗಳಿಗೆ ಮುಖವನ್ನು ಇಟ್ಟು ನಿಂತಿದ್ದಳು.

ಆನಂದ ಸ್ವಲ್ಪ ಹೊತ್ತಿನಲ್ಲಿ ಹೊರಗೆ ಬಂದು, "ಅಪ್ಪನ ದಿನ ಕಳೆಯಿತು ಸುಮಿತ್ರಾ" ಎಂದ ದಪ್ಪ ಸ್ವರದಲ್ಲಿ.

ಸುಮಿತ್ರಾ, "ಈಗಂತೂ ಅಮ್ಮ ಬರಲೇ ಬೇಕು ಅಲ್ಲವಾ" ಎಂದಳು.


ಏನು ಹೇಳಬೇಕು ಇದಕ್ಕೆ ಎಂದು ಗೊತ್ತಾಗದೆ ಆನಂದ ನಿಂತಿದ್ದ-ಥೇಟ್ ಹುಚ್ಚನ ಹಾಗೆ.



ಗೋಪಾಲಕೃಷ್ಣ ಕುಂಟಿನಿ

ಎನ್. ಪ್ರಕಾಶ್

ಇದು ಬರಿ ಬೆಳಕಲ್ಲೊ ಅಣ್ಣಾ!



ಯಾಕೋ ಅನ್ನಿಸುತ್ತದೆ ಗೆಳೆಯಾ, ಸಾವು ಸನಿಹದಲ್ಲಿದೆ ಎಂದು. ತುಂಬಿದ ಈ ಬೆಳದಿಂಗಳ ಇರುಳು, ಮನೆಯ ಹೊರ ಅಂಗಳದಲ್ಲಿ ಮಲಗಿದ್ದೇನೆ. ಸುತ್ತೆಲ್ಲ ಕಾಫಿ, ಅಡಕೆ, ಏಲಕ್ಕಿ, ಕಿತ್ತಳೆಯ ತೋಟ. ಅಲ್ಲಲ್ಲಿ ಮೆಣಸು. ಭತ್ತದ ಗದ್ದೆ. ಅದರಾಚೆ ಬದಿಯಲ್ಲಿ ಬಾಳೆ. ಜುಳುಜುಳು ಹರಿವ ಹೊಳೆ. ಅದರಾಚೆ, ಈ ಎಲ್ಲದರಾಚೆ, ಆ ದಂಡೆಯಲ್ಲಿ ಉದ್ದಾಸುದ್ದ ತಲೆ ಎತ್ತಿ ನಿಂತ ಗುಡ್ಡ, ದಟ್ಟಕಾಡು. ಮೇಲೆ ಮುಗಿಲಲ್ಲಿ, ಬಿಳಿಯ ಹಾಯಿಯಲ್ಲಿ ತೇಲುವ ಚಂದ್ರ. ಗಿಡ ಮರಗಳ ಸಂದಿಯಿಂದ ಇಣಕಿ ನೋಡುತ್ತಾನೆ, ಬಯಲಲ್ಲಿ ನಗೆಯ ಚೆಲ್ಲುತ್ತಾನೆ, 'ಬಾ' ಎಂದು ಕರೆಯುತ್ತಾನೆ. ಆ ಕರೆಗೆ ಮಾರುಹೋಗದೆ ಹೇಗೆ ತಾನೆ ಇರಲಿ, ಗೆಳೆಯಾ? ಹೇಗೆ ತಾನೆ ಹೇಳಲಿ ಗೆಳೆಯಾ, ಬರಲಾರೆ ಎಂದು? ಹುಚ್ಚೆದ್ದು ಓಡಿಹೋಗಿ ಅವನ ತೆಕ್ಕೆಗೆ ಮುಗಿಬೀಳಬೇಕು ಎನಿಸುತ್ತದೆ. ಆದರೆ ಹೇಗೆ ತಾನೆ ಹೋಗಲಿ, ಹೇಳು, ಜಮುನೆಯ ಆ ತಟಕ್ಕೆ? ದೋಣಿ ಯಾವುದಯ್ಯಾ ತೊರೆಯ ಆ ತೀರಕೆ?



ಎಲ್ಲರೂ ನಿದ್ದೆಯಲ್ಲಿ ಕನಸು ಕಾಣುತ್ತಾರೆ. ನಾನೋ ಕನಸಿನ ನಡುವೆಯೇ ಮಲಗಿದ್ದೇನೆ. ನನಗೆ ಮೊದಲಿನಿಂದಲೂ ಹೀಗೇ. ಎಲ್ಲವೂ ತಿರುವುಮುರುವು. ಕಣ್ಣಿಗೆ ಕಂಡದ್ದು, ತೆಕ್ಕೆಗೆ ಸಿಕ್ಕಿದ್ದು ಮಾತ್ರ ನಿಜ, ಈ ಬದುಕಷ್ಟೆ ಸತ್ಯ ಎಲ್ಲರಿಗೆ. ಆದರೆ ನನಗೆ ಸಾವೇ ಸತ್ಯ, ಬದುಕೊಂದು ಆಕಸ್ಮಿಕ. ಈ ಬದುಕೆಷ್ಟು ಭೀಕರವೊ, ಮೈ ನವಿರೇಳಿಸುವ ಸಾವು ಅಷ್ಟೇ ಸುಂದರ.


ಬದುಕು ಹೇಗಿರುತ್ತದೆ ಗೊತ್ತೆ? ನಮ್ಮೂರಿನ ಹಾಗೆ. ಮನೆಯ ಹಿತ್ತಲಿನಲ್ಲಿ ಪ್ರೀತಿಯ ನೀರೇ ಕಾಣದೆ ಬತ್ತಿ ಹೋದ ಕೆರೆ. ಮೈಯಲ್ಲಿ ಬಿರುಕು ಹುಣ್ಣು. ಅದರಾಚೆ ಎಂದೂ ಫಲವತಿಯಾಗದ ನೆಲದಲ್ಲಿ, ಕಬ್ಬಿಣದ ಕ್ರೂರ ನೇಗಿಲುಗಳು ನೆಲದ ಪೊರೆ ಹರಿದು ಚಿಂದಿ ಮಾಡುತ್ತವೆ. ಕಾಮವೊಂದೇ ಅನಿವಾರ್ಯ ಕರ್ಮವಿಲ್ಲಿ. ಒಲವು ಬೇಕೆಂಬ, ನಲಿಯಬೇಕೆಂಬ, ಸುಖಿಸಬೇಕೆಂಬ ಬಯಕೆಯೇ ಬರಡಾಗಿದೆ, ಇಲ್ಲಿ. ಮಳೆಯಿಲ್ಲ, ಬೆಳೆಯಿಲ್ಲ, ಏನು ತಾನೆ ಮಾಡಬಹುದು ಜನ ಇಲ್ಲಿ? ಸೇಡಿನಲ್ಲಿ, ಸಿಟ್ಟಿನಲ್ಲಿ

ಉಳುತ್ತಾರೆ, ಮಾಡಲೇನೂ ದಾರಿ ಕಾಣದೆ ಬೇರೆ, ಮತ್ತೆ ಉಳುತ್ತಾರೆ. ಉಳುತ್ತಾರೆ ಅಸಹಾಯಕತೆಯಲ್ಲಿ. ನೋವಿನಲ್ಲಿ ನರಳುತ್ತಾರೆ, ಸೋತು ಉಳುತ್ತಾರೆ; ಮತ್ತೆದ್ದು ಉಳುತ್ತಾರೆ.

ಈಗೀಗ ಕಾಮವೂ ಮರೆಯಾಗಿದೆ. ಕ್ರೌರ್ಯವೊಂದೇ ಉಳಿದಿದೆ. ನೆಲವನ್ನು ಕಿತ್ತು ತಿನ್ನುವ ಹಾಗೆ ಉಳುತ್ತಾರೆ. ತಮ್ಮತಮ್ಮಲ್ಲೇ ಕಿತ್ತಾಡುತ್ತಾರೆ. ಇನ್ನೊಬ್ಬನ ಮೈಬಗೆದು, ಅಲ್ಲಿಯೂ ಕುಡಿಯಲು ರಕ್ತ ಕಾಣದೆ, ಮತ್ತೊಬ್ಬನೆಡೆಗೆ ಧಾವಿಸುತ್ತಾರೆ. ಕ್ರೌರ್ಯವೊಂದೇ ಭಾವ ಇಲ್ಲಿ ನೆಲೆಸುವುದು. ಅದೇ ಸ್ಥಾಯಿ.

ನನ್ನ ಹುಟ್ಟಿನ ಹಾಗೆ, ನಾನು ಈ ಊರಿಗೆ ಬಂದದ್ದು ಒಂದು ಆಕಸ್ಮಿಕ. ನಾನು ಇಲ್ಲಿಗೇ ಏಕೆ ಬಂದೆ ಎಂದು ಈಗ, ಇಷ್ಟು ವರ್ಷಗಳ ಬಳಿಕ, ಅರಿವಿಗೂ ಬರುತ್ತಿಲ್ಲ. ಎಷ್ಟು ವರ್ಷಗಳು ಎಂದು ಕೇಳುವಿಯಾ? ಹೇಗೆ ಹೇಳಲಿ ಹೇಳು? ಋತುಗಳು ಬದಲಾದರೆ ಲೆಕ್ಕ ಹಿಡಿಯಬಹುದು. ಆದರೆ ನಾನು ಬಂದಂದಿನಿಂದಲೂ ಇಲ್ಲಿರುವುದು ಒಂದೇ ಋತು, ಒಣಋತು. ಋತುಮತಿಯಾಗುವುದೇ ಇಲ್ಲ. ಇಲ್ಲಿ, ಈ ಋತುವಿನ ಹೆಣ್ಣು ಮರಳಿನಲ್ಲಿ ಹಾಕಿದ ಹೆಜ್ಜೆಗಳ ಗುರುತಿಲ್ಲ, ಲೆಕ್ಕವಿಲ್ಲ. ಬಂದವನು ಈಗ ಇಲ್ಲಿಯೇ ಸಿಕ್ಕಿಹಾಕಿಕೊಂಡಿದ್ದೇನೆ. ಎಷ್ಟೆಲ್ಲ ಪ್ರಯತ್ನ ಮಾಡಿದರೂ ಬಿಡುಗಡೆ ಇಲ್ಲ, ಇಲ್ಲಿಂದ. ಪ್ರತಿ ಸಲವೂ ಬಿಡುಗಡೆಗೆ ಕೇಳುತ್ತೇನೆ, ಆದರೂ ಸಿಕ್ಕಿಲ್ಲ ಪುರಸ್ಕಾರ ನನ್ನ ಕೋರಿಕೆಗೆ. ಒಂದೊಂದು ಸಲವೂ ಒಂದೊಂದು ನೆಪ ಹೂಡಿ ಇಲ್ಲಿಯೇ ಉಳಿಸುತ್ತಾರೆ. ಒಮ್ಮೆ ಹೇಳುತ್ತಾರೆ, ನೀನು ಇಂತಿಷ್ಟು ವರ್ಷ ಇಲ್ಲಿಯೇ ಇರಬೇಕು ಎಂದು. ಈ ಸಲ ಹೇಳಿದರು, ಬೊಕ್ಕಸದಲ್ಲಿ ಹಣವಿಲ್ಲ, ಅದಕ್ಕೇ ಯಾರಿಗೂ ಸ್ಥಾನಪಲ್ಲಟವಿಲ್ಲ ಎಂದು. ಮೊನ್ನೆ ತಾನೇ ಬಂದ ಸುದ್ದಿ, ನಮ್ಮ ಸ್ಥಾನದ ಹುದ್ದೆಗಳಲ್ಲಿ ಬಿಡುಗಡೆ ಮಾಡುವುದು ಅತ್ಯಂತ ಮೇಲಿನವನು ಮಾತ್ರ, ನಡುವಿನ ಯಾರಿಗೂ





ಇದರ ಅಧಿಕಾರವಿಲ್ಲ. ಹೊಸ ಸತ್ಯ ಕಂಡುಹಿಡಿದವರಂತೆ ಹೊರಡಿಸಿದ ಈ ಆದೇಶವನ್ನು ನೋಡಿ ಮನಸಾರೆ ನಕ್ಕೆ. ಆದರೂ ಆದೇಶ ಹೊರಡಿಸಿದ ಮೇಲಿನ ಅಧಿಕಾರಿಯನ್ನೇ ನೋಡಿದರೆ ಹೇಗೆ ಅನ್ನಿಸಿತು.

ಕೊನೆಗೊಂದು ದಿನ ದಫ್ತರಗಳಲ್ಲಿ ಹುದುಗಿದ್ದ ತಲೆಯನ್ನು ಎತ್ತಿದೆ. ಇಲ್ಲ, ಇನ್ನು ಸಾಧ್ಯವಿಲ್ಲ. ಈ ಊರಿನಲ್ಲಿ ಇನ್ನು ಮುಂದುವರಿಯುವುದು ಆಗದ ಮಾತು ಎಂದು ಮೇಲಕ್ಕೆದ್ದೆ. 'ಆಗಬೇಕು ಬಿಡುಗಡೆ, ಬೇಕೇ ಬೇಕು ಬಿಡುಗಡೆ' ಎಂದು ಘೋಷಣೆ ಹಾಡುತ್ತಾ ಬಿಡುಗಡೆ ಪಡೆಯಲೇ

ಬೇಕೆಂಬ ಛಲದಿಂದ ದಾಪುಗಾಲು ಹಾಕುತ್ತಾ, ಕಛೇರಿ ಬಿಟ್ಟು ಹೊರಟೆ.

ಏಳು ವಾಹನಗಳಲ್ಲಿ ಪಯಣಿಸಿ, ಏಳು ಜಿಲ್ಲೆಗಳು ದಾಟಿ, ಸರಕಾರಿಪುರಕ್ಕೆ ಬಂದೆ. ಏಳು ರಸ್ತೆಗಳು ಕೂಡುವ ಏಳು ವೃತ್ತಗಳನ್ನು ಹಾದು ಮುಂದೆ ನಡೆದೆ. ಅಲ್ಲಿ ಸಾಲಾಗಿ ನಿಂತ ಏಳು ಬಂಗಲೆಗಳು. ಏಳನೆಯದೇ 'ಸೌಧ'. ಅದರ ಗಾತ್ರಕ್ಕೆ ಭಯಬಿದ್ದೆ. ಆದರೂ ಛಲ ಮುನ್ನುಗ್ಗಿಸಿತು. ಎತ್ತರದ ಸೌಧಕ್ಕೆ, ಎಷ್ಟೊಂದು ಮೆಟ್ಟಿಲು, ಮೆಟ್ಟಿಲೊಂದೊಂದೂ ಛಲಕ್ಕೊಂದು ಆಹ್ವಾನ. ದಡದಡನೆ ಹತ್ತಿ ಸೌಧದ ಒಳಹೊಕ್ಕೆ. 'ಅಧಿಕಾರಿ' ಎಂಬ ಫಲಕವಿದ್ದ ಕೋಣೆಯೊಳಗೆ ನುಗ್ಗಿ, ಅಲ್ಲಿದ್ದವನ ಕೊರಳಪಟ್ಟಿ ಹಿಡಿದು, 'ಏ, ಮೇಲಧಿಕಾರಿ' ಎಂದೆ. ಅದಕ್ಕೆ ಅವನು ನಡುಗುತ್ತಲೇ, 'ಮೇಲಿನವನು ಮೇಲಿದ್ದಾನೆ' ಎಂದ. ಮತ್ತೆ ಮೆಟ್ಟಿಲುಗಳ ಹತ್ತಿ ಮೊದಲನೆಯ ಮಹಡಿಗೆ ಹೋದೆ. ಅಲ್ಲಿದ್ದವನೂ ಅದೇ ಹಾಡು ಹಾಡಿದ, 'ಮೇಲಿನವನು ಮೇಲಿದ್ದಾನೆ' ಎಂದು. ಹೀಗೆ ಏಳು ಹಾಡುಗಳ ಕೇಳಿ ಏಳು ಮಹಡಿಗಳ ಹತ್ತಿದೆ.

ಅಲ್ಲಿ ಏಳನೆಯ ಕೋಣೆಗೆ ಮೇಲಿನಧಿಕಾರಿಯ ನಾಮಫಲಕ. ಭದ್ರ ಹಾಕಿದ ಬಾಗಿಲು. ಬಾಗಿಲಲ್ಲೊಬ್ಬ ಸೈಂಧವ ಜವಾನ. 'ಒಳಗೆ ಬಿಡುವುದಿಲ್ಲ' ಎಂದ. ಹಿಡಿದು ತದುಕಿದೆ. ಒಳಗಿನಿಂದ ಕರೆಗಂಟೆ ಸದ್ದಾಯಿತು. ಸೈಂಧವ ಬಾಗಿಲು ತೆಗೆದ. ನನ್ನನ್ನು ಒಳಗೆ ಬಿಟ್ಟ. ನೋಡಿದೆ, ಆ ಮೇಲಿನಧಿಕಾರಿಯನ್ನು. ಸರಳತೆಯ ಸಾಕಾರವೆತ್ತಿದ ರೂಪ. ಅವನ ಆಳದ ಕಣ್ಣುಗಳು, ಮೃದುಹಾಸದ ಮಂದಹಾಸ ನೋಡಿ, ಕೆಲಸವಾಗುವ ಬಗ್ಗೆ ನಂಬಿಕೆ ಬಂತು. ನನ್ನ ಪ್ರವರ ಹೇಳಿ, ಪರಿಚಯ ಮಾಡಿಕೊಂಡೆ. ಸನ್ನೆ ಮಾಡಿದ. ಅವನೆದುರು ಕುರ್ಚಿಯಲ್ಲಿ ಕೂತೆ. 'ಏನು ಬಂದದ್ದು?' ಎಂಬಂತೆ ಮುಷ್ಠಿ ಕಟ್ಟಿ ಹೆಬ್ಬೆರಳು ಮೇಲಕ್ಕೆತ್ತಿ ಕೇಳಿದ. 'ಬಿಡುಗಡೆಗಾಗಿ' ಎಂದೆ. 'ಯಾಕೆ' ಎಂಬಂತೆ ಮತ್ತೆ ಸನ್ನೆಯಲ್ಲೇ ಕೇಳಿದ. ಬಡಬಡನೆ ಉದ್ವೇಗದಲ್ಲಿ ಎಲ್ಲವನ್ನೂ ಒದರಿದೆ. ಅವನು ಮಾತಾಡಲಿಲ್ಲ. ಚೀಟಿಯಲ್ಲಿ ಏನೋ ಬರೆದುಕೊಟ್ಟ. ಬಿಡುಗಡೆಯ ಆಜ್ಞೆ ಇರಬೇಕೆಂದು ಎದ್ದೆ. ಕೂತು ಅದನ್ನೋದುವಂತೆ ಮತ್ತೆ ಮೂಕಭಾಷೆಯಲ್ಲೇ ಹೇಳಿದ. ಓದಿದೆ. 'ನನಗೆ ಗಂಟಲು ಸರಿ ಇಲ್ಲ. ಮಾತಾಡಲಾರೆ. ನೀನೂ ಗಂಟಲು ಹರಿದುಕೊಳ್ಳಬೇಡ. ನನ್ನಂತಾದೀಯ. ಪ್ರಶ್ನೋತ್ತರ ಇಲ್ಲೇ ಎದುರಾಬದುರ ಪತ್ರದಲ್ಲಿ ನಡೆಯಲಿ' ಎಂದು ಬರೆದಿತ್ತು. ಅವನ ಸ್ಥಿತಿಯ ಅರಿವಿಲ್ಲದ್ದಕ್ಕೆ ನೊಂದೆ. ನಮ್ಮ ಮುಂದಿನ ಪತ್ರವ್ಯವಹಾರ ಹೀಗೆ ನಡೆಯಿತು.

ನಾನು: ಯಾಕೆ ಆ ಊರಿಗೆ ಹೋದೆ ಎಂಬ ಅರಿವೇ ಆಗದಷ್ಟು ವರ್ಷದಿಂದ ಅಲ್ಲೇ ಕೊಳೆಯುತ್ತಿದ್ದೇನೆ. ಅಲ್ಲಿಂದ ಕೂಡಲೇ ಬಿಡುಗಡೆ ಮಾಡು.

ಅವನು: ಆ ಅರಿವು ಉಂಟಾಗುವವರೆಗೂ ಅಲ್ಲೇ ಇರು.

ನಾನು: ಆ ಅರಿವು ಮೂಡುವುದು ಯಾವಾಗ?

ಅವನು: ನಿನ್ನ ಬಿಡುಗಡೆಯ ಹೊತ್ತಿನಲ್ಲಿ.

ನಾನು: ಈ ತಮಾಷೆ ಬೇಡ. ನೀನು ಬೇಕೆಂದಾಗ ಬೇಕಾದ್ದು ಮಾಡಬಹುದು. ನಿನಗೆ ಬೇಕಾದಾಗ ನೀನು ಬಿಡುಗಡೆ ಪಡೆಯಬಹುದು. ಆದರೆ ನನಗೆ ಹಾಗಲ್ಲ.

ಅವನು: ನೀನು ತಪ್ಪು ತಿಳಿದಿದ್ದೀಯಾ. ನನಗೂ ಸ್ವಂತ ಇಚ್ಛೆಯಿಂದ ಬಿಡುಗಡೆ ಇಲ್ಲ. ನಾನು ಯಾಕೆ ಇಲ್ಲಿಗೆ ಬಂದು ಬಿದ್ದೆನೆಂದು ನನಗೂ ಅರಿವಾಗುತ್ತಿಲ್ಲ. ಈಗ ಬೇಡವೆಂದರೂ ಬಿಡುಗಡೆ ಇಲ್ಲ, ಅವರು ನನ್ನನ್ನು ಬಿಡುಗಡೆ ಮಾಡುವುದಿಲ್ಲ.

ನಾನು: ಅವರು ಎಂದರೆ ಯಾರು?

ಅವನು: ನನ್ನ ಮೇಲಧಿಕಾರಿಗಳು.

ನಾನು: ಯಾರವರು?

ಅವನು: ಜನ. ಅವರು ಯಾರನ್ನು ಯಾವಾಗ ಎಲ್ಲಿ ಯಾಕೆ ಕೂರಿಸುತ್ತಾರೆ ಎಂದು ಯಾರಿಗೂ ಗೊತ್ತಾಗುವುದಿಲ್ಲ. ಈಗ ಇಲ್ಲಿದ್ದೇನೆ, ಅಷ್ಟೇ

ಗೊತ್ತು. ಅದು ಎಷ್ಟು ಹೊತ್ತು? ಅದರ ಅರಿವಿಲ್ಲ ನನಗೆ. ನಾವಿಬ್ಬರೂ ಒಂದೇ ದೋಣಿಯಲ್ಲಿ ತೇಲುತ್ತಿದ್ದೇವೆ.

ನಾನು: ಹಾಗಾದರೆ ನಾನೇನು ಮಾಡಲಿ?

ಅವನು: ಅದಕ್ಕೆ ನಾನೇನು ಹೇಳಲಿ?

ನಾನು: ನೀನು ನನ್ನನ್ನು ಸುಮ್ಮನೆ ಹೀಗೇ ಕಳಿಸಲಾರೆ. ಏನಾದರೂ ಹೇಳು.

ಅವನು: ನಾನು ಹೇಳುವುದಿಷ್ಟೆ. ಅರಿವು ಮೂಡಿದ ಮೇಲೆ ತಿರುಗಿ ಬಾ. ನನಗೆ ಅರಿವು ಮೊದಲು ಮೂಡಿದರೆ, ನಾನೇ ನಿನ್ನ ಬಳಿ ಬರುತ್ತೇನೆ.

ಆ ಮೇಲಿನಧಿಕಾರಿಯ ಬಗ್ಗೆ ಅಪಾರ ಅನುಕಂಪ ಬಂತು. ಮಾತನಾಡಲೂ ಆಗದ ಅವನ ಬಗ್ಗೆ ನಾನು ಕರಗಿ ಹೋದೆ. ಆದರೂ ಒಗಟಿನಂತೆ ಕಂಡ ಅವನೆಲ್ಲ ಮಾತುಗಳೂ ಪ್ರಶ್ನೆಯಾಗಿಯೇ ಉಳಿದವು, ಬೆಳೆದವು ನನ್ನೊಳಗೆ. ಅದೆಲ್ಲವನ್ನೂ ತುಂಬಿಕೊಂಡೇ ಅವನತ್ತ ನೋಡಿ, ಕೈಮುಗಿದು ಹೊರಹೊರಟೆ. ಇದ್ದಕ್ಕಿದ್ದ ಹಾಗೇ ಅವನು ನನ್ನ ಹೆಗಲ ಮೇಲೆ ಕೈ ಹಾಕಿ, 'ಕೆಲಸ ಮಾಡಿಸಿಕೊಳ್ಳುವ ಪರಿಯ ತಿಳಿದಿರಬೇಕು, ಗೆಳೆಯ. ಈ ಪರಿಯ ಅರಿವು ಮೂಡಿದ ಮೇಲೆ ತಿರುಗಿ ಬಾ,' ಎಂದು ಕಂಚಿನ ಕಂಠದಿಂದ ನುಡಿದ. ನಾನು ಬೆಚ್ಚಿಬಿದ್ದೆ. ನನ್ನ ಹೆಗಲ ಮೇಲಿನ ಅವನ ಕೈ ಗಳಿಗೆ ಗಳಿಗೆಗೂ ಭಾರವಾಗುತ್ತಾ ಹೋಯಿತು. ನಾನು ಗಾಬರಿ ಯಲ್ಲಿ ಹೊರಗೆ ಓಡಿದೆ, ಓಡುತ್ತಲೇ ಹೋದೆ. ಅವನ ಮಾಸದ ಮಂದಹಾಸ ನನ್ನ ಹಿಂದೆ.

ಆ ಮಾಸದ ಮಂದಹಾಸದಲ್ಲಿ ನಾನೇನು ಕಂಡು ಹೆದರಿದೆ ಎಂದು ಇಂದಿಗೂ ಪ್ರಶ್ನೆ ನನಗೆ. ಅದೊಂದು ಮಾಯಾವಿಯ ಮೋಸವೇ? ಕ್ರೌರ್ಯದ ಕಳ್ಳಿಹುದುಲನ್ನು ಮುಚ್ಚಿಟ್ಟ ಮುಖ ಮಲ್ಲಿನ ಲೇಪ ನವೆ? ಏನೂ ಅರಿವಾಗುತ್ತಿಲ್ಲ. ಒಟ್ಟಿನಲ್ಲಿ ಮನಸ್ಸಿಗೆ ರೇಜಿಗೆಯಾದದ್ದು, ಹೇಸಿಗೆ ಎನಿಸಿದ್ದು ಮಾತ್ರ ದಿಟ. ಅರ್ಥೈಸುವಷ್ಟು ವೇಳೆಯೂ ಇರಲಿಲ್ಲ ನನಗೆ ಆಗ, ಹುಚ್ಚು ನಾಯಿ ಬೆನ್ನು ಹತ್ತಿದವರಂತೆ ಓಡಿದೆ. ಮಹಡಿ ಮೆಟ್ಟಿಲು ಗಳ ಲೆಕ್ಕಿಸದೆ, ರಸ್ತೆ ಸಂಚಾರವನ್ನು ಗಮನಿಸದೆ, ದಿಕ್ಕು ದೆಸೆಗಳ ನೋಡದೆ ಓಡಿದೆ. ತಿರುಗಿ ನೋಡಲೂ ಭಯ ನನಗೆ. ಓಡುತ್ತಲೇ ಹೋದೆ.

ಗಕ್ಕನೆ ನಿಂತೆ ನಡುದಾರಿಯಲ್ಲಿ. ಕ್ರೌರ್ಯ ದುಂಡೆಯ ಸೂರ್ಯ. ಸುಡುವ ಭರ್ಜಿ ಕಿರಣ ಗಳು. ನೆಲ ಕಾದ ಬಾಣಲೆ. ನಿಂತೆ ಏದುಸಿರು ಬಿಡುತ್ತಾ. ಅಡ್ಡದಾರಿಯಲ್ಲೊಂದು ಉದ್ದ ಹಾವು. ಮಿರ್ರನೆ ಮಿರಮಿರಗುವ ಕರಿನಾಗರ. ಸೊಂಟದ ಮೇಲುದ್ದ ನಿಂತು ಹೆಡೆ ಎತ್ತಿ ಬುಸೆದಾಡಿತು. ಹೊರಚಾಚಿದ ನಾಲಗೆ, ಎರಡಲುಗಿನ ಕತ್ತಿ, ಝಳಪಿಸಿತು ಬಿಸಿಲ ಝಳದಲ್ಲಿ. ಬುಸುಗುಟ್ಟುವ ಭಾಷೆ. ಕಣ್ಣಲ್ಲಿ ಚುಚ್ಚಿಕೊಲ್ಲುವ ಆಸೆ. ಜಗದೆಲ್ಲ ಕ್ರೌರ್ಯಗಳ ಕಡೆದಿಟ್ಟ ಜೀವಂತ ಮೂರ್ತಿ. ರಕ್ಕಸನ ಕೈಗೆ ಸಿಕ್ಕ ರಾಜಕುಮಾರಿ ಓಡಿದಳು ಪಾರಾಗಲು ಕಾಡ ಹೊರಗೆ. ಕಾಡ ಗಡಿಯಲ್ಲೆಲ್ಲಾ ಹಿಂಡು ಹಿಂಡು ರಕ್ಕಸರ ದಂಡು.


ಹಿಂದೆ ಹಿಂಸಿಸುವ ಮಂದಹಾಸ, ಎದುರು ಕ್ರೌರ್ಯದ ಕರಗ-ಓಡಲಾರೆ, ನಾ ನಿಲ್ಲಲಾರೆ. ಆದರೂ ಅನ್ನಿಸಿತು ಬಲಿಯಾದರೆ ಹೇಗೆ ಈ ಕ್ರೌರ್ಯದುನ್ಮಾದಕ್ಕೆ. ಇದೀಗ, ಕೊನೆಗೊಮ್ಮೆ ಕೊನೆ ಸಿಗಬಹುದು. ಎಷ್ಟು ದಿನಗಳ ಹಂಬಲದ ಫಲವೂ, ಅನಾಯಾಸ ಸಿಗಬಹುದು ಬಿಡುಗಡೆ. ನಿಂತೆ. ನಿಂತೆ ಅವುಡುಗಚ್ಚಿ. ಕಣ್ಮುಚ್ಚಿ ವೇಗದಿಂದ ಬಂದ ನಾಗ, ನನ್ನೆರಡೂ ಕಾಲುಗಳ ನಡುವೆ ನುಸುಳಿ, ನೆಲಕ್ಕೆರಡು ಬಾರಿ ಹೆಡೆಯಿಂದ ಹೊಡೆದು, ಎಂಟರಾಕಾರದಲ್ಲಿ ಕಾಲುಗಳ ಬಳಸಿ, ಪಾದಗಳ ಮೇಲಿಂದ ಹರಿದುಹೋಯಿತು. ನಾ ನೋಡುತ್ತಿದ್ದಂತೆ ದೂರ ಮರೆಯಾಯಿತು.

ಕೊಲ್ಲುವ ಕ್ರೌರ್ಯ ಕರುಣಾಮಯಿ, ಗೆಳೆಯಾ; ಕೊಲ್ಲಲಾರದ ಕ್ರೌರ್ಯ ಜೀವನದ

ವ್ಯಂಗ್ಯ. ಹೊಸ ಪರಿಯ ಕ್ರೌರ್ಯಕ್ಕೆ ಹೊಸ ಹೊಸ ಅವಕಾಶಗಳ ಕಂಡು ಹಿಡಿಯುತ್ತದೆ, ಕೊಲ್ಲಲಾರದ ಕ್ರೌರ್ಯ.

ಹತಾಶೆಯ ಹಬೆಯಲ್ಲಿ ಮುಖ ಬೆಂದಿತು. ಮರಗಟ್ಟಿದ ಕಾಲುಗಳ ಎತ್ತಿಟ್ಟೆ, ನನ್ನೆಲ್ಲ ಶಕ್ತಿ ಬಳಸಿ. ಆಗಲೂ, ಬಿಡುಗಡೆಯೊಂದೇ, ನನ್ನ ಕಣ್ಣ ಮುಂದೆ. ಬಿಡುಗಡೆ. ಮಾಯಾವಿಯ ಹಿಂಸಿಸುವ ಮಂದಹಾಸದಿಂದ, ಕೊಲ್ಲಲಾರದ ಕ್ರೌರ್ಯದಿಂದ, ಬದುಕಿನ ವ್ಯಂಗ್ಯದಿಂದ ಬಿಡುಗಡೆ. ಬೇಗ ಹೋಗಿ ಬೀಳಬೇಕು ಕರುಣಾಮೂಲ ಸಾವಿನ ತೆಕ್ಕೆಗೆ. ಓಡಿದೆ, ಕಾಲು ಕರೆದೊಯ್ದ ಕಡೆಗೆ. ಕೊನೆಗೊಮ್ಮೆ ಕುಸಿದುಬಿದ್ದೆ. ಕಣ್ಣಿಗೆ ಕತ್ತಲು ಕವಿಯಿತು.

ಕಣ್ಣು ತೆರೆದಾಗ ಮೊದಲು ಕಂಡದ್ದು ಒಂದು ದೀಪ. ದಟ್ಟ ಕತ್ತಲೆಯ ಮೊತ್ತ ತಿಳಿಸಲು ಹೆಣಗುತ್ತಿದ್ದ ಮಿಣುಕುದೀಪ. ಹಾಗೇ ನಿಧಾನವಾಗಿ ಕಣ್ಣಗಲಿಸಿ ನೋಡಿದೆ. ಆಚೀಚೆ ತುಕ್ಕು ಹಿಡಿದ ಮಂಚಗಳು. ಮಂಚಗಳ ಮೇಲೆ, ನೆಲದ ಮೇಲೆ ಹಾಸಿಗೆಗಳು. ಬಣ್ಣಗೆಟ್ಟ, ಕೊಳೆಯಿಂದಲೇ ದಪ್ಪವಾದ ಹಾಸಿಗೆ, ಹೊದಿಕೆಗಳು. ಕಮಟು ವಾಸನೆ, ದಟ್ಟವಾಗಿ, ಎಲ್ಲೆಡೆಯಿಂದ. ನರಳುವ, ನೋವಿನಲಿ ಬೊಬ್ಬಿಡುವ ದನಿಗಳು. ಈ ಎಲ್ಲವನ್ನೂ, ಈಗ ನನ್ನನ್ನೂ ಒಳಗೊಂಡಂತೆ, ಈ ಎಲ್ಲವನ್ನೂ ಬಂಧಿಸಿಟ್ಟಿರುವ ಕಲ್ಲಿನ ದೊಡ್ಡ ಗೂಡು. ತೋರಿದರೂ ಆಸ್ಪತ್ರೆಯಂತೆ ಇದು, ಅನ್ನಿಸಿತು ನಿಜಕ್ಕೂ ಇದೊಂದು ಯಾತನಾ ಶಿಬಿರ. ಇದರ ಯಜಮಾನ ಕೊಲ್ಲಲಾರದ ಕ್ರೌರ್ಯ. ನೋಡಲಾರದೆ ಇದನ್ನು ಮುಚ್ಚಿದೆ ನನ್ನ ಕಣ್ಣುಗಳನ್ನು.



ಇದ್ದಕ್ಕಿದ್ದಂತೆ ಕೇಳಿ ಬಂತು ಎಲ್ಲಿಂದಲೋ ಒಂದು ದನಿ, ನೋವಿನೆಲ್ಲ ಕೂಗನ್ನೂ ಸೀಳಿಕೊಂಡು ಬಂದ ಒಂದು ಚೂಪು ದನಿ. 'ಕೊಲ್ಲುವ ಕ್ರೌರ್ಯ ಕರುಣಾಮಯಿ ಅಂದೆಯಾ ಗೆಳೆಯಾ, ಬಾ ನನ್ನ ಬಳಿಗೆ!' ನನ್ನೊಳಗಿನದೇ ಆದ ಈ ಮಾತು ಬಂದುದೆಲ್ಲಿಂದ ಎಂದು ಕಣ್ಣು ತೆರೆದು, ಪಾಪೆಗಳ ಹಿರಿದಾಗಿಸಿ ನೋಡಿದೆ. ಮಸುಕು ಮಸುಕಾಗಿ ಒಂದು ಆಕೃತಿ ಮೂಡಿಬಂತು. ಗೂಡಿನ ಹೊರಗಿನಿಂದಲೇ ಬಂದ ಅದು, ಬಾಗಿಲಲ್ಲೇ ನಿಂತು ನನ್ನ ಕೈ ಮಾಡಿ ಕರೆಯಿತು. ನಾ ನಡೆದೆ ಅದು ಕೈ ಮಾಡಿ ಕರೆದತ್ತ. ನಿಂತೆ ಅದರೆದುರು. ನೋಡಿದೆ, ಸುಟ್ಟುಕೊಂಡು ಕಪ್ಪಾದ ಇದ್ದಲಿಯ ಕೈಕಾಲು, ಮುಖ, ದೇಹ, ನುಣ್ಣಗೆ ಬೋಳಿಸಿ ಟಾರು ಬಳಿದಂಥ ತಲೆ, ಇನ್ನೂ ಅಂಟಿಕೊಂಡಿದ್ದ ಒಂದೆರಡು ಕೂದಲು. ಸುಟ್ಟ ವಾಸನೆ ದಟ್ಟ ಬಡಿಯಿತು ಮೂಗಿಗೆ. ಆದರೂ ಚಿರಪರಿಚಿತ ಮುಖ ಆ ವ್ಯಕ್ತಿಯದು ಅನ್ನಿಸಿತು. 'ಗುರುತು ಹತ್ತಲಿಲ್ಲವೆ, ಗೆಳೆಯಾ?' ಎಂದ ಅವನು. ಥಟ್ಟನೆ ನೆನಪಾಯಿತು, ಅವನು ನನ್ನೂರಿನವನೇ ಎಂದು. 'ನಿನ್ನನ್ನು ಹೇಗೆ ಮರೆಯಲು ಸಾಧ್ಯ? ಆದರೂ ನೀನೇಕೆ ಹೀಗೆ ಇಲ್ಲಿ?' ಕೇಳಿದೆ ಅವನ. 'ನಾನೊಬ್ಬನೇ ಅಲ್ಲ, ನನ್ನವರು ಎಲ್ಲರೂ ಇಲ್ಲೇ ಇದ್ದಾರೆ' ಎಂದ. ಎಲ್ಲ ಭಾವನೆಗಳನ್ನು ಹುದುಗಿಸಿಟ್ಟ ನಿರ್ಭಾವದಲ್ಲಿ ಸುಮ್ಮನೆ ನಿಂತೆ. 'ಅವರನ್ನೂ ತೋರಿಸುತ್ತೇನೆ ಬಾ' ಎಂದು ಕರೆದ. ಅವನೊಡನೆಯೇ ನಡೆದೆ. ತುಸು ದೂರದಲ್ಲೇ ಒಂದು ಕೋಣೆ. ನಾಲ್ಕು ಸುಟ್ಟ ದೇಹಗಳು ಅಲ್ಲಿ. ನೋಡಿ ಬವಳಿ ಬಂದಂತಾಯಿತು ನನಗೆ. 'ಏನಿದೆಲ್ಲ?' ಎಂದೆ. 'ಇವತ್ತು ಆಗಸ್ಟ್ ಹದಿನೈದು ಅಲ್ಲವಾ? ಇದಕ್ಕಿಂತ ಉಂಟೆ ಬಿಡುಗಡೆಗೆ ಬೇರೊಂದು ಸುದಿನ?' ನಗುತ್ತಲೇ ಅವನು ನುಡಿದ. ನನಗೆ ಮಾತು

ಹೊರಡಲಿಲ್ಲ. ನಾಲ್ಕರಲ್ಲಿ ಮೂರು ಮಕ್ಕಳ ದೇಹಗಳು. ಅವನ್ನು ತೋರಿಸಿ, 'ಮಕ್ಕಳಿವರೇ ನಮ್ಮ...' ಎಂದು ಏನೋ ಹೇಳುತ್ತಿದ್ದ ಅವನು. 'ಮೂವತ್ತಮೂರು ಕೋಟಿ' ಎಂದು ಅವನ ಮಾತನ್ನ ನಾನು ಪೂರೈಸಿದೆ. 'ಅಲ್ಲ, ಈ ಮೂವರೇ ಅದೃಷ್ಟಶಾಲಿಗಳು. ಉಳಿದ ಕೋಟಿಗಟ್ಟಲೆ ಖೋಟಾ ಖರಾಬ್,' ಎಂದು ಅವನು ನನ್ನ ಮಾತನ್ನು ಸರಿಪಡಿಸಿದ. ಇನ್ನೊಂದು ದೇಹವನ್ನು ತೋರಿಸಿ, 'ಇವಳೇ ನನ್ನ ಮನೆಯ ನಂದಾದೀಪ' ಎಂದ. ಮತ್ತೆ ನುಡಿದ, 'ಇದಕ್ಕೂ ಸೀಮೇಎಣ್ಣೆಗೆ ಎಷ್ಟು ಪರದಾಡಿದೆ ಮಹರಾಯಾ. ನಿನಗೂ ಸಿಕ್ಕಿದ್ದರೆ ಬರುತ್ತಿದ್ದೆಯೇನೋ?' ಎಂದ. ಇನ್ನೂ ಏನು ಹೇಳುತ್ತಿದ್ದನೋ ಅವನು. ನರಿಗಳ ಅಳು, ಗೂಗೆಗಳ ಕೂಗು, ಮೊದಮೊದಲು ಮೆಲ್ಲಗೆ, ಕ್ರಮೇಣ ಕಿವಿಗಡಚಿಕ್ಕುವಂತೆ ಅಪ್ಪಳಿಸಿ ಕೇಳಿ ಬಂತು. ಅವು ನನ್ನನ್ನು ಸುತ್ತುವರಿದು ಕುಣಯುತ್ತಿರುವಂತೆ ಕಂಡಿತು. ಈ ಗೊಂದಲದ ಮಡುವಿನಲ್ಲಿ ಅವನ ಮಾತುಗಳು ಮುಳುಗಿ ಹೋದವು. ನಾನು ಅಲ್ಲಿಂದ ಹೊರಟೆ. ಅವನು ನನ್ನ ಕೈ ಹಿಡಿದೆಳೆದ. ಅವನ ಕೈ ಕೊಸರಿಕೊಂಡು ಓಡಿದೆ.

ಎಷ್ಟೊಂದು ಮರುಕ ಎಲ್ಲರಿಗೂ ನಾಸೆದ್ದ ಮೇಲೆ. ಇವಳಂತೂ ಗಳಿಗೆಯೂ ಬಿಟ್ಟಗಲಲಿಲ್ಲ ನನ್ನ. ಎಲ್ಲರೂ ಕೇಳುವವರೆ, 'ಸಾಯುವಂಥಾ ಪಾಡು ನಿನಗೇನು ಬಂದಿತ್ತು?' ಎಂದು. 'ಮಡದಿ ಮಕ್ಕಳತೊರೆದು ಮಸಣಕ್ಕೆ ತಂದೆಯಾ,' ಎಂದು ಆಲಾಪಿಸಿದ ನೆರೆಮನೆಯ ಭಾಗವತ. ಆದರೆ ಒಬ್ಬರೂ ಹೇಳಲಿಲ್ಲ, ಬದುಕಲಿಕ್ಕೊಂದು ನೆಪವೂ ಇಲ್ಲವೆಂದು. ಮಂಕಾಗಿ ಮೂಲೆ ಹಿಡಿದು ಕೂತೆ.

ಒಂದಂತೂ ಸ್ಪಷ್ಟವಾಯಿತು, ಈ ಎಲ್ಲ ಅಸ್ಪಷ್ಟದಲ್ಲೂ. ನನಗೆ ಬೇಕಿಲ್ಲ, ಉದ್ವೇಗದಲ್ಲಿ ಎದೆ ಬಗೆಯುವ ಚೂರಿ ಸಾವು. ಪರಿ ಯಾವುದಾದರೇನು, ಜೀವ ಉಳಿಸುವುದೇನು, ಜೀವ ಸೆಳೆಯುವುದೇನು, ಕ್ರೌರ್ಯ ಕ್ರೌರ್ಯವೇ. ಬರುವುದಾದರೆ ಸಾವು ಬರಲಿ ಕ್ರೌರ್ಯದಿಂದ ಬಿಡುಗಡೆಯ ನೀಡಿ. ಮಂಜು ಕರಗಿದ ಹಾಗೆ ಈ ಜೀವ ಕರಗಬೇಕು. ಬೆಳದಿಂಗಳು ಥಿಮ್ಮನೆ ಹಿಡಿದು ಕರೆದೊಯ್ಯಬೇಕು. ಇದೇ ನನ್ನ ಬಯಕೆ ಎಂದು. ಪ್ರಶ್ನೆ ಜೀವ ಸಾವಿನದಲ್ಲ, ಆದರೆ ಬಿಡುಗಡೆಯದು, ಪೂರ್ಣ ಬಿಡುಗಡೆಯದು ಎಂದು.

ಸಂಜೆ ಪೇಟೆಗೆ ಹೋದೆ. ಸಂತೆ ಜನ. ಗಿಜಿಗಿಜಿ. ಜನಗಳ ಅರ್ಥವಾಗದ ಮಾತು, ವಾಹನಗಳ ಕರ್ಕಶ ಸದ್ದು. ನನ್ನೊಳಗಿನ ದಾರಿ ತಪ್ಪಿಸಿಕೊಂಡ ಹುಡುಗ ಅನಾಥ ಅಲೆದಾಡಿದ. ಗಿಜಿಗಿಜಿಯ ನಡುವೆ ಕೋಗಿಲೆಯ ಕೂಗು ಎಲ್ಲಿಂದಲೋ. ದನಿ ಬಂದತ್ತ ತಿರುಗಿದೆ. ಕಾಣಲಿಲ್ಲ ಕೋಗಿಲೆ. ಹಾಡು ನಿಲ್ಲಲಿಲ್ಲ. ಹಾಡಿನ ಜಾಡು ಹಿಡಿದು ಹುಡುಕುತ್ತಾ ಹೊರಟೆ. ಹಾಡು ಮುಂದೆ ಮುಂದೆ. ನಾನು ಹಿಂದೆ ಹಿಂದೆ. ಗಾಳಿಯಲ್ಲಿ ಅಲೆಅಲೆಯಾಗಿ ಹಾಡು, ನೆಲದ ಮೇಲೆ ತೇಲುತ್ತಾ ನಡೆದ ನಾನು. ಹೀಗೇ ಸಾಗಿದೆವು ದೂರ, ಬಹುದೂರ, ಊರ ಸರಹದ್ದಿನವರೆಗೂ. ಅಲ್ಲೊಂದು ತಿರುವು.

ಚುಮುಚುಮು ಬೆಳಕು. ಬೆಳಗು ಮುಂಜಾನೆಯ ತಂಗಾಳಿ. ಇರುಳ ಮಳೆಯಿಂದ ತೊಯ್ದು ನೆಲ. ಕಚಗುಳಿ ಇಡುವ ತಣ್ಣನೆಯ ಕೆಸರು. ಹೊಳೆಯ ನೀರಲ್ಲಿ ಹೊಳೆವ ಮೀನುಗಳು. ಹೊರಹೊರಟ ಹಕ್ಕಿಗಳ ಹಿಂಡುಹಿಂಡು. ಜುಳುಜುಳು ನೀರಲ್ಲಿ ಕಾಲು ಇಳಿಬಿಟ್ಟು ಕುಳಿತೆ. ಕೊಳೆ ತೊಳೆದ ಬೆಳ್ಳನೆಯ ಪಾದ ಕಂಡು ಹಿಗ್ಗಿದೆ. ಮನದಲ್ಲೇನೋ ಮುದ. ಹೊತ್ತು ಗೊತ್ತಾಗಲಿಲ್ಲ. ಎದ್ದು ನಡೆದೆ. ಭತ್ತದ ಗದ್ದೆಯಲ್ಲೊಂದು ನವಿಲು ಗರಿಗೆದರಿ ಕುಣಿಯು ತ್ತಿತ್ತು, ಗರಿಯ ಕಣ್ಣೆಲ್ಲಾ ನನ್ನ ಕಣ್ಣುಗಳೊಳಗೆ. ಹಗುರ ಮೈ, ಹಗುರ ಮನ. ಬಣ್ಣಬಣ್ಣದ ಹೂವುಗಳ ನಡುವೆ ನಾನೂ ಹೂವಾಗಿ ಅರಳಿದೆ. ಸರಹದ್ದಿನ ತಿರುವಿನಲ್ಲಿ ಸಿಕ್ಕ ಈ ಅನುಭವ


ಅನಿರ್ವಚನೀಯ. ಖುಷಿಯಾದೆ ಸುಂದರ ಬೆರಗಿನಲ್ಲಿ. ನೆಲದ ಕಣಕಣದ ಮೇಲೂ ಪ್ರೀತಿ ಉಕ್ಕಿ ಬಂತು. ಚೆಲುವು ನೆಲದಲ್ಲಿ, ಚೆಲುವು ಬಾನಲ್ಲಿ, ಚೆಲುವು ಎಲ್ಲೆಡೆಯಲ್ಲಿ. ಇರಬಹುದೆ ಪ್ರೀತಿಯ ಪವಾಡ ಪ್ರಕಟವಾಗುವುದು ಹೀಗೆ, ಎಲ್ಲೆಡೆಯೂ ಚಿಮ್ಮಿ ಸೂಸುವ ಚೆಲುವಿನಲ್ಲಿ!

ಕೋಗಿಲೆಯ ಎದೆಯ ಗೂಡೊಳಗಿಟ್ಟು ಕೊಂಡು ತಿರುಗಿ ಬಂದೆ. ನಡುರಾತ್ರಿ ಊರೊಳಗೆ. ಜನರಾರೂ ಇಲ್ಲ, ಹಾದಿಯಲ್ಲಿ ಒಂಟಿ ಒಬ್ಬಂಟಿ ನಾನು. ಜೋರು ಬೀಸುವ ಗಾಳಿ. ಮೇಲೆ ದಟ್ಟೈಸಿದ ಮೋಡ. ನಡುವೆ ಮಿಂಚಿನ ಬಳ್ಳಿ. ಮಿಂಚಿನ ಗೊಂಚಲಾದೆ ನಾನು. ಮಳೆಯ ವಾಸನೆ ಘಮ್ಮನೆ ಗಾಳಿಯಲಿ ತೇಲಿ ಬಂತು. ಇದೀಗ ಮಳೆ ಹನಿಯತೊಡಗುತ್ತದೆ, ಜೇನಾಗಿ, ಸಂಭ್ರಮದಲ್ಲಿ ಜನ ಹೊರ ಬರುತ್ತಾರೆ. ಎಲ್ಲರನ್ನೂ ಪ್ರೀತಿಸಬೇಕು, ಎಲ್ಲವನ್ನೂ ಪ್ರೀತಿಸಬೇಕು. ಅಪಾರ ಪ್ರೀತಿಯಲ್ಲಿ ದಿವಿನಾಗಿ ಮಿಂದು ಚಿನ್ನ ಥಳಥಳ ಹೊಳೆಯಬೇಕು. ಗೋಜಲು ಸಂಬಂಧಗಳ ರೇಜಿಗೆಗಳ ನಡುವೆ ಕಳಕೊಂಡ ಮಗುವ ಹುಡುಕಬೇಕು. ದಿನದಿನದ ಜಂಜಾಟದಲ್ಲಿ ದ್ವೇಷದ ಸೆರೆಮನೆಯ ಸೇರಿದ್ದ ಪ್ರೀತಿ ಕನ್ನಿಕೆಯ ಸೆರೆ ಬಿಡಿಸಬೇಕು. ಗಿಣಿ ಮುದ್ದು ನಲಿಯಬೇಕು. ಸರಹದ್ದಿನವರೆಗೂ ಹೋದವನು ಇದಕ್ಕಾಗಿ ತಿರುಗಿ ಬಂದೆ. ದಿಗಂತದಂಚಿನಿಂದ ಪರಿಮಳದ ತಂಪು ಗಾಳಿ ತಂದೆ. ಬನ್ನಿ, ಬನ್ನಿ ಗೆಳೆಯರೆ, ಬನ್ನಿ, ಬನ್ನಿ ನನ್ನವರೆ, ಬನ್ನಿ ಪ್ರೀತಿಸೋಣ. ನೆಲದ ಬದುಕು ಹಸನಾಗಬೇಕು. ಇದಕ್ಕೊಂದೇ ಸಾಧನ. ಮೇರೆ ಅರಿಯದ ಪ್ರೀತಿ. ಸುಂದರ ಸಾವಿನ ತೀರ ಸೇರಬೇಕು ನಾವು. ಅದಕ್ಕೆ ಮುನ್ನ, ಅಲ್ಲ ಈ ಕೂಡಲೇ ಪ್ರೀತಿಯ ಮೊರೆ ಹೋಗಬೇಕು ನಾವು. ನನ್ನೊಳಗಿನ ಕೋಗಿಲೆ ಹಾಡತೊಡಗುತ್ತದೆ, ಜನ ಕುಣಿಯತೊಡಗುತ್ತಾರೆ.


ಸಂಭ್ರಮದಲ್ಲಿ ಸುರಿದ ಮಳೆಯಲ್ಲಿ ನೆನೆಸಿಕೊಂಡು ಹಾಯಾಗಿ ಮನೆಗೆ ಬಂದೆ. ಬಾಗಿಲಲ್ಲೇ ನನ್ನ ಯಶೂ, ಮಗ ರಾಹುಲ. ಅವಳ ತಲೆ ನೇವರಿಸಿ ಮಗನ ಎತ್ತಿಕೊಂಡು ಮುದ್ದಿಟ್ಟೆ. ಮೋಡದ ಮರೆಯಿಂದ ತೂರಿ ಬಂದ ಚಂದ್ರ. ನೆಲದ ನೀರಲ್ಲೂ ನಗುವ ಚಂದ್ರ. ಮಗ ಕಿಲಕಿಲನೆ ನಕ್ಕ, :ಅವನನ್ನು ಎತ್ತಿಕೊಂಡೇ ಯಶುವನ್ನು ತಬ್ಬಿಕೊಂಡು ಒಳ ನಡೆದೆ.

ಎಲ್ಲರ ನಿದ್ದೆಯಲ್ಲಿ ಕನಸು ಕಾಣುತ್ತೇನೆ. ನಾನು ಕನಸಿನ ನಡುವೆಯೂ ಮಲಗಿದ್ದೇನೆ. ನನಗೆ ಹೆಸರಿಲ್ಲದಿರಲಿ ಬಿಡಿ.

ಎನ್. ಪ್ರಕಾಶ



ಪತ್ನಿಯೊಂದಿಗೆ ಲೇಖಕ



ಪ್ರಭಾಮಣಿ ನಾಗರಾಜ

ಪ್ರತೀಕ್ಷೆ

''ಸಾರಿ ಅಮ್ಮ, ಒಂದು ಅರ್ಜೆಂಟ್ ಮೀಟಿಂಗ್ ಅಟೆಂಡ್ ಮಾಡೋದಿದೆ. ಒಂದು ಗಂಟೆ ಕಾಯ್ತಾ ಕೂತಿರು. ಬಂದ್ ಬಿಡ್ತೀನಿ'', ಓಡುನಡಿಗೆಯಲ್ಲೇ ಬಂದ ಡಾ॥ ಮೇಘನಾ ಆತುರಾತುರವಾಗೇ ಹೇಳುತ್ತಾ ಹೋದಳು. ಇವಳಿಗಾಗಿ ಮೂರು ದಿನದಿಂದ 'ಮೇಘನಾ ನರ್ಸಿಂಗ್ ಹೋಂ' ಬಾಗಿಲು ಕಾಯುವುದಾಯ್ತಲ್ಲ ಎನಿಸಿತು ಅಮೃತಾಗೆ. ಅವಳಿಗಾಗಿಯಲ್ಲ, ತನಗಾಗೇ, ತನ್ನ ಆರೋಗ್ಯಕ್ಕಾಗೇ. ಡಾ॥ ಮೇಘನಾ ತನ್ನ ಸಹಪಾಠಿ, ಗೆಳತಿಯಾದ್ದರಿಂದ ಅವಳು ಇವಳು ಎನ್ನುವ ಸಲಿಗೆ, ಇಲ್ಲದಿದ್ದರೆ ಶಿರಬಾಗಿ ಕಾಯುತ್ತಿರಲಿಲ್ಲವೆ? ಈ ಊರಿಗೆ ಹೊಸದಾಗಿ ಬಂದ ತಾನು ಯಾವ ಡಾಕ್ಟರ್ ಬಳಿ ಹೋಗುವುದು ಎಂಬ ಗೊಂದಲವಿಲ್ಲದಂತೆ, ತನ್ನ ಗೆಳತಿ ಮೇಘನಳದೇ ನರ್ಸಿಂಗ್ ಹೋಂ ಇದೆ ಎಂದು ತಿಳಿದು ಎಷ್ಟು ಸಂತಸವಾಗಿತ್ತು. ಆದರೆ ದಿನವೂ ಒಂದೊಂದು ಕಾರಣ, ಹಗಲು ಬರಲು ಸಿ.ಎಲ್. ಹಾಕಬೇಕಲ್ಲ ಎಂಬ ಸಂಕಟ, ಅನ್ಯಾಯವಾಗಿ ಒಂದು ಸಿ.ಎಲ್. ಕಳೆದು ಹೋಗಬಾರದಲ್ಲ, ಅಂತೂ ದಿನಾ ಮನೆಗೆ ಹೋಗುವುದು ರಾತ್ರಿ ಎಂಟು ಗಂಟೆಯೇ ಆಗ್ತಿದೆ. ಬೆಳಿಗ್ಗೆ ಎಂಟು ಗಂಟೆಗೆ ಮನೆ ಬಿಟ್ರೋಳು ರಾತ್ರಿ ಎಂಟಕ್ಕೆ ಮನೆಗೆ ಹೋದರೆ ಮಕ್ಕಳು ಏನು ಮಾಡಬೇಕು? ಮಕ್ಕಳು ಎಂದು ನೆನಪಾದ ತಕ್ಷಣ ಅಮೃತಾಗೆ ತುಂಬಾ ಕಳವಳವಾಯ್ತು. ಹಾರ್ಲಿಕ್ಸ್ ಮಾಡಿಕೊಂಡು ಕುಡಿದಿವೆಯೋ ಇಲ್ಲವೋ. ಮೊದಲ ಧನ್ಯ, ಮುದ್ದು ತುಂಟಿ, ಹದಿನೈದು ವರ್ಷವಾದರೂ ಜವಾಬ್ದಾರಿಯೇ ಬಂದಿಲ್ಲ. ಸ್ಕೂಲಿನಿಂದ ಬಂದ ತಕ್ಷಣ ಬ್ಯಾಗ್ ಎಸೆದು ಆಡಲು ಓಡಿಬಿಡ್ತಾಳೆ, ಇನ್ನು...

''ರೀ... ಬನ್ನಿ. ಡಾಕ್ಟರ್ ಬಂದಿದ್ದಾರೆ'', ಆಯಾ ಬಂದು ಕರೆದಳು.

'ಇಲ್ಲೇ ಕೂತಿದೀನಿ. ಡಾ॥ ಮೇಘನಾ ಬಂದಿದ್ದು ಕಾಣಲೇ ಇಲ್ಲವಲ್ಲ' ಎಂದಳು ಅಮೃತಾ.

''ಅವರಲ್ಲ, ಡಾ॥ ನಂದಿತಾ ಅವ್ರೆ ಬನ್ನಿ'' ಅವಳು ಹೇಳಿ ಹೋದಳು.

''ನಾನು ಡಾ॥ ಮೇಘನಾನೇ ನೋಡಬೇಕು'' ಎಂದು ಸ್ವಗತವೆಂಬಂತೆ ಹೇಳಿಕೊಂಡು ಸುಮ್ಮನೆ ಕುಳಿತಳು. ಇಂತಹ ಸಮಯಗಳಲ್ಲಿ ಕೈಲಿ ಹಿಡಿದ ಪುಸ್ತಕದ ಮೇಲೆ ಕಣ್ಣಾಡಿಸಿದರೂ ಏನೂ ತಲೆಗೆ ಹೋಗುವುದಿಲ್ಲ ಎನಿಸಿತು.

''ರೀ, ಡಾ॥ ನಂದಿತಾ ಪ್ರಿಲಿಮಿನರಿ ಟೆಸ್ಟ್‌ಗಳೆಲ್ಲಾ ಮಾಡ್ತಾರೆ, ಮೇಡಂ ನೋಡಕ್ಕೆ ರೆಡಿ ಮಾಡ್ತಾರೆ, ಬನ್ನಿ.'' ನರ್ಸ್ ಒಬ್ಬಳು ಬಂದು 'ಬರಲೇ ಬೇಕು' ಎನ್ನುವ ಧಾಟಿಯಲ್ಲಿ, ಆಜ್ಞೆ ಮಾಡಿದಂತೆ, ಜಬರ್ದಸ್ತಿನಿಂದಲೇ ಹೇಳಿ ಹೋದಳು. ಅಮೃತಾ ಕುರಿಯಂತೆ ಅವಳನ್ನು ಹಿಂಬಾಲಿಸಿದಳು.

'ನಿಮ್ಮ ಹೆಸರೇನು?' ಎಳೆಯ ಮುಖದ ಚಿಕ್ಕ ಡಾಕ್ಟರ್ ಕೇಳಿದಳು. 'ಅಮೃತಾ' ಎಂದಳು.

'ಏನು ತೊಂದರೆ?'

ಡಾ॥ ಮೇಘನಾಗೆ ಹೇಳುವ ಮುನ್ನಾ ಒಂದು ರಿಹರ್ಸಲ್‌ನಂತೆ ಎಲ್ಲಾ ತೊಂದರೆಗಳನ್ನೂ ಹೇಳಿದಳು ಅಮೃತಾ.



ಗೀತಾ ಸಾಳುಂಕೆ

'ಎಷ್ಟು ಮಕ್ಕಳು?'

'ಮೂರು'

'ಎಂತಹವು?'

'ಮೂರೂ ಹೆಣ್ಣು'.

ಚಿಕ್ಕ ಡಾಕ್ಟರಳ ಸಹನೆ ತಪ್ಪಿಹೋಯ್ತು. ''ಏನ್ರಿ? ನೋಡಲು ಎಜ್ಯೂಕೇಟೆಡ್ ತರಹ ಕಾಣ್ತೀರಿ. ಎರಡು ಮಕ್ಕಳಿಗೇ ಆಪರೇಷನ್ ಮಾಡಿಸಿಕೋಬೇಕು. ಮೂರಾದ್ರೂ, ಮಾಡಿಸಿಕೊಂಡಿಲ್ವ? ಗಂಡಾಗ್ಲಿ ಅಂತ ಕಾಯ್ತಿದೀರ? ಇನ್ನೂ ಎಷ್ಟು ಮಕ್ಕಳು ಆಗಬೇಕು ಅಂತಿದೀರಿ?'' ಆ ಹುಡುಗಿ ಡಾಕ್ಟರಳ ಅಬ್ಬರ ಕೇಳಿ ಅಮೃತಾಗೆ ನಗುವೇ ಬಂತು. ಅವಳ ನಗುಮುಖ ಆ ಡಾಕ್ಟರನ್ನು ಇನ್ನೂ ಕೆರಳಿಸಿತು. ಕುಟುಂಬ ಯೋಜನೆಯ ಬಗ್ಗೆ ಒಳ್ಳೆಯ ಕ್ರಮವನ್ನೇ ತೆಗೆದುಕೊಳ್ಳುತ್ತಿರುವ ಆ ಹುಡುಗಿಯನ್ನು ಮನಸ್ಸಿನಲ್ಲೇ ಅಭಿನಂದಿಸಿದಳು.

'ಎಷ್ಟು ವಯಸ್ಸು?' ಮೊದಲೇ ಕೇಳಬೇಕಿದ್ದ ಪ್ರಶ್ನೆಯನ್ನು ನಿಧಾನವಾಗಿ ಕೇಳಿದ ಡಾಕ್ಟರಿಗೆ '50 ವರ್ಷ' ಎಂದು ಕೂಲಾಗಿ ಉತ್ತರಿಸಿದಳು ಅಮೃತಾ. ಡಾಕ್ಟರ್ ಅಮೃತಾಳನ್ನು ಕಾಲಿನಿಂದ ತಲೆಯವರೆಗೂ ನೋಡಿ ಆಶ್ಚರ್ಯ ತಾಳಲಾರದಂತೆ ಪುನಃ ಅದೇ ಪ್ರಶ್ನೆ ಕೇಳಿದಳು.

''ಐವತ್ತು ವರ್ಷ, ರಿಟೈರ್ ಆಗಲು ಎಂಟು ವರ್ಷ ಬಾಕಿ ಇದೆ ಅಷ್ಟೆ, ಸರ್ಕಾರದವರು ಯಾವುದೇ ಬದಲಾವಣೆ ಮಾಡದಿದ್ದರೆ''. ಸ್ವಲ್ಪ ಉದ್ಧಟತನವೆನಿಸಿದರೂ ಆ ಹುಡುಗಿ ಡಾಕ್ಟರಿನ ಬಗ್ಗೆ ಉಂಟಾದ ಏನೋ ಒಂದು ರೀತಿಯ ಅಭಿಮಾನ, ಅಮೃತಾಗೆ ಸಲಿಗೆ ತೆಗೆದುಕೊಳ್ಳುವಂತೆ ಮಾಡಿತ್ತು. ಬ್ಲಡ್‌ಟೆಸ್ಟ್, ಯೂರಿನ್ ಟೆಸ್ಟ್‌ಗಳಿಗೆ ಬರೆದು ಕೊಟ್ಟಾಗ 'ಡಾ|| ಮೇಘನಾ...' ಎಂದು ತೊದಲಿದಳು.

"ಅವರು ಬರುವುದರಲ್ಲಿ ಇದೆಲ್ಲಾ ಆಗಿರಬೇಕು. ಆಮೇಲೆ ಅವರು ನೋಡುವುದು", ಹುಡುಗಿ ಡಾಕ್ಟರ್ ಖಡಾಖಂಡಿತವಾಗಿ ಹೇಳಿತು. ಮರುಮಾತಿಲ್ಲದೆ ಕೊಟ್ಟು ಬಂದಳು.

ಎಂಟು ಗಂಟೆಯಾದರೂ ಡಾ|| ಮೇಘನಾ ಬರಲೇ ಇಲ್ಲ. ಮಾರನೇ ದಿನ ರಜ ಹಾಕಿಯೇ ಬರುವ ನಿರ್ಧಾರ ಮಾಡಿ ಮನೆಗೆ ಹೋದಳು. ಮರುದಿನ ಟೆಸ್ಟ್ ಮಾಡಿದ ಮೇಘನಾ, "ಒಂದು ಮೈನರ್ ಆಪರೇಷನ್ ಆಗಬೇಕು" ಎಂದಳು. ಒಮ್ಮೊಮ್ಮೆ ಆ ನೋವು ಬಂದರೆ ತಡೆಯಲೇ ಆಗುತ್ತಿರಲಿಲ್ಲ. 'ಲೇಬರ್ ಪೇನ್‌ನಂತಹ ನೋವು ಬರುತ್ತೆ ಅಲ್ವ?' ಎಂದಿದ್ದಳು ಮೇಘನಾ. ಆ ನೋವಂತೂ ಏನು ಎಂದು ತನಗೆ ತಿಳಿದಿಲ್ಲ. ಅದರ ಅನುಭವಕ್ಕಾಗೇ ಈ ರೂಪದಲ್ಲಿ ನೋವು ಬಂದಿರಬಹುದು ಎನಿಸಿತು.

"ಜೊತೆಗೆ ಯಾರಾದರೂ ಬಂದಿದ್ದಾರಾ ಅಮ್ಮ" ಡಾ|| ಮೇಘನಾ ಕೇಳಿದಳು. 'ನೀನೇ ಇದೀಯಲ್ಲ', ನಗುತ್ತಾ ಹೇಳಿದಳು ಅಮೃತ.

"ಎರಡು ಗಂಟೆ ಇದ್ರೆ ಸಾಕು. ನಿಮ್ಮ ಹಸ್ಬೆಂಡ್‌ಗೆ ಫೋನ್ ಮಾಡು" ಎಂದಳು. ನರ್ಸ್‌ಗೆ ರೆಡಿ ಮಾಡಲು ಹೇಳಿದಳು. ನರ್ಸ್, ಆಯಾಗೆ ಹೇಳಿದಳು. ಈಗ ಎಲ್ಲೆಲ್ಲೂ ಕಾಡುವ ಏಡ್ಸ್ ಭಯದಿಂದ, 'ಬ್ಲೇಡ್ ಹೊಸದಾ?' ಎಂದು ಕೇಳಿದಳು ಅಮೃತಾ.

'ನಿಮ್ಮೆದುರಿಗೇ ಕವರ್ ತೆಗೀಲಿಲ್ವ?' ಎಂದಳು ಆಯಾ. ಇಲ್ಲಿ ಎಲ್ಲರ ನಾಲಿಗೆಯೂ ಹರಿತ ಎನಿಸಿತು. ಅಥವಾ ತನ್ನ ಪ್ರಶ್ನಿಸುವ ಧಾಟಿಯೇ ತಪ್ಪಿರಬಹುದು. ಸರ್ಕಾರಿ ಆಸ್ಪತ್ರೆಗಳಲ್ಲೇನೋ ಈ ಹರಿತ ನಾಲಿಗೆಗಳ ಹಾವಳಿ ಜಾಸ್ತಿ ಎಂದುಕೊಂಡರೆ, ಕಾಸು ಬಿಚ್ಚಿಸುವ ಖಾಸಗಿ ಆಸ್ಪತ್ರೆಗಳಲ್ಲಾದರೂ ಸ್ವಲ್ಪ ಸೌಜನ್ಯ ಬೇಡವೇ ಎಂದುಕೊಂಡಳು. ಆಪರೇಷನ್ ಟೇಬಲ್ ಮೇಲೆ ಮಲಗುವ ಕ್ಷಣ ಮಕ್ಕಳಿಗೆ ತಿಳಿಸದೆ ತಪ್ಪು ಮಾಡಿದೆ ಎನಿಸಿತು. ಆದರೂ ಅವು ಸ್ಕೂಲಿನಿಂದ ಬರುವ ವೇಳೆಗೆ ತಾನು ಮನೆಯಲ್ಲೇ ಇರುವುದರಿಂದ ಅವುಗಳಿಗೇಕೆ ಅನಗತ್ಯ ಗೊಂದಲ ಎನಿಸಿತು. ಮೇಘನಾಗೆ ತಾನು ಮಾತ್ರ ಪರಿಚಯ. ತನ್ನ ಪತಿಯ ಬಗ್ಗೆ ತಿಳಿದಿಲ್ಲ. ಮುಖ ಪರಿಚಯವಿದ್ದರೂ ವಿಳಾಸ ಇತ್ಯಾದಿ ಖಚಿತವಾಗಿ ಗೊತ್ತಿಲ್ಲ. ಮೈನರ್ ಆಪರೇಷನ್ ಆದ್ದರಿಂದ ಯಾವುದೇ ವಿವರವನ್ನಾಗಲೀ, ಸಹಿಯನ್ನಾಗಲೀ ತೆಗೆದುಕೊಂಡಿಲ್ಲ. ಆದರೆ...



ನರ್ಸ್‌ನ ಕರೆದು, "ಇಲ್ಲಿಂದ ಒಂದು ಲೋಕಲ್ ಕಾಲ್ ಮಾಡಬಹುದಾ"? ಎಂದು ಕೇಳಿದಳು. ಡಾ|| ಮೇಘನಾ ಜೊತೆ ಇವಳ ಸಲಿಗೆ ಗಮನಿಸಿದ್ದ ನರ್ಸ್, 'ನಂಬರ್ ಹೇಳಿ' ಎಂದು ಡಯಲ್ ಮಾಡಿ ಫೋನ್ ಕೊಟ್ಟಳು. ಅಮೃತಾ ವಿಷಯ ತಿಳಿಸಿ, 'ಗಾಬರಿ ಏನೂ ಇಲ್ಲ, ಎರಡು ಗಂಟೆ ನಂತರ ಬನ್ನಿ' ಎಂದಳು. ಆಗಲೇ ಊಟದ ಹೊತ್ತು. ಎಲ್ಲಾ ಹೋಗಿದ್ದಾರೆ. ಟೇಬಲ್ ಮೇಲೆ ಒಬ್ಬಳೇ ಮಲಗಿರಲು ಬೇಸರ. ಒಬ್ಬಳೇ ಇದ್ದೇನೆ ಎನಿಸಿದಾಗ ಏನೋ ಶೂನ್ಯ ಭಾವ. ಅಷ್ಟರಲ್ಲೇ ಗಂಡಸು ಡಾಕ್ಟರೊಬ್ಬರು ಬಳಿಗೆ ಬಂದರು. ರೂಮಿನ ಒಂದು ಮೂಲೆಗೆ ನಡೆದು ನಿಂತರು. ಅಲ್ಲೊಂದು ಇನ್‌ಕ್ಯೂಬೇಟರ್! ತಾನು ಗಮನಿಸಿಯೇ ಇಲ್ಲವಲ್ಲ.

'ಏನಿದು ಸ್ಮೆಲ್? ಕ್ಲೀನಾಗಿಡಲು ಆಗಲಿಲ್ವ? ಕ್ಲೀನ್ ಮಾಡಿ ಎಷ್ಟು ದಿನ ಆಯ್ತು?', ನರ್ಸನ್ನು ಚೆನ್ನಾಗಿ ಬೈದು, instruciton ಕೊಟ್ಟು ಹೋದರು. 'ಇದು ಮಾರ್ನಿಂಗ್ ಡ್ಯೂಟಿ ನರ್ಸ್ ಕೆಲಸ, ನಾನು ಈಗ ಬಂದಿದೀನಿ, ನನಗೆ ಬೈಗಳು...', ಆಕೆ ಗೊಣಗುತ್ತಲೇ ಮಗುವನ್ನು ಒಂದು ಕೈಲಿ ಯಾವುದೋ ಒಂದು ವಸ್ತುವನ್ನು ಹಿಡಿದಂತೆ ಎತ್ತಿ ಹಿಡಿದು ಕ್ಲೀನ್ ಮಾಡಲಾರಂಭಿಸಿದಳು. ಕುತೂಹಲದಿಂದ ಹತ್ತಿರ ಹೋಗಬೇಕೆನಿಸಿತು. ಆದರೆ ಆಕೆಗೆ ಮೊದಲೇ ಕೋಪ. ಈಚೆ ಹಿಡಿದ ಮಗುವಿನ ಕ್ಷೀಣ ಅಳು ಕೇಳುತ್ತಿತ್ತು. ಅತ್ಯಂತ ದುರ್ಬಲ ದೇಹದ ಮಾನವಾಕಾರದ ಪುಟ್ಟ ಗೊಂಬೆ. ಇದೇ ಮುಂದೆ ದೊಡ್ಡದಾಗಿ ಬೆಳೆದರೆ! ಆಕೆ ಗೊಣಗುತ್ತಲೇ ತನ್ನ

ಕೆಲಸ ಮುಗಿಸಿ ಆಚೆಗೆ ಹೋದಳು. ಮತ್ತೆ ಹತ್ತು ನಿಮಿಷ ಯಾರ ಸುಳಿವೂ ಇಲ್ಲ. ದೃಷ್ಟಿ ಇನ್‌ಕ್ಯುಬೇಟರ್ ಕಡೆಗೆ ಹೊರಳಿತು. ಗಮನಿಸಿ ನೋಡಿದರೆ ಆ ಪುಟ್ಟ ಜೀವ ಉಸಿರಾಡುವುದು ಮಾತ್ರ ಕಾಣುತ್ತಿತ್ತು. ಇದರ ಮೇಲೆ ಜೀವವಿಟ್ಟು ಕೊಂಡಿರುವ ತಾಯಿ ಇಲ್ಲೇ ಎಲ್ಲೋ ಸಮೀಪ ದಲ್ಲೇ ಇರಬಹುದು. ಪ್ರೈವೇಟ್ ನರ್ಸಿಂಗ್ ಹೋಂ ಆದ್ದರಿಂದ ತನ್ನ ಮಗು ಸುರಕ್ಷಿತವಾಗಿದೆ ಎಂಬ ಸಮಾಧಾನದಲ್ಲಿರಬಹುದು.

ತಾನಿಲ್ಲಿ ಬಂಧಿಯಾಗಿರುವೆನೇನೋ ಎಂಬ ಭಾವ. ಅಷ್ಟರಲ್ಲೇ ಬಾಗಿಲು ತೆರೆದು ಆಯಾ ಬಂದಳು. ಅಮೃತಾಳ ತಲೆಯ ಭಾಗದಲ್ಲೇ ನಿಂತು 'ಲೊಚ್ ಲೊಚ್' ಎನ್ನುತ್ತಿದ್ದಾಳೆ.

'ಏನಾಯ್ತಮ್ಮ' ಎಂದಳು ಅಮೃತ.

'ಆಯಮ್ಮನ ಗೋಳು ಹೇಳತೀರದು' ದನಿಯಲ್ಲೇ ದುಃಖ ತುಂಬಿ ಹೇಳಿದಳು ಆಯಾ.

'ಏನಾಗಿದೆ?' ಅಮೃತ ಕುತೂಹಲದಿಂದ ಪ್ರಶ್ನಿಸಿದಳು.

'ಮಗ ಹೊಟ್ಟೇಲೇ ಸತ್ತು ಹೋಗ್ಯೆತೆ. ಅದ್ ನೋಡಿ ಏಳು ತಿಂಗ್ಳಿಗೆ ಹುಟ್ತು. ಹೆಂಗೋ ಉಸಿರಾಡ್ಕೊಂಡ್ಯೆತೆ. ಇದು ಎಂಟು ತಿಂಗ್ಳಿಗೆ ಹುಟ್ಟಿದ್ದು. ಅದ್ಕೇ ಎಂಟು ತಿಂಗ್ಳಿಗೆ ಹುಟ್ಟಿದೋವು ಬದ್ಕಲ್ಲ ಅನ್ನೋದು' ಎಂದು ನಿಡುಸುಯ್ದಳು. ಅಮೃತಾಗೆ ಒಮ್ಮೆಲೇ ಶಾಕ್ ಹೊಡೆದಂತಾಯ್ತು. ತನ್ನ ತಲೆ ಬಳಿಯೇ ಒಂದು ಮಗುವಿನ ಶವ! ಪ್ರಪಂಚವನ್ನು ನೋಡುವ ಮೊದಲೇ ಕಣ್ಮುಚ್ಚಿ ಕೊಂಡ ಪುಟ್ಟ ಜೀವದ ಕಳೇಬರ. ಅವಳಿಗೆ ಮೈ ಜುಂ ಎಂದಿತು.

''ಚೊಚ್ಚಲ ಹೆರಿಗೆ. ಈಗೇನ್ ನಮ್ ಕಾಲದ ಹಂಗಾ. ಹೆಜ್ಜೆಗೊಂದು ಆಸ್ಪತ್ರೆ. ನಿಗವಾಗಿ ತೋರಿಸ್ದೆ ಕೈಗೆ ಬಂದ ತುತ್ತು ಬಾಯಿಗೆ ಬರದ ಹಂಗೆ ಮಾಡ್ಕಂಡವ್ಳೆ''.

ಅಮೃತಾಗೂ ಆ ಮಗುವನ್ನು ನೋಡ ಬೇಕೆನಿಸಿತು. ಆಕೆ ಹೊರ ಹೋಗುವುದನ್ನೇ ಕಾದಿದ್ದು, ಮೆಲ್ಲನೆದ್ದು ಆ ಮಗುವನ್ನು ನೋಡಿ



ದಳು. ಬಿಳಿ ಬಟ್ಟೆಯಲ್ಲಿ ಸುತ್ತಿಟ್ಟ ಪುಟ್ಟ ಮೂಟೆ. ಮುಚ್ಚಿದ ಕಣ್ಣಿನ ಪ್ರಶಾಂತ ಮುಖ. ಪ್ರಪಂಚವನ್ನು ನೋಡುವ ಮೊದಲೇ ವಿದಾಯ ಹೇಳಿದ ಜೀವ. ಯಾರಾದರೂ ಬಂದಾರೆಂದು ಹೆದರಿ, ತಕ್ಷಣ ಟೇಬಲ್ ಮೇಲೇರಿ ಮಲಗಿದಳು. ಒಂದು ಈ ಜೀವವನ್ನೇ ತ್ಯಜಿಸಿದ ಜೀವದ ಗೂಡು. ಮತ್ತೊಂದು ಉಸಿರು ಮಾತ್ರದಿಂದ ಈ ಲೋಕಕ್ಕಂಟಿರುವ ಕುಟುಕು ಜೀವ. ನಡುವೆ ತಾನು!

'ನಾನು' ಎಂದರೇನು? ಆಪರೇಷನ್ ಮಾಡುವಾಗ ಸ್ವಲ್ಪ ಹೆಚ್ಚು ಕಮ್ಮಿಯಾದರೂ... ಆಪರೇಷನ್ ಟೇಬಲ್ ಮೇಲೇ ಹಾರ್ಟ್ ಅಟ್ಯಾಕ್ ಆಗುತ್ತಂತೆ. ಏನೋ ಒಂದು ಕಾರಣ. 'ನಾನಲ್ಲದ ನನ್ನ ದೇಹ'ವನ್ನು ತಾನೇ ವೀಕ್ಷಿಸುತ್ತಿರುವಂತಹ ಭಾವ. ಮೈ ಅದುರಿದಂತಾಯ್ತು. ಯಾರಾದರೂ ಬಂದರೆ ಸಾಕು ಎಂದು ಮನ ತುಡಿಯಲಾರಂಭಿಸಿತು. ಚಿಕ್ಕವಳಿದ್ದಾಗ, ತಮ್ಮ ಪುಟ್ಟ ಹಳ್ಳಿಯಲ್ಲಿ ಯಾರಾದರೂ ಸತ್ತರೆ, ಸತ್ತ ಆತ್ಮ ಊರೆಲ್ಲಾ ಅಲೆಯುತ್ತಿರುತ್ತದೆ ಎಂದು ಸಂಜೆಯಾದರೆ ಆಚೆ ಹೋಗಲೇ ಭಯ. ಅಜ್ಜಿ ಸಂಜೆ ಮನೆಯ ಹೊಸ್ತಿಲ ಕೆಳಗೆ ಬೂದಿಯ ಎಳೆ ಇಡುತ್ತಿದ್ದರು. ಪ್ರೇತಾತ್ಮ ಮನೆ ಪ್ರವೇಶಿಸಬಾರದೆಂದು! ಆಸೆ ಇದ್ದವರು ದೆವ್ವವಾಗ್ತಾರಂತೆ ಎಂಬ ಮಾತು. ಈ

ಮುದ್ದು ಮುಗ್ಧ ಜೀವಕ್ಕೆ ಆಸೆ ಎಂದರೇನೆಂದೇ ತಿಳಿದಿರಲಿಲ್ಲವೇನೋ. ಚಿಗುರಲಾಗದ ಕುಡಿಯೊಂದು...

ಆಚೆಯಲ್ಲಿ ಏನೋ ಗದ್ದಲ. ಗಡಿಬಿಡಿ. ಬಾಗಿಲು ತೆರೆದುಕೊಂಡು ನರ್ಸ್ ಒಬ್ಬಳು ಒಳಗೆ ಬಂದಳು. ಅಮೃತಾಗೆ ಹೋದ ಜೀವ ಬಂದಂತಾಗಿ, 'ಏನದು ಗಲಾಟೆ?' ಎಂದಳು.

'ಏನೋ ಒಂದ್ ಮಾಡ್ಕಂಡ್ ಬಿಡ್ತಾರೆ. ಆ ಮೇಲೆ ನಮ್ಮ ತಲೇಗೆ ಕಟ್ಟಿ ಪರಾರಿ ಆಗ್ತಾರೆ' ಒಗಟಿನಂತೆ ಹೇಳಿ ಆಕೆ ಸುಮ್ಮನಾದಳು. ಅಮೃತಾ ಮಿಕಿಮಿಕಿ ಎಂದು ಅವಳನ್ನೇ ನೋಡಲಾರಂಭಿಸಿದಳು. ಕೇಳುವ ಅವಳ ಕುತೂಹಲಕ್ಕೆ ಉತ್ತರವೆನ್ನುವಂತೆ ಮುಂದುವರಿಸಿದಳು.

'ಇನ್ನೂ ಎರಡು ದಿನ ಕೂಡ ಆಗಿಲ್ಲ. ಮಗುನೂ ಬಿಟ್ಟು ಓಡಿಹೋಗಿದ್ದಾಳೆ. ಹೆಂಗೆ ಮನಸ್ಸು ಬಂತೋ!' ತಿರಸ್ಕಾರದಿಂದ ಹೇಳಿದಳು. ನರ್ಸ್ ಹಿಂದೆಯೇ ಬಾಗಿಲು ತೆರೆದುಕೊಂಡು ಮತ್ತೊಬ್ಬ ನರ್ಸ್ ಬಂದಳು. ಅವಳ ಮುಖದಲ್ಲಿ ಅನೇಕ ಸುದ್ದಿಗಳನ್ನು ಹೊತ್ತು ತಂದ ಸಂಭ್ರಮ. ಮಾತಾಡಲೆಂದೇ ಬಂದವಳಂತೆ, 'ರೋಸೀ, ತಿಳೀತಾ, ಆ ಹುಡುಗಿ ಕೊಟ್ಟಿರೋ ಫೋನ್ ನಂಬರ್, ಅಡ್ರೆಸ್ ಎಲ್ಲಾ ಸುಳ್ಳು. ನೋಡಕ್ಕೆ ಎಷ್ಟು ಇನ್ನೊಸೆಂಟ್ ಆಗಿ ಕಾಣ್ತಿದ್ದಳು ಅಲ್ವ?'

'ನೀನೇ ಅಲ್ವ ಅವಳಿಗೆ ಡೆಲಿವರಿ ಮಾಡಿಸಿದ್ದು', ರೋಸಿ ಕೇಳಿದಳು.

'ಮತ್ತೆ, ಎಷ್ಟು ಮುದ್ದಾದ ಮಗು, ಬಿಟ್ಟು ಹೋಗಕ್ಕೆ ಮನಸ್ಸಾದ್ರೂ ಹೇಗೆ ಬಂತೋ!'

'ಬೆಳಗಿಂದ್ಲೂ ಮಗು ಕಿಲ್ಕೊಂಡ್ ಅಳ್ತಿತ್ತಲ್ಲ ಆ ಇನ್ನೊಂದ್ ಕೇಸು, ಅದಕ್ಕೆ ಕೊಟ್ರಾಯ್ತು', ರೋಸಿ ಪರಿಹಾರ ಸೂಚಿಸಿದಳು.

'ಅವರ ಮನೆಯೋರೆಲ್ಲಿ ಒಪ್ತಾರೆ? ಇನ್ನೂ ಚೊಚ್ಚಲು ಅಲ್ವಾ, ಅವಳಿಗೇ ಆಗ್ಲಿ ಅಂತಾರೆ, ಅಲ್ದೆ ಇದು ಹೆಣ್ಣು ಮಗು ಬೇರೆ,' ತಾತ್ಸಾರದಿಂದ ನುಡಿದಳು ಇನ್ನೊಬ್ಬಳು.

'ನೋವು ಅನುಭವಿಸೋದ್ರಲ್ಲಿ ಅದೇನು ಎಂಜಾಯ್‌ಮೆಂಟ್ ಸಿಗುತ್ತೋ. ತಮ್ಮದೇ ಮಗು ಆಗ್ಬೇಕು ಅಂತಾರೇ ಹೊರ್ತು ಬೇರೆ ಒಂದನ್ನ ಸಾಕ್ಕೊಳ್ಳೋಣ ಅನ್ನಲ್ಲ.' ರೋಸಿಯ ಮಾತಿಗೆ ರಮಾ ನಗಲಾರಂಭಿಸಿದಳು. 'ನೀನು ಹಾಗೇ ಮಾಡು' ಎಂದು ಸಲಹೆಯನ್ನೂ ಕೊಟ್ಟಳು.

ತಾವಿಬ್ಬರೂ ಕೆಲಸಕ್ಕೆ ಹೋಗುವುದರಿಂದ ಬಹಳ ಸಣ್ಣ ಮಕ್ಕಳಾದ್ರೆ ಅವನ್ನು ಸಾಕೋದು ಕಷ್ಟ ಅಂತ ನರ್ಸರಿಗೆ ಹೋಗೋ ವಯಸ್ಸಿನ ಮಕ್ಕಳನ್ನೇ ಕರೆತಂದು ಸಾಕಿದ್ದೆವು. ಈಗ ಈ ಎರಡು ದಿನದ ಹಸುಕಂದನ್ನ ನೋಡಬೇಕು, ಅದನ್ನು ತನ್ನದಾಗಿಸಿಕೊಂಡು ಸಾಕಬೇಕು ಎನ್ನುವ ಅದಮ್ಯ ಆಸೆ ಉಂಟಾಯಿತು. ಮಗು ದೊಡ್ಡದಾಗೋ ವರೆಗೂ ರಜ ಹಾಕಿದರಾಯ್ತು. ಸಂಬಳವಿಲ್ಲದಿದ್ದರೂ ಸರಿ. ನಂತರ ಯೋಚಿಸಿದರಾಯ್ತು. ಆ ಎಳೆ ಮಗುವಿನ ಒಡನಾಟವನ್ನು ಊಹಿಸಿ ಪುಳಕಗೊಂಡಳು.


ಆಪರೇಷನ್ ಟೇಬಲ್ ಮೇಲೆ ಮಲಗುವಾಗ [illegible]
[illegible]



[illegible]

ಇದೋ....

ನೀವು ನಿರೀಕ್ಷಿಸುತ್ತಿದ್ದ ಅತಿ ಸಣ್ಣ ಶ್ರವಣ ಸಾಧನ.



ಶ್ರವಣ ಸಾಧನಗಳು ಇದುವರೆಗೆ ಪೂರ್ಣವಾಗಿ ಅಗೋಚರಿಸಿಡಬಹುದಾದಷ್ಟು ಸಣ್ಣದಾಗಿರಲಿಲ್ಲ. ತಂತ್ರಜ್ಞರು ಈಗ ತಯಾರಿಸಿರುವ ಈ ಪುಟಾಣಿ ಶ್ರವಣ ಸಾಧನ **'ನೋನ್ಸ್'** ಯಾರಿಗೂ ಕಾಣದು.

ಇದನ್ನು ಕಿವಿಯಲ್ಲಿಟ್ಟು ನೀವು ನೆಮ್ಮದಿಯಿಂದ ಕೇಳಬಹುದು. ಇತರರು ನೀವು ಎಷ್ಟು ಚೆನ್ನಾಗಿ ಕೇಳುತ್ತೀರೆಂದು ಇನ್ನು ಮುಂದೆ ಆಶ್ಚರ್ಯಪಡಬಹುದು.

ದಿ ಸ್ಪೀಚ್ ಅಂಡ್ ಹಿಯರಿಂಗ್ ಸೆಂಟರಿನ ಪರಿಣತೆಯಿಂದ ನಿಮ್ಮ ಶ್ರವಣ ಕೊರತೆಗೆ ಪರಿಪೂರ್ಣ ಪರಿಹಾರ ಸಿಗುತ್ತದೆ.

ದಿ ಸ್ಪೀಚ್ ಅಂಡ್
ಹಿಯರಿಂಗ್ ಸೆಂಟರ್
Web : enrichbangalore.com

ಎಂ.ಎಸ್.ಜೆ. ನಾಯಕ್,
ಆಡಿಯೋಲಾಜಿಸ್ಟ್,
44/1, ಹೆಚ್. ಸಿದ್ದಯ್ಯ ರಸ್ತೆ,
ವಿಲ್ಸನ್‌ಗಾರ್ಡನ್, ಬೆಂಗಳೂರು-27.
ಫೋನ್ : 2237703, 2230903

ಶಬ್ದ ತೀರ



ಹಳಿಗಳ ಮೇಲೆ

1976. ಮುಂಬಯಿಗೆ ಬಂದಿದ್ದ ಹೊಸತು. ಗುಲ್ಜಾರ್‌ರ 'ಮೌಸಮ್' ಜುಬಿಲಿಯಾಗಿತ್ತು. ಅಮಿತಾಬ್‌ನ ಹಾರಾಟ ಎಲ್ಲ ಧಡೂತಿ ಪೋಸ್ಟರುಗಳಲ್ಲೂ ಇತ್ತು. ನಮ್ಮಂಥ 'ಸಣ್ಣ ಪಟ್ಟಣದ ಸೋದರ'ರಿಗೆ ಧೈರ್ಯ ತುಂಬುವ ಸೀದಾಸಾದಾ ಅಮೋಲ್ ಪಾಲೇಕರ್‌ನ 'ಚಿತ್ ಚೋರ್' ಅಂಧೇರಿಯಲ್ಲಿ ನಡೆಯುತ್ತಿತ್ತು. ಅದನ್ನು ನೋಡಿಕೊಂಡು, ಮತ್ತೆ ರೈಲು ಹತ್ತಿ ಮಾಟುಂಗಾಕ್ಕೆ ಬಂದು, ನಡೆದುಕೊಂಡೇ ರವೀಂದ್ರ ನಾಟ್ಯ ಮಂದಿರಕ್ಕೆ ಹೋಗಿದ್ದೆ. ಅಲ್ಲಿ ಬಿ.ವಿ. ಕಾರಂತರ ನಾಟಕೋತ್ಸವವಿತ್ತು. ಆಗಲೇ ತಡವಾಗಿತ್ತು. ಟಿಕೇಟಿರಲಿಲ್ಲ. ಬಿ.ವಿ. ಕಾರಂತರ, ಗಿರೀಶ ಕಾರ್ನಾಡರ ನಾಟಕ ನೋಡಲು ಕನ್ನಡಿಗರ ಜತೆ ಹಿಂದಿ ಚಿತ್ರರಂಗದ ತಾರೆಗಳೆಲ್ಲ ಕಿಕ್ಕಿರಿದಿದ್ದವು. ಒಂದು ಬಣ್ಣದ ಲುಂಗಿಯನ್ನು ಕ್ರಾಸ್ ಮಾಡಿ ಕುತ್ತಿಗೆಗೆ ಕಟ್ಟಿಕೊಂಡು (ಆಗಿನ ಫ್ಯಾಶನ್ ಅದು) ಬಂದಿದ್ದ ಸ್ಮಿತಾ ಪಾಟೀಲ್, ಶ್ಯಾಂಬೆನಗಲ್‌ರ ಹಿಂದೆ ಇದ್ದಳು. ಆಗಷ್ಟೆ ಕೆತ್ತಿದ್ದ ಚೂಪಾದ ಪೆನ್ಸಿಲ್‌ನಂತೆ ಕಾಣುತ್ತಿದ್ದ ಆಕೆಯನ್ನು ಬಿಟ್ಟು ಮತ್ತೆಲ್ಲೂ ನೋಡುವುದೂ ಕಷ್ಟಸಾಧ್ಯವಿತ್ತು. ಮೂರನೆಯ ಗಂಟೆ ಆಯಿತು. ನಸೀಬವಂತರೆಲ್ಲರೂ ರಂಗಭವನವನ್ನು ಹೊಕ್ಕರು. 'ಜೋಕುಮಾರ ಸ್ವಾಮಿ' ಒಳಗೆ ಶುರುವಾಯ್ತು.

ಟಿಕೇಟು ಸಿಗದ ನಾನು ಹತಾಶನಾಗಿ ಕೆಲ ಹೊತ್ತು ಹೊರ ನಿಂತು, ನಂತರ ಮತ್ತೆ ಮಾಟುಂಗಾ ಸ್ಟೇಷನ್‌ನತ್ತ ಹೆಜ್ಜೆ ಹಾಕತೊಡಗಿದೆ. ನಾಡು ಬಿಟ್ಟು ಈ ಮಹಾನಗರದಲ್ಲಿ ಉದ್ಯೋಗ ಅರಸುತ್ತಿರುವವನನ್ನು ಅರಸಿ ಬಂದ



ಕನ್ನಡ ನಾಟಕವನ್ನು ನೋಡಲಾಗದ ನೋವು, ಅದರ ಜತೆಗೇ ಬಂದ ಉಡಾಫೆ, ಸಿಟ್ಟು ಎಲ್ಲ ನಡಿಗೆಯಲ್ಲಿದ್ದವು.

ಮಾಟುಂಗಾ ಸ್ಟೇಷನ್ನಿಗೆ ಬಂದಾಗ ಅಲ್ಲಿಯ ಟಿಕೆಟ್ ಕೌಂಟರಿನಲ್ಲಿ ಸಣ್ಣ ಕ್ಯೂ ಇತ್ತು. ಅಷ್ಟೇ ಸಣ್ಣದಾದ ಮಳೆಯೂ ಕತ್ತಲಲ್ಲಿ ಜಿನುಗುತ್ತಿತ್ತು. ಪ್ಯಾಂಟು, ಶರ್ಟು ತೊಟ್ಟುಕೊಂಡವನೊಬ್ಬ, ತುಸು ದೂರ, ನಸುಗತ್ತಲಿನಲ್ಲಿ, ಕುಡಿದವನಂತೆ ವಿಚಿತ್ರ ಸದ್ದಿನಲ್ಲಿ ಸಣ್ಣಗೆ ರೋದಿಸುತ್ತ ಬಿದ್ದುಕೊಂಡಿದ್ದ. ನನ್ನ ಸರದಿ ಬಂತು, ಟಿಕೇಟು ತಗೊಂಡೆ. ಚಿಲ್ಲರೆ ಪರಿಶೀಲಿಸಿದೆ. ಇನ್ನೇನು ಸೇತುವೆ ಹತ್ತಬೇಕು ಅಷ್ಟರಲ್ಲಿ ಗಣಗಣ ಗಂಟೆ ಬಾರಿಸುತ್ತ ಮುನಿಸಿಪಾಲಿಟಿಯ ಅಂಬ್ಯುಲನ್ಸ್ ಬಂದು ನಿಂತಿತು. ಅರೇ ಏನಾಯಿತು ಅನ್ನುವಷ್ಟರಲ್ಲಿ ಇಬ್ಬರು ಖಾಲಿ ಸ್ಟ್ರೆಚರ್ ಹೊತ್ತುಕೊಂಡು ಬಂದರು. ಮತ್ತು ಯಾರನ್ನು ನಾನು ಕುಡಿದು ಬಿದಿದ್ದ ಎಂದು ತಿಳಿದಿದ್ದೆನೋ ಅವನನ್ನು ಎತ್ತಿ ಸ್ಟ್ರೆಚರ್‌ಗೆ ಹಾಕಿ, ಧಪ ಧಪ ಓಡುತ್ತ ಅಂಬ್ಯುಲನ್ಸ್‌ಲ್ಲಿ ಹಾಕಿದರು. ಅವನ ಅತಿ ಕ್ಷೀಣ ಕೂಗು ಹಾಗೇ ಇತ್ತು. ಸ್ಟ್ರೆಚರ್ ತಳ್ಳಿದವರು, 'ಜಲ್ದೀ ಜಲ್ದೀ' ಎಂದು ಈ ಕಡೆಗೇ ಕೂಗುತ್ತಿದ್ದರು. ಅಷ್ಟರಲ್ಲಿ ನನ್ನ ಪಕ್ಕದಲ್ಲಿಂದ ಒಬ್ಬ, ಕೈಲೊಂದು ಕಾಲು ಹಿಡಿದು ಓಡುತ್ತ ಹೋಗಿ ಕಾಲನ್ನು ಆ ಸ್ಟ್ರೆಚರಿನ ಜತೆಗೇ ಇಟ್ಟ. ಹೌದು, ತೊಡೆಯ ಬಳಿ ಕತ್ತರಿಸಿದ ಅಖಂಡ ಕಾಲು! ಆ ಕಾಲಿಗೆ ಜೀನ್ಸ್‌ನಂಥ ಪ್ಯಾಂಟು ಇತ್ತು. ಬೂಟು ಇತ್ತು. ಬೂಟಿಗೆ ಲೇಸು ಇತ್ತು. ಅದು ಕಟ್ಟಲ್ಪಟ್ಟಿತ್ತು.

ನೋಡಿದ್ದು ಒಳ ತಾಗಲು ಹೆಚ್ಚು ವೇಳೆ ಬೇಕಾಗಲಿಲ್ಲ. ದಿನಕ್ಕೊಂದರಂತೆ ಘಟಿಸುವ ಲೋಕಲ್ ರೈಲಿನ ಅಪಘಾತದ ಗಾಯಾಳು ಆತ. ಮುಂಬಯಿ ಭಾಷೆಯಲ್ಲಿ ಅವನಿನ್ನೂ 'off' ಆಗಿಲ್ಲ ಅಷ್ಟೆ. ಇನ್ನೂ 'on' ಇದ್ದಾನೆ.

ಅದಕ್ಕೇ ಈ ಓಡಾಟ, ಈ 'ಜಲ್ದಿ'. ಆ ಕಾಲು, ಅದಕ್ಕಂಟಿದ ಬೂಟು, ಲೇಸು ಎಲ್ಲ ಅವನ ಪಕ್ಕವೇ ಈಗ ಆ ಸ್ಟ್ರೆಚರಿನಲ್ಲಿವೆ. ಅಂಬ್ಯುಲೆನ್ಸ್ ಬಾಗಿಲು ಮುಚ್ಚಿಕೊಂಡು ಗಣಗಣ ಗಂಟೆ ಬಾರಿಸುತ್ತ, ಹೊರಳಿ ಹೆಡ್‌ಲೈಟ್‌ಗಳಿಂದ ಸುತ್ತಲನ್ನೂ ಒಮ್ಮೆ ಬಾಚಿಕೊಂಡು ಹೊರಟುಹೋಯಿತು.

ಆ ರಾತ್ರಿ, ಸ್ಮಿತಾ ಪಾಟೀಲ್, ನೀಲಿ ಪ್ಯಾಂಟಿನ ಆ ಒಂಟಿ ಬೂಟುಗಾಲು, ಗೋರಿ ತೇರಾ ಗಾಂವ್ ಬಡಾ ಪ್ಯಾರಾ... ಗಳ ವಿಚಿತ್ರ ಕನಸು ಮೇಲೋಗರ. ಕನ್ನಡ, ಕಾರಂತರ ಕಂಜರಿ, ನಾಟಕ ಯಾವುದೂ ಬಳಿ ಸುಳಿಯಲಿಲ್ಲ.

ಇದಾಗಿ ಈಗ 25 ವರುಷವಾಗಲು ಬಂದಿದೆ. ಆ ದಿನ ಆಸ್ಪತ್ರೆಯಲ್ಲಿ ಆ ಕಾಲು ಆ ದೇಹಕ್ಕೆ ಮತ್ತೆ ಜೋಡಿಸಲ್ಪಟ್ಟಿತೆ, ಗೊತ್ತಿಲ್ಲ. ಆದರೆ ಈಗಲೂ ಅದು ನನ್ನನ್ನು ಬಿಟ್ಟಿಲ್ಲ. ನನ್ನ ಜತೆ ನಡೆಯುತ್ತ, ಓಡುತ್ತ ಬಂದಿದೆ. ಆ ಪ್ಯಾಂಟಿನ ಬಣ್ಣದ ನೀಲಿ ನನಗಿನ್ನೂ ಸ್ಪಷ್ಟವಿದೆ. ಆ ನೀಲಿ ಬಣ್ಣದ ಒಂದಾದರೂ ಪ್ಯಾಂಟು ನನ್ನ ಬಳಿ ಇರುತ್ತದೆ. ಬಿಳಿ ಕ್ಯಾನ್‌ವಾಸ್ ಥರದ ಆ ಬೂಟೂ ನನ್ನ ಬಳಿ ಇರುತ್ತದೆ. ಮಹಾನಗರದ ಮೊದಲ ಪಾಠದ ರೂಪಕದಂತೆ ಅದು ನನ್ನ ಜತೆಗೇ ಉಳಿಯುತ್ತದೆ.

ಕಳೆದ ಮೂವತ್ತು ವರ್ಷಗಳಲ್ಲಿ ನಾನು ನೋಡುತ್ತ ಬಂದ ಸ್ಮಿತಾ ಪಾಟೀಲಳ ಚಿತ್ರಗಳಲ್ಲಿ ಅದು ಇದೆ. ಪ್ಲಾಟ್‌ಫಾರ್ಮುಗಳ ಮೇಲೆ, ಬಸ್‌ಸ್ಟಾಂಡುಗಳಲ್ಲಿ, ಆಸ್ಪತ್ರೆಯ ವಾರ್ಡುಗಳಲ್ಲಿ ಕಾಲಿಲ್ಲದೆ ಓಲಾಡುವ ಬದ್‌ನಸೀಬರನ್ನು ಕಂಡಾಗ-ಆ ಕಾಲು ಊರುಗೋಲಾಗಿ ನನ್ನನ್ನು ಹಿಡಿದಿದೆ.

ಮೂರು ವರುಷಗಳ ಹಿಂದೆ ನನ್ನ ಹತ್ತಿರದ ಹಿರಿಯ ಸಂಬಂಧಿಯೊಬ್ಬರ ಕಾಲಿನ ಹಿಮ್ಮಡಕ್ಕೆ ಡಯಾಬಿಟಿಕ್ ಗಾಯವಾಗಿ-ಇನ್ನೇನು ಕಾಲು ಕೈಬಿಟ್ಟಂತೆಯೇ ಎಂದು ನಾವೆಲ್ಲ ಹೆದರಿದ್ದಾಗ-ನಾನು ಮನದುಂಬಿ ನೆನೆದದ್ದು ಆ ಕಾಲನ್ನು. ಅವರು ಈಗ ಸುಖರೂಪವಾಗಿ ನಡೆಯುತ್ತಿದ್ದಾರೆ.

ನನ್ನನ್ನು 'off' ಆಗದಂತೆ ಕಾದಿರುವ ಅಕ್ಕರೆಯ ಒಂಟಿ ಬೂಟುಕಾಲೇ, ದಯವಿಟ್ಟು ನನ್ನ ಕೈಬಿಡಬೇಡ.

-ಜಯಂತ ಕಾಯ್ಕಿಣಿ

jayantkaikini@vsnl.net



ಸರಸ್ವತಿ ದೇವಿ ಗೌಡರ

ಹೂವಿನ ದಂಡೆ



'ಏಳು ರತ್ನಕ್ಕಾ, ತಂಗಿಗೆ ಸೀರೆ ಉಡಿಸು, ಉಡಿ ತುಂಬು', 'ಗಂಧದ ಬಟ್ಟಲು ತಂದೀರೋ ಇಲ್ಲವೋ, ಈಗಿನ ಕಾಲದ ಹುಡಿಗೇರು ನೀವು, ಸ್ನೋ ಪಾವಡರ ಆದರ ತೀರಿತು. ಮುತ್ತೈದಿ ಮಕ್ಕಳು ಶುಭ ಕಾರೇದಾಗ ಮುಂಗೈಗೆ ಗಂಧ ತೀಡಿ ಹಚ್ಚಿಕೋಬೇಕು.' 'ಹೌದೇಳವ್ವಾ ನಿನ್ನ ಶಾಸ್ತ್ರ ಬಹಳ; ಸ್ನೋ-ಪೌಡರೇನು, ಗಂಧವೇನು, ಎಲ್ಲ ಅಲಂಕಾರದ ಸಾಮಾನು, ಒಂದೊಂದು ಕಾಲಕ್ಕೆ ಒಂದೊಂದು ರೀತಿ.' 'ವಾದ ಯಾಕ ಹಾಕತೀರೇ? ಬೆಳ್ಳೀ ಬಟ್ಟಲು ತುಂಬ ಗಂಧಾ ತೀಡಿ ತಂದು ಇಟ್ಟೇನಿ. ಎಷ್ಟು ಬೇಕಾದಷ್ಟು ಹಚ್ಚಿರಿ'... ಕೂಡಿದ ಹೆಣ್ಣುಮಕ್ಕಳು ಒಬ್ಬೊಬ್ಬರು ಒಂದೊಂದು ರೀತಿ ಸಲಹೆ, ಸೂಚನೆ ಕೊಡುತ್ತಿದ್ದರು. ದೇಸಾಯರ ಮನೆಯಲ್ಲಿ ಇಂದು ಗದ್ದಲವೇ ಗದ್ದಲ. ದೇಸಾಯರ ನಡುವಿನ ಸೊಸೆ ಚೊಚ್ಚಲ ಬಸುರಾಗಿರುವಳು. ಎರಡು ತಿಂಗಳ ಹಿಂದೆಯೇ ತವರು ಮನೆಯುವರು ಬಂದು ಹೂ ಮುಡಿಸಿ ಹೋದರು. ಆಗಿನಿಂದ ಔತಣಗಳ ಸುರಿಮಳೆ ನಡೆದಿದೆ.

ಬೆಳದಿಂಗಳ ಊಟಕ್ಕೆ ಕರೆದು ಒಬ್ಬರು ಕುಬಸಾ ಮಾಡಿದರು, ತೋಟದಲ್ಲಿ ವನವಿಹಾರವನ್ನು ಏರ್ಪಡಿಸಿದರು ಇನ್ನೊಬ್ಬರು; ಮನೆಯ ಆವರಣದಲ್ಲಿಯೇ ತೂಗುಮಂಚ ಹಾಕಿ ಒಂದು ಸೊಬಗಿನ ಸಂಜೆ ಮನೆಗೆ ಬಂದ ಬಂಧುಗಳೊಬ್ಬರು, ಗರ್ಭಿಣಿಯ ಬಯಕೆಗಳನ್ನು ತೀರಿಸಿದರು; ನದೀ ತೀರದ ಊರಿನ ಮಿತ್ರರೊಬ್ಬರು ಮುದ್ದಾಮ ಅಲ್ಲಿಗೆ ಕರೆದೊಯ್ದು, ಹೊಳೆಯ ದಂಡೆಯ ಮೇಲೆ ಸೊಗಸಾದ ಔತಣ ಕೊಟ್ಟರು. ಮನೆಯಲ್ಲಿ ಎಂಥ ಆರೈಕೆ, ಉಪಚಾರ. ಎಲ್ಲರೂ ಹೂವಿನಂತೆ ಸೊಸೆಯನ್ನು ಸೂಕ್ಷ್ಮದಿಂದ ನೋಡಿಕೊಳ್ಳುತ್ತಿದ್ದರು. ಗರ್ಭಭಾರದಿಂದ ಬಳಕುವ ಎಳೆಲತೆ, ಸುಳಿಗಾಳಿಗೆಲ್ಲಿ ಅಳಕುವದೋ ಎಂದು ಕೈ ಆಸರೆ ಕೊಡುತ್ತಿದ್ದರು. ಉಣ್ಣುವ ಪ್ರತಿಯೊಂದು ತುತ್ತು ತಮ್ಮ ವಂಶೋದ್ಧಾರಕನ ಪೋಷಣೆಗೆಂದು, ಮೃದು ಮಧುರವಾದುದನ್ನೇ ಆಣಿಗೊಳಿಸಿ ಕೈತುತ್ತು ಕೊಟ್ಟಂತೆ ಕೊಡುತ್ತಿದ್ದರು. ಇಂದಾದರೊ ಮನೆಯು ಔತಣ, ಸೀಮಂತಕಾರ್ಯ. ಮನೆಯನ್ನೆಲ್ಲಾ ಸಾರಣೆ ಕಾರಣೆಗಳಿಂದ ಶೃಂಗಾರಗೊಳಿಸಿದ್ದರು.

ದಂಪತಿಗಳಿಗೆ ಆರತಿ ಮಾಡಿಸಿಕೊಳ್ಳಲು ಕೂಡಲೆಂದು ನಡುವಿನ ದಿವಾಣಖಾನೆಯಲ್ಲಿ ಸುಂದರವಾದ ಮಂಟಪ ಕಟ್ಟಿ, ಅದರಲ್ಲಿ ಮೆತ್ತನ್ನ ಸುಖಾಸನಗಳನ್ನಿಟ್ಟಿದ್ದರು; ಊರಲ್ಲಿ ಒಬ್ಬರುಳಿಯದಂತೆ ಎಲ್ಲರಿಗೂ ಆಮಂತ್ರಣ ಕೊಡಲಾಗಿತ್ತು. ಸೊಸೆಗೆಂದು ಜರದ ಕಲಾಕುಸುರಿನ ಹಸಿರು ಸೀರೆಯನ್ನು ತಂದಿದ್ದರು, ಮಗನಿಗಾಗಿ ಮಾವನ ಮನೆಯಿಂದ ಸಿಲ್ಕ್ ಷರಟು, ಒಂದೆಳೆಯ ಬಂಗಾರದ ಚೈನು, ಒಂದು ವಜ್ರದ ಉಂಗುರ



ಉಡುಗೊರೆಯಾಗಿ ಬಂದಿದ್ದವು. ಉಡುಗೊರೆಯನ್ನು ತೆಗೆದುಕೊಂಡು ಸ್ವತಃ ಅತ್ತೆ-ಮಾವಂದಿರೇ ಬಂದಿದ್ದರು.

ಆರತಿಯ ವೇಳೆಯಾಯಿತು; ಹೊರಗೆ ಮಂಗಲ ವಾದ್ಯಗಳು ಮೊಳಗತೊಡಗಿದವು; ಮನೆಯ ಹಿರಿಯ ಸೊಸೆ, ತಂಗಿಯನ್ನು ಕೈಹಿಡಿದು ಕರೆದುಕೊಂಡು ಬಂದಳು. ಅತ್ತೆ ಮನೆಯ ಯಜಮಾನಿ, ಮಗನನ್ನು ಮುಂದೆ ಹಾಕಿಕೊಂಡು ಬಂದಳು. ದಂಪತಿಗಳಿಬ್ಬರೂ ಹಸೆ ಇಟ್ಟ ಸುಖಾಸನದ ಮೇಲೆ ಕುಳಿತರು. ರತ್ನಕ್ಕ ತಂಗಿಗೆ ಸೀರೆ ಉಡಿಸಿದಳು. ಮುಂಗೈಗೆ ಗಂಧ ತೀಡಿದಳು, ಹಣೆಗೆ ಕುಂಕುಮ ದೃಷ್ಟಿಬಟ್ಟು ಇಟ್ಟಳು, ಸೊಗಸಾಗಿ ಕಟ್ಟಿ ಬೆಳ್ಳಿಯ ಹರಿವಾಣದಲ್ಲಿ ಇಟ್ಟಿದ್ದ ಮಲ್ಲಿಗೆ ಹೂವಿನ ದಂಡೆಯನ್ನು ಹಗುರವಾಗಿ ಬಿಡಿಸಿ, ಐವರು ಮುತ್ತೈದೆಯರ ಕೈಗೆ ಮುಟ್ಟಿಸಿ ಕಟ್ಟಿದಳು. ಅವಳ ಕೈ ನಡುಗುತ್ತಿತ್ತು, ಶ್ವಾಸ ಜೋರಾಗಿ ಆಡುತ್ತಿತ್ತು. ಎಷ್ಟು ತಡೆದರೂ ಕಣ್ಣೀರು ಕಟ್ಟೆಯೊಡೆಯುವುದರಲ್ಲಿತ್ತು. ಕಣ್ಣಲ್ಲಿ ಏನೋ ಬಿದ್ದ ನೆಪಮಾಡಿ, ಸೆರಗಿನಿಂದ ಮೆಲ್ಲಗೆ ಒರೆಸಿಕೊಂಡು, ದುರ್ದೈವಿ ಪ್ರಾಣಿ ಕ್ಷಣದಲ್ಲಿ ಸಾವರಿಸಿಕೊಂಡಳು. ಖಣವನ್ನು ಮಡಸಿ ಕೈಯಲ್ಲಿ ಕೊಟ್ಟು, ಉಡಿ ತುಂಬಿದಳು. ಇದಾದ ಮೇಲೆ ಮಾವನ ಮನೆಯಿಂದ ಬಂದ

ಉಡುಗೊರೆಯನ್ನು ಮೈದುನನಿಗೆ ಕೊಟ್ಟು ಕೊರಳಲ್ಲಿ ಹೂವಿನ ಮಾಲೆ ಹಾಕಿದಳು. ದೃಷ್ಟಿಯ ಬಟ್ಟು ಇಟ್ಟು ಇಬ್ಬರಿಗೂ ಆರತಿ ಮಾಡಿದಳು. ಮೈದುನನ ಮುಖದಲ್ಲಿ ಮುಗುಳುನಗೆ ಸೂಸಿತು. ತಂಗಿ ಲಜ್ಜೆಯಿಂದ ತಲೆಬಾಗಿದಳು. ಅವಳು ಮುಖವನ್ನು ಮೇಲಕ್ಕೆತ್ತುವ ಕ್ಷಣದಲ್ಲಿ ಅಕ್ಕ ಅಲ್ಲಿಂದ ಮೆಲ್ಲನೆ ಜಾರಿದ್ದಳು. ಭಾವನ ಹೆಸರು ಕೇಳಬೇಕೆಂದಿದ್ದ ಅವಳ ಅಪೇಕ್ಷೆ ಅಲ್ಲಿಯೇ ಉಳಿಯಿತು. ಹೆಣ್ಣುಮಕ್ಕಳು ಹುಯಿಲೆಬ್ಬಿಸಿದರು. 'ರತ್ನಕ್ಕಾ, ಹೆಸರು ಯಾಕ ಹೇಳಲಿಲ್ಲ ದೇಸಾಯಿಯರದು?' 'ಈಗ ಹೇಳತೀನಲ್ಲಾ, ನೀವ ಹಾಡಗೀಡ ಹೇಳಿರಿ' ಎಂದವಳೇ ಅಲ್ಲಿಂದ ಆ ಬಡಪ್ರಾಣ ಕಾಲ್ತೆಗೆದು, ನೆಟ್ಟಗೆ ತನ್ನ ಕೋಣೆಗೆ ಹೋಗಿ, ಬಾಗಿಲು ಮುಚ್ಚಿಕೊಂಡು ಮಂಚದ ಮೇಲೆ ದೇಹವನ್ನು ಚೆಲ್ಲಿದಳು; ದಿನದಿನವೂ ಪ್ರಯಾಸದಿಂದ ತಡೆಹಿಡಿದಿದ್ದ ಕಣ್ಣೀರು ಕಟ್ಟೆ ಒಡೆಯಿತು; ನೋಡು ನೋಡುವಷ್ಟರಲ್ಲಿ ಸೆರಗು ನೆನೆದಿತು. ಅವಳ ಬಾಳೇ ಒಂದು ಗೋಳಿನ ಕತೆ-ದೈವ! ದುರ್ದೈವ!

ಐದು ವರ್ಷದ ಹಿಂದೆ ನವ ತಾರುಣ್ಯದಿಂದ ತುಂಬಿ ತುಳುಕುತ್ತಿದ್ದ ಅವಳು ಮೊದಲಗಿತ್ತಿಯಾಗಿ ದೇಸಾಯರ ಮನೆಯನ್ನು ಒಂದು ಸುಮುಹೂರ್ತದಲ್ಲಿ ಪ್ರವೇಶಿಸಿದ್ದಳು. ಅವಳ ರೋಮ ರೋಮದಲ್ಲಿ ಉತ್ಸಾಹ ತುಂಬಿ ತುಳುಕುತ್ತಿತ್ತು; ನಿಂಬೆ ಹಣ್ಣಿನಂಥ ಅವಳ ಮೈಬಣ್ಣ ಬಂಗಾರವನ್ನು ನಾಚಿಸುತ್ತಿತ್ತು. ಗಲ್ಲದ ಮೇಲೆ ಗುಲಾಬಿ ಅರಳಿದಂತಿತ್ತು. ಆದರೆ ಅಲ್ಪಾವಧಿಯಲ್ಲಿಯೇ ಆ ಗುಲಾಬಿ ಬಾಡಿತು. ದೇವಪೂಜೆಗೆ ಸಲ್ಲದೆಯೇ ಅವಳ ಜೀವನಪುಷ್ಪ ನಿರ್ಮಾಲ್ಯವಾಯಿತು. ತಮ್ಮಂಥವರ ಮಗ ಹಾಗೆಯೇ ಹೇಗೆ ಉಳಿಯುವುದೆಂದು ಮನೆಯ ಹಿರಿಯರು ಬೇಕಾಗಿ ಈ ಮದುವೆ ಮಾಡಿದ್ದರಲ್ಲದೆ, ನಿಜವಾಗಿ ಮದುವೆಯ ಅಗತ್ಯವೇ ಇರಲಿಲ್ಲ. ಕೈ ಹಿಡಿದ ಪುಣ್ಯಾತ್ಮ, 'ಸೌಭಾಗ್ಯ ರಾತ್ರಿ'ಯ ದಿನವೇ ಹೇಳಿದ, 'ನಾನು ಲಗ್ನಕ್ಕೆ ಅಯೋಗ್ಯ. ನನ್ನ ಮಾತು ಯಾರೂ ಕೇಳಲಿಲ್ಲ. ಮನೆತನದ ಮರ್ಯಾದೆ ಕಳೆಯಬೇಡ. ಬಾಯಿ ಮುಚ್ಚು ಎಂದು ತಂದೆ ಗದರಿಸಿದರು. ತಾಯಿಗೆ ಮಗನ ಮದುವೆ ಮಾಡುವ, ಸೊಸೆಯನ್ನು ತರುವ, ಗಂಡಿನ ತಾಯಿಯಾಗಿ ಹಂದರದಲ್ಲಿ ಓಡಾಡುವ ಚಪಲವಾಗಿತ್ತು. ಅವಳೂ ನನ್ನ ಮಾತು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ನಿನ್ನ ದೈವ' ಎಂದು ಎಲ್ಲರ ತಪ್ಪನ್ನೂ ಅವಳ ದೈವದ ಮೇಲೆ ಹಾಕಿ ನಿಟ್ಟುಸಿರುಗರೆದ. ಅವಳ ತಲೆಯ ಮೇಲೆ ಕಲ್ಲು ಹಾಕಿದಂತಾಯಿತು.

ತಲೆಯನ್ನು ಗಟ್ಟಿಯಾಗಿ ಹಿಡಿಯಹೋದವಳು ತಾನೇ ಸ್ಮೃತಿ ತಪ್ಪಿ ಬಿದ್ದುಬಿಟ್ಟಳು. ಎಚ್ಚರವಾದಾಗ, ಕಳಿಸಲೆಂದು ಮೊದಲಗಿತ್ತಿಯೊಡನೆ ಬಂದಿದ್ದ ಅಕ್ಕ, ತೊಡೆಯ ಮೇಲೆ ಹಾಕಿಕೊಂಡು ಗಾಳಿ ಹಾಕುತ್ತಿದ್ದಳು. ಕಣ್ಣೀರು ಹರಿ



ತಮ್ಮ ಕಥಾಸಂಗ್ರಹಕ್ಕೆ 'ಅಲ್ಪ ವಿರಾಮ' ಎಂಬ ಕುತೂಹಲಕಾರಿ ಶೀರ್ಷಿಕೆ ಕೊಟ್ಟ ಸರಸ್ವತಿ ಗೌಡರ (ಜನನ 1923) ಮಹಿಳೆಯರ ಸಮಸ್ಯೆಗಳ ಬಗ್ಗೆ ತೀವ್ರವಾದ ಅರಿವು ಮೂಡಿಸಿಕೊಂಡು ವಿಚಾರಪೂರ್ಣ ಹಾಗೂ ಪರಿಣಾಮಕಾರಿ ಬರವಣಿಗೆಯಲ್ಲಿ ನಿರಾತಂಕವಾಗಿ ತೊಡಗಿಕೊಂಡವರು. 'ಈ ಕತೆಗಳನ್ನು ಬರೆದ ಉದ್ದೇಶ ಕೇವಲ ಓದುಗರ ಮನರಂಜನೆಯೊಂದೇ ಆಗಿಲ್ಲ; ಓದಿದ ಮೇಲೆ 'ಅಲ್ಪವಿರಾಮ' ಕೊಟ್ಟು ತಮ್ಮ ಮನಸ್ಸಿನ ಪ್ರತಿಕ್ರಿಯೆಗಳಿಗೆ ಚಾಲನೆ ಕೊಡಲೆಂಬುದೂ ಆಗಿದೆ' ಎಂದು ಬರೆದ ಸರಸ್ವತಿಯವರ ಸಾಮಾಜಿಕ ಕಳಕಳಿ, ಆಶಾವಾದ ಶಕ್ತಿಯುತವಾದದ್ದು. ಆದರೆ ಕತೆಯೊಂದು 'ಮೈದಾಳಲು' ಇವಷ್ಟೇ ಸಾಕೇ... ವರ್ಣನೆಯ ಸೊಬಗು, ಕಥೆ ಹೇಳುವ ಶಾಲೀನತೆಯೂ ಬೇಕೆನ್ನುವುದಕ್ಕೆ ಸರಸ್ವತಿಯವರ ಈ ಕತೆಯೇ ಸಾಕ್ಷಿ.

ಯುತ್ತಿತ್ತು. ಅಕ್ಕತಂಗಿಯರು ತೆಕ್ಕೆಬಿದ್ದು ರಾತ್ರಿಯೆಲ್ಲ ಗೋಳಾಡಿದರು. ಏನಾದರೇನು? ಬಿಡಿಸಲಾಗದ ಬ್ರಹ್ಮಗಂಟು ಎಂದೋ ಬಿದ್ದಿತ್ತು. ಅಕ್ಕನೂ, ''ನಿನ್ನ ದೈವ, ಯಾರ ಕೈಯಲ್ಲೇನಿದೆ! ಯಾರೊಡನೆಯೂ ಏನೂ ಹೇಳಬೇಡ, ಒಳ್ಳೆಯ ರೀತಿಯಿಂದ ಇದ್ದು ಅವ್ವ, ಅಪ್ಪನ ಹೆಸರು ತಾ'' ವೆಂದು ಹೇಳಿ ಊರಿನ ದಾರಿ ಹಿಡಿದಳು. ಅಂದಿನಿಂದ ಇಂದಿನವರೆಗೆ ರತ್ನಾ, ಎದೆಯ ಮೇಲೆ ಕಲ್ಲು ಹೇರಿಕೊಂಡು, ತನ್ನ ದುಃಖವನ್ನು ಒಳಗೊಳಗೇ ನುಂಗುತ್ತ, ಕೊಟ್ಟ ಕೊಂಡ ಮನೆಯ ಹೆಸರನ್ನುಳಿಸಲು ದಿನಗಳೆಯುತ್ತಿದ್ದಾಳೆ. ತವರುಮನೆಗೆ ಹೋದಾಗ, ತಮ್ಮ ತಮ್ಮ ಮನೆಗಳಲ್ಲಿ ಸುಖದಿಂದ ಬಾಳುವೆ ಮಾಡುತ್ತಿರುವ ಬಾಲ್ಯದ ಗೆಳತಿಯರ ವೃತ್ತಾಂತವನ್ನು ಕೇಳಿ ಅವಳು ಮತ್ಸರ ಪಡುವುದಿಲ್ಲ. ಆದರೆ ತನ್ನ ಪಾಲಿಗೇಕೆ ಈ ಎಡೆ ಎಂದು ಖಿನ್ನಳಾಗುವಳು. ಅತ್ತೆಯ ಮನೆಯಲ್ಲಿ ಅವಳ ಪಾಲಿಗಿರುವುದು ದುಡಿತ, ಗಂಡನಿಗೆ ಬೇಡಾದ ಹೆಂಡತಿ, ಗುಂಡಕಲ್ಲಿಗೂ ಬೇಡ ಎಂದು ಗಾದೆಯಿದೆ. ಎಲ್ಲರೂ ಅವಳನ್ನು ಹಕ್ಕಿನಿಂದ ಕೇಳಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವವರೇ; ಅದಕ್ಕೆ ಪ್ರತಿಯಾಗಿ ಒಂದು ಸವಿನುಡಿ ಕೂಡ ಇಲ್ಲ. ಎಲ್ಲರೂ ಹಿಯ್ಯಾಳಿಸುವವರೇ. ಅವನ್ನೆಲ್ಲ ಅವಳು ಸಹಿಸಿದಳು.

ಆದರೆ ನಡುವಿನ ಮೈದುನನ ಲಗ್ನವಾಯಿತು. ಓರಗಿತ್ತಿ ಮನೆಗೆ ಬಂದಳು, ಇಬ್ಬರನ್ನೂ ನಡೆಸಿಕೊಳ್ಳುವಲ್ಲಿಯ ತಾರತಮ್ಯ ಅವಳಿಗೆ ವಿಷಪ್ರಾಯವಾಯಿತು. ಈಗ ಅವಳು ಚೊಚ್ಚಲ ಬಸುರಿಯಾದಾಗಿನಿಂದಂತೂ ಆ ತಾರತಮ್ಯ ಭಾವನೆ ತುದಿ ಮುಟ್ಟಿತು. ಅವಳನ್ನು ಉಪಚರಿಸಲಿ, ಆದರೆ ನನಗೇಕೆ ಈ ತಿರಸ್ಕಾರ? ರತ್ನಳ ತಲೆ ವಿಚಾರ ಚಕ್ರದೊಡನೆ ತಿರುಗತೊಡಗಿತು. ತಾಯಿಯಾಗಬೇಕೆಂಬ ಅಪೇಕ್ಷೆ ಯಾವ ಹೆಣ್ಣಿಗಿರುವುದಿಲ್ಲ. ಅದರಲ್ಲಿ ರತ್ನಳಿಗಂತೂ ಚಿಕ್ಕಂದಿನಿಂದ ಮಕ್ಕಳ ಹುಚ್ಚು ಬಹಳ. ಗೊಂಬೆಯಾಟವಾಡುವಾಗ ಅವಳು ಎಷ್ಟೋ ಸಾರೆ ತಾಯಿಯಾಗಿದ್ದಳು. ಮುಂದೆ ದೊಡ್ಡವಳಾದಳು. ಲಗ್ನವಾಯಿತು. ಅತ್ತೆಯಮನೆಗೆ ಹೊರಟಾಗ ಹಿರಿಯ ಮುತ್ತೈದೆಯರು, 'ಲಗೂನ ಮಗನ ತಾಯಿಯಾಗು' ಎಂದು ಹರಸಿದರು. ಆ ಆಶೀರ್ವಚನವನ್ನು ಕೇಳಿ ಅವಳ ಮೈ ನವಿರೆದ್ದಿತು. ಮುಂದೆ ವಸ್ತುಸ್ಥಿತಿಯ ಅರಿವಾದ ಮೇಲೆ ಆ ನುಡಿ ಅವಳಿಗೆ ಶಾಪವೆನಿಸತೊಡಗಿತು. ಹೂವಿನ ದಂಡೆಯೆಂದರೆ ಅವಳಿಗೆ ಪಂಚಪ್ರಾಣ, ಹಸಿರು ಬಳೆ, ಹಸಿರು ಸೀರೆ, ಕುಪ್ಪಸ, ಹೂವಿನ ದಂಡೆಯಿಂದೊಪ್ಪುವ ಗರ್ಭಿಣಿಯರನ್ನು ನೋಡಿದರೆ ಅವಳಿಗೆ ಬುದ್ಧಿ ತಿಳಿಯಹತ್ತಿದಾಗಿನಿಂದಲೂ ಅಕ್ಕರೆ. ತಾನೂ ಆ ರೀತಿ ಅಲಂಕೃತಳಾಗಬೇಕೆಂಬ ಆಶೆ. ಹೂವಿನ ದಂಡೆ! ಸೀರೆ, ಕುಪ್ಪಸ, ಬಳೆ ಇವುಗಳನ್ನು ಹಾಗೆಯೇ ಒಂದು ವೇಳೆ ಧರಿಸಬಹುದು. ಆದರೆ ಹೂವಿನ ದಂಡೆ! ಇದ್ದಕ್ಕಿದ್ದಂತೆಯೇ ಅವಳಿಗೆ ಸ್ವಲ್ಪ ಜೊಂಪು ಹತ್ತಿತು. ಕನಸು ಕಾಣತೊಡಗಿದಳು; ತನ್ನ ಸ್ಮಶಾನಯಾತ್ರೆಗೆ ಅಣಿಮಾಡತೊಡಗಿದ್ದಾರೆ. ಮುತ್ತೈದೆಯರು ಒಬ್ಬರ ಮೇಲೊಬ್ಬರು ಬಿದ್ದು ತನಗೆ ದಂಡೆ ಕಟ್ಟುತ್ತಿದ್ದಾರೆ.

''ಏ ರತ್ನವ್ವಾ ಎಲ್ಲಿ ಹೋದಿ. ಮನ್ಯಾಗ ಇಷ್ಟುಮಂದಿ ಬಂದಾರು; ಕರ್‍ಯೋದು, ಕೊಡಸೋದು ಏನ ಇಲ್ಲ. ಬುದ್ಧಿ ಇದ್ದರೆ ಹೌದಲ್ಲೋ; ಸುಟ್ಟಮೋರಿ ಮಾಡಿಕೊಂಡು ಎಲ್ಲಿ ಅವಲಕ್ಷಣ ಮನಿಗೆ ಬಂತೋ. ಏ ರತ್ನವ್ವಾ...'' ಅತ್ತೆಯ ಕರ್ಕಶ ಸ್ವರಕ್ಕೆ ರತ್ನಾ ಬೆದರಿ ಬಿದ್ದಳು. ಕ್ಷಣಕಾಲ ಏನೂ ತಿಳಿಯಲಿಲ್ಲ. ಕಣ್ಣೊರಸಿಕೊಂಡು ಕೆಳಗೋಡಿದಳು.

ಹೆಣ್ಣುಮಕ್ಕಳ ಸುಖಕ್ಕಾಗಿ, ಹಿತರಕ್ಷಣೆಗಾಗಿ ಭಾರತದಲ್ಲಿ ಇದೀಗ ಆಕಾಶ ಪಾತಾಳ ಒಂದಾಗುತ್ತಿದೆ. ಆದರೆ ವ್ಯಕ್ತಿಗೊಂದು ಪರಿಸ್ಥಿತಿ. ಸಮಾಜದ ವಿಚಾರ ಪ್ರಣಾಲಿ ಒಳ್ಳೇ ದಾರಿ ಹಿಡಿಯದ ಹೊರತು ಯಾರು ಏನು ಮಾಡಲಿಕ್ಕೆ ಸಾಧ್ಯ?


ಅಟೆನ್ಷನ್ ಪ್ಲೀಸ್ !

ಕಾಗದದ ದೋಣಿ ಯಾರು ಯಾರಿಗೂ ಬರೆಯಬಹುದಾದ ಖಾಸಗಿ ಬಹಿರಂಗ ಪತ್ರ! ವ್ಯಕ್ತಿ-ವ್ಯಕ್ತಿ(ಗಳ) ಸಂಬಂಧದಲ್ಲಿ ಮೂಡುವ ಭಾವವಲ್ಲರಿ, ಮೊಳೆಯುವ ದುಗುಡ, ದುಮ್ಮಾನ, ಈರ್ಷೆ, ಅಸಹನೆ, ಮೆಚ್ಚುಗೆ, ಪರಿತಾಪ, ಪಶ್ಚಾತ್ತಾಪಗಳೆಲ್ಲದರ ಹದವಾದ ಅಭಿವ್ಯಕ್ತಿಗೆ ಈ ವೇದಿಕೆ . ಪ್ರೇಮ ನಿವೇದನೆಗೆ ಜಾಗವಿದೆಯೇ ಎಂದು ಕೇಳಿದವರಿಗೆ ಉತ್ತರ, 'Sorry'!




ನೀವು ಇಷ್ಟಪಟ್ಟ ಕತೆ, ಕಾದಂಬರಿ, ಸಿನಿಮಾ, ನಾಟಕ, ದೃಷ್ಟಾಂತಗಳ ಸಾರವನ್ನೇ ಚುಟುಕಾಗಿ ಹೇಳಿ. ಒಂದು ಪುಟ ಮೀರದಿರಲಿ. ವಿಮರ್ಶೆ, ವರ್ಣನೆ ಬೇಡ. ಯಾಕೆ ಅದು ನಿಮ್ಮನ್ನು ಸೆಳೆಯಿತು ಎಂಬುದು ನೀವು ಸಂ'ಗ್ರಹಿಸಿದ' ಜಾಣ್ಮೆಯಲ್ಲೇ ಹೊಳೆಯುವಂತಿರಬೇಕು.

ಭಾವ ಬಿಂದು ಕತೆ-ಕವಿತೆಗಳ ಕಕ್ಷೆಗೆ ಬಾರದ ಪುಟ್ಟ ಕಾವ್ಯಮಯ ಸಂವೇದನಾಶೀಲ ಲಹರಿಗಳಿಗೆ, ಹರಳುಗಟ್ಟುವ ಭಾವೋದ್ದೀಪಕ ನುಡಿಚಿತ್ರಗಳಿಗೆ ಈ ಅಂಕಣ.



ನವಿರಾದ ಲಲಿತಪ್ರಬಂಧ, ವ್ಯಕ್ತಿಚಿತ್ರ, ಸ್ಮೃತಿಚಿತ್ರ, ವೈನೋದಿಕ ನಿಬಂಧಗಳನ್ನು ಈ ಅಂಕಣಕ್ಕೆ ಕಳಿಸಬಹುದು. ಬರಹ ಐದು ಪುಟ ಮೀರದಿರಲಿ.



ಸಾಹಿತ್ಯಿಕ, ಸಾಂಸ್ಕೃತಿಕ, ಆಸಕ್ತಿಯ ಹೊಸ ಹೊಳಹುಗಳಿಗೆ ಇಲ್ಲಿ ಸ್ವಾಗತ. ಬರಹ ನಿಖರವಾಗಿ, ಸ್ಪಷ್ಟವಾಗಿ, ಮೂರು ಪುಟ ಮೀರದಂತಿರಲಿ.



ಐದಾರು ಪ್ರಾತಿನಿಧಿಕ ಪದ್ಯಗಳನ್ನು ಕಳಿಸಿ. ನುಡಿಗಟ್ಟು, ನೋಟ, ಪ್ರತಿಮೆ, ಪರಿಣಾಮಗಳಲ್ಲಿ ಹೊಸತನವಿರಲಿ. ಹೂ, ಮರಗಿಡಬಳ್ಳಿ, ಹುಣ್ಣಿಮೆ/ಪ್ರೇಮ ವ್ಯಾಖ್ಯಾನಗಳು ಒತ್ತಟ್ಟಿಗಿರಲಿ!



ಪ್ರಯೋಗಶೀಲ, ಹೊಸ ಕಾಣ್ಕೆಯ, ಓದಿಸಿಕೊಂಡು ಹೋಗುವ ಗುಣ ಧಾರಾಳವಾಗಿ ಹೊಂದಿರುವ ಕತೆಗಳಿಗೆ ಸ್ವಾಗತ. ಎಂಟು ಪುಟ ಮೀರದಂತಿರಲಿ.

ಬರಹದ ಜೊತೆ ದಯಮಾಡಿ ಕಡ್ಡಾಯವಾಗಿ ನಿಮ್ಮ ಭಾವಚಿತ್ರವನ್ನಿಡಿ. ಸ್ವವಿಳಾಸದ ಅಂಚೆ ಕಾರ್ಡ್ ಇಟ್ಟಲ್ಲಿ ಮೂರು ತಿಂಗಳೊಳಗಾಗಿ ಸ್ವೀಕೃತಿ-ಅಸ್ವೀಕೃತಿಯ ಬಗ್ಗೆ ತಿಳಿಸಲಾಗುವುದು.

ಕಲಾವಿದರ ಗಮನಕ್ಕೆ

ನಮ್ಮ ಕತೆ-ಕವನ-ಬರಹಗಳಿಗೆ ಕಲಾವಿದರು ಸ್ವಯಂಸ್ಫೂರ್ತಿಯಿಂದ ರಚಿಸಿದ ಚಿತ್ರಗಳನ್ನೇ ಬಳಸುತ್ತ ಬಂದಿದ್ದೇವೆ. ಇದನ್ನು ಓದುಗ-ಲೇಖಕ-ಕಲಾವಿದರ ಬಳಗವೂ ಮೆಚ್ಚಿ ಸ್ವಾಗತಿಸಿದೆ. ಹಾಗೆಯೇ 'ಭಾವನಾ'ದ ಮುಖಪುಟಕ್ಕೆ ಪ್ರತಿಬಾರಿ ಒಳ್ಳೆಯ ಕಲಾಕೃತಿಯೊಂದನ್ನು ನೀಡುತ್ತಿರುವ ನಮ್ಮ ಅಭ್ಯಾಸ ನಿಮಗಿಷ್ಟವಾಗಿದೆ. ಇದನ್ನು ಕುರಿತಂತೆ 'ಭಾವನಾ', ನಾಡಿನ ಕಲಾವಿದರಿಂದ ಉತ್ತಮ ಪೇಂಟಿಂಗ್, ವ್ಯಕ್ತಿಚಿತ್ರ, ವ್ಯಂಗ್ಯಚಿತ್ರ, ರೇಖಾಚಿತ್ರ, ಛಾಯಾಚಿತ್ರಗಳನ್ನು ಆಹ್ವಾನಿಸುತ್ತಿದೆ. A4 ಸೃಜನ ಕಲಾಕೃತಿ, ಪೇಂಟಿಂಗ್ (ಜಲವರ್ಣ, ತೈಲವರ್ಣ)ಗಳನ್ನು ದಯವಿಟ್ಟು ಕಳಿಸಿಕೊಡಿ, ಯಥೋಚಿತವಾಗಿ ಬಳಸಲಾಗುವುದು. ಮುಖಪುಟ, ಒಳಪುಟಗಳಲ್ಲಿ ಬಳಸಿದ ಎಲ್ಲ ಚಿತ್ರಗಳಿಗೂ ಸೂಕ್ತ ಸಂಭಾವನೆ ಉಂಟು.

ನಮ್ಮ ವಿಳಾಸ: 'ಭಾವನಾ' ನಂ. 38, ಎ.ಎಂ. ರಸ್ತೆ, ಕಲಾಸಿಪಾಳ್ಯಂ ನ್ಯೂ ಎಕ್ಸ್‌ಟೆನ್‌ಷನ್, ಬೆಂಗಳೂರು - 560 002



ಸುಂಟರಗಾಳಿ

ನೂರಾರು ಮೈಲಿ ದೂರದ, ರಣಗುಟ್ಟುವ ಬಿಸಿಲಿನ ಮರುಭೂಮಿಯಲ್ಲಿ ಆ ಗಂಡ ಹೆಂಡತಿಯರ ವಾಸ. ಇದ್ದ ಒಬ್ಬನೇ ಸುಪುತ್ರ ಚಿಕ್ಕವನಿರುವಾಗಲೇ ವಿದ್ಯಾಭ್ಯಾಸ, ಉದ್ಯೋಗ, ಗಳಿಕೆ ಎಲ್ಲವನ್ನೂ ಅರಸಿ ದೂರ ಹೋಗಿದ್ದಾನೆ. ಸಾಕಷ್ಟು ಸಂಪತ್ತು ಗಳಿಸಿಕೊಂಡು ಬರುತ್ತೇನೆಂದು ಹೇಳಿ ಹೋಗಿದ್ದಾನೆ.

ಗಂಡ ಹೆಂಡತಿಯರು ಮಧ್ಯವಯಸ್ಕರು. ಇವರಿಗೂ ಇಲ್ಲಿ ಉದ್ಯೋಗವಿದೆ. ಅದೇನೆಂದರೆ ಒಂಟೆಯ ಮೇಲೆ ಹೋಗುವ ವ್ಯಾಪಾರಿಗಳು ದಣಿವಾರಿಸಿಕೊಳ್ಳಲು ಇವರ ಮನೆಯಲ್ಲಿ ಇಳಿದುಕೊಳ್ಳುತ್ತಾರೆ. ಒಂದು ರಾತ್ರಿಯಿದ್ದು, ಬೆಳಿಗ್ಗೆ ಮುಂದೆ ಪಯಣ ಬೆಳಸುತ್ತಾರೆ. ಹೋಗುವಾಗ ಇವರಿಗೆ ಹಣವನ್ನೋ, ದವಸ ಧಾನ್ಯವನ್ನೋ ಕೊಡುವ ವಾಡಿಕೆ. ಇದರಲ್ಲಿ ಈ ದಂಪತಿಗಳ ಉಪಜೀವನ ಸಾಗುತ್ತಿತ್ತು. ದಾರಿಹೋಕರು ಬಂದರೆ ಇವರಿಗೆ ಸಂತೋಷ. ಆದರೆ ತಿಂಗಳುಗಟ್ಟಲೇ ಒಮ್ಮೊಮ್ಮೆ ಒಂಟೆಗಳ ಗಂಟೆಯೇ ಕೇಳುವುದಿಲ್ಲ. ಆಗ ಅವರಿಗೆ ದುಃಖವೆನಿಸುತ್ತದೆ.

ಈ ದುಃಖವೇ ಅವರಿಗೆ ದುರಾಶೆಯನ್ನು ತರುತ್ತದೆ. ವ್ಯಾಪಾರಿಗಳು ನಾಲ್ಕೈದು ಜನ ಇದ್ದಾಗ ಅವರನ್ನು ಮುಗಿಸಿ, ಅವರ ಸಂಪತ್ತನ್ನೆಲ್ಲಾ ದೋಚಿ, ಒಂಟೆಗಳನ್ನು ಮುಂದೆ ಬರುವ ಜಾತ್ರೆಯಲ್ಲಿ ಮಾರುವ ದುಸ್ಸಾಹಸಕ್ಕೆ ಈ ಗಂಡ ಹೆಂಡತಿಯರು ಕೈಹಾಕುತ್ತಾರೆ. ರಾತ್ರಿಕೊಡುವ ಮೃಷ್ಟಾನ್ನ ಭೋಜನದಲ್ಲಿ ವಿಷ ಬೆರೆಸಿ ವ್ಯಾಪಾರಿಗಳಿಗೆ ಉಣಿಸಿ, ಅವರು ಹೆಣವಾದಾಗ ಹುಗಿಯುವ ವ್ಯವಸ್ಥೆ ಮಾಡುತ್ತಾರೆ. ಜಾಗಕ್ಕೇನೂ ಆ ಮರುಭೂಮಿಯಲ್ಲಿ ಕೊರತೆಯಿಲ್ಲವಲ್ಲ!



ಈ ಹೊಸ ಉದ್ಯೋಗದಿಂದಾಗಿ ಈಗ ಅವರು ಬಹು ಶ್ರೀಮಂತರು. ಅವರ ಒಂದೇ ಒಂದು ಕನಸೆಂದರೆ ಮಗ ಮರಳಿ ಬಂದಾಗ, ಅವನ ಅದ್ದೂರಿ ಮದುವೆ, ಆತನಿಗಾಗುವ ಮೊಮ್ಮಕ್ಕಳೊಡನೆ ಆಟ. ಆದ್ದರಿಂದ ಅವನು ಬರುವ ದಾರಿಯನ್ನು ದಿನಾಲು ಕಾಯುತ್ತಾರೆ.

ಒಂದು ಸಂಜೆ ಒಂದು ಒಂಟೆಯ ಮೇಲೆ ಏಕಾಂಗಿಯಾಗಿ ವ್ಯಾಪಾರಿಯೊಬ್ಬ ಬರುತ್ತಾನೆ. ದೂರಿನಲ್ಲಿ ಇವರಿಬ್ಬರಿಗೆ ಸ್ಪಷ್ಟವಾಗಿ ಏನೂ ಕಾಣಿಸುತ್ತಿಲ್ಲ. ಒಂಟೆ ನಿಧಾನವಾಗಿ ಮನೆಯ ಹತ್ತಿರ ಬಂತು. ಆತ ಒಬ್ಬ ಅಪ್ರತಿಮ ಸುಂದರ ಯುವಕ. ಅವನು ಬಂದು ಕೆಳಗಿಳಿದು ಇಬ್ಬರಿಗೂ ಪಾದ ಮುಟ್ಟಿ ನಮಸ್ಕರಿಸುತ್ತಾನೆ. ತಂಪಾದ ಪಾನೀಯದ ಸೇವನೆಯ ನಂತರ, ತಾನು ಜೊತೆಗೆ ತಂದ ಅಮೂಲ್ಯ ಮುತ್ತು, ರತ್ನಗಳನ್ನು, ಬಂಗಾರದ ಒಡವೆಗಳನ್ನು ತೋರಿಸುತ್ತಾನೆ. ಅವನ್ನೆಲ್ಲಾ ನೋಡುವಾಗ ಇವರಿಬ್ಬರಿಗೆ, ಮನಸ್ಸಿನಲ್ಲಿ, ಯಾವಾಗ ಇವನಿಗೆ ವಿಷಪೂರಿತ ಭೋಜನ ಇಕ್ಕುವುದು, ಸತ್ತ ನಂತರ ಯಾವಾಗ ಇವನ ಸಂಪತ್ತನ್ನೆಲ್ಲಾ ಸೂರೆಗೊಳ್ಳುತ್ತೀವೋ ಎಂಬ ಯೋಚನೆ ಹೊಗೆಯಾಡುತ್ತಿರುತ್ತದೆ.

ಆತ ಹೊರಗೆ ಹಾಕಿದ ಮಂಚದ ಮೇಲೆ ಅಡ್ಡಾಗಿದ್ದಾನೆ. ಸ್ವಲ್ಪ ವಿಶ್ರಮಿಸಿದ ನಂತರ ಊಟ ಮಾಡುತ್ತೇನೆ ಎಂದು ಅವರಿಬ್ಬರಿಗೆ ಹೇಳಿಯಾಗಿದೆ. ಈ ಯುವಕನ ಮನಸ್ಸಿನಲ್ಲಿ ಈಗ ಏನೋ ನಿರಾಸೆ, ಯೋಚನೆ.

ರಾತ್ರಿ ಅವರು ಆ ವ್ಯಾಪಾರಿಗೆ ವಿಷಪೂರಿತ ಅನ್ನ ಆನಂದದಿಂದ ಉಣ್ಣಿಸುತ್ತಾರೆ. ಬಲವಂತದಿಂದ ಎಲ್ಲವನ್ನೂ ಬಡಿಸುತ್ತಾರೆ. ಆತನ ಜೀವ ಅಪ್ಪಿತಪ್ಪಿ ಹೋಗದಿದ್ದರೆ, ಸಂಪತೇ ಸಿಗುವುದಿಲ್ಲವಲ್ಲಾ! ಆದ್ದರಿಂದ ಕಂಠಪೂರ್ತಿ ನುಂಗಿಸುತ್ತಾರೆ.

ರಾತ್ರಿ ಎರಡು ಘಂಟೆಗೆ ಗಂಡ ಹೆಂಡತಿ, ಅವನ ಹತ್ತಿರ ಬರುತ್ತಾರೆ. ಆತ ಹೆಣವಾಗಿಬಿಟ್ಟಿದ್ದಾನೆ. ಆ ಹೆಂಗಸು ಈಗ ಸಂಭ್ರಮದಲ್ಲಿ ದೊಡ್ಡ ದೀಪ ಉರಿಸಿ, ಆ ವ್ಯಾಪಾರಿಯ ಸಂಪತ್ತನ್ನೆಲ್ಲಾ ಬಾಚುತ್ತಾಳೆ. ಆತ ರೂಪಾಯಿಗಳನ್ನು ಸರಿಯಾಗಿ ಜೋಡಿಸಿ ಎಣಿಸುತ್ತಿದ್ದಾನೆ. ಇಂತಹ ಕುಳ ಮೊದಲು ಎಂದಿಗೂ ಬರಲಿಲ್ಲವಲ್ಲ ಎಂದು ಇಬ್ಬರೂ ಮಾತನಾಡಿಕೊಳ್ಳುತ್ತಾರೆ.

ಅಷ್ಟರಲ್ಲಿ ಇನ್ನೊಂದು ಸಣ್ಣಗಂಟು ಅವರ ಕಣ್ಣಿಗೆ ಬೀಳುತ್ತದೆ. ಅದನ್ನೇಕೆ ಬಿಡಬೇಕು. ಸರಿ, ಬಿಚ್ಚುತ್ತಾರೆ. ಅದರಲ್ಲಿ ಒಂದೆರಡು ಹಳೆಯದಾದ ಬಟ್ಟೆಗಳ ಜೊತೆ, ಅಷ್ಟೇ ಹಳೆಯದಾದ ಒಂದು ಫೋಟೋ ಇರುತ್ತದೆ. ಇಬ್ಬರೂ ಫೋಟೋವನ್ನು ದಿಟ್ಟಿಸಿ ನೋಡುತ್ತಾರೆ. ಆ ಫೋಟೋದಲ್ಲಿ ದಂಪತಿಗಳ ಮಧ್ಯೆ ನಗುತ್ತ ನಿಂತ ಚಿಕ್ಕ ಬಾಲಕ. ಇಬ್ಬರ ಕಣ್ಣಲ್ಲಿ ನೀರು ಹನಿಹನಿಯಾಗಿ, ನಂತರ ಧಾರೆಧಾರೆಯಾಗಿ ಹರಿಯಲಾರಂಭಿಸುತ್ತದೆ. ಇದ್ದ ಒಬ್ಬನೇ ಒಬ್ಬ ಮಗನನ್ನು ಕೊಂದ ಪಾಪದಲ್ಲಿ ಅವರ ಗೋಳನ್ನು ಕೇಳಲು, ಸಂತೈಸಲು ಅಲ್ಲಿ ಯಾರೂ ಇರುವುದಿಲ್ಲ. ಭೂತದಂತೆ ಮರುಭೂಮಿಯಿಂದ ಪುಟದೇಳುವ ಸುಂಟರಗಾಳಿ ಮಾತ್ರ ಇವರೊಂದಿಗೆ ತಾನೂ ಆಕ್ರಂದಿಸುವಂತೆ ಭೂಂಯ್ ಎನ್ನುತ್ತಿರುತ್ತಿದೆ.




(ಹತ್ತು ವರ್ಷಗಳ ಹಿಂದೆ ದೂರದರ್ಶನದಲ್ಲಿದ್ದ ಒಂದೇ ಚಾನಲ್‌ನಲ್ಲಿ ಬಂದಿದ್ದ ರಾಜಸ್ಥಾನಿ ಚಲನಚಿತ್ರ ಕತೆ).

ಚಿಕ್ಕೋಡಿ

ದಯಾನಂದ ಈ. ನೂಲಿ

ಮೃತ್ಯು ಉವಾಚ



ಬಾಗ್ದಾದಿನಲ್ಲೊಬ್ಬ ವರ್ತಕನಿದ್ದ, ಆತ ಸಾಮಾನು ತರಲು ತನ್ನ ಸೇವಕನನ್ನು ಮಾರುಕಟ್ಟೆಗೆ ಕಳಿಸಿದ. ತುಸು ಹೊತ್ತಿನಲ್ಲಿ ಸೇವಕ ಗಾಬರಿಯಿಂದ ಮರಳಿ ಬಂದ. ''ಒಡೆಯಾ, ಮಾರುಕಟ್ಟೆಯಲ್ಲಿ ಮಹಿಳೆಯೊಬ್ಬಳು ನನಗೆ ಡಿಕ್ಕಿ ಹೊಡೆದಳು. ತಿರುಗಿ ನೋಡಿದರೆ ಆಕೆ ಮೃತ್ಯುದೇವತೆ. ಆಕೆ ನನ್ನೆಡೆಗೆ ನೋಡಿ ಬೆದರಿಸುವ ಸಂಜ್ಞೆ ತೋರಿದಳು... ನನಗೆ ನಿಮ್ಮ ಕುಧರೆ ಕೊಡಿ. ನಾನು ಈ ನಗರದಿಂದ ಪಲಾಯನ ಮಾಡಿ ಸಮಾರಕ್ಕೆ ತೆರಳುತ್ತೇನೆ. ಅಲ್ಲಿ ಮೃತ್ಯು ನನ್ನನ್ನು ಹಿಡಿಯಲಾರದು'' ಎಂದು ಆತ ಭೀತಿಯಿಂದ ನಡುಗುತ್ತ ಬಿನ್ನವಿಸಿದ. ವರ್ತಕ ಅವನಿಗೆ ಕುದರೆ ನೀಡಿದ. ಸೇವಕ ಆ ತಕ್ಷಣ ಕುದರೆ ಏರಿ ದೌಡಾಯಿಸಿದ.

ಬಳಿಕ ವರ್ತಕ ಮಾರುಕಟ್ಟೆಗೆ ಹೋದ. ಆತ ಮಾರುಕಟ್ಟೆಯಲ್ಲಿ ಅದೇ ಮಹಿಳೆಯನ್ನು ಕಂಡ. ಆಕೆಯ ಬಳಿ ಹೋಗಿ ವರ್ತಕ ನುಡಿದ, ''ನನ್ನ ಸೇವಕನನ್ನು ಬೆಳಿಗ್ಗೆ ಕಂಡಾಗ ನೀನು ಬೆದರಿಕೆಯ ಸಂಜ್ಞೆಯೇಕೆ ತೋರಿದೆ?''

ಮೃತ್ಯುದೇವತೆ ನುಡಿದಳು, ''ಅದು ಬೆದರಿಕೆಯ ಸಂಜ್ಞೆಯಲ್ಲ. ನನಗೆ ಅವನನ್ನು ಬಾಗ್ದಾದಿನಲ್ಲಿ ನೋಡಿ ಆಚ್ಚರಿಯಾಯಿತು. ಏಕೆಂದರೆ ನನಗೆ ಇಂದು ರಾತ್ರಿ ಆತನನ್ನು ಸಮಾರದಲ್ಲಿ ಭೇಟಿಯಾಗಬೇಕಿತ್ತು.''

(ಅರೇಬಿಕ್ ಕಥೆಯ ಸಾರಾಂಶ.)

ಅಸಾಧಾರಣ ಧೈರ್ಯ

ಎರಡನೇ ಜಾಗತಿಕ ಸಮರದ ಸಮಯ. ಜರ್ಮನ್ ವಿಮಾನಗಳು ಲಂಡನ್‌ಗೆ ಸತತ ಬಾಂಬುಗಳನ್ನು ತಂದು ಸುರಿಯುತ್ತಿತ್ತು. ಆದರೂ ಲಂಡನ್ನಿನ ಜನತೆ ಅಸಾಧಾರಣ ಧೈರ್ಯ ಪ್ರದರ್ಶಿಸುತ್ತಿದ್ದರು. ಅಮೆರಿಕನ್ ಪತ್ರಕರ್ತರ ತಂಡವೊಂದು ಲಂಡನ್‌ನ ಜನತೆಯ ಅಭಿಪ್ರಾಯ ಸಂಗ್ರಹಿಸಿದಾಗ ಈ ಧೈರ್ಯ ಬೆಳಕಿಗೆ ಬಂತು.

ಒಬ್ಬ ಅಮೇರಿಕನ್ ಪತ್ರಕರ್ತನಿಗೆ, ಲಂಡನ್ ದೇಶದ ಸಾಮಾನ್ಯ ಕಾರ್ಮಿಕನೊಬ್ಬ, ತಾನು ಜರ್ಮನಿಯ ಬಾಂಬ್ ದಾಳಿಯಿಂದ ಯಾವುದೇ ರೀತಿ ಬೆದರಿಲ್ಲ ಎಂದು ಹೇಳಿ ಅದಕ್ಕೆ ನೀಡಿದ ಕಾರಣಗಳನ್ನು ವಿವರಿಸುತ್ತಾನೆ. ಆ ಬ್ರಿಟಿಷ್ ಪ್ರಜೆ ನುಡಿದುದೇನು ಗೊತ್ತೆ?!

''ಜರ್ಮನ್ ಬಾಂಬ್ ನನ್ನನ್ನು ಕೊಲ್ಲಲಾದರೂ ಹೇಗೆ ಸಾಧ್ಯ? ಮೊದಲನೆಯದಾಗಿ ಅವನು ಲಂಡನ್‌ನ್ನು ಪತ್ತೆಹಚ್ಚಬೇಕು. ಬಳಿಕ ಈಸ್ಟ್ ಲಂಡನ್ ಕಂಡು ಹಿಡಿಯಬೇಕು. ನಾನು ಆಲ್ಬನ್ ಸ್ಟ್ರೀಟ್‌ನಲ್ಲಿರುವುದು. ನಂಬರ್ 32 ಮನೆ. ಇಷ್ಟೆಲ್ಲ ಕಂಡು ಹಿಡಿದ ಮೇಲೆ ಅವನು ನನ್ನ ಮನೆಯ ಮೇಲೆ ಬಾಂಬು ಹಾಕಬೇಕಾಗುತ್ತದೆ. ಒಂದು ವೇಳೆ ಅವನು ಇದರಲ್ಲಿ ಯಶಸ್ವಿಯಾದರೂ ನಾನು ಮನೆಯಲ್ಲಿರುತ್ತೇನೆಂದು ಏನು ಖಾತರಿ? ಆ ವೇಳೆ ನಾನು ಹೊರಗೆ ಹೋಗಿದ್ದಿರಬಹುದು. ಬಾರ್‌ನಲ್ಲಿ ಮದ್ಯ ಕುಡಿಯುತ್ತಿರಬಹುದು.''

(ಕೇಳಿದ್ದು)

ಕುಂಜಿತ್ ಬೈಲು

ದಿನಕರ. ಇಂದಾಜೆ.



ವ್ಯಾಸರಾಯ ಬಲ್ಲಾಳ

ಅಪರಿಚಿತೆ

- ಮೊದಲರ್ಧ -

ಆಸ್ತಿಕ ಸಮಾಜದಲ್ಲಿ ಒಂದು ಗಂಟೆಯ ಕಾಲ ರಾಮ ನವಮಿಯ ಪ್ರವಚನ ಕೇಳುತ್ತ ಕುಳಿತಿದ್ದ ಪಟ್ಟಾಭಿಯ ತಲೆ ತುಂಬ ರಾಮಾಯಣಕ್ಕೆ ಸಂಬಂಧಿಸದ ಬೇರೆಯೇ ಆಲೋಚನೆಗಳು. ನೆರೆಮನೆಯ ಸದಾಶಿವ ವಾಗಳೆ ಮನೆ ಮಾರಿ ಮನೆ ಖಾಲಿ ಮಾಡಿದ ಮೇಲೆ ಹೊಸದಾಗಿ ಬರಲಿರುವ ಈ ಪದ್ಮಾವತಿ ನೆರೂಳ್‌ಕರ್ ಹೆಂಗಸು ಯಾರು? ಬೇರೆ ಯಾವ ಗಂಡಸು ಕಾಣದ ಮನೆಯಲ್ಲಿ ಆಕೆ ಏಕಾಕಿ ಜೀವನ ನಡೆಸಲು ಬರುತ್ತಿದ್ದಾಳೆಯೇ! ಆದರೆ ಏನು ಕಾಕತಾಳೀಯ! ಹೆಸರು, ಪದ್ಮಾವತಿಯೆಂದೆ. ಪದ್ಮಾವತಿ. ನೆರೆಯ ತಾನೂ ಒಬ್ಬಂಟಿ. ತನ್ನ ಪದ್ಮಾ ಸತ್ತು ಎರಡು ವರ್ಷಗಳೇ ಕಳೆದಿಲ್ಲವೆ! ಯಾಕೆ ಸದಾಶಿವ ಹೊಸದಾಗಿ ಅವರ ಮನೆಗೆ ಬರುವವರ ವಿಚಾರ ತನ್ನೊಡನೆ



ಏನನ್ನೂ ಹೇಳಿಲ್ಲ! ''ಬರುವವರು ಒಳ್ಳೆಯವರೇ. ಒಂದಲ್ಲ ಒಂದು ದಿನ ನಿಮ್ಮ ಇಡ್ಲಿ ಸಾಂಬಾರ್ ರುಚಿನೋಡಲು ನಿಮ್ಮ ಮನೆಗೆ ಬಗ್ನವರೇ'' ಎಂದಷ್ಟೇ ಹೇಳಿದ್ದು... 'ಇಡ್ಲಿ ಸಾಂಬಾರ್! ಪ್ರವಚನ ಕೇಳುತ್ತಿದ್ದ ಪಟ್ಟಾಭಿಯ ಮನಸಿನಲ್ಲಿ ಮೂಡಿದ ನಗು ಮುಖದಲ್ಲೂ ಪ್ರಕಟವಾಗಿತ್ತು. ಪದ್ಮಾ ಸತ್ತ ಮೇಲೆ ತಾನು ಇಡ್ಲಿಸಾಂಬಾರ್ ತಿಂದದ್ದೆಲ್ಲ 'ಅಂಬಾ ಭವನ'ದಲ್ಲಿ ಮಾತ್ರ.

ಮಂಗಳಾರತಿ ಆಗುವ ಮೊದಲೇ ಸಭೆಯಿಂದ ಎದ್ದು ಹೊರ ನಡೆದಾಗ ಪಟ್ಟಾಭಿಗೆ ಹತ್ತಿರ ಕುಳಿತಿದ್ದವರೆಲ್ಲ ಆಶ್ಚರ್ಯ ಪಡಬಹುದು ಎಂಬ ಎಚ್ಚರವೂ ಇರಲಿಲ್ಲ. ಯೋಚನೆ

ಪದ್ಮಾವತಿ ನೆರೂಳ್‌ಕರ್‌ಳದೇ. ಮೊದಲು ಖಾಲಿಯಾದ ಮನೆಗೆ ಸುಣ್ಣಬಣ್ಣದ ಕೆಲಸದವರು ಬಂದಾಗ, ಕುತೂಹಲ-ಯಾರಿರಬಹುದು ಎಂದೆ. ವಾಗಳೆ ಮನೆ ಮಾರಿ ಹೋಗುತ್ತಾರೆ ಎಂಬ ತಿಳಿವಳಿಕೆ ಮೂಡಿದ ಮೇಲೆ ಎಂಟು ಮನೆಗಳ ಆ ಕಟ್ಟಡದಲ್ಲಿ ನೆಲೆಸಿದ್ದ ಎಲ್ಲರಿಗೂ ಕುತೂಹಲವೆ. ಹಳೆಯ ಕಟ್ಟಡದಲ್ಲಿ ಹಳಸಿ ಹೋಗುವಂತೆ ದಶಕ ದಶಕಗಳೇ ಕಳೆದಿದ್ದರೂ ಅಂಟಿಕೊಂಡಿದ್ದ ಆಸಾಮಿಗಳಿಗೆ ಒಂದು ಮನೆ ಖಾಲಿಯಾಗಿ, ಅದೂ ಹೆಂಡತಿ ಹಾಗೂ ಮಗಳು ಸತ್ತ ಮೇಲೆ ಒಂಟಿಯಾಗಿಯೂ, ಮನೆಯಲ್ಲಿದ್ದಾಗಲೆಲ್ಲ, 'ಬ್ರೋಚೇವರಾ ನನ್ನುವಿನಾ....' ಎಂದು ಬೀದಿಗೂ ಕೇಳುವಂತೆ ಕಿರಿಚಿಕೊಳ್ಳುತ್ತಲೇ ಇದ್ದ ಪಟ್ಟಾಭಿಯ ನೆರೆಮನೆಗೆ ಬರುವವರು ಯಾರು ಎಂಬ ಕುತೂಹಲ ಮೂಡಿದ್ದು ಸಹಜವೇ. ಶನಿವಾರ ರಾತ್ರಿ ಮೇಲೆ ಶಿಂತ್ರೆಯ ಮನೆಯಲ್ಲಿ ಇಸ್ಪೀಟಿನ ಆಟ ನೋಡಲು ಬಂದ ಪಟ್ಟಾಭಿಯೊಡನೆ, ಕೆಳಮನೆಯ ಅಗರ್‌ವಾಲ್, ಮೂರನೆಯ ಮಾಳಿಗೆಯ ರಾಮನ್ ನಾಯರ್ ಎಲ್ಲ ಕೇಳುವವರೇ! ''ಪಟ್ಟಾಭೀ... ವಾಗಳೆ ಹೋದಮೇಲೆ ನಿಮ್ಮ ನೆರೆಮನೆಗೆ ಯಾರು ಬರುತ್ತಾರೆ ಗೊತ್ತೇ! ಯಾರೋ ಹೆಂಗಸಂತೆ... ಗಂಡನಿದ್ದವಳೇ, ಮದುವೆ ಯಾದವಳೆ! ಮಕ್ಕಳು ಇರುವವಳೇ. ಯಾರಿಗೂ ಗೊತ್ತಿಲ್ಲ. ಬ್ರೋಕರ್ ಹೇಳಿದ್ದು ಹೆಂಗಸು ಮಾತ್ರ ಎಂದು. ನಿಮ್ಮ ಚಾನ್ಸ್ ಪಟ್ಟಾಭೀ... ಪದ್ಮಾ ಮಾಮಿ ಸತ್ತ ಮೇಲೆ,- ನಿಮ್ಮ ಮಗಳೂ ತೀರಿ ಹೋದ ಮೇಲೆ-ಎನ್ನಲಿಲ್ಲ ಪುಣ್ಯ, ಈಗ ವಾಗಳೆ



ಹೊರಟುಹೋದ ಮೇಲೆ ನಿಮ್ಮ ಮಾಳಿಗೆಯಲ್ಲಿ ಹೆಂಗಸರೇ ಇರಲಿಲ್ಲ. ಈಗ ಬರುವವರು...''

ಆಸ್ತಿಕ ಸಮಾಜದಲ್ಲಿ ಮಂಗಳಾರತಿ ಆಗುವ ಮೊದಲೇ ಎದ್ದುಹೋದಂತೆ ಪಟ್ಟಾಭಿ, ಹಾಗೆ ಹೇಳಿದ ರಾಮನ್‌ನಾಯರ್ ತಲೆಗೆ ತನ್ನ ಮೈ ಮೇಲಿದ್ದ ಅಂಗವಸ್ತ್ರದಿಂದಲೇ ಒಂದು ಏಟು ಕೊಟ್ಟು, ''ಏ ನಾಯರ್! ನೀನು ಆಟ ಆಡುವುದೇ, ತಲೆಹರಟೆ ಹಾಡುವುದೇ... ನಿನ್ನ ಮಲೆಯಾಳಿ ಬುದ್ಧಿ ತಿರುಗುವುದೆಲ್ಲ ಮೂರುಕಾಲಿನ ಕುದುರೆಯ ಹಾಗೆ. ವಾಗಳೆ ಮನೆಗೆ ಯಾರು ಬಂದರೆ ನನಗೇನು! ಹೆಂಗಸೋ ಗಂಡಸೋ... ನನ್ನ ಅನ್ನ ನಾನೇ ಬೇಯಿಸಿಕೊಳ್ಳಬೇಕು...'' ಎಂದು ಹೊರಡುವವನು. ಆಗ ಶಿಂತ್ರೆ ''ಪಟ್ಟಾಭೀ... ನಾಯರ್ ತಮಾಷೆಗೆ ಹೇಳಿದ

ಮಾತಿಗೆ ಅಷ್ಟೇಕೆ ಸಿಟ್ಟು... ನೆರೆಯವರು ಬರೇ ಹೆಂಗಸಾದರೆ, ನಿಮಗೆ ಇನ್ನಷ್ಟು ಒಳ್ಳೆಯದೇ ಅಲ್ಲವೆ! ಜ್ವರ ಬಂದಾಗ ಅನ್ನ ಬೇಯಿಸಲು ನೆರೆಯಲ್ಲಿ ಯಾರಾದರೂ ಇದ್ದರೆ ಒಳ್ಳೆಯದೇ ಅಲ್ಲವೆ!'' ಎಂದವನೆ 'ಟು ನೋ ಟ್ರಂಪ್' ಎಂದು ಆಟದ ಕಡೆಗೆ ಗಮನ ಹರಿಸಿದಾಗ ಪಟ್ಟಾಭಿ, ''ಆಡಿ... ಆಡಿ... ಬೆಳಗಿನ ತನಕ ಆಡಿ... ಬೆಳಗ್ಗೆ ವೆಂಕಟಲಕ್ಷ್ಮಿ ನಾಯರ್‌ಗೆ ಮಂಗಳಾರತಿ ಮಾಡುವವರೆಗೂ ಆಡಿ...'' ಎಂದು ತನ್ನ ಲುಂಗಿ ಮೇಲೆ ಕಟ್ಟಿಕೊಂಡು ಮೆಟ್ಟಿಲಿಳಿದು ತನ್ನ ಮನೆಯ ದಾರಿ ಹಿಡಿದದ್ದೇ.

ಶಿಂತ್ರೆಯ ಮನೆಯಿಂದ ಹೊರಬಂದು ಮೆಟ್ಟಿಲಿಳಿಯುತ್ತಿದ್ದಾಗಲೇ ನಾಯರ್ ಹೇಳಿದ ಮಾತು ಒಂದು ಹಿತವಾದ ಗಾಳಿ ಬೀಸಿದಂತೆ ಮನಸ್ಸಿಗೆ ವಿಚಿತ್ರ ರೀತಿಯ ಖುಷಿ ಕೊಟ್ಟಿದ್ದೇಕೆ ಎಂಬ ಯೋಚನೆ ಪಟ್ಟಾಭಿಯ ತಲೆಯಲ್ಲಿ ಬಂದಿತ್ತು. ಒಂದು ವಾರದ ಹಿಂದೆ, ಆಫೀಸಿನಲ್ಲಿ ಸಂಜೆ ಐದೂವರೆ ಗಂಟೆ ಯಾವಾಗ ಆದೀತು ಎಂದು ಮುಂದೆ ಮೇಜಿನ ಮೇಲೆ ಬಿದ್ದಿದ್ದ ಬೆರಳಚ್ಚಿನ ಕೆಲಸದ ಫೈಲುಗಳ ಕಟ್ಟಿನ ತುಂಬ ಇದ್ದ ಧೂಳನ್ನು ಕೈಯಿಂದಲೇ ಒರೆಸಲೆಂದು ಬಡಿಯುತ್ತಿದ್ದಾಗ, ತನ್ನ ಭುಜಗಳ ಮೇಲೆ ಹಿಂದಿನಿಂದ ಬಂದ ಪರ್ಸನಲ್ ವಿಭಾಗದ ಕಾರ್ಯದರ್ಶಿ ರೀತಾ ಗೊನ್ಸಾಲ್ವೀಸ್ ತನ್ನ ಕೈಗಳನ್ನಿರಿಸಿ... ''ಪಟ್ಟಾಭೀ... ಎ ಲವ್ ಲೆಟರ್ ಫಾರ್ ಯು'' (ನಿಮಗೊಂದು ಪ್ರೇಮಪತ್ರ) ಎಂದಂತೆ. ಹೆಂಗಸಿನ ಕೋಮಲ ಕೈಗಳ ಸ್ಪರ್ಶ ತನ್ನ ಭುಜಗಳ ಮೇಲೆ ಎಂದು ಗಡಿಬಿಡಿಯಿಂದ ಎದ್ದು ನಿಂತ ಪಟ್ಟಾಭಿ ರೀತಾಳನ್ನು ನೋಡಿ... ''ಓ ಮಿಸ್... ಲವ್ ಲೆಟರ್?'' ಎಂದು ನಗುತ್ತಲೇ ಹೇಳಿದಾಗ, ಆಕೆ ತಾನು ತಂದಿದ್ದ ಆಫೀಸಿನ ಕಾಗದವನ್ನು ಅವನಿಗೆ ಕೊಟ್ಟು... 'ವೆಲ್ ಬೆಸ್ಟ್ ಆಫ್ ಲಕ್' ಎಂದು ಹೊರಟು ಹೋಗಿದ್ದಳು. ಒಂದು ಕ್ಷಣದಲ್ಲೇ ಮಾಯವಾಗಿದ್ದಳು. ಪತ್ರ ಏನಿರಬಹುದೆಂದು ಪಟ್ಟಾಭಿಗೆ ತಿಳಿದಿತ್ತಾದರೂ, ಆ ಕ್ಷಣದಲ್ಲಿ ತನ್ನ ಮನಸ್ಸಿನಲ್ಲಿ ಕಸಿವಿಸಿಯ ನಡುವೆಯೂ ಪುಟದೆದ್ದ ಉತ್ಸಾಹದ ಸೆಳೆತಕ್ಕೆ ಯಾವ ರೀತಿಯ ಅರ್ಥ ಕಲ್ಪಿಸಬೇಕು ಎಂಬ ಯೋಚನೆಯೂ ಬಂದಿತ್ತು. ರೀತಾ ಭುಜಗಳ ಮೇಲೆ ಕೈಯಿರಿಸಿದಾಗ ಅನುಭವಿಸಿದ್ದ ಹಿತವಾದ ಸ್ಪರ್ಶ ಸುಖ, ಜತೆಗೆ ಆಕೆ ತಾನು ಲೇಪಿಸಿಕೊಂಡಿದ್ದ ಸುಗಂಧ ದ್ರವ್ಯಗಳ ಪರಿಮಳ. ಆಕೆ ಆಫೀಸಿನಲ್ಲಿ ಹಾದು ಹೋದಾಗಲೆಲ್ಲ ಆ ಪರಿಮಳದ ವ್ಯಾಪ್ತಿ ಕೆಲಸ ಮಾಡುತ್ತಿದ್ದವರ ಮೂಗಿಗೆಲ್ಲ ಹರಡುತ್ತಿದೆಯೆಂದು ಪ್ರಮಾಣೀಕರಿಸುವಂತೆ, ಎಲ್ಲ ತಮ್ಮೊಳಗೇ ಎಂಬಂತೆ ಹೇಳುತ್ತಿದ್ದುದು 'ಇಂಟಿಮೇಟ್' ಎಂದು. ರೀತಾ ಪಟ್ಟಾಭಿಗೆ 'ಎ ಲವ್ ಲೆಟರ್ ಫಾರ್ ಯು' ಎಂದು ಹೇಳಿದ್ದ ಮಾತು ಕೇಳಿದ್ದ ಬೆರಳಚ್ಚು ವಿಭಾಗದ ಎಲ್ಲರಿಗೂ ಆ 'ಲವ್ ಲೆಟರ್' ಏನಿರಬಹುದೆಂದು ಹೇಳಬೇಕಾಗಿರಲಿಲ್ಲ. ತುಂಬ ಅಪರೂಪವಾಗಿ ಆಗೊಮ್ಮೆ ಈಗೊಮ್ಮೆ ಎಂಬಂತೆ ಯಾವುದೊಂದು ವಿಭಾಗಕ್ಕೆ ಬರುತ್ತಿದ್ದ ಈ 'ಇಂಟಿಮೇಟ್ ರಾಣಿ' ತರುತ್ತಿದ್ದುದು ಇಂಥವೇ ಪತ್ರಗಳನ್ನು, ಒಂದು ಬಡ್ತಿ, ಇಲ್ಲವೇ ನಿವೃತ್ತಿ. ಪಟ್ಟಾಭಿಯ ಮೇಜಿನ ಬಳಿಯೇ ಇನ್ನೊಂದು ಟೈಪ್‌ರೈಟರ್ ಮೇಲೆ ಕೈಯಾಡಿಸುತ್ತಿದ್ದ ಧುಮೆ ಕೇಳಿಯೇ ಬಿಟ್ಟಿದ್ದ. ''ಪಟ್ಟಾಭೀ... ಲವ್ ಲೆಟರ್ ಆಲಾರೇ. ತೀನ್ ಮಹಿನೇಕೆ ಬಾದ್ ಇಂಟಿಮೇಟ್ ನಹೀರೇ'' ಎಂದು. ಮೂಗಿನ ಸೊಳ್ಳೆಗಳಿಂದ ಸುವಾಸನೆಯನ್ನು ಆಘ್ರಾಣಿಸುವಂತೆ ಶ್ವಾಸವೆಳೆದುಕೊಂಡ. ಪಟ್ಟಾಭಿ ಇನ್ನೂ ರೀತಾ ಹರಡಿದ ಪರಿಮಳದ ಗುಂಗಿನಲ್ಲೇ ಇದ್ದರೂ ಧುಮೆಯ ಮಾತು ತನ್ನನ್ನು ವಾಸ್ತವಕ್ಕೆ ಎಳೆದು ತಂದುದರಿಂದ, ''ಏ ಧುಮೇ ಚುಪ್‌ರೇ. ನಿನಗೂ ಇರುವುದು ಇನ್ನು ಒಂದು ವರ್ಷ. ಆಮೇಲೆ ಮನೆಯಲ್ಲಿ ವೈನಿಗೆ ಪಾತಾಳ್‌ಭಾಜಿ ಮಾಡಲು ಸಹಾಯಮಾಡುವುದು ನಿನ್ನ ಕೆಲಸ. ನಿನಗೂ ಇಂಟಿಮೇಟ್ ನಹೀರೇ...'' ಎಂದಿದ್ದ.

ಇನ್ನು ಮೂರು ತಿಂಗಳಲ್ಲಿ ನಿವೃತ್ತಿ. ಮೂವತ್ತೈದು ವರ್ಷ ತನ್ನ ಸಂಗಾತಿಯಾಗಿ ಕುಟ್ಟುತ್ತಲೇ ಇದ್ದ ಟೈಪ್‌ರೈಟರ್‌ಗೆ ವಿದಾಯ ವಂದನೆ ಹೇಳಬೇಕು. ವಿಭಾಗದಲ್ಲಿ ತನ್ನಂತೆಯೇ ಟೈಪ್‌ರೈಟರ್ ಸಖ್ಯ ಬೆಳೆಸಿಕೊಂಡಿದ್ದ ಆರು ಜನರಲ್ಲಿ ತಾವೇ ಹಿರಿಯ. ಉಳಿದ ಐವರಲ್ಲಿ ಮೂರು ಜನರ ತಲೆಗೂದಲು ತನ್ನ ಕೂದಲಿನಂತೆ ಬಿಳಿಬಣ್ಣಕ್ಕೆ ತಿರುಗಿದೆ. ಅವರೂ ತನ್ನ ಬೆನ್ನಲ್ಲೆ ಒಂದೆರಡು ವರ್ಷಗಳಲ್ಲಿ ನಿವೃತ್ತಿಯನ್ನು ಕಾಣುವವರೇ... ಆಮೇಲೆ ಯಾರು ಯಾರೋ ಹೊಸಬರು ಬಂದು ಇವೇ ಯಂತ್ರಗಳ ಸಖ್ಯ ಬೆಳೆಸುತ್ತಾರೆ.



ಅಥವಾ... ಇನ್ನೆಲ್ಲ ಕಂಪ್ಯೂಟರಂತೆ, ವರ್ಡ್ ಪ್ರೊಸೆಸ್ಸರ್ ಅಂತೆ. ಈ ಟೈಪ್‌ರೈಟರ್‌ಗಳಿಗೂ ನಿವೃತ್ತಿಯಂತೆ. ಎಲ್ಲ ಬಂಗಾರ್‌ವಾಲಾನಿಗೆ ಹೋಗಬಹುದಾದ ಈ ಯಂತ್ರಗಳಲ್ಲಿ ಒಂದನ್ನು ತನಗೇ ಕೊಡಬಾರದೆ. ನಿವೃತ್ತನಾದ ಮೇಲೂ ದಾದರ್ ಪೋಸ್ಟ್ ಆಫೀಸಿನ ಬಳಿ ಒಂದು ಗೂಡಂಗಡಿ ಮಾಡಿಕೊಂಡು ಕುಟ್ಟುತ್ತಲೇ ಇರಬಹುದು. ಮುಂಬಯಿಯಲ್ಲಿ ಬೆರಳಚ್ಚಿನ ಬರೆಹ ಬೇಡುವವರ ಸಂಖ್ಯೆಗಳಿಗೆ ಬರವೇ!

ಹೀಗೆಲ್ಲ ಯೋಚನೆ ಹರಿಯುವುದೂ ಇತ್ತು.

ಪಟ್ಟಾಭಿಗೆ ತನ್ನ ನಿವೃತ್ತ ಜೀವನದ ಯೋಚನೆ ಆರಂಭವಾದದ್ದು ಇದೇ ಮೊದಲಲ್ಲ. ಪದ್ಮಾ ಸತ್ತಾಗ ತಾನೂ ಸತ್ತಂತೆಯೇ ಎಂದು ಆತ ಗೋಳಿಟ್ಟಿದ್ದ. ರಾತ್ರಿ ಮಲಗುವ ಮೊದಲು ತನಗೆ 'ಹಾಲುಪಾಯಸ ಉಳಿದಿದೆ, ನೀವೇ ಕುಡಿದುಬಿಡಿ' ಎಂದು ನಕ್ಕು ತಂದಿಟ್ಟ ಪಾತ್ರೆ ಮತ್ತು ಆಕೆಯ ನಗು ಸ್ಥಿರಚಿತ್ರದಂತೆ ಮನಸ್ಸಿಗೆ ಮೆತ್ತಿಕೊಂಡಿರಲಿಲ್ಲವೇ? ಮರುದಿನ ಬೆಳಿಗ್ಗೆ ಪದ್ಮಾ ಏಳಲೇ ಇಲ್ಲ. ಇದೇನು ಇಷ್ಟು ತಡ?! ಎಂದು ಹೆಂಡತಿಯನ್ನು ಎಬ್ಬಿಸಲು ಹೋದಾಗ ಪಟ್ಟಾಭಿ ಮುಟ್ಟಿದ್ದು ತಂಡಿಯಾದ ಆಕೆಯ ದೇಹವನ್ನೇ. 'ಹಾರ್ಟ್ ಫೈಲ್ಯೂರ್' ಎಂದು ಹೇಳಿದ್ದು ಬಂದ ಡಾಕ್ಟರ್ ಕೃಷ್ಣಸ್ವಾಮಿ. ಆಮೇಲೆ ಗೋಳೋ ಎಂದು ಬಾಲಚಂದ್ರ ರಸ್ತೆಗೆಲ್ಲ ಕೇಳುವಂತೆ ಬೊಬ್ಬಿಟ್ಟಿದ್ದ. ಪಟ್ಟಾಭಿಯನ್ನು ಸಂತೈಸಲು ಕಟ್ಟಡದ ನೆರೆಯವರಿಗೆಲ್ಲ ಸಾಕುಬೇಕಾಗಿತ್ತು. ಎರಡು ತಿಂಗಳು ಪಟ್ಟಾಭಿ ಆಫೀಸಿನ ಗೊಡವೆಯೂ ಇರದವನಂತೆ ಗಡ್ಡ ಬೆಳೆಸಿ ಸ್ನಾನದ ಗೊಡವೆಗೂ ಹೋಗದೆ ಎಲ್ಲೆಲ್ಲಿ ತಿರುಗಿದ್ದೇ ಬಂತು. ಪುಣ್ಯಕ್ಕೆ


ಮಗಳು ರಾಜಲಕ್ಷ್ಮಿ ದಿನವೂ ದೂರದ ಭಾಂಡುಪ್‌ನಿಂದ ಬಂದು, ತಂದೆಗೆ ಅನ್ನ ಬೇಯಿಸಿ, ಒತ್ತಾಯದಿಂದ ಸ್ನಾನ ಮಾಡಿಸಿ, "ಬಂದದ್ದನ್ನೆಲ್ಲ ಸಹಿಸಿಕೊಳ್ಳಬೇಕು ಅಪ್ಪಾಜೀ... ಅಮ್ಮ ಹೋದಳೆಂದು ನಾವೂ ಸಾಯುವುದಕ್ಕಾಗುತ್ತದೆಯೇ" ಎಂದು ಸಮಾಧಾನದ ನಾಲ್ಕು ಮಾತು ಆಡಿ, ಮರುದಿನ ಬೆಳಿಗ್ಗೆ ತಂದೆಗೆ ಇಡ್ಲಿ ಮಾಡಿಕೊಳ್ಳಲೆಂದು ಅಕ್ಕಿ ಉದ್ದು ರುಬ್ಬಿಟ್ಟು ಹೋಗುತ್ತಿದ್ದಳು.

ರಾಜಲಕ್ಷ್ಮಿ...


ಪಟ್ಟಾಭಿಗೆ ಆಫೀಸಿನಲ್ಲೂ ರಾಜಲಕ್ಷ್ಮಿಯ ಯೋಚನೆಯಾದಾಗಲೆಲ್ಲ ಕಣ್ಣು ಹನಿಗೂಡುತ್ತಿತ್ತು. ತಾನು ಪ್ರೀತಿಯಿಂದ 'ಮಣೀ...' ಎಂದು ಕರೆಯುತ್ತಿದ್ದ ರಾಜಲಕ್ಷ್ಮಿ, ಪದ್ಮಾ ಸತ್ತಾಗ, ತನ್ನ ಎರಡು ಪುಟ್ಟ ಮಕ್ಕಳನ್ನು ಮನೆಯಲ್ಲಿ ಬಿಟ್ಟು ತನ್ನನ್ನು ಸಂತೈಸಲೆಂದೇ ಬರುತ್ತಿದ್ದ ರಾಜಲಕ್ಷ್ಮಿ. ಆಕೆ ತನ್ನ ಮುಟ್ಠಾಳ ಗಂಡನಿಂದ ಪಡೆದ ಸುಖವಾದರೂ ಏನು! ಮದುವೆಯಾದ ಮೇಲೆ ಹತ್ತು ನೆಲ ಕೆಲಸ ಬದಲಿಸಿದ. ತನ್ನಂತೆಯೇ ಬರೇ ಟೈಪಿಸ್ಟ್ ಆಗಿ ದುಡಿಯುತ್ತಿದ್ದರೂ ರಾಜಕುಮಾರನಂತೆ ಡ್ರೆಸ್ಸಿಂಗ್ ದುಂದುವೆಚ್ಚ, ಶನಿವಾರ ಕುದುರೆಯ ಬಾಲ ಹಿಡಿಯಲೆಂದು ಮಹಾಲಕ್ಷ್ಮಿ ಯಾತ್ರೆ, ಅಲ್ಲಿಯೂ ಕೈ ಸುಟ್ಟುಕೊಂಡು, ಯಾರ ಯಾರೋ ಘಟಂಗರ ಸಹವಾಸದಲ್ಲಿ ಕಳ್ಳನೋಟು ಮಾರುವವರ ಜತೆ ಸೇರಿಕೊಂಡು, ಆರು ತಿಂಗಳು ಆರ್ಥರ್ ರೋಡ್ ಜೈಲಿನಲ್ಲಿದ್ದೂ ಹೊರಬಂದ. ಇದನ್ನೆಲ್ಲ ನೋಡಲು ಪದ್ಮಾ ಬದುಕಿರಲಿಲ್ಲ, ಪುಣ್ಯ. ರಾಜಲಕ್ಷ್ಮಿಯ ಚಿನ್ನ ಕರಗುತ್ತಿದ್ದುದನ್ನು ಆಕ ನೋಡಿರಲಿಲ್ಲ. ಹೆಂಡತಿಗೆ ಹೊಡೆಯುತ್ತಿದ್ದ ನೀಸೋ ಲುಚ್ಚ. ಆತನ ಹೊಡೆತ ತಿಂದೇ ಆಕೆ ಸತ್ತಳೋ ದೇವರಿಗೇ ಗೊತ್ತು. ಒಂದು ದಿನ ಆಕೆ ತೀರಿಹೋದಳೆಂದು ಸುದ್ದಿ ಬಂದದ್ದೇ ಗೊತ್ತು. ಆಗ ಪಟ್ಟಾಭಿ ಅಳಲಿಲ್ಲ. ರಾಜಲಕ್ಷ್ಮಿ ಸತ್ತಾಗ ಪಟ್ಟಾಭಿಯ ತಲೆಯಲ್ಲಿ ಮಿಂಚಿದ್ದು ಎರಡೇ ವಿಚಾರ. ಒಂದು ಆಕೆ ಇನ್ನು ಬಾಲಚಂದ್ರ ರಸ್ತೆಯ ತನ್ನ ಮನೆಗೆ ಬರುವಂತಿಲ್ಲ ಎಂದು. ಎರಡು, ಆಕೆಯ ಪುಟ್ಟ ಮಕ್ಕಳ ಗತಿಯೇನು ಎಂದು. ಎರಡನೆಯ ವಿಚಾರ ಅಪ್ರಸ್ತುತ ಎನ್ನುವಂತೆ, ಆ ಮುಟ್ಠಾಳ ... ರಾಜಲಕ್ಷ್ಮಿ ಸತ್ತು ಮೂರೇ ತಿಂಗಳೊಳಗೆ ಮತ್ತೊಂದು ಮದುವೆ ಮಾಡಿಕೊಂಡ, ತನಗೆ, ರಾಜಲಕ್ಷ್ಮಿಯ ತಂದೆಗೆ, ತಿಳಿಸುವ ಸೌಜನ್ಯವನ್ನೂ ತೋರದೆಯೇ.

ತನ್ನ ನಿವೃತ್ತಿಯೂ, ಶಾಸ್ತ್ರ ಸಮ್ಮತವಾದ ವಾನಪ್ರಸ್ಥವೂ, ಜತೆಜತೆಗೆ ಬಂದಿವೆಯೆಂಬ ತೃಪ್ತಿಯಿಂದ, ಆಫೀಸಿನ ನಿವೃತ್ತಿಯ ದಿನ ಬರುವುದಕ್ಕೂ ಒಂದು ದಿನ ಮೊದಲೇ ತನ್ನ ಕಾರ್ಯಕ್ರಮದ ರೂಪರೇಷೆ ಸಿದ್ಧವಾಗಿತ್ತು. ಆಸ್ತಿಕ ಸಮಾಜ, ಭಜನ ಸಮಾಜ ಹತ್ತಿರದಲ್ಲೇ ಇವೆ. ಪೂಜೆ, ಮಂಗಳಾರತಿ, ಆಗಾಗ ನೀಲಕಂಠ ಶಾಸ್ತ್ರಿಗಳ ಪ್ರವಚನ, ಹೊತ್ತು ಕಳೆಯಲು ಇನ್ನೇನು ಬೇಕು. ಬೆಳಗ್ಗೆ ಇಡ್ಲಿ ಸಾಂಬಾರ್‌ಗೆ 'ಅಂಬಾ ಭವನ', ಊಟಕ್ಕೆಲ್ಲ ನಮ್ಮವರದೇ 'ಮೆಸ್' ಇದೆಯಲ್ಲ. ಒಳ್ಳೆಯ ಚಾದಮ್ ಮೊರುಕೊಳಂಬೋ ಬೇಕಾದಷ್ಟು... ಪೆನ್‌ಶನ್ ಹಣದಲ್ಲಿ ಚೆನ್ನಾಗಿಯೇ ಸುಧಾರಿಸಿಕೊಂಡು ಹೋಗಬಹುದು. ರಾಜಲಕ್ಷ್ಮಿಯೂ ಹೋದ ಮೇಲೆ ಸಂಸಾರದ ಬಂಧನಗಳೆಲ್ಲ ಕಡಿದಂತೆ... ಎಲ್ಲ 'ಫಕೀರ್‌ಕೊ ಫಿಕರ್ ನಹೀ' ಅಂತಾರಲ್ಲ ಹಾಗೆ.

ಹಾಗೆಂದು ಒಮ್ಮೊಮ್ಮೆ ಹುಟ್ಟೂರಾದ ಕೊಯಮತ್ತೂರಿಗೆ ಹೋಗೋಣವೇ ಎಂಬ ಯೋಚನೆಯೂ ಬಾರದಿಲ್ಲ. ಆದರೆ ಯಾಕಾಗಿ ಹೋಗ



ಬೇಕು. ನಲವತ್ತು ವರ್ಷಗಳಿಂದ ಕಾಣದ ಹೊಸ ಮುಖಗಳೇ ಅಲ್ಲಿರುವಾಗ ಹೋಗಿ ಮಾಡುವುದಾದರೂ ಏನು! ಅಲ್ಲಿ ಇದ್ದರೂ ಸತ್ತರೂ ಕೇಳುವವರಿಲ್ಲ... ಇಲ್ಲಿ ಹಾಗಲ್ಲ, ಕಷ್ಟ ಬಂದಾಗ ಜೀವ ಕೊಡಲೂ ನೆರವಿನ ರಾಮನ್ ನಾಯರ್ ನಿದ್ದ. ಅಗರ್‌ವಾಲಾ, ಶೆಟ್ಟಿ, ಬಾಪಟ್ ಶಿಂತ್ರೆ ಎಲ್ಲ ತನ್ನನ್ನು ನೋಡಿದೊಡನ ನಗುವಿನಿಂದಲೇ 'ಬ್ರೋಚೇವರಾ ನನ್ನುವಿನಾ' ಎನ್ನುವವರೇ. ನಲವತ್ತು ವರ್ಷಕ್ಕೂ ಹೆಚ್ಚು 'ಮುಂಬಯಿಕಾರ್' ಆದ ತನಗೆ ಇನ್ನೇಕೆ ಕೊಯಮತ್ತೂರು. ಸತ್ತರೆ ಹೆಣ ಎತ್ತಲೂ ನಾಲ್ಕು ಜನಕ್ಕೆ ಪರದಾಡಬೇಕಿಲ್ಲ. ಸಾಯುವ ಪ್ರಶ್ನೆ ಯಾಕೆ! 'ಪಟ್ಟಾಭೀ... ನೀನೇನಾದರೂ ರಿಟೈರ್ ಆಗಿದೆಯೆಂದು ಮನೆ ಬಿಡುವಂತಿದ್ದರೆ ಮೊದಲು ನನಗೆ ತಿಳಿಸು. ನಾನೇ ಮೊದಲನೆಯ ಗಿರಾಕಿ. ನೀನು ಎಷ್ಟು ಕೇಳು



ತ್ತೀಯೋ ಅಷ್ಟು ಕೊಡಲು ತಯಾರು?' 'ಎಷ್ಟು? ಎಂಟು?' ಎಂದು ಕೇಳಿದ್ದ. ಪಟ್ಟಾಭಿ... ''ಅಲ್ಲ... ಇನ್ನೂ ನಾಲ್ಕು ಹೆಚ್ಚು ಹನ್ನೆರಡು' ಎಂದಿದ್ದ ಅಗರ್‌ವಾಲಾ. ''ಅಯ್ಯೋ ಅಷ್ಟೇಯಾ ಈಗಿನ ರೇಟ್ ಹದಿನೈದಕ್ಕೆ ಕಡಿಮೆಯಿಲ್ಲ' ಎಂದು ಪಟ್ಟಾಭಿ ಹೇಳಿದಾಗ, ಅಗರ್‌ವಾಲಾ, ''ಎಲ್ಲ ಕೊಡಬಹುದಾದ ರೇಟಿಗಿಂತ ಒಂದು ಲಕ್ಷ ಹೆಚ್ಚೇ ಕೊಡಿಸುತ್ತೇನೆ, ನೀನ್ ಬಿಟ್ಟು ಕೊಡುವುದಾದರೆ. ಆದರೆ ನೀನೆಲ್ಲಿ ಬಿಟ್ಟುಕೊಡುತ್ತೀಯಾ? ಮದರಾಸಿ ನೀನು. ಮಾತು ಕೊಡ್ತೀಯಾ?'' ಎಂದಿದ್ದ. ಆ ಮಾರವಾಡಿ ಹದಿನೈದಲ್ಲಿ ಇಪ್ಪತ್ತು ಲಕ್ಷ ಕೊಟ್ಟಾದರೂ ಮನೆಯನ್ನು ಪಡೆಯುವವನೇ. ಅಬ್ಬಾ... ಲಕ್ಷ ಲಕ್ಷ... ಕಂಪೆನಿಯ ನಲವತ್ತು ವರ್ಷಗಳ ದುಡಿಮೆಯಲ್ಲಿ ನಿವೃತ್ತಿ ಬಂದು ಸಿಕ್ಕಿದ್ದು ಬರೇ ಎರಡು ಲಕ್ಷ... ತಿಂಗಳಿಗೆ ಎರಡು ಸಾವಿರ ಪಿಂಚಣಿ. ಏನು ಮಾಡುವುದು ದುಡ್ಡನ್ನೆಲ್ಲ! ರಾಜಲಕ್ಷ್ಮಿಯನ್ನು ಕೊಂದು ಇನ್ನೊಂದು ಮದುವೆ ಮಾಡಿಕೊಂಡ ಆ ಮುಟ್ಠಾಳನಿಗೆ ಕೊಡಬೇಕೇ.... ಆ ಎರಡು ರಾಜಲಕ್ಷ್ಮಿಯ ಮಕ್ಕಳಿಗೇ ಸಿಗುವಂತೆ ಮಾಡಬೇಕು. ಯಾರಾದರೂ ಒಳ್ಳೆಯ ವಕೀಲರನ್ನು ನೋಡಬೇಕು.

ಇವೆಲ್ಲ ಯೋಜನೆಗಳ ನಡುವೆಯೂ ರೀತಾ ಗೊನ್ಸಾಲ್ವೀಸ್ ಕೊಟ್ಟಿದ್ದ ಪ್ರೇಮ ಪತ್ರ ಸೂಚಿಸಿದ್ದ ದಿನವೂ ಬಂದು ಹೋಗಿತ್ತು. ಆಫೀಸಿನಲ್ಲಿ ಕೊನೆಯ ದಿನ ವಿದಾಯದ ಮೊಸಳೆ ಕಣ್ಣೀರು. ತನಗೊಂದು ಗಡಿಯಾರದ ಉಡುಗೊರೆ ಬೇರೆ. ಸಮಯ ಪುನಃ ಜ್ಞಾಪಿಸಿಕೋ ಎಂಬ ಎಚ್ಚರ ಕೊಡುವಂತೆ. ಹತ್ತಿರ ಸೇರಿದ್ದ ಎಲ್ಲರ ಮುಖದಲ್ಲೂ ಈ ವಿದಾಯದ ನೋವಿಗಿಂತಲೂ ಕೊನೆಗೆ ಸಿಗುವ 'ಕೇಕ್' ತುಂಡನ್ನೇ ಕಾಯುವ ಸಡಗರ. ತನ್ನಿಂದ ಯಾವಾಗಲೂ ಐದು ರುಪಾಯಿ ಸಾಲ ಕೇಳುತ್ತಿದ್ದ ಧುಮೆಯ ಕಣ್ಣಂಚಿನಲ್ಲಿ ಹನಿಯಿದ್ದಂತೆ ತನಗೆ ಕಂಡಿತ್ತೇ ಅಥವಾ ಅದು ಬರೇ ಭ್ರಮೆಯೇ. ತನ್ನ ಕಣ್ಣಂಚಿನಲ್ಲೂ ಹನಿಯಿತ್ತೇನೋ ಎಂದು ಪಟ್ಟಾಭಿಗೆ ಭಾಸವಾಗಿತ್ತು. ಅದು ವಿದಾಯದ ನೋವಿನಿಂದಲೇ, ತಾನು ಆಶಿಸಿದ್ದ ತನಗೆ ಸಿಗದಿದ್ದ ಟೈಪ್‌ರೈಟರ್‌ನಿಂದಾಗಿಯೋ ಅಥವಾ, ಅಥವಾ, ಇನ್ನು ರೀತಾ ಗೊನ್ಸಾಲ್ವೀಸ್ ಅನ್ನು

ನೋಡುವಂತಿಲ್ಲ. 'ಇಂಟಿಮೇಟ್' ಸುವಾಸನೆಯ ಸ್ಪರ್ಶವಿಲ್ಲ ಎನ್ನುವ ಕಾರಣಕ್ಕಾಗಿಯೇ ತಿಳಿದಿರಲಿಲ್ಲ.

ಪಟ್ಟಾಭಿ ನಿವೃತ್ತನಾಗುವುದಕ್ಕೂ, ನೆರೆಯ ವಾಗಳೆ ಮನೆ ಮಾರುವುದಕ್ಕೂ ಯಾವ ರೀತಿಯ ಸಂಬಂಧವಿರಲಿಲ್ಲವಾದರೂ, ಪಟ್ಟಾಭಿಗೆ ಆ ಸುದ್ದಿ ಸಿಕ್ಕಿದ್ದು ತಾನು ತನ್ನ ನಿವೃತ್ತಜೀವನದ ದಿನಚರಿ ರೂಢಿಸಿಕೊಳ್ಳುತ್ತಿದ್ದಾಗಲೇ... ಒಂದು ದಿನ ಬೆಳಗ್ಗೆ 'ಅಂಬಾಭವನ'ದ ಇಡ್ಲಿ ಸಾಂಬಾರ್ ಮುಗಿಸಿ, ಘಣಸ್‌ವಾಡಿಯ ವೆಂಕಟೇಶ ದೇವಸ್ಥಾನಕ್ಕೆ ಹೋಗಿ ಬರೋಣವೆಂದು ಮನೆಯ ಬಾಗಿಲು ಹಾಕುತ್ತಿದ್ದಾಗ, ಇದಿರಿನ ಮನೆಯ ಬಾಗಿಲಿಗೂ ಬೀಗ ಹಾಕುತ್ತಿದ್ದ ವಾಗಳೆ, "ಪಟ್ಟಾಭೀ... ಕೆಟ್ಟಸುದ್ದಿ ನಿಮಗೆ ಗೊತ್ತೇ" ಎಂದಿದ್ದರು. ತುಸು ಕಕ್ಕಾಬಿಕ್ಕಿಯಾದಂತೆ ಪಟ್ಟಾಭಿ ಕೆಲವು ದಿನಗಳಿಂದ ವಾಗಳೆಯ ಮನೆಯಲ್ಲಿ ವೈನಿಯೂ ಕಂಡಿಲ್ಲ, ಮಕ್ಕಳೂ (ಪ್ರಾಯಶಃ ಬೇಸಿಗೆಯ ರಜೆಯೆಂದು) ಕಾಣುತ್ತಿಲ್ಲವೆಂಬುದನ್ನು ನೆನೆಸಿಕೊಂಡು, "ವಾಗಳೆ ಸಾಬ್ ಏನು, ಏನಾಯಿತು. ಮನೆಯಲ್ಲಿ ಯಾರೂ ಇದ್ದಂತಿಲ್ಲ. ರಜೆಗೆಂದು..." "ಅಲ್ಲ ಪಟ್ಟಾಭೀ... ಹೇಳಲು ಬೇಸರವಾಗುತ್ತೆ. ನಾವು ಮನೆ ಬಿಡುತ್ತಿದ್ದೇವೆ. ಮೂವತ್ತು ವರ್ಷ ಮುಂಬಯಿ ಸಾಕಾಯಿತು. ವಯಸ್ಸೂ ಆಯಿತಲ್ಲ. ಸ್ವಲ್ಪ ಆರಾಮ ಬೇಕೆಂದು ನಾನು ಸಾವಂತ್‌ವಾಡಿಯಲ್ಲಿ ಒಂದು ಎಕ್ರೆ ತೆಗೆದುಕೊಂಡು ಸ್ವಲ್ಪ ಕೃಷಿ ಮಾಡ ಲೆಂದು ಹೋಗುತ್ತಿದ್ದೇನೆ. ಇನ್ನೂ ನಾಯರ್, ಶೆಟ್ಟಿ ಯಾರಿಗೂ ಹೇಳಿಲ್ಲ, ನಿಮಗೇ ಮೊದಲು. ಮನೆ ಕೊಟ್ಟಾಗಿದೆ. ನಾಡಿದ್ದು ಮೂವತ್ತನೆಯ ತಾರೀಕಿಗೆ ನಾನೂ ಹೋಗುತ್ತೇನೆ. ಇಲ್ಲಿಗೆ ಬರುವವರೂ ಮರಾಠಿಕಾರ್... ಹೇಗಿದ್ದಾರೋ ಗೊತ್ತಿಲ್ಲ, ಆದರೆ ನಿಮ್ಮ ಪದ್ಮಾ ವೈನಿ ಇದ್ದಾಗ, ನಮಗೆಷ್ಟು ಸಂತೋಷ ವಾಗಿತ್ತು. ಜೆಮ್ ಆಫ್ ಅ ಲೇಡಿ. ನಿಮಗೂ ಈಗ ರಾಜಲಕ್ಷ್ಮಿಯೂ ಇಲ್ಲ. ಮೂವತ್ತು ವರ್ಷ ನಾವು ಹೇಗೆ ಹೊಂದಿಕೊಂಡಿದ್ದೆವಲ್ಲ... ಹೋಗುವ ಮೊದಲು ನಾವಿಬ್ಬರೂ ಒಟ್ಟಿಗೆ ಒಂದು ಕಡೆ ಊಟ ಮಾಡಬೇಕು. ಮೂವತ್ತು ವರ್ಷದ ನಂಟನ್ನು ಸುಲಭವಾಗಿ ಮರೆಯಲು ಸಾಧ್ಯವಾಗುವುದೇ..."

ಮಾತು ಮಾತೇ ಆಯಿತು. ಊಟ ನಿತ್ಯದ ಊಟವೇ ಆಯಿತು. ವಾಗಳೆ ತಮ್ಮ ಸಾಮಾನು ಗಳನ್ನೆಲ್ಲ ಲಾರಿಯಲ್ಲಿ ಸಾಗಿಸುವಾಗಲೂ ತಾನು ಮನೆಯಲ್ಲಿರಲಿಲ್ಲ. ಮನೆ ಬಿಟ್ಟು ಆತ ಹೋಗಿ ಬರುತ್ತೇನೆ ಎಂದು ಹೇಳಲೂ ಇಲ್ಲ. ಮೂವತ್ತು ವರ್ಷದ ಸಖ್ಯ... ಆಫೀಸಿನಲ್ಲೂ ಹಾಗೇನೇ... ದಿನವಿಡೀ ತನ್ನ ಜತೆಗೆ ದುಡಿಯುತ್ತಿದ್ದವರಿಗೂ ಮತ್ತೆ ನೆನಪಿಲ್ಲ. ನೆಪ ತಾನು ದೊಂಬಿವಿಲಿಯಲ್ಲಿ ದ್ದೇನೆ, ಖಾಂದಿವಲಿಯಲ್ಲಿದ್ದೇನೆ ಎಂದು. ಆ ಮರಾಠಿಕಾರ್ ಧುಮೆ ಮಾತ್ರ ಒಂದೆರಡು ಬಾರಿ ಬಂದಾಗ ಪುನಃ ಸಾಲ ಕೇಳಲು ಬಂದನೇ ಎಂಬ ಭಯ ಕಾಡಿತ್ತಾದರೂ, ಅರ್ಧಗಂಟೆ ತನ್ನ ಏಕಾಕಿತನವನ್ನು ಸಹಾನುಭೂತಿಯಿಂದ ನೋಡು ವವನಂತೆ ಗಪ್ಪಾ ಹೊಡೆದು, ಮತ್ತೆ 'ಅಂಬಾ ಭವನ'ಕ್ಕೆ ಎಳೆದೊಯ್ದು ಆತನ ಖರ್ಚಿನಲ್ಲೆ ವಡಾ ಸಾಂಬಾರ್ ತಿನ್ನಿಸಿ ಹೋದ. ಯಾರಿಗೆ ಯಾರುಂಟು! ಈಗ ವಾಗಳೆ ಹೋದ ಮೇಲೆ ತನ್ನ ಇದಿರು ಮನೆಗೆ ಬರುವವಳೂ ಮರಾಠಿಕಾರ್. ಪದ್ಮಾ ನೆರೂಳ್‌ಕರ್ ಅಂತೆ. ಹೇಗಿದ್ದಾಳೋ. ಅವಳಿಗೂ ಚಿಳ್ಳೆ ಪಿಳ್ಳೆಗಳಿವೆಯೆ! ಗಂಡ! ಗಂಡ ನಿದ್ದರೆ ಬರುತ್ತಿರುವವಳು ಪದ್ಮಾವತಿ ನೆರೂಳ್‌ಕರ್ ಎಂದು ಎಲ್ಲ ಹೇಳುತ್ತಿರುವುದೇಕೆ! ಆಕೆಯೂ ತನ್ನಂತೆ ಒಂಟಿ ಜೀವವೆ! ಛೇ ಅದು ಹೇಗೆ ಸಾಧ್ಯ. ಮೇಲಿನ ಮಾಳಿಗೆಯಲ್ಲಿ ನಡೆಯುತ್ತಿದ್ದ ಇಸ್ಪೀಟ್ ಕೂಟ ಗಳಲ್ಲಿ ಚರ್ಚೆಗೆ ವಸ್ತುವಾಗಿ ಪದ್ಮಾವತಿ ನೆರೂಳ್ ಕರ್ ಬರುತ್ತಿದ್ದಾಗ, ಎಲ್ಲರೂ ಆಕೆಯ ಹೆಸರಿಗಷ್ಟೆ ಅಂಟಿಕೊಂಡು ಹೇಳುತ್ತಿದ್ದುದು ಆಕೆ ಒಂಟಿ ಹೆಂಗಸು, ತುಂಬ ಶ್ರೀಮಂತಳಿರಬೇಕು ಎಂದೇ. ಇಲ್ಲವಾದರೆ, ಮಾತುಂಗಾದಲ್ಲಿ ಮನೆ ಖರೀದಿ ಸಲು ಕೈಯಲ್ಲಿ ಹತ್ತು ಲಕ್ಷವಾದರೂ ಇರಬೇಡವೆ!

ನೆರೆಮನೆಯ ಒಡತಿಯಾಗಿ ಬರುವವಳ ವಿಚಾರ ಯೋಚನೆ ದಿನವೂ ತಲೆ ತಿನ್ನುತ್ತಿದ್ದರೂ, ಆ ಯೋಚನೆಗಳ ಹಿಂದೆ ಒಂದು ನಿರೀಕ್ಷೆಯ ಸಂಭ್ರಮವೂ ಇದೆಯೆಂದು ಪಟ್ಟಾಭಿಗೆ ತಿಳಿದಿತ್ತು.

ಯಾರಿದು ಪದ್ಮಾವತಿ! ಷಣ್ಮುಖಾನಂದ ಸಭಾಗೃಹದಲ್ಲಿ ಸಂಗೀತ ಕೇಳಲು ಹೋಗುವಾಗಲೂ ಆಗಾಗ ಈ ಯೋಚನೆ ಮಿಂಚುತ್ತಿತ್ತು. ಇಂಡಿಯನ್ ಜಿಮ್ಖಾನಾದಲ್ಲಿ ಹಳೆಯ ಸ್ನೇಹಿತರೊಂದಿಗೆ ಗಪ್ಪಾ ಹೊಡೆಯುತ್ತಿರುವಾಗಲೂ ಒಮ್ಮೊಮ್ಮೆ ಪದ್ಮಾವತಿ ನೆರೂಳ್‌ಕರ್ ನೆನಪಾಗುತ್ತಿದ್ದುದಿದೆ. ಎಷ್ಟೋ ದಿನಗಳಿಂದ, ಸುಣ್ಣ ಬಣ್ಣದವರನ್ನು ಬಿಟ್ಟರೆ ಖಾಲಿ ಖಾಲಿಯಾಗೇ ಕಾಣುತ್ತಿದ್ದ ಇದಿರಿನ ಮನೆ ತುಂಬಲು ಯಾರಾದರೂ ಬರಲೇಬೇಕಲ್ಲ, ಪದ್ಮಾವತಿ ನೆರೂಳ್‌ಕರ್. ವ್ಹಾ! ಎಂಥ ಸೊಗಸಾದ ಹೆಸರು!

ಆದರೆ ಪದ್ಮಾವತಿ ನೆರೂಳ್‌ಕರ್ ನೆರೆಮನೆಗೆ ಬಂದದ್ದೂ ವಾಗಳೆ ಬಿಟ್ಟು ಹೋದ ರೀತಿಯಲ್ಲೆ-ಯಾರಿಗೂ ತಿಳಿಯದಂತೆ. ನೆರೂಳ್‌ಕರ್ ಬರುವಾಗ ತಾನು ಮನೆಯಲ್ಲಿರಲಿಲ್ಲ. ಮೊಮ್ಮಕ್ಕಳನ್ನು ನೋಡದೆ ಎರಡು ತಿಂಗಳಾಯಿತು, ನೋಡಿ ಬರೋಣವೆಂದು ದೊಂಬಿವಲಿಯ ತನಕ ಹೋಗಿ ಮರಳುವಾಗ ರಾತ್ರಿ ಎಂಟುಗಂಟೆ. ಇದಿರು ಮನೆಯಲ್ಲಿ ದೀಪ. ಅರೆ! ಆಕೆ ಬಂದಾಗಿದೆಯೇ ಎಂಬ ಯೋಚನೆ ಮಿಂಚಿದಾಗ ತನ್ನ ಮನೆಯ ತೆರೆದ ಬಾಗಿಲಿನಿಂದ ಒಳಗೆ ಬಂದದ್ದು ರಾಮನ್ ನಾಯರ್. ''ಆಲಾ ರೇ, ಆಲಾ ರೇ, ಗೋವಿಂದ ಆಲಾ ರೇ'' ಎನ್ನುತ್ತಾ. ''ಏನಾಯಿತೋ?' ಎಂದು ಪಟ್ಟಾಭಿ ಕೇಳಿದಾಗ, ''ಬಂದಿದ್ದಾಳೆ ಪಟ್ಟಾಭೀ... ಚಂದದ ಗೊಂಬೆ... ಪದ್ಮಾವತಿ ನೆರೂಳ್‌ಕರ್. ಬರೇ ಒಂದು ಟೆಂಪೋ ಸಾಮಾನು ಮಾತ್ರ. ಒಂದು ಟೆಂಪೋ ಸಾಮಾನು, ಒಬ್ಬಾಕೆ ಹೆಂಗಸು. ಬೇರೆ ಯಾರೂ ಇದ್ದಂತಿಲ್ಲ... ಕೇಜುವಲ್ ರಜೆ ಬಾಕಿ ಉಳಿಸುವುದೇಕೆ ಎಂದು ಮನೆಯಲ್ಲೇ ಇದ್ದೆ. ಆಕೆಯನ್ನು ಮೊದಲು ನೋಡಿದ್ದು ನಾನೇ. ಅಗರ್‌ವಾಲಾನಿಗೆ ಹೊಟ್ಟೆಕಿಚ್ಚು. ನಿನಗೂ... ಎಲ್ಲಿದ್ದೆಯೋ ಇಡಿಯ ದಿನ. ಈ ಮರಾಟೀಕಾರ್‌ಜನಕ್ಕೆ ಗಣ ಹೋಮ ಗೀಮ ಬೇಡಾಂತ ಕಾಣುತ್ತೆ. ಗೃಹಪ್ರವೇಶ ಪ್ರವೇಶವೇ... ವಯಸ್ಸಾದ ಹೆಂಗಸೋ ಪಟ್ಟಾಭಿ, ಹುಡುಗಿಯೇನಲ್ಲ. ಆದರೆ ವ್ಹಾ! ಎಂಥ ಮೈಕಟ್ಟು... ಪ್ರತಿದಿನ ಬೆಳಿಗ್ಗೆ ಎದ್ದು ಮುಖ ದರ್ಶನ ಮಾಡಿ ಪುಣ್ಯ ಗಳಿಸಿಕೋ... ಹಾಗೆ ಹೇಳಿ ತನ್ನ ಕೈಗಳನ್ನು ತಿಕ್ಕಿಕೊಂಡು, ''ಕರಾಗ್ರೇ ವಸತೇ ಪದ್ಮಾ, ಕರಮಧ್ಯೇ ಪದ್ಮಾವತಿ, ಕರ ಮೂಲೇ ಸ್ಥಿತಾ ನೆರೂಳ್ಕರ್, ಪಟ್ಟಾಭೀ ಮುಖ ದರ್ಶನಮ್'' ಎಂದು ನಕ್ಕ. ತೆರೆದ ಬಾಗಿಲು ತೆರೆದೇ ಇತ್ತು. ಪಟ್ಟಾಭಿ ಮುಚ್ಚಲು ಹೋದಾಗ ನಾಯರ್ ಇರಲಿ ಬಿಡೋ. ನೋಡೋಣ, ಮುಖದರ್ಶನ ಈಗ ಸಾಧ್ಯವಾಗುತ್ತದೆಯೇ ಅಂತ' ಎಂದವನು ಎಂದಿನ ಸಲುಗೆಯಂತೆ ತಾನೆ ಅಡುಗೆಯ ಮನೆಗೆ ಹೋಗಿ, ಗ್ಯಾಸ್ ಒಲೆ ಹೊತ್ತಿಸಿ ನೀರಿಟ್ಟ ಚಾ ಮಾಡಲೆಂದು. ಚಹಾ ಮಾಡಿ ಇಬ್ಬರೂ ಕುಡಿದು, ಇನ್ನು ಕಾದು ಪ್ರಯೋಜನವಿಲ್ಲವೆಂದು ಹೊರಟು ಮಾಳಿಗೆಯೇರುವ ತನಕವೂ ಬಾಗಿಲು ತೆರೆದೇ ಇತ್ತು. ಪದ್ಮಾವತಿ ಕಾಣಿಸಲಿಲ್ಲ.

ತನ್ನ ಇದಿರು ಮನೆಗೆ ಹೊಸದಾಗಿ ಬಂದ ಪದ್ಮಾವತಿಯನ್ನು ನೋಡಲು ಒಂದು ವಾರ ಕಾಲ ಪಟ್ಟಾಭಿಗೂ ಸಾಧ್ಯವಾಗಲಿಲ್ಲ. ರಾಮನ್‌ನಾಯರ್ ಕೂಡ ಕತ್ತಲಾಗುತ್ತ ಬರುತ್ತಿದ್ದಾಗ, ಪಟ್ಟಾಭಿಯ ಮನೆಯ ಬಾಗಿಲು ತಟ್ಟಿ ಒಳಗೆ ಬಂದು ಬಾಗಿಲನ್ನು ತೆರೆದಿಟ್ಟು ಅರ್ಧ ತಾಸು ಪಟ್ಟಾಂಗಮಾಡಿ ತೆರಳುತ್ತಿದ್ದ, ಉದ್ದೇಶ, ಪ್ರಾಯಶಃ ಪದ್ಮಾವತಿಯು ನೋಡಲು ಸಾಧ್ಯವಾಗುವುದೇ ಎಂದು. ಆಕೆ ಕಾಣಸಿಗಲಿಲ್ಲ.

ಆಕೆ ಕಾಣದಿದ್ದುದರಿಂದಲೇ ಪಟ್ಟಾಭಿಗೆ ಇನ್ನಷ್ಟು ಕುತೂಹಲ. ತನ್ನ ನೆರೆಯವರನ್ನು ತಾನಿನ್ನೂ ನೋಡಲು ಸಾಧ್ಯವಾಗಲಿಲ್ಲವೆಂದರೆ ಎಂಥ ನಾಚಿಕೆಯ ಮಾತು? ಬೆಳಿಗ್ಗೆ 5 ಗಂಟೆಗೆ ಎದ್ದು ಪಟ್ಟಾಭಿ ಬಾಗಿಲು ತೆರೆದಿರಿಸಿಯೇ ತನ್ನ ದಿನಚರಿಯ ಕಡೆ ಗಮನ ಕೊಡುತ್ತಿದ್ದರೂ ಈ ನೆರೂಳ್ಕರ್ ಹೆಂಗಸು ಯಾವಾಗ ಮನೆ ಬಿಡುತ್ತಾಳೆ, ಯಾವಾಗ ಹಿಂದಿರುಗಿ ಬರುತ್ತಾಳೆ ಎಂದು ತಿಳಿಯುವಂತಿರಲಿಲ್ಲ. ರಾಮನ್ ನಾಯರ್‌ಗೆ ಸಾಧ್ಯವಾದದ್ದು ತನಗೆ-ಆಕೆಯ ಇದಿರು ಮನೆಯವನಿಗೇ ಸಾಧ್ಯವಾಗಲಿಲ್ಲ.

ಈ ನೆರೂಳ್ಕರ್ ಹೆಂಗಸು ಎಷ್ಟು ಹೊತ್ತಿಗೆ ಮನೆ ಬಿಡುತ್ತಾಳೆ, ಎಷ್ಟು ಹೊತ್ತಿಗೆ ಮನೆಗೆ ಮರಳಿ ಬರುತ್ತಾಳೆ ಎಂದು ತಿಳಿಯಲು ಸಾಧ್ಯವಾಗದಂತೆ ಆ ಮನೆಯ ಬಾಗಿಲಿಗೆ ಜಡಿದ ಬೀಗ ನೋಡುವುದೇ ಪಟ್ಟಾಭಿಯ ನಿತ್ಯರೂಢಿಯಾಯಿತು. ಮಾಳಿಗೆಯ ಮೇಲೆ ರಾತ್ರಿ ನಡೆಯುವ ಇಸ್ಪೀಟಾಟದ ವೇಳೆ ಈ ಪದ್ಮಾವತಿ ಸುದ್ದಿಗೆ ಆಹಾರವಾಗುವಳೆಂದು ತಿಳಿದಿದ್ದರೂ, ಪಟ್ಟಾಭಿಗೆ ಆಟ ನೋಡುವುದೂ ಬೇಡವೆನಿಸಿದ್ದು, ತಾನು ಮೇಲಿದ್ದಾಗ ಎಲ್ಲಾದರೂ ಪದ್ಮಾವತಿಯ ಮನೆಯಲ್ಲಿ ಆಕೆ ಇದ್ದಾಳೆಂದು ತಿಳಿಯುವಂತೆ, ಮಿಕ್ಸಿ ತಿರುಗಿಸುವ ಸದ್ದು, ಪಾತ್ರೆಗಳ ಸದ್ದು, ಒಮ್ಮೊಮ್ಮೆ ಟೆಲಿಫೋನ್ ಸದ್ದು ಇವೆಲ್ಲ ಕೇಳಿಸುತ್ತಿದ್ದುದರಿಂದ ಪದ್ಮಾವತಿಯ ವಾಸ್ತವ್ಯವನ್ನು ಅನುಮಾನಿಸುವಂತಿರಲಿಲ್ಲ. ತನ್ನ ಪದ್ಮಾವತಿ ತೀರಿಕೊಂಡ ಮೇಲೆ ಬೆಳಿಗ್ಗೆ ಆರು ಗಂಟೆಯ ಮೊದಲು ಏಳುವುದಿಲ್ಲವೆಂದು ತೀರ್ಮಾನಿಸಿದ್ದ ಪಟ್ಟಾಭಿ ಈಗ ತುಂಬ ಕಷ್ಟವೆನಿಸಿದರೂ ಐದು ಗಂಟೆಗೇ ಎದ್ದು ಮನೆಯ ಹೊರಬಾಗಿಲನ್ನು ಅರ್ಧ ತೆರೆದಿರಿಸಿಯೇ ನಿತ್ಯವಿಧಿಗಳಲ್ಲಿ ತೊಡಗಿಸಿಕೊಂಡು ನೆರೆಯ ಪದ್ಮಾವತಿ ಮನೆಗೆ ಬರುವ ಸಮಯಕ್ಕೆ ಸರಿಯಾಗಿ ಬಾಗಿಲಿಗೆ ಬಂದು ನಿಲ್ಲಬೇಕೆಂದು ಯೋಚಿಸಿಕೊಂಡಿದ್ದರೂ ನೆರೆಮನೆಯ ಬೀಗ ನೋಡುವುದೇ ಸಾಮಾನ್ಯವೆಂದಾಗಿತ್ತು. ಆದರೆ ಒಂದು ರಾತ್ರಿ ಮಾತ್ರ, ಮನೆಗೆ ಬಂದಿದ್ದ ರಾಮನ್ ನಾಯರ್ ಮರಳಿ ಮೇಲೆ ಹೋದ ಮೇಲೆ, ಪಕ್ಕದ ಮನೆಯ ಬಾಗಿಲಿಗೆ ಬೀಗ ಬಿದ್ದಿಲ್ಲವೆಂಬ ಆಶ್ಚರ್ಯದಿಂದ ಅಲ್ಲೇ ನೋಡುತ್ತಿದ್ದಾಗ, ನೆರೆಮನೆಯ ಟೆಲಿಫೋನ್ ಗಂಟೆ ಬಾರಿಸಿದಾಗ ಪಟ್ಟಾಭಿ, ತನ್ನ ಮನೆಯ ತೆರೆದ ಬಾಗಿಲಿಂದ ಹೆಜ್ಜೆಯಿರಿಸಿದ್ದು ನೆರೆಮನೆಯ ಬಾಗಿಲ ಕಡೆ. ಮುಚ್ಚಿದ ಬಾಗಿಲ ಬಳಿ, ಅದಕ್ಕೇ ಆನಿಸಿ ನಿಂತು, ಒಳಗಿನ ಮಾತು ಕೇಳಬಹುದೇ, ಆಕೆಯ ದನಿಯಾದರೂ ಹೇಗಿರಬಹುದು ಎಂದು ತಿಳಿಯುವ ಕುತೂಹಲದಿಂದ. ಪದ್ಮಾವತಿ ನೆರೊಳ್ಕರ್ ಕರೆಗೆ ಓಗೊಟ್ಟು ಉತ್ತರಿಸುತ್ತಿದ್ದಳು. ಇಂಪಾದ ದನಿ. ಆದರೆ ಮಾತು ಗುಜರಾತಿ! ಛೆ! ಛೆ! ಸೂ ಛೆ! ಕರ್ವಾನೂ ಮರ್ಥಾಮಾನಾ..." ಈಕೆಗೆ ಗುಜರಾತಿಯೂ ಬರುತ್ತದೆಯೇ? ಮರಾಟಿಕಾರ್! ಅದರಲ್ಲೇನು! ಮುಂಬಯಿಯಲ್ಲಿ ಭಾಷೆ ಕಲಿತುಕೊಳ್ಳುವುದೇನು ಕಷ್ಟವಲ್ಲ! ಮರಾಟಿ, ಗುಜರಾತೀ, ಹಿಂದೀ... ತನಗೆ ಮಾತ್ರ ಸೂ... ಛೇ... ಅನ್ನುವುದನ್ನು ಬಿಟ್ಟರೆ ಒಂದು ಶಬ್ದ ಗುಜರಾತಿಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ, ನಲವತ್ತು ವರ್ಷ ಇಲ್ಲಿದ್ದು... ಈ ಆಲೋಚನೆಯಲ್ಲಿ ಪಕ್ಕದ ಮನೆಯ ಬಾಗಿಲಿಗೆ ಆತುಕೊಂಡೆ ನಿಂತಿದ್ದಾಗ, ಒಮ್ಮೆಗೇ ಬಾಗಿಲು ತೆರೆಯಬೇಕೇ. ಬೀಳುವಂತಿದ್ದ ಪಟ್ಟಾಭಿ ಸಾವರಿಸಿಕೊಂಡು ಎರಡು ಹೆಜ್ಜೆ ತನ್ನ ಮನೆಯ ಬಾಗಿಲ ಕಡೆ ಸರಿಯುತ್ತಿದ್ದಂತೆ, ಕಂಡದ್ದು ಆಕೆಯದ್ದೇ ಮನೆಯ ಬಾಗಿಲು ತೆರೆದ ಪದ್ಮಾವತಿಯನ್ನು.

ಬಿಳಿ ಸೀರೆಯುಟ್ಟಿದ್ದ ಮಧ್ಯ ವಯಸ್ಸಿನ ಯುವತಿ. ನಾಯರ್ ಹೇಳಿದ್ದು ಸತ್ಯ. ಆಕರ್ಷಕ



ಮೈಕಟ್ಟು, ತುಂಬ ಸುಂದರಿಯೆಂದು ಹೇಳಲು ಅನುಮಾನಿಸಬೇಕಾಗಿಲ್ಲ. ಒಬ್ಬಂಟಿ ಹೆಂಗಸು. ವಿಧವೆಯೇ. ಮುಖದಲ್ಲಿ ಕುಂಕುಮವಿಲ್ಲ. ವಿಧವೆಯೇ. ತಾನು ವಿಧುರ!

ತಾನು ಬಾಗಿಲು ತೆರೆದಾಗಲೇ ಈ ಅಪರಿಚಿತ ವ್ಯಕ್ತಿ, ತನ್ನ ಮನೆಯ ಬಾಗಿಲಿನಿಂದ ಹಿಂದೆ ಸರಿದದ್ದು ಎಂದು ನೆರೂಳ್ಕರ್‌ಗೆ ತಿಳಿಯುವುದು ಕಷ್ಟವಾಗಿರಲಿಲ್ಲ. ಆದರೆ ಬರೇ ಒಂದು ಮುಂಡು, ಬನಿಯನ್‌ನಲ್ಲಿದ್ದ ವ್ಯಕ್ತಿ ಕಟ್ಟಡಕ್ಕೆ ಹೊರತಾದವ ಆಗಿರಲಿಕ್ಕಿಲ್ಲವೆಂದು ಬಗೆದು, ''ಏನು ಬೇಕಿತ್ತು! ನೀವು ಯಾರು?'' ಎಂದು ಕೇಳಿದಳು ಹಿಂದೀಯಲ್ಲಿ.

ತಡವರಿಸಿಕೊಂಡೇ, ಆದರೂ ಒಮ್ಮೆಗೇ ಪ್ರತ್ಯಕ್ಷಳಾದ ನೆರೆಯ ಪದ್ಮಾವತಿಗೆ ಸಪರಿಯಾಗಿ ಏನು ಉತ್ತರ ಕೊಡುವುದೆಂಬ ಗಲಿಬಿಲಿಯಿಂದ,

''ಓ! ನೀವೇ ನಮ್ಮ ನೆರೆಮನೆಗೆ ಬಂದವರು. ಇಲ್ಲಿದ್ದ ವಾಗಳೆ ನನಗೆ ತುಂಬ ಬೇಕಾದವರು. ಈ ಇದಿರು ಮನೆಯೇ ನನ್ನದ್ದು... ನಾನು ಪಟ್ಟಾಭಿ ರಾಮನ್ ಇತ್ತೀಚೆಗಷ್ಟೇ ರಿಟಾಯರ್ಡ್... ಯಾವಾಗಲೂ ಬೀಗ ಬಿದ್ದಿರುತ್ತಿತ್ತು ನಿಮ್ಮ ಮನೆಗೆ... ಈ ರಾತ್ರಿ ಬೀಗ ಬಿದ್ದಿರಲಿಲ್ಲ. ಮನೆ ಯಲ್ಲಿ ಇರುವವರ ಪರಿಚಯ ಮಾಡಿ ಕೊಳ್ಳೋಣ. ನೆರೆಕರೆಯೆಂದಾದ ಮೇಲೆ ಭೆಟ್ಟಿಯಾಗುತ್ತಿರಬೇಕಲ್ಲ... ಏನಾದರೂ ಸಹಾಯ...''

''ನೀವೇ ಇದಿರ ಮನೆಯಲ್ಲಿರುವವರು, ಪಟ್ಟಾಭಿ ರಾಮನ್. ಮದರಾಸಾ... ಬನ್ನಿ... ನಾನೇ ವಾಗಳೆಯವರ ಮನೆಯನ್ನು ಖರೀದಿಸಿದ ನೆರೂಳ್ಕರ್....''

ಪಟ್ಟಾಭಿಗೆ ಸ್ವರ್ಗದ ಬಾಗಿಲೇ ತೆರೆದಂತೆ. ಸರಿಯಾದ ಪರಿಚಯಕ್ಕೂ ಮೊದಲೇ ಮನೆಗೆ ಬರಲು ಆಮಂತ್ರಣ... ''ಬಂದೆ... ಬಂದೆ... ಎನ್ನುತ್ತಲೇ ತನ್ನ ಮನೆಯೊಳಗೋಡಿ ಒಂದು ಅಂಗವಸ್ತ್ರವನ್ನು ಮೈಮೇಲೆ ಹೊದ್ದುಕೊಂಡು ಪದ್ಮಾವತಿಯ ಮನೆಯೊಳಗೆ ಬಂದರು.

ನಿರಾಡಂಬರದ ಡ್ರಾಯಿಂಗ್ ರೂಮ್‌ನಲ್ಲಿ ಬೆತ್ತದ ಸೋಫ, ಒಂದು ಆರಾಮ ಕುರ್ಚಿ, ವಾಗಳೆಯ ಮನೆಯಾಗಿದ್ದಾಗ ನಿರಾತಂಕವಾಗಿ ತಾನೂ, ತನಗಿಂತ ಹೆಚ್ಚು, ಬದುಕಿದ್ದಾಗ ಮಡದಿ ಪದ್ಮಾವತಿಯೂ ಸುತ್ತಾಡುತ್ತಿದ್ದ ಮನೆಯ ಹೊಸ ಪರಿಚಯ ಅಗತ್ಯವಿರಲಿಲ್ಲ. ಆದರೆ ಈಗ ವಿಶೇಷವೆನಿಸಬಹುದಾದ ವಸ್ತುಗಳಿಂದ ಮನೆ ತುಂಬಿಕೊಂಡಂತೆ ಕಾಣಿಸುತ್ತಿರಲಿಲ್ಲ. ಪಟ್ಟಾಭಿ ಸೋಫಾದಲ್ಲಿ ಕುಳಿತಾಗ, ಒಳಗೆ ಅಡುಗೆಯ ಕೋಣೆಗೆಂದು ಹೋದ ನೆರೂಳ್ಕರ್ ಐದು ನಿಮಿಷಗಳಾದರೂ ಹೊರಗೆ ಬರಲೇ ಇಲ್ಲ. ''ಏನು ಮಾಡುತ್ತಿರಬಹುದು ಈ ಹೆಂಗಸು!'' ಎಂದು ಪಟ್ಟಾಭಿ ಯೋಚಿಸುತ್ತಿದ್ದಾಗಲೇ ಪದ್ಮಾವತಿ ನೆರೂಳ್ಕರ್ ಪ್ರತ್ಯಕ್ಷ, ಆದರೆ ವೇಷ ಬದಲಿಸಿ. ತಾನು ಮೊದಲು ಕಂಡಾಗ ಆಕೆ ಉಟ್ಟಿದ್ದ ಬಿಳಿಸೀರೆ ಈಗ ಸಾಮಾನ್ಯವಾಗಿ ಎಲ್ಲ ಆಧುನಿಕ ಮಹಿಳೆಯರು ರಾತ್ರಿಕಾಲ ಧರಿಸುತ್ತಿದ್ದ 'ನೈಟಿ'ಗೆ ಪರಿವರ್ತನೆ ಹೊಂದಿತ್ತು. ತಾನು ತಂದಿದ್ದ ಶರಬತ್ ತುಂಬಿದ ಲೋಟವನ್ನು ಪಟ್ಟಾಭಿಯ ಮುಂದಿಟ್ಟು

''ತಗೊಳ್ಳಿ... ರಾತ್ರಿಗೆ ಟೀ ಕಾಫಿ ಯಾರು ಕುಡಿಯುತ್ತಾರೆ! ಅದಕ್ಕೆಂದು ಶರಬತ್ ತಂದಿದ್ದೇನೆ.''

ಆಕೆಯ ಪೋಷಾಕು ಬದಲಾದುದನ್ನೇ ಗಮನಿಸಿ, 'ಅಬ್ಬಾ... ಈ ಹೆಂಗಸು ಮೊದಲ ಭೆಟ್ಟಿಯಲ್ಲೇ ಇಷ್ಟು ಸಲುಗೆ ತೋರುತ್ತಿರುವವಳೇ' ಎಂದುಕೊಂಡ ಪಟ್ಟಾಭಿಗೆ ಆಕೆಯ ಮಾತಿನ ಕಡೆ ಗಮನವಿರಲಿಲ್ಲವಾದರೂ, ''ಓ ಮೇಡಂ, ತುಂಬ ಥ್ಯಾಂಕ್ಸ್... ತುಂಬ ಥ್ಯಾಂಕ್ಸ್... ನೆರೆಮನೆಯವರ ಪರಿಚಯ ಆಗಲೇಬೇಕಲ್ಲ, ನೀವು ಬಂದು ಇಷ್ಟು ದಿನಗಳಾದರೂ ನಿಮ್ಮನ್ನು ನೋಡಿ ಮಾತನಾಡಿಸುವುದಾಗಲಿಲ್ಲ, ಈಗಷ್ಟೇ ಮನೆಯ ಬೀಗ ತೆರೆದಿದೆಯೆಂದು ಮಾತನಾಡಿಸೋಣವೆಂದು ಬಂದೆ... ನನ್ನ ಪದ್ಮಾವತಿ ಇದ್ದಿದ್ದರೆ ತುಂಬ ಸಂತೋಷ...'

''ಯಾರು?'' ತುಸು ಆಶ್ಚರ್ಯದಿಂದಲೇ ನೆರೂಳ್ಕರ್ ಕೇಳಿದಳು...

(ಮುಂದುವರಿಯುತ್ತದೆ)




ಭ್ರಷ್ಟತೆಯ ಕತ್ತಲಲ್ಲಿ ಒಂದು ಪಣತಿ

'ಭ್ರಷ್ಟತೆಯ ಕತ್ತಲಲ್ಲಿ...' ಅಂಕಣದ ಮತ್ತಷ್ಟು ಆಯ್ದ ಬರಹಗಳು.

350ಹೋಗಿ ಬರೇ 2ರೂ. ಗೆ ಬಂತು

ನಾನು ವೃತ್ತಿಯಿಂದ ಉಪನ್ಯಾಸಕ. ನನಗೆ ಪಡಿತರ ಚೀಟಿ ಬೇಕಾಗಿತ್ತು. ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗೆ ಹೋಗಿ, ಸಂಬಂಧಪಟ್ಟ ಅಧಿಕಾರಿಗಳನ್ನು ಕಂಡಾಗ, ಆಯುಕ್ತರ ಹೆಸರಿನಲ್ಲಿ ಒಂದು ಅರ್ಜಿ ಬರೆದು, ಎಲ್ಲ ಪ್ರಮಾಣ ಪತ್ರಗಳನ್ನು ಲಗತ್ತಿಸಿ ಕೊಡಿ ಎಂದರು.

ವಿಭಾಗಕ್ಕೆ ಸಂಬಂಧಪಟ್ಟ ಅಧಿಕಾರಿ ಅರ್ಜಿಯನ್ನು ಇಸಿದುಕೊಳ್ಳುತ್ತ 15 ದಿವಸಗಳ ನಂತರ ಬರುವಂತೆ ಹೇಳಿದರು. ಹೀಗೇ ಸತಾಯಿಸುತ್ತಿದ್ದರು. ಬಹಳ ದಿನ ನಡೆಯಿತು. ಅವರು ಹೇಳಿದಾಗೆಲ್ಲ ಅಲೆದೆ. ಆಮೇಲೆ ಒಂದಿನ ಅದೇ ಅಧಿಕಾರಿ ನಿಮ್ಮ ಪಡಿತರ ಚೀಟಿ ರೆಡಿಯಾಗಿದೆ ಅದಕ್ಕೆ ಸಾಹೇಬರ ಸಹಿ ಆಗಬೇಕು ನಾಳೆ... ಎನ್ನುತ್ತಿರುವಂತೆ ನನಗೆ ಕೋಪವನ್ನು ಹತ್ತಿಕ್ಕಿಕೊಳ್ಳಲಾಗದೆ, ನೋಡ್ರಿ, ನನ್ನ ಎಲ್ಲ ಕೆಲಸ ಬಿಟ್ಟು ನೀವು ಬಾ ಎಂದಾಗ ಬಂದೆ, ನಾಯಿಯಂತೆ ಅಲೆದಾಡಿದೆ. ಆದರೆ ಇನ್ನೂ ಆಗಿಲ್ಲವೆಂದರೇನರ್ಥ? ನೀವು ಮಾಡಿಕೊಡ್ತಿರೋ ಇಲ್ಲವೋ ಹೇಳಿ ಎಂದು ದಬಾಯಿಸಿದೆ.



ನನ್ನನ್ನು ವಿಚಿತ್ರ ಪ್ರಾಣಿಯಂತೆ ನೋಡಿ ಹಲ್ಲು ಕಿಸಿದಾಗ, ಅದರ ಹಿಂದಿನ ಮರ್ಮ ತಿಳಿಯಿತು. ಮರುದಿವಸ ಬಂದಾಗ ಕಾರ್ಡು ರೆಡಿಯಾಗಿತ್ತು. ಆತ ಕೈಯಲ್ಲಿ ಹಿಡಿದುಕೊಂಡು ನನಗೆ ತೋರಿಸುತ್ತ, ಸರ್, ಇದರ ಫೀಜುss ಎಂದು ಮತ್ತೆ ನಕ್ಕು, ಪಕ್ಕದ ತನ್ನ ಸಹೋದ್ಯೋಗಿಯತ್ತ ನೋಡಿದ. ಆ ಸಹೋದ್ಯೋಗಿಅದೇನೋ ಫೀಜು ಇದೆ. ಸುಮ್ನೆ ಕೊಟ್ಟು ತಗೊಂಡ್ಹೋಗಿ, ಯಾಕೆ ಕೆಲಸ ಗೆಟ್ಟು ಅಲಿತೀರಾ? ಎಂದಾಗ ಮೈಯೆಲ್ಲ ಉರಿದು ಹೋಯ್ತು. ಎಷ್ಟು ಅಂತ ಕೇಳದೆ ಎನಿಲ್ಲ 350 ರೂ.ಗಳು ಎಂದ. ನನಗಾಗ ನನ್ನನ್ನೇ ನಿಯಂತ್ರಿಸಿಕೊಳ್ಳಲಾಗಲಿಲ್ಲ.


ಎನ್ರೀ ನೀವೆಲ್ಲ ಇಲ್ಲಿ ಕೂತು ಆಟ ಆಡ್ತಾ ಇದ್ದೀರಾ. ಸರಕಾರದ ಕೆಲಸಕ್ಕೆ ಹಣ ಯಾಕೆ? ಇಷ್ಟು ದಿವಸ ಅಲೆದಾಡಿಸಿದ್ದಾಯಲ್ತ. ಈಗ ಹಣ ಬೇರೆ ಕೇಳ್ತಾ ಇದ್ದೀರಿ. ನಿಮ್ಮನ್ನು ಕೇಳುವವರೇ ಇಲ್ಲದಂತಾಗಿದೆ. ನಾನು ಆಯುಕ್ತರನ್ನೇ ನೋಡುತ್ತೇನೆ ಎಂದು ಹೊರಟೆ. ನನ್ನನ್ನು ತಡೆದ ಆತ, ರೀ, ಮಿಸ್ಟರ್, ಏನ್ರೀ ಇದು? ಇಷ್ಟಕ್ಕೆಲ್ಲಾ ಸಾಹೇಬರ ಹತ್ತಿರ ಹೋಗಬಾರ್ದು, ಬನ್ನಿ ಇಲ್ಲಿ. ನಿಮಗೆ ಎರಡು ರೂಪಾಯಿಗಳನ್ನಾದರೂ ಕೊಡಲಿಕ್ಕೆ ಆಗುವುದೆ? ಮೆತ್ತಗಾಗಿ ಕೇಳಿದ. ಅದು ರೆವಿನ್ಯೂ ಸ್ಟಾಂಪಿಗಾಗಿ ಎಂದು ಗೊತ್ತಾದ ಮೇಲೆ, ಹಣ ಆತನೆದುರು ಇಟ್ಟು, ಅವರು ಕೊಟ್ಟ ದಫ್ತರಿನಲ್ಲೊಂದು ರುಜು ಹಾಕಿ ಪಡಿತರ ಚೀಟಿ ಪಡೆದು ಹೊರಬಂದಾಗ ಒಂದು ಯುದ್ಧದಲ್ಲಿ ಜಯ ಗಳಿಸಿದ ಅನುಭವ.

ಬೆಳಗಾವಿ

ಶ್ರೀಕಾಂತ ಶಾನವಾಡ

‘ನೀ ಕೊಡೆ, ನಾ ಬಿಡೆ?

ಕೋರ್ಟಿನಲ್ಲಿ ಸರ್ಟಿಫೈಡ್ ಕಾಪಿ (certified copy) ಪಡೆಯಬೇಕಾದರೆ ಅಲ್ಲಿಯ ಟೈಪಿಸ್ಟ್, ಕಾಪಿಯಿಸ್ಟ್ (copyist), ಶಿರಸ್ತೆದಾರರು ಕೂಡಿಯೇ ಭೇದಭಾವವಿಲ್ಲದೆ ವಕೀಲರಿಗೆ, ಕಕ್ಷಿದಾರರಿಗೆ ಲಂಚ ಕಕ್ಕುವಂತೆ ಮಾಡುತ್ತಾರೆ.



ವೃತ್ತಿಯಿಂದ ವಕೀಲನಾದ ನಾನು ಒಮ್ಮೆ ಹಿರಿಯ ವಕೀಲರ ಆದೇಶದಂತೆ ಸರ್ಟಿಫೈಡ್ ನಕಲಿಗೆ ಅರ್ಜಿ ಹಾಕಿದ್ದೆ. ಅದು ಅರ್ಜೆಂಟ್ ಇದ್ದಿಲ್ಲವಾದ್ದರಿಂದ ನಿಗದಿತ ಸಮಯದವರೆಗೆ ಅತ್ತ ತಲೆ ಹಾಕಲಿಲ್ಲ. ನಿಯಮದಂತೆ ಅದು ತಯಾರಾಗಿ ನನ್ನನ್ನು ಹುಡುಕಬೇಕಾಗಿತ್ತು.

ನಾನೇ ಹುಡುಕುತ್ತಾ ಹೋದೆ. ಲಂಚಕ್ಕಾಗಿ ಕಾಪಿಯಿಸ್ಟ್, ಟೈಪಿಸ್ಟರ ಗೋಗರೆತ. ಇಲ್ಲ ಎಂದು ಒಂದೆರಡು ಬಾರಿ ಹೇಳಿದೆ. ಮನವೊಲಿಸಲು ಪ್ರಯತ್ನ ಮಾಡಿದೆ. ಬೇಕೇ ಬೇಕು ಎಂದು ರಂಪ!

ಸಹದ್ಯೋಗಿಗಳಲ್ಲಿ ಚರ್ಚಿಸಿದೆ. ನಿರ್ದಯವಾಗಿ ಕಿತ್ತುಕೊಳ್ಳಿ ಎಂದರು.

ಮರುದಿನ ಹೋದೆ. ತಪ್ಪಿ ಹೋಗುತ್ತಿರುವ ಬೆಣ್ಣೆಯ ಮುದ್ದೆಗಾಗಿ ಮತ್ತೆ ಅರಚಾಟ. ನಿಮ್ಮದೇ ಮೊದಲ ಬೋಣಿ ಎಂದು ಪೀಕಲಾಟ. ನಾನೂ ಜಪ್ಪೆನ್ನಲಿಲ್ಲ. ಕೊನೆಗೆ ಬೇಸತ್ತು ಕೊಟ್ಟರೆ ಕೊಡಿ, ಬಿಟ್ಟರೆ ಬಿಡಿ ಎಂದು ಹೊರಟಾಗ ಕರೆದು ಕೊಟ್ಟರು.

ಆ ದಿನ ಮಹತ್ವದ್ದನ್ನು ಸಾಧಿಸಿದಂತಾಗಿತ್ತು.

ರುಕ್ಮಾಪುರ　　　　　　　　　　ಲೀಲಾಧರ ಮಾ. ಭಂಡಾರಿ





ಸನಿಹ


ಬಾಗೇಶ್ರೀ

ನೀಲಿ ಬಾಟ್ಲಿಯ ಮಸುಕು ನೆನಪು

ಮನಸ್ಸಿನ ಯಾವುದೋ ಕತ್ತಲ ಮೂಲೆಯಲ್ಲಿ ಕಳೆದುಹೋಗಿದ್ದ ಅಕ್ಕಂಬಕ್ಕನ ಚಹರೆ ಫಕ್ಕ ನೆನಪಾದದ್ದು ಆ ನೀಲಿಯ ಬಾಟ್ಲಿ ನೋಡಿದಾಗಲೇ. ದೊಡ್ಡಮ್ಮನ ಮನೆಯ ಅಡಿಕೆ ತೋಟದಲ್ಲಿ ಹೊಂಬಾಳೆ ಆರಿಸುತ್ತಾ ತೋಟದ ಮೂಲೆಯ ಅವಳ ಮನೆಯವರೆಗೂ ನಡೆದುಹೋಗಿದ್ದೆ. ಹಾವಿದ್ದರೆ ಅಂತ ಭಯದಿಂದ, ನಿಧಾನಕ್ಕೆ, ತುಂಬಿ ಹೋಗಿದ್ದ ತರಗೆಲೆಗಳ ಮೇಲೆ ಕಾಲಿಡುತ್ತಾ, ಈಗ ಸೌದೆ, ಹುಲ್ಲು ಕೂಡಿಡುವುದಕ್ಕೆ ಮಾತ್ರ ಉಪಯೋಗಿಸುವ ಅಕ್ಕಂಬಕ್ಕನ ಮನೆಯ ಸುತ್ತ ನಡೆದಿದ್ದೆ. ಆಗ ಕಂಡದ್ದು ಅರ್ಧ ಹೂತು ಹೋಗಿದ್ದ ಬಾಟ್ಲಿ. ಯಾವುದೋ ಪುರಾತನ ಅವಶೇಷ ಸಿಕ್ಕಹಾಗೆ ನಾಜೂಕಾಗಿ ಎತ್ತಿ ಮಣ್ಣು ಒರೆಸಿದೆ. ಬಿಸಿಲಲ್ಲಿ ಚೆಂದ ಹೊಳೆಯುತ್ತಿತ್ತು.

ಶಿವಮೊಗ್ಗದಿಂದ ಊರಿಗೆ ಹೋದಾಗಲೆಲ್ಲ ನನ್ನ ಅಮ್ಮ ತನ್ನ ಸೋದರತ್ತೆಗಾಗಿ ತಪ್ಪದೆ ತೆಗೆದುಕೊಂಡು ಹೋಗುತ್ತಿದ್ದದ್ದು, 'ಮಿಲ್ಕ್ ಆಫ್ ಮೆಗ್ನೀಶಿಯಾ' ಎಂಬ ಹೆಸರಿನ ನೀಲಿ ಔಷಧಿಯ ಬಾಟ್ಲಿ. ಸರ್ವರೋಗಗಳನ್ನೂ ಕಾಕೆಕುಡಿ ತಂಬಳಿ, ಮಜ್ಜಿಗೆ ಹುಲ್ಲಿನ ಕಷಾಯ ಇತ್ಯಾದಿಗಳಲ್ಲೇ ಸಂಭಾಳಿಸುತ್ತಿದ್ದ ಅಕ್ಕಂಬಕ್ಕನಿಗೆ, ಈ ಲ್ಯಾಕ್ಸೆಟಿವ್ ಬಗ್ಗೆ ಹೇಳಿದವರಾದರೂ ಯಾರು ಅಂತ ನನಗೆ ಗೊತ್ತಿಲ್ಲ. (ಜೀವನದ ಮುಕ್ಕಾಲು ಭಾಗ ಒಬ್ಬಂಟಿಯಾಗಿ ಕಳೆದ) ನನ್ನ ಅಜ್ಜನ ಈ ದೊಡ್ಡಕ್ಕನಿಗೆ, 'ಅಕ್ಕನ ಮನೆಯ ಅಕ್ಕ' ಅಂತ ಸಂಕೀರ್ಣ ಹೆಸರನ್ನು ಇಟ್ಟದ್ದು ಯಾರು, ಅದು ಅಕ್ಕಮನೇಕ್ಕ, ಅಕ್ಕಂಬಕ್ಕ ಅಂತೆಲ್ಲ ರೂಪಾಂತರ ಆಗಿದ್ದು ಯಾವಾಗ ಅನ್ನುವುದೆಲ್ಲವೂ ಮಿಸ್ಟರಿಗಳೇ. ಅಕ್ಕಂಬಕ್ಕ ತೀರ್ಥ ಕುಡಿದಷ್ಟು ನಿಷ್ಠೆಯಿಂದ ತನ್ನ 'ಮಿಲ್ಕಾಪ್' ಔಷಧಿಯನ್ನು ಸಾಯುವವರೆಗೂ ಕುಡಿಯುತ್ತಿದ್ದದ್ದು ಮಾತ್ರ, ಗಟ್ಟಿಯಾಗಿ ಗೊತ್ತಿರುವ ಸತ್ಯ.

ಈ ಒಂಟಿ ಮುದುಕಿಯ ಬಗ್ಗೆ ನನಗೆ ಹಾಗೂ ನನ್ನ ತಮ್ಮನಿಗೆ ಎಲ್ಲಿಲ್ಲದ ಕುತೂಹಲ. ಊರಿಗೆ ಹೋದಾಗ ದಿನಾ ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ ಅವಳಿಗೆ ಸರಬರಾಜು ಮಾಡುತ್ತಿದ್ದ ಚಿಕ್ಕಮ್ಮನ ಹಿಂದೆ ನಾವು ಬಾಲ. ಅವಳೇನಾದರೂ 'ಬೆಕ್ಕೀ' ಅಂತ ಮುದ್ದು ಮಾಡಿದರೆ ಕೊಸರಿಕೊಂಡು ಓಟ. ಕೋಲು ಹಿಡಿದುಕೊಂಡು ನಡೆಯುವ, ಕೆದರಿದ ಕೂದಲಿನ ಅಕ್ಕಂಬಕ್ಕ ರಾತ್ರಿಯೆಲ್ಲ ಒಬ್ಬಳೇ ಮನೆಯಲ್ಲಿ ಇರುತ್ತಾಳೆ ಅನ್ನುವುದು, ಅಮ್ಮನ ಸೆರಗು ಹಿಡಿದೇ ಉಚ್ಚೆ ಹೊಯ್ಯಲಿಕ್ಕೂ ಹೋಗುವ ನಮಗೆ ಹೆದರಿಕೆ, ಆಶ್ಚರ್ಯ, ಮೆಚ್ಚುಗೆ ಎಲ್ಲ ಹುಟ್ಟಿಸುವ ವಿಷಯ. ಊರಲೆಲ್ಲ 'ಸ್ವಲ್ಪ ಸಿಡುಕು', 'ಒಂದು ಪೇರಲೆ ಕಾಯಿ ಕೂಡ ಯಾರಿಗೂ ಕೊಡಲ್ಲ' ಅಂತೆಲ್ಲ ಹೆಸರಾಗಿದ್ದ ಅಕ್ಕಂಬಕ್ಕನಿಗೆ, ನಮ್ಮಿಬ್ಬರನ್ನು ಕಂಡರೆ ವಿಶೇಷ ಪ್ರೀತಿ.




ಆಕೆ ಸತ್ತಾಗ ನನಗಿನ್ನೂ ಹತ್ತೋ ಹನ್ನೆರಡೋ ವರ್ಷ. 'ಬೆಳಿಗ್ಗೆ ಹೋಗಿ ನೋಡು ವಷ್ಟರಲ್ಲಿ ಸತ್ತೇ ಹೋಗಿದ್ದ ಳಂತೆ' ಅಂತ ಊರಿನಿಂದ ಸುದ್ದಿ ಬಂದಿತ್ತು. ಅಮ್ಮ ಒಬ್ಬಳೇ ಕೂತು ಅತ್ತಿದ್ದಳು.

ಅಕ್ಕಂಬಕ್ಕನ ಬಗ್ಗೆ ಚೂರು ಪಾರು ಕತೆಗಳನ್ನು ಕೇಳಿ ತಿಳಿದು ಕೊಂಡದ್ದು ಸ್ವಲ್ಪ ದೊಡ್ಡವ ಳಾದ ಮೇಲೆಯೇ. ತನ್ನೆಲ್ಲ ಸರೀಕರಂತೆ ಹನ್ನೆರಡು ತುಂಬು ವುದರೊಳಗೆ ಮದುವೆಯಾಗಿ, ಮೂವತ್ತು ತುಂಬುವದರೊಳಗೆ ಅವಳಿಗೆ 9 ಹೆರಿಗೆಗಳಂತೆ. ಎಲ್ಲ ಸತ್ತು ಹುಟ್ಟಿದ ಮಕ್ಕಳು. ಸ್ವಲ್ಪ ವರ್ಷಗಳೊಳಗೆ ತಲೆಯ ಮೇಲೆ ಅಡಿಕೆ ಮರ ಬಿದ್ದು ಗಂಡನೂ ಇಲ್ಲ. ಅವಳಿಗೆ ಉಳಿದದ್ದು, ಹೆರಿಗೆ ಸಮಯದಲ್ಲಿ ಯಾವುದೋ ಕಾಂಪ್ಲಿಕೇಶನ್ನಿನಿಂದಲೋ, ಹೆರಿಗೆ ಮಾಡಿಸುವವರ ಅಜ್ಞಾನದಿಂದಲೋ ಶುರುವಾದ ಮೂತ್ರಕೋಶದ ಮೇಲೆ ಹತೋಟಿ ತಪ್ಪಿದ ಸ್ಥಿತಿ (incontinence), ಒಂದು ಪುಟ್ಟ ಹೆಂಚಿನ ಮನೆ, ಸ್ವಲ್ಪ ತೋಟ, -ಒಂದಷ್ಟು ದನಕರುಗಳು. ಅಂದಿನಿಂದ ಅವಳು 70ಕ್ಕೋ 75ಕ್ಕೋ ಸಾಯುವವರೆಗೂ, ತನ್ನ ಮನೆಯಲ್ಲಿ ತಾನೊಬ್ಬಳೆ. ತೋಟವನ್ನು ತನ್ನ ಕೈಲಾಗುವವರೆಗೆ ನೋಡಿಕೊಂಡು, ಕೊನೆಗೆ ತಮ್ಮನಿಗೆ ವಹಿಸಿಕೊಟ್ಟಳು. ಊಟ ತಿಂಡಿಯೂ ತಮ್ಮನ ಮನೆಯಿಂದಲೇ.

ತಾನು ರಜಕ್ಕೆ ಮನೆಗೆ ಹೋದಾಗ ಅಡಿಕೆ ಆರಿಸಿಕೊಟ್ಟರೆ ತಪ್ಪದೆ ತನಗೊಂದು ಲಂಗ ಹೊಲಿಸಿಕೊಡುತ್ತಿದ್ದದ್ದು, ತನಗಾಗಿ ಅಂಗಳದ ತುಂಬ ಹೂವಿನ ಗಿಡ ಬೆಳೆಸಿ, ಯಾರೂ ಕೀಳದಂತೆ ಅಕ್ಕಂಬಕ್ಕ ಕಾದು ಕೂರುತ್ತಿದ್ದದ್ದು ಎಲ್ಲ ಅಮ್ಮ ಈಗಲೂ ನೆನೆಸಿಕೊಳ್ಳುತ್ತಾಳೆ. 'ಆಗಿನ ಕಾಲದ ಹೆಂಗಸರೆಲ್ಲ ಎಷ್ಟು ಗಟ್ಟಿ. ಒಂದು ಸಿಸೇರಿಯನ್ ಇಲ್ಲ. ಹತ್ತು ಮಕ್ಕಳನ್ನು ಹೆತ್ತು ಗುಂಡುಕಲ್ಲಿನ ಹಾಗೆ ಇರುತ್ತಿದ್ದರು' ಅಂತೆಲ್ಲ ಯಾರಾದರೂ ಕತೆ ಹೇಳಲಿಕ್ಕೆ ಶುರುಮಾಡಿದರೆ, ಅಮ್ಮ ತಕ್ಷಣ ಅಕ್ಕಂಬಕ್ಕನ ಸತ್ತ ಮಕ್ಕಳ ಕತೆ ಹೇಳಿ, ''ಆ ಕಾಲದಲ್ಲೂ ಹೆರಿಗೆಯಲ್ಲಿ ಸತ್ತ ಹೆಂಗಸರ, ಸತ್ತ ಮಕ್ಕಳ ವಿಷಯ ಎಲ್ಲ ಯಾಕೋ ಯಾರಿಗೂ ನೆನಪೇ ಆಗುವುದಿಲ್ಲ'' ಅಂತ ಮೂಗು ಮುರಿಯುತ್ತಾಳೆ. ಗಂಡ ಸತ್ತ ನಂತರ ಸುಲಭವಾಗಿ ತಮ್ಮನ ಕುಟುಂಬದೊಳಗೆ ಕಳೆದುಹೋಗಬಹುದಾಗಿದ್ದ ಅಕ್ಕಂಬಕ್ಕ, ಒಬ್ಬಳೇ ಜೀವನ ನಡೆಸುವ ನಿರ್ಧಾರ ತೆಗೆದುಕೊಂಡದ್ದು ಯಾಕೆ? ಆ ನಿರ್ಧಾರದ ಹಿಂದಿನ ಭಾವ ವೈರಾಗ್ಯವೊ, ಛಲವೋ, ಸ್ವತಂತ್ರ ಬದುಕಿನ ಹಂಬಲವೋ ಅಥವಾ ತನ್ನ ವಿಚಿತ್ರ ದೇಹಸ್ಥಿತಿಯ ಬಗ್ಗೆ ಮುಜುಗರವೋ ಅನ್ನುವುದು ಅಮ್ಮನಿಗೂ ಗೊತ್ತಿಲ್ಲ.

ಬೆಂಗಳೂರಿನಲ್ಲಿ ಮಳೆ ಪಿಟಿಪಿಟಿ ಅಂದಾಗ ನನಗೆ ಒಮ್ಮೊಮ್ಮೆ ಅಕ್ಕಂಬಕ್ಕನ ನೆನಪಾಗುವುದುಂಟು. ಮಲೆನಾಡಿನ ಧೋ ಧೋ ಮಳೆಯಲ್ಲಿ, ಕಗ್ಗತ್ತಲ ರಾತ್ರಿಯಲ್ಲಿ, ಇಲಿಯ ಬುಡುಬುಡು ಸದ್ದಿನ ಮನೆಯಲ್ಲಿ, ಚಿಮಣಿ ಬುಡ್ಡಿಯ ಪಕ್ಕ ಕೂತ ಈ ಒಂಟಿ ಜೀವ ಏನು ಯೋಚಿಸುತ್ತಿದ್ದೀತು? □



ಗಣಪಿ ಭಟ್ಟ

ಯಜಮಾನ್ತಿ



ಬೆಳಗ್ಗೆ ಎದ್ದು ಕಣ್ಣು ತೆರೆಯುವಷ್ಟರಲ್ಲಿ 8 ಘಂಟೆ. ಅಜ್ಜಿಮನೆಯ ಗಡಿಯಾರದ ಢಣ ಢಣ ಸದ್ದು. ಗಡಬಡೆಯಿಂದ ಎದ್ದು ಹಾಸ್ಗೆ ಸುತ್ತಿ, ಮಕ ತೊಳೆದು ಕಾಫಿ ಮಾಡಲ್ಹೋದೆ. ಹಾಲೆಲ್ಲಿದ್ದು? ಅಜ್ಜಿಮನಿಗೆ ಹೋಗಿ ಕಾಡಿ, ಬೇಡಿ, ಅಂತು ಹಾಲ ತಂದು, ಕಾಫಿ ಮಾಡಿ, ಬಾಳೆಕಾಯಿ ಕೊರೆದು, ಜೀಸಿ, ದೋಸೆ ಮಾಡಿ ಬೆಳಿಗ್ಗಿನ ಆಸ್ರಿಗೆ ಕೊಂಡಾತು.

ಬಾಕಿ ಎಲ್ಲ ಕೆಲ್ಸ ಮುಗ್ಸಿ, ಗೆದ್ದಿಗ್ಹೋಗಿ ಗೆದ್ದೆ ನೆಟ್ಟಹಾಕಿಕ್ಕೆ, ತಿರ್ಗಿ ಮನಿಗ್ಬಂದು, ಕೆಸನಸಪ್ಪಿನ ತಾಳ, ಪಟಪಟೆ ಸಪ್ಪಿನ ಗೊಜ್ಜನ್ನು ಮಾಡಿ, ಅನ್ನ ಮಾಡಿ, ಊಟ ಮಾಡಾತು. ಊಟ ಮಾಡಿ ಹಾಸ್ಗೆಲ್ಲಿ ಮಲಕ್ಕ್ಯಂಡು, ತನ್ನ ಅಪ್ಪನ ಮನೆಯ, ನೆನಪ ಮಾಡಕ್ಯಂಡು, 'ದೂರ ಬೆಟ್ಟದಲ್ಲಿ ಒಂದು ಮನೆ ಇರಬೇಕು' ಹೇಳಿ, ಒಂದು ದೊಡ್ಡ ಬೆಟ್ಟದಲ್ಲಿ ಒಂದು ಮನೆ. ಮನೆಯ ಒಂದು ಬದಿಗೆ ಅಡಿಕೆ ತೋಟ. ಮತ್ತೊಂದು ಬದಿಗೆ ಭತ್ತದ ಗದ್ದೆ... ತೆಂಗು, ಹಲಸು, ಮಾವು, ಎಲ್ಲ ಸಮೃದ್ಧವಾಗಿದ್ದ ಮನೆ. ತಂದೆ, ತಾಯಿ, ಅಣ್ಣ, ಅಕ್ಕ ಸೇರಿ ಒಟ್ಟು ಏಳು ಜನ ಮಕ್ಕ. ಅದ್ರಲ್ಲಿ ಕಿರಿಯವಳೆ ಗೋದಾವರಿ. ಕಪ್ಪು ಬಣ್ಣ. ವಳೆ ಗಟ್ಟುಮುಟ್ಟಿನ ಆಳ್ತನ. ಗೋದಾವರಿಗೆ ಹನ್ನೊಂದನೆ ವರ್ಷದಲ್ಲೆ ಮದುವೆ. ಅಲ್ಲೆ ಹತ್ತು ಮೈಲು ದೂರ್ದಲ್ಲೆ ಒಂದು ಬಡಿ ಕುಟುಂಬ. ಅಣ್ಣ, ತಮ್ಮ ಮತ್ತು ತಾಯಿ. ಅವ್ರಲ್ಲಿ ತಮ್ಮನ ಹೆಂಡತಿಯೇ ಗೋದಾವರಿ. ಸೋಂಗೆ ಮನೆ. ಸುತ್ತಲೂ ಹಗರ ತಟ್ಟಿ. ಬೇಸ್ಗೆಲ್ಲಿ ಹಗರ ಸಂದ್ಯಲ್ಲಿ ಬಿಸ್ಲೆಲ್ಲ ಒಳಗೆ. ಮಳೆಗಾಲ್ದಲ್ಲಿ, ಚೋರಟೆ, ಉಂಬ್ಳ, ಸಂಣ ಸಂಣ ಹಾವು, ಎಲ್ಲ ವಳಗೆ ಬರ್ತಿದ್ದ. ಪಾಪ ಗೋದಾವರಿ ಅಪ್ಪನ ಮನೆಯಲ್ಲಿ ಮುದ್ದಿನಿಂದ ಸುಖವಾಗಿ ಬೆಳೆದ ಮಗಳು. ಕೈಹಿಡಿದಂವೇನೋ

ಪ್ರೀತಿಯಿಂದ ನೋಡ್ಕತ್ತಿದ್ವ. ಗಂಡ ಹೆಂಡತಿ ಅಂದ್ರೆ, ಒಬ್ಬರ್ನೊಬ್ಬರು ಬಿಟ್ಟು ಇರ್ಲಾರ್ದೆ ಹೋದಂತ ಅನ್ಯೋನ್ಯವಾದ ದಾಂಪತ್ಯ. ಆದ್ರೆ 'ಒಡವೆ ವಸ್ತ್ರಗಳೆಂಬ ಗೊಡವೆಯು ಎನಗಿಲ್ಲೆ' ಹೇಳ ಮಾತಿನ್ಹಾಂಗೆ-ಬಾಕಿದೆಲ್ಲ ಶೂನ್ಯ.

ಗಂಡ-ಹೆಂಡತಿ, ಭಾವ ಎಲ್ಲ ಕೂಡಿ ಮನೆ ಕೆಲಸ ಎಲ್ಲ ಮುಗಿಸ್ಕಂಡು, ಊರಲ್ಲಿ ಬೇರೆಯವ್ರ ಮನೆ ಕೆಲಸಕ್ಕೆ ಹೋಗದು, ಬಂದ ದುಡ್ಡಲ್ಲಿ ಬೇಕಾಗಿದ್ದನ್ನು ತಗಳದು ಮಾಡ್ತಿದ್ವ. ಹೀಂಗೆ ಕಳಿತಾ, ಕಳಿತಾ, ಬೆವರಿನ ದುಡಿಮೆ ಫಲದಿಂದ ಅಷ್ಟಿಷ್ಟಾಗಿ, ಮನೆಯಲ್ಲಿ ಈಗೇನೂ ಅಡ್ಡಿ ಇಲ್ಲೆ ಹೇಳ್ವಷ್ಟು ಅನುಕೂಲ ಆಗ್ತಾ ಬಂತು. ಗೋದಾವರಿಯ ಬಾಯಲ್ಲೂ ರಂಪಾಟ ಶುರುವಾತು. ಮನೆಯಲ್ಲಿ ಅತ್ತೆ, ಭಾವ, ಅಕ್ಕ ಎಲ್ಲಾರೂ ಹಿರಿಯರಿದ್ದ. ಇದು ಬಂದಲ್ಲೂ ಕಿರೀದೆಯಾ. ಎಲ್ಲಾರ್ನು ಹೆದರ್ಸದು. ಮಾತಾಡಿದ್ರೆ, ಜಗಳಾನೆ ಮಾಡದು. ಬೇರೆಯವು ನಿಂತಿದ್ದೇ ಅಲ್ಲ. ಕುಂತಿದ್ದೇ ಅಲ್ಲ. ಹೀಂಗೆ ಬಾಯಿ ಮುಂದೆ ಮಾಡ್ಕಂಡು ಹೋಗದು. ಮೊದ ಮೊದ್ಲು ಅವೂ ಹೇಳಿ ನೋಡ್ಜ. ಅವು ಒಂದ, ಹೇಳಿದ್ರೆ, ಇದು ಒಂದ ನೂರ ಹೇಳದು. ಇಡೀ ದಿನಾನೂ ಬಾಯಿ ಮುಚ್ಚದೇ ಇಲ್ಲೆ. ಅತ್ತೆ, ಭಾವ, ಅಕ್ಕ ಎಲ್ಲ ಬೇಜಾರ ಬಂದು, ಮಾತಾಡದೆ ಬಿಟ್ಟ. ಆದ್ರೂ ಇದ್ರ ಜೋರು ಹೆಚ್ಚಾಗ್ತ ಬಂತು. ಮನೆಯಲ್ಲಿ ತನ್ನದೇ ಎಲ್ಲ. ಬೇರೆಯವ್ರದ್ದು ಎಂತದೂ ಇಲ್ಲೆ. ಹೀಂಗೆ ಒಂದಲ್ಲ ಎರಡಲ್ಲ.

ಭಾವನ ಹೆಂಡ್ತಿ ನಾಗವೇಣಿ ಸ್ವಲ್ಪ ಪೆದ್ದಿ. ಕೈಯಲ್ಲೆಂತೂ ಆಗ್ತಿಲ್ಲೆ. ಬಾಯಲ್ಲೂ ಅಷ್ಟೇಯಾ! ಯಾವುದ್ರಲ್ಲೂ ಅಷ್ಟಕ್ಕಷ್ಟೆಯಾ. ಅದ್ರಲ್ಲೂ ಗೋದಾವರಿಯ ಜೋರ ಕೇಳಿ, ಥರಗುಟ್ಕಂಡು ನಡುಗದೆಯಾ. ನಾಗ್ವೇಣಿ ಮೊದಲ್ನೆ ಸಲ ಬಸರಾತು. ನಾಗ್ವೇಣಿ ತಾಯಿ, ತವರು ಗಟ್ಟಿ ಇಲ್ಲಗಿದ್ದ ಕೂಸು, ಉಡವು, ತೊಡವು ತಿನ್ನವು ಹೇಳಿ ಎಲ್ಲಾರಿಗೂ ಇರದೆಯಾ. ಆದ್ರೆ, ನಾಗ್ವೇಣಿಗೆ ಮಾತ್ರ ಅಬ್ಯಾವದಕ್ಕೂ ಅನುಕೂಲ, ಅವಕಾಶ ಇಲ್ಲೆ.

ಅತ್ತೆ ಎಂತಾದ್ರೂ ಮಾಡ್ಕೊಡನ ಹೇಳಿ ಒಳಗ್ಹೋದ್ರೆ, ಈ ಗೋದಾವರಿ ಅತ್ತೆಗೆಂತೂ ಮುಟ್ಟಲೆ ಕೊಡವಾಂಗಿಲ್ಲೆ. ಹೀಂಗೆ ದಿನ ತುಂಬಿ ನಾಗ್ವೇಣಿ ಗಂಡುಮಗುವಿನ ತಾಯಾತು. ಆವಾಗಂತೂ ನಮ್ಮ ಮಹಾಭಾರತದಲ್ಲಿ ಹೇಳ್ತ್ವಲಿ; ಗಾಂಧಾರಿ, ಕುಂತಿಗೆ ಮಕ್ಕ ಆಗಿದ್ದ ಕೇಳಿ ಹೊಟ್ಟೆ ಹಿಚಕ್ಯಂಡು, ಗರ್ಭಪಾತಾಗಿ, ನೂರಾ ಒಂದು ತುಂಡಾತು ಹೇಳಿ. ಹಾಂಗೆ ಗೋದಾವರಿಯೂ ಬಸಿರಿ ಆಗಿದ್ದಿದ್ರೆ, ನೂರು ತುಂಡಲ್ಲಗಿದ್ರುವಾ, ಮೂರು ತುಂಡಾದ್ರೂ ಆಗ್ತಿತ್ತು. ಸುಮ್ನೆ ಹೊಟ್ಟೆ ಹಿಚಕ್ಯಂಡಿದ್ದೇ ಬಂತು.

ಮನೆಯಲ್ಲಿ ಹಾಲು ಮಜ್ಜಿಗೆ ಇದ್ರುವಾ ಅತ್ತೆಗೆ ಮುಟ್ಟ ಅಧಿಕಾರ ಇಲ್ಲೆ... ಬೋಗಣಿ, ತಟ್ಟೆ ಬಗಲಲ್ಲಿ ಹಾಕ್ಯಂಡು, ಅಚ್ಚೆಮನೆ, ಇಚ್ಚೆಮನೆ ತಿರುಗಿ, ಹಾಲು, ಮಜ್ಜಿಗೆ ಬೇಡ್ಕ್ಯಂಡು ತಂದು, ಸೊಸಿಗೆ ಹಾಕದು. ಮೆಣಸಿನ ಕಾಳು, ಜೀರಿಗೆ ಅರ್ದಮರ್ದ ಬೇಯ್ಸಿ, ಗಡಬಡನೆ ಒಳ್ಳಲ್ಹಾಕಿ ತಿರಿಸಿ, ಎಲ್ಲೋ ಒಂದು ಸೇರು ತುಪ್ಪ ತಂದಿದ್ದನ್ನೇ ಒಂದ ಚೂರು ಕಿಟ್ಸಿ ಮದ್ ಮಾಡಿ ಕೊಡದು. ಅತ್ತೆ, ಮೀಸಲೆ ಹೇಳಿ ಬಚ್ಚಲ ಬೆಂಕಿ ವಟ್ಟಿಕ್ಕೆ ಬಂದ್ರೆ, ಈ ಗೋದಾವರಿ ಬೆಂಕಿ ಯಳದು, ನೀರ್ ಹೊಯ್ದು ನಂದ್ಸಿಕ್ಕೆ ಬರ್ತಿತ್ತು. ತಣ್ಣೀರ, ಬಿಸಿನೀರ, ಒಟ್ಟೂ ಮೀಸಿ, ಅತ್ತೆ ಸೊಸಿಗೆ ಬಾಳಂತನದ ಶಾಸ್ತ್ರ ಮುಗಿಸ್ಟು.

ಅಕ್ಕ ಮಗುವಿಗೆ ಹಾಲು ಕುಡಿಸವು ಅಂದ್ರೆ, ತಂಗಿ ಕೊಟ್ರೆ, ಮಾತ್ರ ಕುಡಿಸವು. ಇಲ್ಲಗಿದ್ರೆ ಇಲ್ಲೆ. ಜೀರಿಗೆ ನೀರ ಕುದಿಸಿ ಮಗಂಗೆ ಹೊಯ್ದು, ಅಂತೂ ಮಗನ್ನ ದೊಡ್ಡ ಮಾಡ್ಚು. ನಾಗ್ವೇಣಿ ಮತ್ತೊಂದು ಮಗನ ತಾಯಾತು. ಹೀಂಗೆ ನಾಗ್ವೇಣಿಗೆ ಐದು ಮಕ್ಕ ಅದ. ಎಲ್ಲಾ ಮಕ್ಕ ಬಾಳಂತನಾನೂ ಒಂದೇ ನಮುನಿ. ಅತ್ತೆ ಮಜ್ಗೆ ಉಳಿಗೆ ಕೈ ಹಾಕಿ ಒಂಚೂರು ಬೆಣ್ಣೆ ತೆಗದಿಟ್ಕಳದು. ಅದೂ ಸೊಸೆ ಇಲ್ಲಗಿದ್ದ ಹೊತ್ ನೋಡಿ. ಎಲ್ಲಾದ್ರೂ ಹುಳಿ ಮಜ್ಗೆ ಅಕ್ಕಚ್ಚಿಗೆ ಹಾಕಲೆ ಹೇಳಿ ಇಟ್ರೆ, ಅದನ್ನೇ ಸ್ವಲ್ಪ ಎರಸಿಟ್ಕಂಡು ಬಂದು ಸೊಸಿಗೆ ಬಡ್ಸದು. ಹೊಡಚ್ಲಗುಂಡಿಯಲ್ಲಿ ಸಾರನ್ನು ಬತ್ಸಿ ಕೊಡದು.

ನಾಗ್ವೇಣಿ ಗಂಡಂಗೂವಾ ಎಂತಕ್ಕೆ ತನ್ನ ಹೆಂಡ್ತಿಗೆ ಹೀಂಗ್ಮಾಡ್ತೆ ಹೇಳಿ, ನಾದನಿ ಹತ್ರ ಕೇಳ ಧೈರ್ಯ ಇಲ್ಲೆ. ಹೊರಗಿನವು ಯಾರಾದ್ರೂ, 'ಇಷ್ಟೆಲ್ಲಾ ತ್ರಾಸ ಕೊಟ್ಟಿದ್ವ, ನೋಡ್ಕ್ಯಂಡು ಸುಮ್ನೆ ಇರ್ತೈನೆ' ಹೇಳಿ ಕೇಳಿದ್ರೆ, 'ಅಯ್ಯ ಎನ್ನ ಹೆಂಡ್ತಿ!



ಅದು, ನೊಣಮುತ್ಕ, ಗೊಲ್ಲಶವ. ಎಂತಕ್ಕೂ ಆಗ್ತಿಲ್ಲೆ ಆದರ್ಥತ್ರ' ಹೇಳಿ ಗಂಡ ಹೇಳದು. ಅತ್ತೆಗೂ ಅಷ್ಟೆಯಾ. ಗೋದಿಗೆ ಅಕ್ಕಾದ್ದಾಂಗೆ ಮಾಡಕ್ಯಂಡ್ರೆ ಪಂಕ್ತಿಗೆ ಹೋಗಿ ಕೂತ್ಕಂಡ್ರೆ, ಒಂದು ತುತ್ತು ಅನ್ನ, ಆಸ್ರಿಗೆಯಾದ್ರೂ ಸರಿಯಾಗಿ ಸಿಗ್ತು. ಹಾಗಾಗಿ ಗೋದಿಗೆ ಎದುರುತ್ರ ಕೊಡಲೂ ಹೆದ್ರಿಕೆಯಾ. ಗೋದಾವರಿಯೂ ಬಸರಾತು.

ಆವಾಗ ಅದಕ್ಕೆ ಏನ ಪೆಳ್ಳಾಪನೆಯೋ ಪೆಳ್ಳಾಪನೆ. ಗಂಡ, ಭಾವ, ಅತ್ತೆ ಎಲ್ಲಾರೂ, ಹೀಗೇ ಇರ್ಬೇಕಾದರೆ ಅಪರೂಪಕ್ಕೆ ಬಸರಾಜು ಹೇಳಿ, ಕುಣಸದೆ ಕುಣಸದು. ಕಳಿತಾ, ಕಳಿತಾ, ದಿನ ತುಂಬಿ ಹೆರಿಗ್ಯಾತು. ಅದ್ರೆ ಸರಿಯಾಗಿ ಆ ಜಲ್ಲೆ ಡಾಕ್ಟರು ಬಂದು ಮಗುವನ್ನೇನೋ ತೆಗದಾತು. ಆದ್ರೆ ಹೊಟ್ಟೆ ಒಳಗೇ ಮಗು ಸತ್ತೋಗಿತ್ತು. ಅಪ್ಪನ ಮನಿಂದ ಜನ ಕರಸ್ಕಂಡು ಬಾಳಂತನ ಚಲೋ ನಡ್ತು. ಹೀಂಗೆ ಗೋದಾವಗಿ ಮೂರು ಮಕ್ಕ ತಾಯಿ ಆಗಿದ್ದೇನೋ ಹೌದು. ಆದ್ರೆ ಒಂದ್ರಲ್ಲೂ ಮಗು ಬದುಕಿದ್ದಿಲ್ಲೆ. ಡಾಕ್ಟರು ಬಂದು ಹೆರಿಗೆ ಮಾಡ್ಸದು. ಮಕ್ಕ ಸತ್ತೇ ಹುಟ್ಟದು. ಹೊರದು, ಹೆರದು ಗುಂಡಿಗ್ಹಾಕದು. ಸೋವು ತಿಂದು ಬಾಳಂತನ ಮಾಡ್ಕಂಡಿದ್ದೊ ಒಂದನ್ನು ಬಿಟ್ರೆ, ಬೇರೆ ಎಂತ ಪ್ರಯೋಜನ ಆಜಿಲ್ಲೆ.

ನಾಗ್ವೇಣಿ ತನ್ನ ಕಿರೀಮಗಂಗೆ ಮೂರು ವರ್ಷ ಆಗ್ತಿದ್ದಾಂಗೆ ಏನೋ ಒಂದು ಕಾಯ್ಲೆ ಬಂದು, ಈ ನರಕ ಯಾತ್ನೆಯಿಂದ ಬಿಡಿಸ್ಕಂಡು, ಈ ಲೋಕದ ಯಾತ್ರೇನೇ ಮುಗಿಸ್ಕಂಡು ಹೋತು. ಮಕ್ಕ ಎಲ್ಲ ತಾಯಿ ಇಲ್ಲಗಿದ್ದ ಪರದೇಶಿಗ ಆದ.

ಅತ್ತೇನೂ ಒಂದಿನ ತೀರ್‌ಕಂಡ್ಚು. ಆವಾಗಂತೂ ಗೋದಾವರಿಗೆ ಮತ್ತೂ ಲೈಕಾತು. 'ಅರಸನ ಹಂಗಿಲ್ಲೆ, ಕಾವಲುಗಾರರ ಕಾಟ ಇಲ್ಲೆ' ಎಂಬ್ಹಾಂಗೆ. ತಾಸು ಮಾಡಿದ್ದೇ ಮಾಟ. ತಾಯಿ ಇದ್ದಾಗ ಆ ಮಕ್ಕಳ ಕಂಡ್ರೆ, 'ಆಯ್ಯೋ ಏನ್‌ಗೊಲ್ಲು, 'ಏನ್‌ಗೊಲ್ಲು' ಹೇಳ್ಕತ್ತ ಪಿಚಪಿಚನೆ ಎಂಜಲು ತುಪ್ತಿತ್ತು. ಸಿಟ್ಟಿನಿಂದ ಕೈಹಿಡಿದು ಎಳ್ಕಂಡ್ ಹೋಗಿ ಬಿಡ್ತಿತ್ತು. ಅವೆಲ್ಲ ಬದ್ಕಿದ್ದಾಗ ಯಮ್ಮನೆ ನಾಗಿ, ರಂಡೆ, ಮುಂಡೆ, ಯಮ್ಮನೆ ಅಮ್ಮ ಹೇಳ್ಕತ್ತ ಬಾಯಿಗೆ ಬಂದಿದ್ದೆಲ್ಲ ಬಯ್ತಿತ್ತು. ಬಾಯಿ ತೆಗತ್ತಲಾ ಅಂದ್ರೆ, ಬೈಗುಳದ ಸುರಿಮಳೆ ಸುರಸ್ತಿತ್ತು. ಆದ್ರೆ ಈಗ ಬೈಯದಾದ್ರೂ ಯಾರಿಗೆ?

ಭಾವಂತೂ ತಲೆಮೇಲೆ ಕೂತ್ಕಂಡು, ಹೊರ್ಕಡೆ ಮಾಡಿದ್ರೂ ಮಾತಾಡವಂಲ್ಲ. ಇನ್ನು ಮಕ್ಕ ಅಂತೂ ಪಾಪ ಎಂತದೂ ತಿಳಿಯಗಿದ್ದವು. ಎಷ್ಟೇ ಬೈಲಿ, ಹೊಡಿಲಿ, ಚಿಕ್ಕಮ್ಮ, ಚಿಕ್ಕಮ್ಮ ಹೇಳಿ ಕಾಲ್ ಸುತ್ತಲೆ ಹಣಕ್ಕ. ಆವಾಗ ಗೋದಾವರಿಗೆ ಎಂತ ಮಾಡಲೂ ಗೊತ್ತಾಗಗಿದ್ದೆ ಸ್ವಲ್ಪ ಕನಿಕರ ತೋರ್ಸಲೆ ಹಣಕ್ಟು. ಹಾಲು, ಊಟ ತಿಂಡಿ ಎಲ್ಲ ಸರಿಯಾಗಿ ಕೊಡಲೆ ಹಣಕ್ಟು. ತಾಯಿ ಪ್ರೀತಿ ಅಲ್ಲಗಿದ್ರೂ, ಆ ಮಕ್ಕಗೆ, ತಾಯಿ ಇದ್ದಾಗಿನಕಿಂತ, ಹೆಚ್ಚಿಗೆ ಸುಖ ಸಿಗಲ್ ಹಣಕ್ಟು. ತಂದೆ, ಹೆಸ್ರಿಗೆ ಮಾತ್ರ ತಂದೆನೆಯಾ. ಅಂವ ಯಾವುದನ್ನೂ ತಟ್ಟೆಸ್ಗಳಲೇ ಹೋಗ್ತಿದ್ದಿಲ್ಲೆ. ಅಲಕ್ ನಿರಂಜನ. ಬರ್ತಾ ಬರ್ತಾ ಗೋದಾವರಿಗ್ಯಾಕೋ ಆ ಮಕ್ಕಳ ಮೇಲೆ ಪ್ರೀತಿ ಹೆಚ್ಚಿಗೆ ಬರಲೆ ಹಣಕ್ಟು.

ಸ್ವಲ್ಪ ಹೆಚ್ಚಿಗೆ ಕಾಳಜಿ ತಗಂಡು, ಮೈ ಮಂಡೆ ಎಲ್ಲ ಚೊಕ್ಕ ಮಾಡಿ, ಅವರ ಕೈಯಲ್ಲಿ ಸಣ್ಣ, ಪುಟ್ಟ, ಕೆಲ್ಸ ಮಾಡ್ಸಲೆ ಹಣಕ್ಟು. ಎರಡು ಹೆಣ್ಣಕ್ಕನ್ನಂತೂ ತನ್ನ ಮಕ್ಕ ತರಾನೆ ನೋಡ್ಕಂಬ್ಲೆ ಹಣಕ್ಟು. ಅತ್ತೆ, ಅಕ್ಕ ತೀರ್ಕ್ಯಂಡ ಮೇಲೆ, ಮನೆ ವಾತಾವರಣಾನೇ ಬೇರೆ ಆತು. ನಮ್ಮಲ್ಲಿ ಹೇಳ್ತಲಿ, 'ಕಾಲ ದೋಷ ಮನೆ ಬಿಟ್ಟು ಹೋತು' ಹೇಳಿ. ಹಂಗೆ ಆತು, ಅವರ ಮನೆ ಪರಿಸ್ಥಿತಿ. ಸೋಂಗೆ ಮನೆ ಹೋಗಿ ಹಂಚಿನ ಮನೆ ಆತು. ಮಕ್ಕಗೆಲ್ಲ ಒಳ್ಳೊಳ್ಳೆ ಬಟ್ಟೆ ತಂದ್ಕೊಡಲೆ

ಹಣಕ್ಚು. ತಿಂಡಿ, ಗಿಂಡಿ ಎಲ್ಲಾ ಚಿಕ್ಕಮ್ಮ ಮಾಡ್ಕೊಡಲೆ ಪ್ರಾರಂಭ ಮಾಡ್ಚು.

ಗೋದಾವರಿ ಎಲ್ಲಾ ತನ್ನಿಂದ್ಲೇ ಆತು. ತಾನೆ ಎಲ್ಲಾ ಮಾಡಿದ್ದು ಹೇಳಿ ಮತ್ತೂ ಉಬ್ಚು. ಕೆಲ್ಸದಲ್ಲಿ ಗಟ್ಟಿ ಇದ್ದಿದ್ದೇನೋ ಹೌದು. ಆದ್ರೆ, ಗಂಡ, ಭಾವ ಎಲ್ಲ ಸಹಾಯ ಮಾಡ್ತಿದ್ದ. ಆ ಪುಟೀ ಹುಡುಗ್ರೂ ಸಣ್ಣ ಪುಟ್ಟ ಕೆಲ್ಸ ಮಾಡ್ಕೊಡ್ತಿದ್ದ. ಆದ್ರೂ ಇದಕ್ಕೆ ತಾನೇ ಈ ಮನೆ ಯಜಮಾನ್ತಿ ಹೇಳಿ ಹಮ್ಮು, ಸೊಕ್ಕು. ಮಕ್ಕ ಬೆಳಿತಾ, ಬೆಳಿತಾ ಪ್ರಾಯಕ್ಕೆ ಬಂದ. ಹಿರೇ ಮಗಂಗೆ ಒಂದು ಕೂಸನ್ನು ನೋಡಿ ಅದ್ದೂರಿಯಿಂದ ಮದುವೆ ಮಾಡ್ಚು. ಒಳ್ಳೆ ಸಂಭ್ರಮದಿಂದ್ಲೆ ಸೊಸೆಯನ್ನು ಮನೆ ತುಂಬಿಸಿಕೆಂಡೂ ಆತು. ಪ್ರೀತಿ ವಾತ್ಸಲ್ಯದಿಂದ ಸೊಸೆಯನ್ನು ನೋಡ್ಕಂಡಿದ್ದೂ ಆತು. ಆದ್ರೆ ಇದೆಲ್ಲ ಭಾಳದಿನ ಉಳದ್ದಿಲ್ಲೆ. ಮೂರ್ನಾಲ್ಕು ವರ್ಷದಲ್ಲೇ ಎಲ್ಲಾ ಮಾಯ ಆತು. ಮತ್ತೆ ಮೊದಲ್ನಾಂಗೆ ಬೈಗಳ ಶುರುವಾತು. ಬಾಯಿಗೆ ಬಂದಿದ್ದೆಲ್ಲ ಹೇಳದು.

ಮತ್ತೊಂದು ಸೊಸೆ ತಂದಕಂಡ್ಚು. ಆವಾಗಂತೂ ಹಿರೀಸೊಸೆ ರಾಶಿಯೇ ಕಷ್ಟ ಅನುಭವಿಸಕಾತು. ಹೆಣ್ಣುಮಕ್ಳನ್ನೂ ಮದುವೆ ಮಾಡಿ ಮನೆಗೆ ಕಳಿಸಿ, ಅವ್ರಿಗೂ ಚೊಲೋ ಬಾಳಂತನ ಮಾಡಿ ಕಳಿಸಿ, ಎಲ್ಲಾ ಆತು. ಭಾವ ಇದ್ದಕ್ಕಿದ್ದ ಹಾಂಗೆ ಒಂದಿನ ಕೂತಲ್ಲೆ ಮುಕರ್ಸಿ ಬಿದ್ದ. ಏನಾತು ಹೇಳಿ ನೋಡ ನೋಡವಷ್ಟ್ರಲ್ಲಿ ಪ್ರಾಣಪಕ್ಷಿ ಹಾರಿಹೋತು. ಅವನ ಈ ಲೋಕದ ಯಾತ್ರೆ ಮುಗ್ತು.

ಇನ್ನು ಹಳೇ ಜನ್ರಲ್ಲಿ ಉಳದವು, ಗೋದಾವರಿ, ಗೋದಾವರಿಯ ಗಂಡ ಇಬ್ರೆಯಾ. ಆವಗಂತೂ ಸಂಭ್ರಮವೋ ಸಂಭ್ರಮ. ಬೇಕಬೇಕಾದ ನಮ್ನಿ ಬಟ್ಟೆ ತಗಳದೇನ! ಮೈ ತುಂಬ ಬಂಗಾರ ಮಾಡಿಸ್ಕ್ಯಳದೇನ. ಯಾತ್ರೆ ಸಾತ್ರೆ ಮಾಡ್ಕತ್ತ ಗಂಡ-ಹೆಂಡ್ತಿ ಭಾಳ ಖುಶಿಯಿಂದ ದಿನ ಕಳೆದ. ಆದ್ರೆ, ಅದೆಲ್ಲ ಎಷ್ಟು ದಿನ!! ವರ್ಷ ಕೂತ್ಗತ್ತ? ಒಂದೊಂದಾಗಿ ಮುಂದೆ ಹೋಗ್ತ ಹೋಗ್ತ, ಎಪ್ಪತ್ತು ಕಳ್ತು. ಗೋದಾವರಿಯ ಗಂಡ ಹಾಸಿಗೆ ಹಿಡದ. ಐದಾರು ತಿಂಗಳು ಶ್ರದ್ಧೆಯಿಂದ ಗಂಡನ ಆರೈಕೆ ಮಾಡ್ಚು. ಗಂಡ ಹೆಂಡತಿ ಎಂದರೆ ಒಬ್ಬರನ್ನೊಬ್ಬರು ಬಿಟ್ಟು, ಎಂದೂ ಇರ್ತಿದ್ವಿಲ್ಲೆ. ಎಲ್ಲಿಗಾದ್ರೂ ಹೋದ್ರೆ ಇಬ್ರೂ ಹೋಗವು. ಮನೆಯಲ್ಲಿದ್ರೆ ಇಬ್ರೂ ಇರವು. ಅಂತಹ ಅನ್ಯೋನ್ಯವಾದ ದಾಂಪತ್ಯ. ಈಗ ಇಬ್ರೂ ಹೋಪ್ಲೆ ಎಲ್ಲಿ ಆಗ್ತು? ಆರೈಕೆ ಮಾಡಿದ್ದು ಕೈಗೆ ಹತ್ತಿದ್ದಿಲ್ಲೆ. ಒಂದಿನ ಗೋದಾವರಿಯ ಕೈ ಹಿಡಿದಂವ ಈ ಲೋಕದ ಯಾತ್ರೆ ಮುಗಿಸ್ಕಂಡು ಹೊರಟ್ಹೋದ. ಅತ್ತು ಕರೆದು ಎಲ್ಲ ಅತು. ಎಂತಾ ಮಾಡದು. ಹೋದಂವ ಹೋದ. ಈಗ ಏಕಏಕಬಢಬಾಯಿ ಆತು.


ಮಕ್ಕ ಏನೋ ಚಿಕ್ಕಮ್ಮನ ಮಾತ ಚಾಚೂ ತಪ್ಪದೆ ಪಾಲ್ನೆ ಮಾಡ್ಜ. ಆದ್ರೆ ಸೊಸೆಯಕ್ಕ ಬೇರೆ ಮನಿಂದ ಬಂದವು. ತಾವು ಅನುಭವಿಸಿದ್ದ ತಿರುಗಿ ಕೊಡಲೆ ಹಣ್ಕಜ. ಊಟ ತಿಂಡಿಗೆ ಕರೆಯದಿಲ್ಲೆ. ತಂಗ ಮಾತ್ರ ಊಟ ಮಾಡ್ಕಂಡು ನಡೆಯದು. ಗೋದಾವರಿ ಬೇಕಾದ್ರೆ ಉಂಡ್ಕಂಡು ಎಲ್ಲಾ ಚೊಕ್ಕ ಮಾಡಿಟ್ಟಕ್ಕೆ ಹೋಗವು. ಏನೂ ಮುಟ್ಟಲೆ ಕೊಡದಿಲ್ಲೆ. ಮೊದಮೊದ್ಲು ಅವು ಮಾಡಿದ್ದಕ್ಕೆಲ್ಲ ತಿರುಗಿ ಭಾರಿ ರಂಪಾಟ ಮಾಡ್ಚು. ಆದ್ರೆ ಅವು ಅದ್ರನ್ನ ದರ್ಕ್ಯಾರಕ್ಕೇ ತಗಂಜ್ವಿಲ್ಲೆ. ಕೈಯಲ್ಲಿ ಮಾಡದ ಬಿಟ್ಟಿದ್ವಿಲ್ಲೆ.


ಗೋದಾವರಿ ಅವರ ಕಾಟ ತಡಿಯಲಾಗ್ದೆ ಹಾಸಿಗೆ ಹಿಡ್ತು. ಐದು ವರ್ಷ ಮನಸ್ಗಲ್ಲೆ ಮನಕ್ಕಂಡು ನರಕ ಯಾತ್ನೆ ಅನುಭವಿಶ್ಚು. ನಮ್ಮಲ್ಲಿ ಯಾರಿಗೂ ಕೇಡ ಮಾಡಗಿದ್ದವುವಾ ಹತ್ತು ವರ್ಷಗಟ್ಲೆ ಹಾಸಿಗೆ ಹಿಡಿದವು ಇದ್ದ. ಆದ್ರೂ ಎಲ್ಲಾರ್ಹತ್ರೂ 'ಮೊದಲು ಮಾಡಿದ್ದನ್ನು ಈಗ ಉಣ್ಣು' ಹೇಳ್ಗಿಗೆತ್ತ ಕಣ್ಣಲ್ಲಿ ನೀರ್‌ಹಾಕ್ಯತ್ತ, ಕೊರಗಿ ಕೊರಗಿ ಕೊನೆಯುಸಿರೆಳ್ತು.



(ಗಣಪಿ ಭಟ್ಟರಿಗೀಗ 74 ವರ್ಷ.
ಇದು ಅವರು ಈ ವಯಸ್ಸಿನಲ್ಲಿ ಬರೆದ ಮೊದಲ ಕತೆ.)

ಗಣಪಿ ಭಟ್ಟ





ಕುಂ. ವೀರಭದ್ರಪ್ಪ

ಭಲಾರೇ ವಿಚಿತ್ರಂ

'ಗಾಡ್ ಮದರ್ ಗಂಗಾ ಭವಾನಿ'

ಕಾಲ: 1970 **ಲೊಕೇಷನ್ನು : ಕೊಟ್ಟೂರು ಗ್ರಾಮದ 2ನೇ ವಾರ್ಡು**

(ಭವಾನಿ ಗಂಗವ್ವ ಎಂಬ ಅಸಾಧಾರಣ ಮುದುಕಿ ಸತ್ತಳೆಂಬ ಸುದ್ದಿಯೊಂದಿಗೆ ಅರುಣೋದಯವಾಗುತ್ತದೆ. ಬದುಕಿರುವ ಪರ್ಯಂತರ ಆಕೆಯನ್ನು ಆಟಿಗೆ ಮಾಡಿಕೊಂಡು ಬಗೆಬಗೆ ಆಟ ಆಡಿದವರೆಲ್ಲ ನೆರೆದು ಹೆಣದ ಉಪಚಾರ ಮಾಡುತ್ತಿದ್ದಾರೆ. ಲಟ್ಟಿಗೆ, ಶಾಪ, ಅಯ್ಯೋ ಪಾಪ ಎಂಬಿತ್ಯಾದಿ ಷೋಡಶೋಪಾರಗಳಿಂದ, ಕಳೇಬರ ಒಂದೊಂದು ಅಲಂಕಾರ ಪಡೆಯುತ್ತಿದೆ. ಆಕೆಯ ಬದ್ಧ ವೈರಿ ನಮ್ಮ ನಿಂಗಮ್ಮಜ್ಜಿಯಂತೂ ಇನ್ನು ತಾನ್ಯಾರೊಂದಿಗೆ ಜಂಗಿ ಕುಸ್ತಿ ಆಡುವುದೆಂದು ಯೋಚಿಸುತ್ತ ಮಂಕಾಗಿ ಕುಳಿತಿದೆ. 'ನಡೆವಾಗ ಬಾಳೆಲೇಲೂ ಉಂಡ್ಲು ನಡೆಲಿಲ್ಲಾಗ ಹುಣ್ಸಲೆ ಮ್ಯಾಲೂ ಉಂಡ್ಲು ಮುಂಡೆ' ಎಂದು ಗೊಣಗುತ್ತಲೇ, ಕಳೇಬರದ ವಾರಸುದಾರರನ್ನು ಹುಡುಕುತ್ತಿರುವವರು ಓಣಿ ಮಂದಿ. ಮರಾಠಿ ಕ್ಷತ್ರಿಯರಿಗೇನು ಊರಲ್ಲಿ ಬರವಿರಲಿಲ್ಲ. ಆದರೆ ಗಂಗವ್ವ ಬದುಕಿನುದ್ದಕ್ಕೂ ಅನೈತಿಕ ಚಟುವಟಿಕೆಗಳನ್ನು ಪೋಷಿಸಿ ಬೆಳೆಸಿದಳೆಂಬ ಕಾರಣಕ್ಕೆ ಅವರಾರೂ ಬರಲೊಪ್ಪುತ್ತಿಲ್ಲ. ಮುದುಕಿಯ ದೂರದ ಸಂಬಂಧಿಯೋರ್ವ ಕೂಡ್ಲಿಗೆ ಸಮೀಪದ ಡಾಬಾದಲ್ಲಿ ಸಪಲಾಯರ್ರಾಗಿರುವನೆಂದು ಒಬ್ಬ ಹೇಳುತ್ತಾನೆ. ಕೂಡಲೆ ಅವನಿಗೆ ಬುಲಾವ್ ಹೋಗುತ್ತದೆ.)

ನಾನು ಹುಟ್ಟುವ ಹೊತ್ತಿಗಾಗಲೆ, ಗಂಗವ್ವಗೆ ಸಾಕಷ್ಟು ವಯಸ್ಸಾಗಿತ್ತಾದರೂ ಏಳೆಂಟು ಮಣ ಇದ್ದಳು. ಆಕೆ ಒಂದು ಕೋನದಿಂದ ನೋಡಿದರೆ ಟೂರಿಂಗು ಟಾಕೀಸಿನಂತೆಯೂ, ಇನ್ನೊಂದು ಕೋನದಿಂದ ನೋಡಿದರೆ ಸತತ ಆಕ್ರಮಣಕ್ಕೀಡಾದ ಸುಂದರ ಶಿಲ್ಪದಂತೆಯೂ ಇದ್ದಳು. ಆಕೆ ಸದರಿ ಗ್ರಾಮ ನಿವಾಸಿ ಆಗಿರಲಿಲ್ಲ. ತನ್ನ ಹದಿಹರೆಯದ ದಿನಗಳಲ್ಲಿ ಯಾರನ್ನೋ ಕಟ್ಟಿಕೊಂಡು, ಎಲ್ಲಿಂದಲೋ ಬಂದು ನಮ್ಮೋಣಿಯಲ್ಲಿ ವಸಾಹತು ಸ್ಥಾಪಿಸಿಕೊಂಡಿದ್ದಳು. ವಿಟ ಪುರುಷರಿಂದ ಸದಾ ಗಿಜಿಗಿಜಿಗುಡುತ್ತಿದ್ದ ಆಕೆ, ಹತ್ತಾರು ವಾಮಮಾರ್ಗಗಳಿಂದ ಹಣ ಸಂಪಾದಿಸುತ್ತಿದ್ದಳು. ಆಕೆಯೊಂದಿಗೆ ನಿಗರ್ವಿಯೂ, ಮೃದು ಸ್ವಭಾವಿಯೂ ಆದ ಭೀಷ್ಮಾಚಾರಿ ಎಂಬ ಕುಶಲ ಕಾಷ್ಠ ಶಿಲ್ಪಿಯೊಬ್ಬನಿದ್ದ. ರಾಜೇಶ್ ಖನ್ನಾ, ಡಿಂಪಲ್ ಕಪಾಡಿಯರೀರ್ವರು ಮುದುಕರಾದರೆ ಹೇಗಿದ್ದರೋ, ಹಾಗಿದ್ದರು ಅವರೀರ್ವರು.

ಆ ಎರಡು ಹೊಟ್ಟೆಗಳಿಗೆ ಪಾವು ಬೇಯಿಸಿದರೆ ಹೆಚ್ಚು, ಅರಪಾವು ಬೇಯಿಸಿದರೆ ಕಡಿಮೆ. ಆದರೆ ಭವಾನಿ ಗಂಗವ್ವ ಎಂಬ ಲೇಡಿ ಹಾಜಿಮಸ್ತಾನಳು ಅಪರಿಮಿತ ಧನದಾಹಿಯಾಗಿದ್ದಳು. ಅದಕ್ಕಾಗಿ ಆಕೆ ತುಳಿಯುತ್ತಿದ್ದ ವಾಮಮಾರ್ಗಗಳು ಒಂದೇ ಎರಡೇ! ಅದು ಇದು ಒತ್ತೆ ಇಡಿಸಿಕೊಂಡು ಬಡ್ಡಿಯಾಪಾರ ಮಾಡುತ್ತಿದ್ದಳು. ಸುತ್ತಮುತ್ತಲ ಗ್ರಾಮಗಳಿಂದ ಹಾಲು ಮೊಸರು ಮಾರಲೆಂದು ಬರುತ್ತಿದ್ದ ಗೋಪಿಕಾ ಸ್ತ್ರೀಯರೂ, ಬೇರೊಂದು ತೊಡೆ ಆಸರೆ ಬಯಸಿ ಬರುತ್ತಿದ್ದ ಬಂಜೆಯರೂ ಅಲ್ಲದೆ ವೃತ್ತಿಪರ ಜಾರಣೆಯರೂ ಆಕೆಯ ಮನೆಯ ಹಿತ್ತಲ ವ್ಯವಹಾರದಲ್ಲಿ ಭಾಗವಹಿಸುತ್ತಿದ್ದರು. ಗ್ರಾಮದ ದೊಡ್ಡ ಮನುಷ್ಯರನೇಕರು ಸೆಲ್ಲೇವಿನೊಳಗೆ ಮಾರೆ ಮರೆ ಮಾಚಿಕೊಂಡು, ಹಿತ್ತಿಲಬಾಗಿಲ ಮೂಲಕ ತೂರಿಕೊಂಡು, ಮುಂಬಾಗಿಲ ಮೂಲಕ ಹೊರ ಹೋಗುತ್ತಿದ್ದರು. ಇದೊಂದೇ ಅಲ್ಲದೆ ಗಂಗವ್ವ, ಗುಟ್ಟಾಗಿ, ಗಾಂಜಾ, ಆಫೀಮಿನ ವಿಲೇವಾರಿ ಮಾಡುತ್ತಿದ್ದಳು. ಆದ್ದರಿಂದ ಸದರಿ ಮನೆಗೆ ದೂರದೂರುಗಳಿಂದ ಬಂದು ಹೋಗುತ್ತಿದ್ದ ಸಾಧುಸಂತರಿಗೆ, ಅವಧೂತರಿಗೆ ಬರವಿರಲಿಲ್ಲ. ಇದಕ್ಕೆಲ್ಲ ಕಳಸವಿಟ್ಟಂತೆ, ಆಕೆ ಸ್ವಲ್ಪ ದೂರದ ಇನ್ನೊಂದು ಮನೆಯನ್ನು ಬಾಡಿಗೆ ಹಿಡಿದು, ಅಲ್ಲಿ ಕುಡುಕರಿಗೆ, ಜೂಜುಕೋರರಿಗೆ ರಾಜಾಶ್ರಯ ಕಲ್ಪಿಸಿದ್ದಳು.

ಈ ಲೇಡಿ ಡಾನ್ ಒಂದು ಕೈಲಿ ಬಡಗೆಯನ್ನು, ಇನ್ನೊಂದು ಕೈಲಿ ಕಾಳಹಸ್ತಿ ಬೀಡಿಯನ್ನೂ ಹಿಡಿದು ಬುಸುಬುಸು ಹೊಗೆ ಬಿಡುತ್ತ ಎಲ್ಲದಿರಲೋ ಊರಾಟಗಳ, ಎಂದು ಕೂಗುತ್ತ ಕೆಳಗೇರಿಯಲ್ಲಿ ಹೊರಟಳೆಂದರೆ ಗೋಣಿ, ದುರುಗ, ವುಸೇನಿಯರೇ ಮೊದಲಾದ ಪರಿಶೆ ಪೈಕಿ ಪೈಲ್ವಾನರು ಕಾಲಿಗೆ ಬುದ್ಧಿ ಹೇಳದೆ ಇರುತ್ತಿರಲಿಲ್ಲ. ಈಕೆಯನ್ನು ಮಟ್ಟ ಹಾಕಲು ಪೊಲೀಸ್ ಸ್ಟೇಷನ್ನಾಗಲೀ, ಹೇಳೋರೂ ಕೇಳೋರಾಗಲೀ ಗ್ರಾಮದಲ್ಲಿ ಇರಲಿಲ್ಲವೇ! ಕೂಗಳತೆಯಲ್ಲಿ ನಾಮಕಾವಸ್ಥೆ ಪೊಲೀಸ್ ಸ್ಟೇಷನ್ ಇಲ್ಲದಿರಲಿಲ್ಲ. ಆದರೆ ಕನಿಷ್ಠ ಬಿಲ್ಲೆಗಳಿಂದ ಹಿಡಿದು ಎಸ್ಸೈವರೆಗೆ ಎಲ್ಲರೂ ಆಕೆಯ ಋಣವೆಂಬ ಅಡಕತ್ತರಿಯ ನಡುವೆ ಸಿಕ್ಕಿಹಾಕಿಕೊಂಡಿದ್ದರಷ್ಟೆ.

ಆಕೆ ಹೆದರುತ್ತಿದ್ದುದು ನಿಂಗಮ್ಮಜ್ಜಿಗೆ, ನನ್ನಂಥ ಲಿಟ್ಲ್ ರ್ಯಾಸ್ಕಲ್ಸ್ ತಂಡಕ್ಕೆ ಮತ್ತು ಕಾಮಣ್ಣನ ಮಕ್ಕಳಿಗೆ ಮಾತ್ರ



ನಿಂಗಮ್ಮಜ್ಜಿ: ಮೊನ್ನೆ ಮೊನ್ನೆವರೆಗೆ ನಮ್ಮೋಣಿ, ಮುದುಕಿಯರ ಕಾಶಿ ಎಂದೇ ಹೆಸರಾಗಿತ್ತಷ್ಟೆ. ಶಾಮಲವರ್ಣದ ನಿಂಗಮ್ಮಜ್ಜಿ ಎಂಬ ವಿಶ್ವಸುಂದರಿ, ಅಘೋಷಿತ ಸೂಪರಿಂಟೆಂಟಾಫ್ ಪೊಲೀಸಾಗಿದ್ದಳಷ್ಟೆ. ಈಕೆ ಅಲಲಲಾ ಎಂದು ಹೂಂಕರಿಸಿದಳೆಂದರೆ ಓಣಿಗೆ ಓಣಿಯೇ ಗಪ್ ಚುಪ್. ಈಕೆಯೇ ಸ್ವತಃ ಒಂದು ಪೊಲೀಸ್ ಠಾಣೆಯಂತಿದ್ದುದರಿಂದ ಕಳ್ಳಕಾಕರ ಭಯ ಇರಲಿಲ್ಲ. ಇಂಥಪ್ಪ ಈಕೆಗೆ, ಅಂಥಪ್ಪ ಗಂಗವ್ವಗೂ ನಡುವೆ ವಾರಕ್ಕೊಮ್ಮೆಯಾದರೂ ಟಗ್ ಆಫ್ ವಾರ್ ನಡೆಯುತ್ತಿತ್ತು. ಇನ್ನೇನು ತನಗೆ ಸೋಲು ಖಾಯಂ ಎಂದು ಅರಿವಾದೊಡನೆ ಗಂಗವ್ವ, ಮರಾಠಿ ಭಾಷೆಯಲ್ಲಿ ಪುಂಖಾನು ಪುಂಖವಾಗಿ ಬಯ್ಯಲಾರಂಭಿಸುತ್ತಿತ್ತು. ನಿಂಗಮ್ಮಜ್ಜಿ ಈ ಕಾರಣಕ್ಕೆ ಹೆದರಿ ಧರ್ಮಯುದ್ಧದಿಂದ ಹಿಂದೆ ಸರಿಯುತ್ತಿತ್ತು.

ಲಿಟ್ಲ್ ರ್‍ಯಾಸ್ಕಲ್ಸ್ ತಂಡ: ಈ ಇಂಡಿಯನ್ ಪೀಸ್ ಕೀಪಿಂಗ್ ಆರ್ಮಿಗೆ ಸರಿಸಮಾನವಾದ ತಂಡವನ್ನು ಕಟ್ಟಿದ್ದ ವೀರ ಸೇನಾನಿಯ ಹೆಸರು ಅಗಸರ ಮೂಗ. ಸಾದರ ಕೊಟ್ರ್ಯಾ, ಕಾವಲಿ ಹನುಮ, ಕೆಲಸೇರ ಗುರುವ, ಕುಂಟ ಬಸವಿ, ಸರಸಿಯರೆಲ್ಲ ಇದರ ಸದಸ್ಯ ಸದಸ್ಯೆಯರಾಗಿದ್ದರು. ಬಲವಂತಕ್ಕೋ, ಕುತೂಹಲಕ್ಕೋ ಸೇರಲ್ಪಟ್ಟಿದ್ದ ನಾನೂ, ಆಗೊಮ್ಮೆ, ಈಗೊಮ್ಮೆ ತಂಡದ ತರಲೆ ಕಾರ್ಯಗಳಲ್ಲಿ ಭಾಗವಹಿಸಿ, ಹೆತ್ತವರಿಂದ ಒದೆಗಳೆಂಬ ಬಹುಮಾನ ಪಡೆಯುತ್ತಿದ್ದುಂಟು. ಅಂಬಾ ಭವಾನಿಯ ಪರಮ ಭಕ್ತೆಯಾದ ಗಂಗವ್ವಜ್ಜಿಯನ್ನು ಸದಾ ಗೋಳಾಡಿಸುವುದೇ ನಮ್ಮ ತಂಡದ ಪ್ರಮುಖ ಉದ್ದೇಶವಾಗಿತ್ತು.

ಕಾಮಣ್ಣನ ಮಕ್ಕಳು : ಅಚ್ಚಿಮನೆ ಮಂಜ, ಉಳ್ಳಾಗಡ್ಡೆ ಈರಣ್ಣ, ಗುರುವ, ರಾಜರೇ ಮೊದಲಾದ ಸಜ್ಜನರು ಹೋಳಿ ಹಬ್ಬ ಬಂತೆಂದರೆ ಗಂಗವ್ವನ ಪಾಲಿಗೆ ದುರ್ಜನರಾಗಿ ಬಿಡುತ್ತಿದ್ದರು. ಹುಣ್ಣಿಮೆ ಬೆಳಕಿನಲ್ಲಿ ಗಂಗವ್ವನನ್ನು ಆಕೆ ಮಲಗಿಕೊಂಡಿರುತ್ತಿದ್ದ ಮಂಚದ ಸಮೇತ ಹೊತ್ತೊಯ್ದು ದೆವ್ವಗಳಿಗೆ ಹೆಸರಾದ ಬಸವನ ಬಾವಿ ತಗ್ಗಿನಲ್ಲಿ ಬಿಟ್ಟು ಬರುವುದು, ಆಕೆಯ ತಲೆಗೆ ಬಡಿಯುವಂತೆ ತಲಬಾಗಿಲಿಗೆ ಕಟ್ಟುವುದು, ಆಕೆಯ ಮನೆಯ ಹಿತ್ತಿಲಲ್ಲಿರುತ್ತಿದ್ದ ಸೌದೆಯನ್ನು ಹೊತ್ತೊಯ್ಯುವುದು ಹೀಗೆಲ್ಲ ಮಾಡಿ ಕಂಗೆಡಿಸುತ್ತಿದ್ದ ಈ ಕಾಮಣ್ಣನ ಮಕ್ಕಳೆಂದರೆ ಆಕೆಗೆ ಸದಾ ಭಯ ಇರುತ್ತಿತ್ತು.

ಇಂಥ ಎಲ್ಲ ಹಿಂಸೆ, ತಂಟೆ-ತಕರಾರುಗಳನ್ನು ಮಹಾಪ್ರಸಾದವೆಂಬಂತೆ ಸ್ವೀಕರಿಸುತ್ತಿದ್ದ ಗಂಗವ್ವಗೆ ನಮ್ಮೋಣಿಯ ಮೇಲೆ ವಿಶೇಷ ಪ್ರೀತಿ ಇತ್ತು. ಆದರೆ ಕಾಲಕ್ಕಿಂತ ದೊಡ್ಡ ಡಾನ್ ಮತ್ತಾರೂ ಇಲ್ಲವಷ್ಟೆ. ದಿನಗಳೆದಂತೆ, ಆಕೆಯ ಊರುಗೋಲಾಗಿದ್ದ ಮುದುಕ ಭೀಷ್ಮಾಚಾರಿ, ಗ್ರಾಮದೇವತೆಯಾದ ಊರಮ್ಮನ ಕಾಷ್ಠ ಶಿಲ್ಪವನ್ನು ಪೂರ್ಣಗೊಳಿಸುತ್ತಿರುವಾಗಲೇ, ರಘುಪತಿ ರಾಘವ ರಾಜಾರಾಂ ಪದ ಹಾಡಿಬಿಟ್ಟ. ಗಂಗವ್ವ ಒಂಟಿತನಕ್ಕೆ ದಿನನಿತ್ಯ ಹೊಸ ಭಾಷ್ಯ ಬರೆಯತೊಡಗಿದಳು. ಸದರಿ ಗ್ರಾಮದ ಯಾವತ್ತೂ ಮೀಸೆಗಳನ್ನು ಚಿತ್ ಮಾಡುತ್ತಿದ್ದ ಆಕೆಯ ಮೀಸೆ ಹಣ್ಣಾಗಿ ಮುದುಡಿಹೋಯಿತು. ಮುಖದ ಸುಕ್ಕುಗಳು ಪೈಪೋಟಿಯಿಂದ ಬೆಳೆದು ಆವರಿಸಿದವು. ದಿನಗಳೆದಂತೆ ಆಕೆಯ ಬದುಕು ಶತರಂದ್ರಗಳ ಜಹಜಾಯಿತು. ಆ ನತದೃಷ್ಟ ಜಹಜಿನಿಂದ ಆಸೆ ಆಕಾಂಕ್ಷೆ ಭರವಸೆಗಳು ಜಿಗಿದೋಡಲಾರಂಭಿಸಿದವು. ನಿಮಿಷಗಳು ಆಕೆ ವಿರುದ್ಧ ಪಿತೂರಿ ನಡೆಸಿದವು. ದಿನಗಳು ಸೇಡು ತೀರಿಸಿಕೊಳ್ಳಲಾರಂಭಿಸಿದವು. ಅಕ್ಕನ್, ಅಮ್ಮನ್, ಬಾಡ್ಯಾವ್, ಭಾಂಘೋದ್ ಇಂಬಿವೇ ಮೊದಲಾದ ಬಯ್ಗುಳಿಗೆ ರಾಜಾಶ್ರಯ ನೀಡಿದ್ದ ಆಕೆಯ ಬಾಯಿಯಿಂದ ಅಪ್ಪಾ, ಅಮ್ಮಾ, ಅಯ್ಯೋ ಎಂಬ ಪದಗಳು ಕರುಳು ಹಿಚುಕುವಂತೆ ಬರತೊಡಗಿದವು.

ನಮ್ಮ ನಿಂಗಮ್ಮಜ್ಜಿ, ಗಂಗವ್ವನ ಅವಸ್ಥೆ ನೋಡಿ ಮರುಗಿತು. ಒಳ್ಳೆಯದು; ಕೆಟ್ಟದ್ದು ನೋಡಿಕೊಳ್ಳತೊಡಗಿತು. ಓಣಿಯ ಮಂದಿಯೂ ಅದಕ್ಕೆ ಕೂಳು ನೀರೂ ಕೊಟ್ಟು ನೋಡಿದ್ದೂ

ಉಂಟು. ಆದರೆ ಸಮಸ್ತ ಓಣಿಯನ್ನು ಮುದುಕಿಯ ಇತಿಹಾಸ, ಬದುಕು ಕಾಡುತ್ತಿತ್ತು. ಗಂಗವ್ವ ಎಂಬುದು ಓಣಿಯ ಬೆನ್ನಿಗೆ ಎಳೆದಿರುವ ಬರೆ ಎಂದೇ ಭಾವಿಸಿದ್ದರು. ಗಾಯ ಮಾಯಬಹುದು ಆದರೆ ಅದರ ಗುರುತು ಮಾತ್ರ ಎಂದೆಂದಿಗೂ ಮಾಸುವಂತಹುದಲ್ಲ. ಆದ್ದರಿಂದ ಓಣಿ ತನ್ನ ಸಹಕಾರದ ನಡುವೆಯೂ ಅದರ ಸಾವನ್ನು ಎದುರು ನೋಡುತ್ತಿತ್ತು.

ಎಂದೋ ಒಂದು ದಿನ ಸಾಯುವವರಿಗೆ ಅಳಬಹುದು, ಆದರೆ ದಿನ ನಿತ್ಯ ಸಾಯುವರಿಗೆ ಅಳಲಿಕ್ಕಾದೀತೆ! ಒಂದು ಗುಟುಕು ನೀರಿಗಾಗಿ, ಒಂದು ಕೂಳಿಗಾಗಿ ದಿನನಿತ್ಯ ಪರದಾಡುತ್ತಲೇ, ಮುದುಕಿ ಎಲ್ಲರ ನಿರೀಕ್ಷೆಯಂತೆ ಸತ್ತೇಬಿಟ್ಟಿತು. ತಾನೂ ಸಾಯುತ್ತೇನೆಂದು ಗೊತ್ತಿದ್ದಲ್ಲಿ ಆಕೆ ಮಾರು ಗೆದ್ದು ಬದುಕುತ್ತಿದ್ದಳೇನೋ! ಆದರೆ ಆಕೆ ಬದುಕಲು ಪ್ರತಿ ಸೆಕೆಂಡೂ ಹೋರಾಡಿಯೇ ಕೊನೆ ಉಸಿರೆಳೆದಿದ್ದಳು.

ಏನೇ ಇರಲಿ, ಆಕೆ ಸತ್ತ ನಂತರ ಆಕೆಯ ಅಂತ್ಯಸಂಸ್ಕಾರ ಓಣಿಗೆ ದೊಡ್ಡ ಸಮಸ್ಯೆಯಾಯಿತು. ಓಣಿಯ ಪ್ರತಿಯೊಬ್ಬರೂ ಆ ಶವಕ್ಕೂ ತಮಗೂ ಯಾವುದೇ ಸಂಬಂಧವಿಲ್ಲವೆಂಬಂತೆ ವರ್ತಿಸಿದರು. ಹಾಗೆಂದು ಶವವನ್ನು ಓಣಿಯ ಸ್ಥಿರಾಸ್ತಿ ಎಂಬಂತೆ ಇಟ್ಟುಕೊಳ್ಳಲಾದೀತೆ! ತಮಗೆ ಗೊತ್ತಿದ್ದೋ, ಗೊತ್ತಿಲ್ಲದೆಯೋ ಅದನ್ನು ಮಸಣಕ್ಕೆ ಸಾಗಿಸುವ ಪ್ರಯತ್ನ ಮಾಡದೆ ಇರಲಿಲ್ಲ.

ಮುದುಕಿಯ ಸಂಬಂಧಿ ಎನ್ನಲಾದ ಡಾಬಾ ಪರಿಚಾರಕ ಎಂಬಾತನಿರುವ ಕೂಡ್ಲಿಗಿ ಸೀಮೆ ಕಡೆ ಬುಲಾವ್ ಹೋಗಿತ್ತಷ್ಟೆ. ಮಧ್ಯಾಹ್ನದ ಹೊತ್ತಿಗೆ ಆತ ಬಂದ. ನೋಡಲು ಆತ ಅಂತ್ಯ ಸಂಸ್ಕಾರ ಮುಗಿಸಿ ಬಂದವನಂತಿದ್ದ. ಬಂದವನೇ ಅಳುವ ಪ್ರಯತ್ನ ಮಾಡಿದನಾದರೂ ಸಾಧ್ಯವಾಗಲಿಲ್ಲ. ಬರಿಗೈಯವನಾದ ತಾನು ಹೆಣವನ್ನು ಮಸಣಕ್ಕೆ ಸಾಗಿಸುವುದು, ಸುಡಲೇಳೆಂಟು ಮಣ ಕಟ್ಟಿಗೆ ಜೋಡಿಸುವುದು ವಗೈರೆ ವಗೈರೆ!... ಓಣಿ ಪ್ರಮುಖರ ಸಮಕ್ಷಮ ಸೂತಕದ ಮನೆ ಪ್ರವೇಶಿಸಿ, ಕಬ್ಬಿಣದ ಪೆಟಾರಿ ಇತ್ಯಾದಿ ಬೆದಕಾಡಿದ. ಆದರೆ ಸಿಕ್ಕಿದ್ದು ನೂರಿನ್ನೂರು ಚಿಲ್ಲರೆ ಮಾತ್ರ. ಆದರೆ ಮುದುಕಿ ವಾಮಮಾರ್ಗದಿಂದ ಸಂಪಾದಿಸಿದ್ದು ಏನಾಯಿತೆಂಬುದು ಯಕ್ಷ ಪ್ರಶ್ನೆಯಾಗಿ ಉಳಿಯಿತು.

ಚರಾಸ್ತಿ ಸೊನ್ನೆ ಎಂದಮೇಲೆ ತಾನು ಉತ್ತರಾಧಿಕಾರಿ ಆಗುವುದಾದರೂ ಹೇಗೆ ಎಂದು ಶೀನ ಎಂಬ ಹೆಸರಿನ ಪರಿಚಾರಕ ತಕರಾರು ಎತ್ತಲು, ಓಣಿಯ ಮಂದಿ, ಸಾವಿರಾರು ರೂಪ್ಯಾ ಬೆಲೆ ಬಾಳುವ ಮನೆ ಎಂಬ ಸ್ಥಿರಾಸ್ತಿ ಇದೆಯಲ್ಲಪ್ಪಾ ಎಂದು ಬುದ್ಧಿವಾದ ಹೇಳಿ ಆತನನ್ನು ಸಮಾಧಾನ ಪಡಿಸಿದರು. ಕೂಡಲೆ ಆ ಮನೆಯನ್ನು ಒಬ್ಬಾತ ಭೋಗ್ಯ ಹಿಡಿದದ್ದೂ ತಡವಾಗಲಿಲ್ಲ. ಮುಂಗಡ ರೂಪದಲ್ಲಿ ಐದು ನೂರು ಎಣಿಸಿದ್ದೂ ತಡವಾಗಲಿಲ್ಲ. ಹಣವೇನೋ ಕೈಗೆ ಬಂತು; ಆದರೆ ಹೆಣ ಹೊರಲು ನಾಲ್ಕು ಮಂದಿಯಾದರೂ ಬೇಕಲ್ಲ! ಹೆಣ ಮುಟ್ಟಲು ಒಬ್ಬರೂ ಮುಂದೆ ಬರಲಿಲ್ಲ! ಹೆಣ ಹೊರುವಲ್ಲಿ ಹೆಸರುವಾಸಿಯಾದ ಮೂಲಿಮನಿ ಸಿದ್ಲಿಂಗ ಮತ್ತವನ ಸಂಗಡಿಗರು ತಮಗಿಂತಿಷ್ಟು ಕೊಟ್ಟರೆ ಮಾತ್ರ ಚಟ್ಟಕ್ಕೆ ಹೆಗಲು ಕೊಡುವುದಾಗಿ ತಕರಾರು ಎತ್ತಿದ್ದರು. ಶೀನಪ್ಪ ಅವರಿಗೆ ತಲಾ ಇಂತಿಷ್ಟು ಎಂದು ಮಾತಾಡಿ ಹೇಗೋ ಒಪ್ಪಿಸಿದ.

ಅವರೆಲ್ಲ ಕಂಠದ ಮಟ ಕುಡಿದು ಬಂದರು. ಇವನೌನ ಎಂದು ಚಟ್ಟಕ್ಕೆ ಹೆಗಲು ಕೊಟ್ಟರು. ವಾಲಾಡುತ್ತ, ವಾಲಾಡುತ್ತ ಗಾಡ್ ಮದರ್ ಗಂಗಾಭವಾನಿಯ ಕಳೇಬರದ ಮೆರವಣಿಗೆ ಕೂಡ್ಲಿಗಿ ರಸ್ತೆ ಹಿಡಿಯಿತು. ಮಸಣ ಮುಟ್ಟುವುದರೊಳಗೆ ಹೆಣವನ್ನು ನಾಲ್ಕಾರು ಕಡೆ ಇಳಿಸಿದ್ದಾಯಿತು. ಹೆಜ್ಜೆ ಹೆಜ್ಜೆಗೆ ಇಹಪರ ಕುರಿತು ಪಂಚಾಯ್ತಿ ಮಾಡಿದ್ದಾಯ್ತು. ಅಂತೂ ಕಳೇಬರವನ್ನು ಮಸಣಕ್ಕೆ ತಲುಪಿಸಿ ಚಿತಾಸ್ಪರ್ಶ ಮಾಡಲಾಯಿತು. □

ಒಂದು ಕೋಟಿ ಜಯಿಸಿದ್ದು
ಇವರು, ಆದರೆ ನಿಮಗಾದ
ಅನುಭವ ನೆನಪಿದೆಯೇ?





ಜ್ಞಾನದ ಅಗಾಧ ಭಂಡಾರ. ಇದ
ನ್ಯಾಶನಲ್ ಜಿಯೋಗ್ರಾಫಿಕ್
ಚೆನಲ್ ಅಲ್ಲವೆ?

ಭಾವನೆಗಳ ಸಾಗರವೇ ಇಲ್ಲಿ
ಭೋರ್ಗರೆಯುತ್ತಿದೆ. ನೀವೂ
ಅದರಲ್ಲಿ ಮುಳುಗಿಬಿಡಿ.





ಕಣ್ಣುಗಳನ್ನು ತೆರೆದಿರಿಸಿರಿ. ಇದೇ
ಹೊಸ ಜಗವನ್ನೇ ನಾವು
ತೋರಿಸುತ್ತೇವೆ.

ಹಿಂದಿ ಸಿನೆಮಾದ ಸುವರ್ಣ
ಕ್ಷಣಗಳ ಚಮತ್ಕಾರ ಇನ್ನೆಲ್ಲಿ
ನೀವಿದನ್ನು ಕಾಣಬಲ್ಲಿರಿ?





ರೋಮ ರೋಮವನ್ನೂ
ನೆಟ್ಟಗಾಗಿಸಿದ ಚೆನಲ್
ನೆನಪಿದೆಯೇ?



ಸಂಗೀತ ಸುರಭಿಗಾಗಿ ಇಲ್ಲಿ ಬರುವಿರಿ, ಆಹ್ಲಾದಕರ
ಮನೋಭಾವನೆಯೊಂದಿಗೆ ಹೊರಡುವಿರಿ.


ಇಂಥ ಅಮೂಲ್ಯ ಅನುಭೂತಿಗಳಿಗೆ ಬೆಲೆಕಟ್ಟಲು ಎಂದಾದರೂ ಪ್ರಯತ್ನಿಸಿರುವಿರೇ?

ಕೇವಲ ಕೆಲವೇ ವ್ಯಕ್ತಿಗಳು ಮನೋರಂಜನೆ ನೀಡಿರಬಹುದಾದ ರೀತಿಯಲ್ಲಿ ಸ್ಟಾರ್ ನಿಮ್ಮನ್ನು ರಂಜಿಸಿರುವುದನ್ನು ನೀವು ಅಲ್ಲಗಳೆಯಲಾರಿರಿ. ಈ ಚಮತ್ಕಾರ ಈಗಲೂ ಮುಂದುವರಿಯಲು ಅವಕಾಶ ನೀಡಿರಿ. ದಯವಿಟ್ಟು ನಿಮ್ಮ ಕೇಬಲ್ ಆಪರೇಟರಿಗೆ ಬದಲಾದ ದರದಲ್ಲಿ ಹಣ ಸಂದಾಯ ಮಾಡಿರಿ. ಇದಕ್ಕಾಗಿ ನಾವೇನು ಅತಿರೇಕ ಕೇಳುತ್ತಿಲ್ಲ, ಅಲ್ಲವೇ?


ದಿನಕ್ಕೆ ಮೂವತ್ತು ಪೈಸೆಗಳಷ್ಟು ಹೆಚ್ಚಾಗಿರುವ ಹೊಸ ದರಗಳನ್ನು ನೀಡಿ ದಯವಿಟ್ಟು
ನಿಮ್ಮ ಕೇಬಲ್ ಆಪರೇಟರ್‌ರೊಂದಿಗೆ ಸಹಕರಿಸಿರಿ.

STAR
just imagine

VALUE FOR LIFE



ಕವಿ ಸಮಯ



ಸೋನಿ ಕವಿತೆಗಳು

ಎಚ್.ಎಸ್. ವೆಂಕಟೇಶ ಮೂರ್ತಿ

1

ಹಗಲೆಲ್ಲಾ ಆಟ ಸೋನಿಗೆ
ರಾತ್ರಿಯಾಯಿತೆಂದರೆ ಅಳು
ತೊಟ್ಟಿಲಲ್ಲಿ ಮಲಗಳು
ಅಮ್ಮ ಎತ್ತಿಕೊಂಡರೆ ಗಪ್ ಚುಪ್
ಕೆಳಗಿಳಿಸಿದರೆ ಮತ್ತೆ ಅಲಾರಂ
ಇರುಳೆಲ್ಲಾ ಸಂಗೀತಪಾಠ ಸೋನಿಗೆ!

2

ಕಣ್ಣು ತಿರುಗಿಸಿ ತಿರುಗಿಸಿ ಏನು ನೋಡುತ್ತಿ ಸೋನಿ?
ನಾವೆಲ್ಲಾ ಬರೀ ರೇಖೆಗಳೇ?
ಬರೀ ಬಣ್ಣಗಳೇ?
ನಸು ಬಿಸಿ ಸ್ಪರ್ಶಗಳೆ?
ಹೇಳೇ ಸೋನಿ ಹೇಳೇ
ಸದಾ ಕಣ್ಣು ಹೊರಳಿಸುತ್ತಾ ಏನನ್ನ ಹುಡುಕುತ್ತಿ?

3

ಸೋನಿಗೆ ಕುಲಾಯಿ ಕಂಡರೆ ಆಗದು
ಕುಲಾಯಿಗೆ ಅವಳೆಂದರೆ ಇಷ್ಟ
ಸೋನಿಗೆ ಸ್ವೆಟರೆಂದರೆ ಆಗದು
ಸ್ವೆಟರ್ರಿಗೆ ಅವಳೆಂದರೆ ಇಷ್ಟ
ಸೋನಿಗೆ ಕಾಲ್ಚೀಲ ಕಂಡರೆ ಆಗದು
ಕಾಲ್ಚೀಲಕ್ಕೆ ಅವಳೆಂದರೆ ಇಷ್ಟ
ಹ್ಯಾಂಗರಲ್ಲಿ ಸರ್ಕಸ್ ಮಾಡುತ್ತಾ ಸೋನಿಯ
ಆಟಕ್ಕೆ ಕರೆಯುವ ಸ್ವೆಟರ್ ಕುಲಾಯಿ
ಕಾಲ್ಚೀಲಗಳನ್ನು ಕೇಳಿ ಬೇಕಾದರೆ!







4

ಮೊದಲು ನಿನ್ನ ನೋಡಿದವರು
ಮೂಗೆಲ್ಲಾ
ಅವಳ ಅಜ್ಜಿಯದೇ ಎಂದರು!
ಬಟ್ಟ ತಲೆ
ಅಪ್ಪನದೆ ಎಂದರು

ಪಿಳೀಪಿಳೀ ಕಣ್ಣು
ಅಮ್ಮನದೇ ಎಂದರು


ಅವರವರ ವಸ್ತು ಅವರವರು
ಹೆಮ್ಮೆಯಿಂದ ನೋಡಿದರು.

ಅಮ್ಮನ ಪಕ್ಕ
ಇಡಿಯಾಗಿ ಮಲಗಿದ್ದ ನೀನು
ಬಿಡಿಯೆಲ್ಲಾ ಕೂಡಿ
ಇಡಿಯಾದ
ಒಂದು ಜೀವಂತ ಪವಾಢ.









5


ಮಗು ! ನೀನು ಮೊದಲು ಅತ್ತಿದ್ದು ಯಾತಕ್ಕಾಗಿ?
ಆಟಿಕೆಗಾಗಿ ಅಲ್ಲ
ಬಟ್ಟೆ ಬರಿಗಾಗಿ ಅಲ್ಲ
ಒಡವೆ ವಸ್ತುಗಾಗಿ ಅಲ್ಲ
ಆಸ್ತಿ ಪಾಸ್ತಿಗಾಗಿ ಅಲ್ಲ
ರುಚಿ ರುಚಿ ತಿಂಡಿಗಾಗಿ ಅಲ್ಲ
ಅಧಿಕಾರ ಅಂತಸ್ತಿಗಾಗಿ ಅಲ್ಲ
ಅಹಂಕಾರದ ಆಘಾತಕಲ್ಲ
ಕೇವಲ ಎದೆ ತುಂಬ ಗಾಳಿಗಾಗಿ
ಕೇವಲ ಹೊಟ್ಟೆ ತುಂಬ ತಾಯ ಹಾಲಿಗಾಗಿ
ಕೇವಲ ಮೈ ತುಂಬ ಹದ ಬಿಸಿ ಸ್ಪರ್ಶಕ್ಕಾಗಿ!

6

ಅಗೋ ಸೂರ್ಯ ಬಂದಿದ್ದಾನೆ. ನೋಡೆ ಸೋನಿ
ಕೆಂಪು ಕುಲಾಯಿ ಸೂರ್ಯ
ಅಗೋ ಚಂದ್ರ ಬಂದಿದ್ದಾನೆ ನೋಡೆ ಸೋನಿ
ಬಿಳೀ ಸ್ವೆಟರ್ ಚಂದ್ರ
ಅಗೋ ಮಲ್ಲಿಗೆ ಬಂದಿದೆ ನೋಡೆ ಸೋನಿ
ಹಸಿರು ಲಂಗದ ಮಲ್ಲಿಗೆ
ಮಳೆಮಾಮ ಬಂದು ಬಾಗಿಲು ಬಡಿಯೋ ಹೊತ್ತು
ಷ್! ಬೆಚ್ಚಗೆ ಅಮ್ಮನ ಪಕ್ಕ ಮಲಗೆ ಸೋನಿ.

7


ಗೆಜ್ಜೆ ಕಟ್ಟಿದ್ದಾರೆ ನೋಡಿ!
ಅದಕ್ಕೇ ಸೋನಿ ಮಲಗಿದ್ದರೂ ಕಾಲು ಕುಣಿಯುತ್ತ
ಬಳೆ ಇಟ್ಟಿದ್ದಾರೆ ನೋಡಿ!
ಅದಕ್ಕೇ ಸೋನಿ ಮಲಗಿದ್ದರೂ ಕೈ ಕುಣಿಯುತ್ತವೆ!






"ಸೋನೀ ಸೋನೀ ನೀನು ಕುಣಿಯೋದು ಯಾವಾಗ?"
ಕುಣಿಯುವ ಕೈ ಕುಣಿಯುವ ಕಾಲು
ಸೋನಿಯನ್ನು ಗಿಲಿ ಗಿಲಿ ಕೇಳುತ್ತವೆ!


8
ಕಂದಾ! ಮೊದಲು ನಿನ್ನನ್ನು ನೋಡುವಾಗ
ಎಷ್ಟು ಆತಂಕ ಪಟ್ಟೆವು ನಾವು!
ಎಲ್ಲರಿಗಿಂತ ನೀನು ಚೆಲುವೆಯಾಗಿರಬೇಕಾಗಿಲ್ಲ
ಎಲ್ಲರಿಗಿಂತ ನೀನು ಜಾಣೆಯಾಗಿರಬೇಕಾಗಿಲ್ಲ
ದೇವರೆ! ಎಲ್ಲರಂತೆ ನೀನಿದ್ದರೆ ಸಾಕು
ಗುಲಗಂಜಿ ಹೆಚ್ಚಲ್ಲ ಗುಲಗಂಜಿ ಕಮ್ಮಿಯಲ್ಲ
ಹತ್ತು ಮಕ್ಕಳಂತೆ ನೀನೂ ಇದ್ದರೆ ಸಾಕು



9
ನಿನ್ನ ಬಣ್ಣ ಯಾವುದು ಬಿನ್ನಾಣಗಿತ್ತಿ?
ಹುಟ್ಟಿದ ಕೂಡಲೆ ನೋಡಿದೆ
ರಂಜಕದ ಪುತ್ಥಳಿಯಂತೆ ಕಂಡೆ
ಮರುದಿನ ತಾಯಿಯ ಪಕ್ಕದಲ್ಲಿ
ದಂತದ ಗೊಂಬೆಯಂತೆ ಕಂಡೆ
ಮೂರುದಿನದ ನಂತರ ತಾಯಿಯ ಕೈಯಲ್ಲಿ
ಚಂದನದ ಚಂದಗಾರ್ತಿ
ಆಹ! ದಿನಕ್ಕೊಂದು ಬಣ್ಣ ಈ ಗಾಡಿಕಾರ್ತಿಗೆ!

10
ಸೋನಿ ಕವಿಯ ಮೊಮ್ಮಗಳು!
ಅದಕ್ಕೇ ಅವಳ ಕಾಲ ಕುಣಿತ
ಲಯಬದ್ಧ
ಸೋನಿ ಕವಿಯ ಮೊಮ್ಮಗಳು!
ಅದಕ್ಕೆ ಅವಳ ಮುಚ್ಚಿದ ಮುಷ್ಟಿ
ಅರ್ಥಬದ್ಧ
ಸೋನಿ ಕವಿಯ ಮೊಮ್ಮಗಳು
ಅದಕ್ಕೆ ಅವಳ ಅಳು
ಶ್ರುತಿಬದ್ಧ.





ಅವನು

ಗಿರಿಜಾ ಶಾಸ್ತ್ರಿ

ಅವನು ಉರಿದು ಹೋದದ್ದನ್ನು
ಈ ಕಣ್ಣುಗಳೇ ನೋಡಿವೆ.
ಆ ಅಂಗಿ ಶರಾಯಿ
ಚಹರೆ ಮರೆತು
ವರುಷಗಳೇ ಆಗಿವೆ.

ನಿನ್ನೆ ಮಧ್ಯರಾತ್ರಿಯ ಮುಹೂರ್ತಕ್ಕೆ
ಸತ್ತಸಾವೇ ಅಲ್ಲವೆಂಬಂತೆ.
ಬೆಳೆದು ಬಿಟ್ಟದ್ದ ನಿಜವಾಗಿ.

ಅಡುಗೆ ಕೋಣೆಯೊಳಗೆ
ಮಣೆಯ ಮೇಲೆ ಕುಕ್ಕುರಗಾಲು
ಕಾಫಿ ಹೀರುತ್ತ ಉಭಯ ಕುಶಲ ಸಾಂಗೋಪಾಂಗ
ದೂರದ ತೌರಿನಿಂದ ಬಂದವನಂತೆ.

ನಲವತ್ತು ವರುಷಗಳ ಹಳೆಯ
ನೀಲಿ ಶರಾಯಿ ಇಂದೇ ಹೊಲಿಸಿದಂತೆ
ಹೊಸದಾಗಿ ಹೊಳೆದ ದಾಡಿ ಮಾಡಿದ
ಸ್ನಿಗ್ಧಮುಖ
ಮಾತು ಕೈ ಬಾಯಿ ಸಾವಿನ ಹಂಗಿಲ್ಲದಂತೆ

ಕೈ ಹಿಡಿದು ಮುಟ್ಟಿ ಕರೆದಾಕ್ಷಣ
ಕನಸುಗಳಾಚೆ ಹೋಗಿಬಿಟ್ಟ.




ಸೆರಗು ಹಿಡಿದ ಕೈ

ಚೀಲ ಹಿಡಿದು ಚಪ್ಪಲಿ ಮೆಟ್ಟಿ
ಇಟ್ಟಾಗ ಒಂದು ಕಾಲು ಹೊಸ್ತಿಲಾಚೆ
ಸೆರಗು ಹಿಡಿದು ಜಗ್ಗುತ್ತದೆ ಪುಟ್ಟ ಕೈ ಹೊಸ್ತಿಲ ಈಚೆ

ಬಾಚಣಿಗೆ ಸೀಟಿ, ಕಪಾಟು ತೆರೆದು
ಹೆಕ್ಕಿ ಥರಾಥರ
ಕನ್ನಡಿಯ ಮುಂದೆ ನಿಲ್ಲುವಾಗಿನಿಂದಲೇ
ಹಿಂದೆ ಸುಳಿದು ಜಮಾಯಿಸಹತ್ತಿದ ದುಗುಡ
ಕಣ್ಣಾಲಿಗಳಲಿ ತುಂಬಿಕೊಳ್ಳುವಾಗ ತುಟಿಮೀರಿ
ಚಾಕಲೇಟು ಐಸ್‌ಕ್ರೀಮು ಆಸೆ
ಹೊತ್ತು ಕಾಯುತ್ತ ಹತ್ತು
ಬಡಿವಾಗ ಬೆಚ್ಚಿ
ರಾತ್ರಿ ಗಡಿಯಾರ
ಕಿಟಕಿ ಸರಳುಗಳ ಹಿಂದೆ ಸದ್ದಿಲ್ಲದೇ
ಜಾರಿಬಿಡುತ್ತದೆ ನಿದ್ದೆ
ಅವಳು ಬಿಚ್ಚಿಟ್ಟು ಹೋದ ಸೀರೆ
ಮೈ ತುಂಬಾ ಹೊದ್ದು.





ಮೆರವಣಿಗೆ

ಶಿ ಸಂಪಳ್ಳಿ

ನಷ್ಟೆ ಅಂತ ಬೀದಿಗಿಳಿದರೆ
ೋಡು;

ಹಿಂದೆ ಮೆರವಣಿಗೆ
ಪ್ಪ-ಅವನ ಮೋಟರ್ ಸೈಕಲ್ಲು,
ಜ್ಜ-ಅವನ ಊರುಗೋಲು,
ಚ್ಚನೆ ಉಗಿದ ಎಲೆಯಡಿಕೆ,
ಂಪು ತುಟಿಯ ಅಜ್ಜಿ ನಗುತ್ತಾಳೆ,
ವ್ವ ಕನಕಾಂಬರ ಮುಡಿಯುತ್ತಾಳೆ.


ತ್ತೆ ಮುಂಗಾರು;
ಹೊಸ ಮಳೆಗೆ ನಮ್ಮೂರ ಕೆರೆತುಂಬಿ
ಸೂರಿ ಹತ್ತು-ಮೀನು ಹೊಡೆಯುತ್ತಾನೆ,
ಮಾರಿ ಜಾತ್ರೆ, ಕುಣಿವ ಜೋಗಿತಿಯರು,
ಕಂಡೆಲ್ಲವ ಮೈ ಬೆವರಿದ ಅಸ್ಪಷ್ಟ-ಕಷ್ಟ

ತ್ತೆ ಯಕ್ಷಗಾನ;
ಬೆರಳ ಸಂದಿಯಲಿ ಸಿಗರೇಟು
ಅದರ ತುದಿ, ಕಳಚಿ ಬಿದ್ದ ಬೂದಿ,
ಭಸ್ಮಾಸುರ ಸಂತಾನದ ತೋಂತನ.,

ತ್ತೆ ಸಾಲು-ಸಾಲು;
ಆ ಶಾಲೆ, ಕಥೆ-ಮೇಷ್ಟ್ರು,
ಈ ಹುಡುಗಿ, ನಗು-ಅಳು
ದೆವ್ವ; ಅದರ ದೊಂದಿ ಬಂತು

ಏರಿ ಹತ್ತಿ, ಜೊತೆಗೆ ನನ್ನಿಷ್ಟದ ಚಂದ್ರ.
ನಿದ್ದಂಗಿ ತಂತು! ನಾ ನೋಡಲೇ ಇಲ್ಲ!
ಗೊತ್ತಲ್ಲ, ಮೆರವಣಿಗೆ ಮುಂದೆ
ರಥ ಹಿಂದೆ...
ಹಿಂದೆ...
ಹಿಂದೆ...

ರಸ್ತೆಗಳು



ಕಾಡಲ್ಲಿ ಕೊನರಿದ
ಗಂಧ, ಬೀಟೆ, ತೇಗ, ಹೊನ್ನೆಗಳ
ಬಂಗಲೆಯ ಪಲ್ಲಂಗವಾಗಿಸುವ,


ಹಿತ್ತಲಲಿ ಮೆಲ್ಲನರಳುವ
ಮಧ್ಯಾಹ್ನ-ಮಲ್ಲಿಗೆ, ಜಾಜಿ, ಮುತ್ತುಗವ
ಮಂತ್ರಿಗಳ ಸಿಂಗಾರವಾಗಿಸುವ


ಕಳ್ಳಹೆಜ್ಜೆಯಲಿ ಚಿನ್ನಾಟವಾಡುವ
ಹುಲಿ, ನರಿ, ಜಿಂಕೆ, ಮೊಲಗಳ
ಟಿಕೆಟ್ ಧಾರಣೆಗಳಾಗಿಸುವ,

ಗದ್ದೆ ಬದುಗಳ ಕಟ್ಟಿ ಖುಷಿಯಲ್ಲಿದ್ದ
ರಾಮು, ಸೋಮು, ಸೂರಿಯರಿಗೆ
ಪೆನ್ನು-ಫೈಲು-ತಾಲ್ಲೂಕಾಫೀಸು ಎಂದೆಲ್ಲಾ ಬೆದರಿಸುವ

ರಸ್ತೆಗಳು
ರಸ್ತೆಗಳು

ಶಶಿ ಸಂಪಳ್ಳಿ





ಭಾಸ್ಕರ ಹೆಗಡೆ

ಬ್ಯಾಡಗಿ ಮೆಣಸಿಂಕಾಯಿ



ಮಗುವನ್ನು ಆಕರ್ಷಿಸಿ, ಮನವೊಲಿಸಿ, ಊಟ ಹಾಕಲು ಹೆಣಗಾಡುವ ತಾಯಿ ಅನ್ನದ ತುತ್ತನ್ನು ಮೋದಕದಂತೆ ಮಾಡಿ ಬಟ್ಟಲಿನಲ್ಲಿ ಸಾಲಾಗಿ ಇಡುವಂತೆ, ಪರೇಡ್ ಗ್ರೌಂಡಿನಲ್ಲಿ ಪೋಲೀಸರು ಎದೆ ಸೆಟೆಸಿಕೊಂಡು, ಉಸಿರು ಬಿಗಿ ಹಿಡಿದುಕೊಂಡು ನಿಂತಿದ್ದಾರೆ. ಅವರು ಹಾಕಿಕೊಂಡಿದ್ದ ಪಾಲಿಶ್ ಮಾಡಿದ್ದ ಬೂಟು, ತಲೆ ಮೇಲೆ ಒಂದೇ ಕೋನದಲ್ಲಿ ಕುಳಿತ ಟೋಪಿಗಳು ಪ್ರತಿಫಲಾಪೇಕ್ಷೆಯಿಲ್ಲದೆ ಸೂರ್ಯ ಕಿರಣವನ್ನು ಪ್ರತಿಫಲಿಸುತ್ತಿದ್ದವು.

ಒಬ್ಬ ಪಿಸಿಯನ್ನು ಬಿಟ್ಟರೆ ಉಳಿದೆಲ್ಲರಿಗೂ ರವಿವಾರದ ಆ ವಿಶೇಷ ಪರೇಡ್ ಬೋರ್ ಅನ್ನಿಸಿತ್ತು. ಹಾಗಂತ ಕವಾಯತಿನ ನಡಾವಳಿಗಳನ್ನೆಲ್ಲಾ ಮುರಿದು, ಬರಬಹುದಾದ ಭಡ್ತಿಗೆ ತಾವಾಗಿಯೇ ಕೊಳ್ಳಿ ಇಟ್ಟುಕೊಳ್ಳಲು ಅವರ್‍ಯಾರೂ ತಯಾರಿಲ್ಲ. ಹಿಂದಿನ ಸಾಲಿನ ಎಡತುದಿಯಲ್ಲಿ ನಿಂತಿರೋ ಬಿಲ್ ನಂ. 181 ಉರುಫ್ ಶಿವಪುತ್ರಪ್ಪ ಸೋಮಣ್ಣ ಬ್ಯಾಡಗಿಗೆ ಪೊಲೀಸ್ ದಿನಚರಿಯೇ ಕವಾಯತಿದ್ದ ಹಾಗೆ-ಅಂದರೆ ತಾನೇ ತಾನಾಗಿ ಡಿಸಿಪ್ಲಿನ್ ಇಟ್ಟುಕೊಂಡು ದಿನನಿತ್ಯ ವ್ಯಾಯಾಮ ಮಾಡುತ್ತಾ ಬಂದವನಾದ್ದರಿಂದ, ಅವನಿಗೆ ಈ ರೀತಿಯ ಕವಾಯತು ಇಷ್ಟ ಇಲ್ಲ. ಆದರೆ ಈ ದಿನದ ಕವಾಯತು ಅವನಿಗೆ ಬೋರ್ ಅನ್ನಿಸಲಿಲ್ಲ, ಅದಕ್ಕೂ ಒಂದು ಕಾರಣ ಇದೆ. ವರ್ಷದ ಯಾವುದೇ ದಿನವಾಗಿರಲಿ, ಎಂಥದೇ ಸಂದರ್ಭವಾಗಿರಲಿ, ಮೆಣಸಿನಕಾಯಿಯ ಕಾರದ ವಸ್ತುಗಳನ್ನು ನೋಡಿದರೆ ಸಾಕು, ಆತನಿಗೆ ಉಮೇದು ಬರುತ್ತಿತ್ತು. ಆದರೆ ಸ್ವಲ್ಪ ಹೊತ್ತಿನಿಂದ ಆತ ಕಷ್ಟಪಡುತ್ತಿದ್ದ. ಕವಾಯತಿನ ಪರಿಣಾಮವಾಗಿ ಬೆಳಗಿನ ಒಂಭತ್ತರ ಬಿಸಿಲಿಗೆ ಧಾರಾಕಾರವಾಗಿ ಹರಿಯತೊಡಗಿದ್ದ ಬೆವರು ನಿಲ್ಲಿಸಲು ಆತ ಸೆಣಸಾಡುತ್ತಿದ್ದ. ಕಿಸೆಯಲ್ಲಿದ್ದ ಖರ್ಚೀಫು ಮುಖವೊರೆಸಿ ತೊಪ್ಪೆಯಾದ ಮೇಲೆ ಈಗ ಒಂದು ಸಲ ಎಡ ತೋಳು, ಮತ್ತೊಂದು ಸಲ ಬಲ



ಶ್ರೀಪಾದ್

ಕೋಳು, ಹೀಗೆ ಬೆವರನ್ನೊರೆಸಿಕೊಳ್ಳಲು ಮುಖ ಉಜ್ಜತೊಡಗಿದ. ಮಧ್ಯೆ ಕೂಗುತ್ತಿದ್ದ ಸೀಟಿ, ಅದಕ್ಕನುಗುಣವಾಗಿ ಬರುತ್ತಿದ್ದ ಕವಾಯತಿನ ಆಜ್ಞೆ. ಆತನ ಗಮನ ದೂರದಲ್ಲಿ ನಿಂತಿದ್ದ ಮೇ ಫ್ಲವರ್ ಗಿಡದ ಟೊಂಗೆಯೊಂದರತ್ತ ಹರಿಯಿತು. ಮೇ ಫ್ಲವರ್ ಗಿಡದಲ್ಲಿ ಮೆಣಸಿನಕಾಯಿ? ಮೇ ಫ್ಲವರ್ ಗಿಡದಲ್ಲಿ ಬ್ಯಾಡಗಿ ಮೆಣಸಿನಕಾಯಿ ಅಂತ ಇನ್ನೇನು ಕೂಗಿ ಬಿಡುತ್ತಿದ್ದನೋ ಏನೋ, ಕಣ್ಣು ಕಿರಿದಾಗಿಸಿ ನೋಡಿದ. ಅದು ಮೆಣಸಿನಕಾಯಿ ಯಲ್ಲ ಅಂಥದೇ ರೂಪ, ಬಣ್ಣ, ಆಕಾರ ಹೊಂದಿದ ಹಕ್ಕಿ ಎಂಬುದು ಗೊತ್ತಾಯಿತು. ಆ ಪಕ್ಷಿ ಕವಾಯತನ್ನು ನೋಡುತ್ತಿದ್ದಂತೆ ಆತನಿಗೆ ಭಾಸವಾಯ್ತು. ಪೊಲೀಸರಿಗಿರುವ ಸಾಮಾನ್ಯ ಲಕ್ಷಣಗಳು ಶಿವಪುತ್ರಪ್ಪನಿಗಿರಲಿಲ್ಲ. ತಾಮ್ರದ ಕೊಡದಂತಹ ಹೊಟ್ಟೆ, ಕೆಂಪಗೆ ಬೆಂಕಿಯುಗುಳುವ ಕಣ್ಣು, ಎಳೇ ವಯಸ್ಸಲ್ಲೇ ಅರೆನೆರೆತ

ಕೂದಲು ಇದ್ಯಾವುದೂ ಅವನ ಶರೀರದಲ್ಲಿಲ್ಲ. ಅಥವಾ ಬ್ರೇಕಿದ್ದ ಸೈಕಲು ನಿಲ್ಲಿಸಿ ಬ್ರೇಕಿಲ್ಲ ಅಂತ ಪೊಲೀಸ್ ಸತ್ಯ ಹುಡುಕುವ ಕಣ್ಣು ಆತನದಲ್ಲ. ಕೆತ್ತಿಟ್ಟ ಪೆನ್ಸಿಲ್ ಮಾತಾಡಿಸುವಂಥ ವ್ಯಕ್ತಿತ್ವ, ಸ್ವಲ್ಪ ಕೋಲುಮುಖ ಎನ್ನಿಸಿದರೂ, ಆತನನ್ನು ನೋಡಿದವರಿಗೆ ಎಲ್ಲೋ ನೋಡಿದ ಹಾಗಿದೆಯಲ್ಲಾ ಎಂಬ ಆತ್ಮೀಯತೆಯ ಛಳಕು ಹೊಡೆಸುತ್ತಿತ್ತು. ಹಂಗೆ ನೋಡಿದವರಿಗೆ ಆತನನ್ನು ಮತ್ತೆ ನೋಡೋದು ತಪ್ಪಂತ ಅನ್ನಿಸುತ್ತಿರಲಿಲ್ಲ. ಇಂಥ ಶರೀರದಲ್ಲಿ ಕೂಡ ಅಶಾಂತ ಕಣ್ಣು, ಅಲೆಮನೆಯಲ್ಲಿ ಕೋಣ ಗಾಣವನ್ನು ಸುತ್ತಿರುಗುವಂತೆ ತಿರುಗುತ್ತಿತ್ತು. ಒಮ್ಮೊಮ್ಮೆ ಸಾಗರದ ಅಲೆ ಮೇಲೆ ಸಾಗುವ ತರಗೆಲೆಯಂತೆ ದಿಕ್ಕು ದೆಸೆಯಿಲ್ಲದೆ ಎಡ, ಬಲ, ಮೇಲಕ್ಕೆ, ಕೆಳಕ್ಕೆ ಸುತ್ತಿರುಗುತ್ತದೆ. ಇಂಥ ಕಣ್ಣಿಗೆ ಈಗಾಗಲೇ ಕಂಡ ಅನೇಕ ಪಕ್ಷಿ, ಕೀಟ, ವಸ್ತುಗಳು ಒಮ್ಮೊಮ್ಮೆ ಬ್ಯಾಡಗಿ ಮೆಣಸಿನಕಾಯಿಯಂತೆ ಕಂಡಿದ್ದುಂಟು.

ಮೆಣಸಿನಕಾಯಿ ಜೊತೆಗಿನ ಶಿವಪುತ್ರಪ್ಪನ ನಂಟು ಪ್ರಾರಂಭವಾಗಿದ್ದು ಯಾವತ್ತು? ಬಸಿರು ಹೊತ್ತುಕೊಂಡು ಉಸಿರು ಬಿಡುತ್ತಾ ಕೆಲಸಕ್ಕೆಂದು ಹೊಲಕ್ಕೆ ಹೋದ ಪಾರ್ವತಿ, ಅಲ್ಲೇ ಗಂಡು ಮಗುವಿಗೆ ಜನ್ಮ ಕೊಟ್ಟಳು. ಆಗ ಹಾವೇರಿಯ ಜಾನುವಾರು ಸಂತೆಯಲ್ಲಿ, ಅಂಗವಸ್ತ್ರದ ಒಳಗೆ ಕೈ ಇಟ್ಟು, ತನ್ನ ಮನೆಯ ಎಮ್ಮೆಗೆ ಮಾರಾಟದ ದರ ನಿರ್ಧಾರ ಮಾಡುವ ಸನ್ನಾಹದಲ್ಲಿದ್ದ ಅವಳ ಗಂಡ ಸೋಮಪ್ಪ, ಈ ಶತಕಿ, ಈ ದಶಕಿ, ಎಂದು ಖರೀದಿ ಮಾಡಲು ಬಂದವರ ಬೆರಳನ್ನು ಮುಟ್ಟಿ ವ್ಯಾಪಾರ ಕುದುರಿಸುತ್ತಿದ್ದವ, ಹೆಂಡತಿ ಹಡೆದ ಸುದ್ದಿ ಕೇಳಿ ಎಲ್ಲಾ ಬಿಟ್ಟು ಧಾವಿಸಿ ಬಂದ.

ಬೆಳಕು ಬೀಳದಂತೆ ಕಟ್ಟಿದ್ದ ತಾತ್ಕಾಲಿಕ ಕೋಣೆಯೊಳಗೆ ಹೊಕ್ಕ ಸೋಮಪ್ಪ ಹೆಂಡತಿಯ ಸ್ಥಿತಿ ನೋಡಿ ಕಂಗಾಲಾದ. ಕರು ಹಾಕಿದ ದಿನ ಎಮ್ಮೆ ಬಿದ್ದುಕೊಂಡಂತೆ ಹೆಂಡತಿ ಮಲಗಿದ್ದಾಳಲ್ಲ ಎಂಬುದು ಅವನಲ್ಲಿ ಕುತೂಹಲ ಬೆಳೆಯಲು ಕಾರಣ ಆಗಿತ್ತು. ಆತ ಯಾವ ಹೆಣ್ಣು ಮಕ್ಕಳನ್ನೂ ಈ ಸ್ಥಿತಿಯಲ್ಲಿ ನೋಡಿರಲಿಲ್ಲ. ತೊಟ್ಟಿಲ ಕಡೆ ತಿರುಗಿ ಕಣ್ಣು ಕಿರಿದು ಮಾಡಿದವನಿಗೆ ಮಗು ಕಂಡಿತು. ಹುಟ್ಟಿದ ಮಗು ಗಂಡೇ ಎಂಬುದನ್ನು ಖಾತ್ರಿ ಮಾಡಿಕೊಳ್ಳುತ್ತಿದ್ದವನ ಬಾಯಿಂದ ಉದ್ಗಾರ ಬಂತು, ''ಏನಲೇ ಬ್ಯಾಡಗಿ ಮೆಣಸಿನಕಾಯಿ''.

ಮೆಣಸಿನಕಾಯಿ ಬೆಳೆಯಿತು. ಅಂಬೆಗಾಲಿಕ್ಕುತ್ತಿದ್ದ ಮೆಣಸಿನಕಾಯಿ ಓಡಾಡಲು ಪ್ರಾರಂಭಿಸಿದ ದಿನ ಮನೆ ಹೊಸ್ತಿಲಿನಲ್ಲಿ ಜಿತ್ತು. ದಿನಗಳೆದಂತೆ ಎಲ್ಲ ಸಲೀಸಾಯ್ತು. ಶಾಲೆಗೆ ಹೆಸರು ಹಚ್ಚುವಾಗ ಸೋಮಪ್ಪನಿಗೆ ಮಾಸ್ತರು ಅಡ್ಡ ಹೆಸರೇನೆಂದು ಕೇಳಿದರು. ಜಾತಿ ಬಗ್ಗೆ ಅರಳು ಹುರಿದಂತೆ ಉತ್ತರ ಹೇಳಿದ ಸೋಮಪ್ಪನ ನೆರವಿಗೆ ಹೆಸರು ಹಚ್ಚಿಕೊಳ್ಳುತ್ತಿದ್ದ ಮಾಸ್ತರೇ ಬಂದರು. ಊರಿನ ಹೆಸರನ್ನೇ ಬ್ಯಾಡಗಿ ಅಡ್ಡ ಹೆಸರನ್ನಾಗಿ ಇಟ್ಟುಬಿಡೋಣ ಎಂದರು. ಸೋಮಪ್ಪ ಒಪ್ಪಿಕೊಂಡ.

ಒಂದನೇ ಕ್ಲಾಸಿಂದ ಎರಡು, ಆಮೇಲೆ ಮೂರು... ಹೀಗೆ ತೆವಳುತ್ತ ಎಸ್.ಎಸ್.ಎಲ್.ಸಿಯನ್ನು ಥರ್ಡ್‌ಕ್ಲಾಸಿನಲ್ಲಿ ಪಾಸು ಮಾಡಿದ ಶಿವಪುತ್ರಪ್ಪ, ಪೈಥಾಗೋರಸ್‌ನ ಪ್ರಮೇಯ ಏನೆಂದು ಅರ್ಥವಾಗದೇ ಪರೀಕ್ಷೆಯಲ್ಲಿ ಅದೇ ಪ್ರಶ್ನೆ ಮೇಲೆ ಅಂಕ ಕಳೆದುಕೊಂಡಿದ್ದರೂ, ಮಾಸ್ತರು ಪ್ರಮೇಯ ವಿವರಿಸುವಾಗ ಎಳೆಯುವ ತ್ರಿಕೋನದ ಚಿತ್ರದ ಮಧ್ಯೆ, ತನ್ನ ಕ್ಲಾಸಿನ ಹುಡುಗಿಯರ ಚಿತ್ರ ಬಿಡಿಸಲು ಹೋಗಿ ಸಿಕ್ಕಿಬಿದ್ದು ಎಲ್ಲರೆದುರು ಹೊಡೆತ ತಿಂದಿದ್ದರಿಂದಲೆ ಶಿವಪುತ್ರಪ್ಪನಿಗೆ ಪೈಥಾಗೋರಸ್‌ನ ತ್ರಿಕೋನ ನೆನಪು ಮಾಯಲಿಲ್ಲ. ಅದು ನೆನಪಿಂದ ಮಾಯವಾಗದಿರಲೆಂದು ತ್ರಿಕೋನಕ್ಕೆ ಬಾಲ ಬೆಳೆಸಿದ. ಹೀಗೇ ಪ್ರಯೋಗ ನಡೆಸುತ್ತಿದ್ದವನ ಚಿತ್ತದಲ್ಲಿ ಒಂದು ದಿನ ಹೈಸ್ಕೂಲಿನ ಪಕ್ಕದ ಗ... ಯಲ್ಲಿದ್ದ ಮೆಣಸಿನಕಾಯಿ ಬಂದು ಸೇರಿಕೊಂಡಿತು. ಅಂದಿನಿಂದ ಮೆಣಸಿನಕಾಯಿಂ... ಸತ್ಸಂಗ ಪ್ರಾರಂಭವಾಯ್ತು.

ಈ ನಡುವೆ ಆತ 'ಗಾಂಧೀ ಕ್ಲಾಸಲ್ಲಿ' ಪರೀಕ್ಷೆ ಪಾಸಾದ. ಉಳಿದ ಕ್ಲಾಸ್‌ಮೇಟ್‌ಗಳಂತೆ ಕಾಲೇಜಿಗೆ ಹೋಗುವ ಅವಕಾಶ ಆತನಿಗೆ ಸಿಗಲಿಲ್ಲ. ಆದ್ದರಿಂದಲೇ ಆತ ಮೆಣಸು, ಶೇಂಗಾ ಮತ್ತು ಜೋಳದ ದಂಟಿನ ನಡುವೆ ಭವಿಷ್ಯವನ್ನು ಹುಡುಕುವ ಪ್ರಯತ್ನ ನಡೆಸುತ್ತಿದ್ದಾಗಲೇ ಆ ಘಟನೆ ನಡೆಯಿತು.

ದಿನಾ ತನ್ನ ಅಪ್ಪನಿಗೆ ಮಧ್ಯಾಹ್ನದ ಬುತ್ತಿ ತರುತ್ತಿದ್ದ ಶಾಂತಮ್ಮ, ಒಂದು ದಿನ ಶಿವಪುತ್ರಪ್ಪ ನೊಡನೆ ಜಗಳ ಕಾದಳು. ವೇಳೆ ಎಷ್ಟಾಯ್ತು ಎಂದು ಶಿವಪುತ್ರಪ್ಪ ಕೇಳಿದ್ದಕ್ಕೆ, 'ಟೈಂ ಹೇಳಾಕೆ ನಾನೇನು ನಿಮ್ಮನೆ ಆಳಲ್ಲ' ಎಂಬಲ್ಲಿಂದ ಶುರುವಾದ ಜಗಳ ಬಹಳ ಹೊತ್ತು ನಡೀತು. ಆ ದಿನ ಶಿವಪುತ್ರಪ್ಪನಿಗೆ, ಅವಳ ಉತ್ತರದಿಂದ ನಿಜವಾಗಿಯೂ ಸಿಟ್ಟು ಬಂದಿತ್ತಾದರೂ, ಅವಳು ಹೋದಮೇಲೆ ಅವಳೊಡನೆ ಆಡಿದ ಸಂಭಾಷಣೆ ನೆನೆದು ತಮಾಷೆಯೆನಿಸಿತು. ಮರುದಿನ ಅವರಿಬ್ಬರು ಮತ್ತೆ ಜಗಳ ಕಾಯ್ದರು. ಬರುಬರುತ್ತಾ ಜಗಳಕ್ಕೆ ವಿಷಯವೆಲ್ಲಾ ಖರ್ಚಾಗಿ ಹೋಯಿತೇನೋ ಎಂಬಂತೆ ಮಾತು ಮೆತ್ತಗಾಯಿತು. ವಾರದೊಳಗೆ ಅವರಿಬ್ಬರಿಗೂ ಗೊತ್ತಿಲ್ಲದೆಯೇ ಒಲವು ಹುಟ್ಟಿತು. ಪ್ರೀತಿ ಬೆಳೆಯಿತು. ಗುಪ್ತಗಾಮಿಯಾಗಿದ್ದ ಪ್ರೀತಿ, ವೈಶಾಖದ ಬಿಸಿಲಿನ ತಾಪವನ್ನು ನಾಚಿಸಿ, ಇದ್ದಕ್ಕಿದ್ದಂತೆ ಒಂದು ದಿನ ಬೆಳೆದು ನಿಂತು ಮೆಣಸಿನ ಮಡಿಗಳ ಮಧ್ಯೆ ಅರಳಿತು.

ಮೆಣಸಿನ ಮಡಿಗಳಲ್ಲಿ ಅರಳಿದ ಪ್ರೀತಿ ಊರು ಸೇರಲು ಬಹಳ ದಿನ ಬೇಕಾಗಲಿಲ್ಲ. ತೂತಿರುವ ಹಲ್ಲಿನ ಮಧ್ಯೆ ಸಿಕ್ಕಿಬಿದ್ದ ಹಣ್ಣಿನ ಸೊಪ್ಪೆ ಇಡೀ ಬಾಯಂಗಳಕ್ಕೆ ಕಿರಿಕಿರಿ ಕೊಟ್ಟರೆ, ಅವರ ಪ್ರೀತಿ ಇಡೀ ಊರಿಗೆ ಉರಿ ಇಟ್ಟಿತು. ಜನ ಇವರಿಬ್ಬರ ನಡುವಿನ ಪ್ರೀತಿಗೆ ಕೊಳ್ಳಿಯಿಡುವ ಮೊದಲೇ ಅವರು ಊರು ಬಿಟ್ಟು ಹುಬ್ಬಳ್ಳಿಗೆ ಬಂದುಬಿಟ್ಟರು.

ಯಾವುದೋ ಕಿರಾಣಿ ಅಂಗಡಿಯಲ್ಲಿ ಸಾಮಾನು ಕಟ್ಟಿಕೊಡುವ ಕೆಲಸದೊಂದಿಗೆ ಜೀವನ ಪ್ರಾರಂಭಿಸಿದ. ಅದೇ ವೃತ್ತಿಯಲ್ಲಿಯೇ ಶಿವಪುತ್ರಪ್ಪನ ಭವಿಷ್ಯ ಮುಗಿಯಿತೇನೋ ಎಂದುಕೊಂಡರು. ಇದ್ದಕ್ಕಿದ್ದಂತೆ ಯಾರೋ ಹೇಳಿದರೂ ಅಂತ ಹಾಕಿದ ಅರ್ಜಿಗೆ ಜೀವ ಬಂದು, ಆತ ಪೊಲೀಸ್ ಕಾನ್ಸ್‌ಟೇಬಲ್ ಆಗದೇ ಇದ್ದಿದ್ರೆ, ಶಾಲೆಯಲ್ಲಿ ಬಿಡಿಸುತ್ತಿದ್ದ ಚಿತ್ರಕಲೆಯ ಪ್ರವೃತ್ತಿಗೆ ಮತ್ತೆ ಜೀವಕೊಡಲು ಸಾಧ್ಯವಾಗುತ್ತಿರಲಿಲ್ಲವೇನೋ?

ಇದ್ದ ಒಂದೇ ಒಂದು ಬಂಗಾರದ ತುಂಡು-ಹೆಂಡತಿಯ ಕಿವಿಯಲ್ಲಿದ್ದ ಓಲೆ-ಅಡವಿಟ್ಟು ಸಾಲ ಎತ್ತಿದ. ಯಾರ‍್ಯಾರದೋ ಕೈ ಬಿಸಿ ಮಾಡಿ ಕಾನ್ಸ್‌ಟೇಬಲ್ ನೌಕರಿ ಗಿಟ್ಟಿಸಿದವನಿಗೆ, ಮೊದಲು ಪೋಸ್ಟಿಂಗ್ ಆಗಿದ್ದು, ಹುಬ್ಬಳ್ಳಿಯ ಘಂಟಿಕೇರಿ ಸ್ಟೇಷನ್‌ಗೆ.

ಶಿವಪುತ್ರಪ್ಪ ಡ್ಯೂಟಿಗೆ ಸೇರುವುದಕ್ಕಿಂತ ಸ್ವಲ್ಪ ದಿನ ಮೊದಲು ಹುಬ್ಬಳ್ಳಿಗೆ ಕಮೀಷನರ್ ಆಗಿ ಬಂದಿದ್ದ ಮೂಲಿಮನಿ, ಹೊಗೆಯುಣ್ಣುವ ಹೊರಳೆಗಳಲ್ಲಿ ಹೊಸಗಾಳಿ ಹೊರಳಾಡಿಸಲು ಪ್ರಯತ್ನಿಸುತ್ತಿದ್ದ. ಯೋಗಾಸನ ಕ್ಲಾಸುಗಳು, ಮೆಡಿಟೇಶನ್ ಕ್ಲಾಸು ಹೀಗೆ ಶರೀರದ ಶ್ವಾಸಕ್ಕೆ ಒಂದಿಷ್ಟು ಚಟುವಟಿಕೆಗಳು, ಚಿತ್ರಕಲೆ, ಆಶು ಕವಿತೆ ರಚನೆ ಅಂತ ಮಾನಸಿಕ ಸ್ವಾಸ್ಥ್ಯಕ್ಕೆ ಇನ್ನೊಂದಿಷ್ಟು ಜಾರಿ ತರಲು ಪ್ರಯತ್ನಿಸುತ್ತಿದ್ದ.

ಇಂಥವನ ಕೈಗೆ ಶಿವಪುತ್ರಪ್ಪ ಸಿಕ್ಕ. ಘಂಟಿಕೇರಿಯಿಂದ ಕಮೀಷನರ್ ಕಛೇರಿಗೆ ವರ್ಗವಾಯ್ತು, ಹೀಗೇ ಒಂದು ದಿನ ಸಾಹೇಬರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಮುಂದಿಟ್ಟ ಪ್ರಸ್ತಾಪವನ್ನು ಕಮೀಷನರ್ ತಕ್ಷಣ ಅಂಗೀಕರಿಸಿದ್ದು ನೋಡಿ ಆತನಿಗೆ ಆಶ್ಚರ್ಯ ಆಯ್ತು. ಆತ ಹೇಳಿದಂತೆ ಕಮೀಷನರ್, ಪೊಲೀಸರಿಗಾಗಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿದ್ದ. ಜನ ಬಂದು ನೋಡಿ ಖುಷಿಪಟ್ಟು ಸದಾ ಸ್ಮರಿಸಲೆಂದು, ಪ್ರಚಾರಕ್ಕೆ ಏರ್ಪಾಡು ಮಾಡಿದ್ದ.

ಎಸ್.ಎಸ್.ಎಲ್.ಸಿ. ಮುಗಿದ ಮೇಲೆ, ಚಿತ್ರಕಲೆ ಬಿಡಿಸುವ ಯಾವ ಅವಕಾಶವಿಲ್ಲದೇ

ಸುಮ್ಮನಿದ್ದ ಶಿವಪುತ್ರಪ್ಪ, ಸ್ಪರ್ಧೆಗೆ ಹೆಸರು ಕೊಟ್ಟದ್ದಷ್ಟೇ ಅಲ್ಲ, ತಾನು ಬ್ಯಾಡಗಿ ಮೆಣಸಿನಕಾಯಿಯ ಚಿತ್ರವನ್ನೇ ಬಿಡಿಸುವುದಾಗಿ ಹೆಂಡತಿಯೆದುರು ಘೋಷಿಸಿ, ಮೊಟ್ಟ ಮೊದಲ ಬಾರಿಗೆ ಹೆಂಡತಿಗೆ ಹೆದರಿಕೆ ಹುಟ್ಟಿಸಿದ.

ಚಿತ್ರಕಲೆಯೆಂದರೆ ಅದು ಪಾಠಿ ಮೇಲೆ ಬಿಡಿಸುತ್ತಿದ್ದ ಮನೆ ಅಥವಾ ಕಮಲದ ಹೂವು ಮಾತ್ರ ಎಂದು ತಿಳಿದುಕೊಂಡಿದ್ದ ಶಾಂತ ಉರುಫ್ ಶಾಂತಿಗೆ ತನ್ನ ಗಂಡ ಯಾಕೆ ಮೆಣಸಿನ ಕಾಯಿ ಚಿತ್ರ ಬಿಡಿಸುವ ನಿರ್ಣಯ ತೆಗೆದುಕೊಂಡ ಎನ್ನೋದು ಬಗೆಹರಿಯದ ವಿಷಯವಾಗಿತ್ತು.

ನೀರು ತರುತ್ತಿರುವ ಸುಂದರ ಹುಡುಗಿಯೆದುರು ಗೋವಕಾಯಿಯ ಗಾತ್ರದ ಮೆಣಸಿನ ಕಾಯಿ ಮೆಣಸಿನ ಗಿಡಗಳ ಮಧ್ಯೆ ಇದೆ. ಅದರ ನೆರಳು ಬಂದೂಕಿನ ತರ ಬಲಕ್ಕೆ ವಾಲಿದೆ. ಬಲ ಮೂಲೆಯಲ್ಲಿ ಮಗುವನ್ನು ಎದೆಗವುಚಿಕೊಂಡ ತಾಯಿಯ ಚಿತ್ರ ಬಿಡಿಸಿದ್ದ. ಮೆಣಸಿನಕಾಯಿಯನ್ನು ನೋಡಿ ಗಾಬರಿಯಾಗಿ ಓಡುತ್ತಿದ್ದ ಆ ತಾಯಿಯ ಚಿತ್ರ ನೋಡಿದವರು ಭೇಷ್ ಎಂದು ಶಿವಪುತ್ರಪ್ಪನ ಆ ಮೆಣಸಿನಕಾಯಿಯ ಚಿತ್ರಕ್ಕೆ ಪ್ರಥಮ ಬಹುಮಾನ ಕೊಡುವಾಗ ಕಮೀಷನರ್ ಹೇಳಿದ ಮಾತಿನಾಧಾರದ ಮೇಲೆ ಶಾಂತಿ, ಆ ಚಿತ್ರಕ್ಕೆ ಯಾಕೆ ಬಹುಮಾನ ಬಂತು ಎಂದು ಕಾರಣಗಳನ್ನು ಊಹಿಸಿಕೊಂಡಳು.

ನೆಹರು ಮೈದಾನದಲ್ಲಿ ಗೆದ್ದ ಬಹುಮಾನ, ಇಕ್ಕಟ್ಟಾದ ಮನೆ ಸೇರಿದ ಮೂರು ತಿಂಗಳಲ್ಲಿ ಶಾಂತಿ ಬಸುರಾದಳು. ಆಳೆತ್ತರದ ಮೆಣಸಿನ ಕಾಯಿಯ ನೋಡುತ್ತ ನೋಡುತ್ತಲೇ ಅವಳ ಹೊಟ್ಟೆ ಬೆಳೆಯಿತು. ಸರಿಯಾಗಿ ಹೊಂದಿಸಿಡಲು ಜಾಗವಿರದ ಆ ಮನೆಯಲ್ಲಿ ದೇವರ ಪೀಠದ ನಂದಾದೀಪದ ಕೆಳಗೆ ಕುಳಿತಿರುತ್ತಿದ್ದ ಚಿತ್ರ ನೋಡಿದರೆ ಒಮ್ಮೊಮ್ಮೆ ಕಂಬದಿಂದ ಹೊರಗೆ ಬಂದ ನರಸಿಂಹನೇ ಕುಳಿತಿರುವಂತೆ ಕಾಣುತ್ತಿತ್ತು.

ಬಿಸಿಲು ಮಳೆ ಚಳಿ ಎಂಬುದನ್ನು ಲೆಕ್ಕಿಸದೇ ಕುಳಿತಿದ್ದ ಆ ಚಿತ್ರ ಮಳೆಗಾಲ ಮುಗಿಯೋ ಹೊತ್ತಿಗೆ ವಿಚಿತ್ರವಾಗಿತ್ತು. ಎಡಗಡೆ ಮೂಲೆಯಲ್ಲಿ ಹಾಸಿಗೆಯಲ್ಲಿ ಕುಳಿತುಕೊಂಡಾಗ ರಕ್ತದಲ್ಲಿ ಮಿಂದ ಚೂರಿಯಂತೆ ಕಾಣುತ್ತಿತ್ತು. ದೇವರ ಮುಂದೆ ನಂದಾದೀಪ ಹತ್ತಿಸಿ ದೇವರಿಗೆ ಕೈ ಮುಗಿದು ಚಿತ್ರಕ್ಕೆದುರಾಗಿ ನಿಂತಾಗ, ಸಣ್ಣ ಆ ಚಿತ್ರ ಮಗುವಿನ ತುದಿ ಕೆಂಪಾಗಿರೋ ಹಾಗೆ ಕಾಣುತ್ತಿತ್ತು ಅವಳಿಗೆ.

ಕೊನೆಗೊಂದು ದಿನ ರಾತ್ರಿ ಶಾಂತಿ ಕಿಟಾರೆಂದು ಕಿರುಚಿಕೊಂಡಳು. ಮರುದಿನವೇ ಅವಳು ಹೇಳಿದಳು, 'ಚಿತ್ರ ಮುಚ್ಚಿಡಿ, ನನಗೆ ಹೆದರಿಕೆ.' ತನ್ನನ್ನು ದಿರಿಸಿನಲ್ಲಿ ನೋಡಿ ಹೆದರಿದರೂ ತಾನು ಬರೆದ ಚಿತ್ರ ನೋಡಿ ಖುಷಿ ಪಡುತ್ತಾರೆ ಎಂಬ ವಿಚಾರದಲ್ಲಿ ಅನುಮಾನ ವಿರಲಿಲ್ಲ. ಆದರೆ ಹೆಂಡತಿ ನಿಮ್ಮ ಚಿತ್ರ ನೋಡಿ ಹೆದರಿಕೆಯಾಯ್ತು ಎಂದಾಗ ಮಾತ್ರ ಆತನಿಗೆ ದಿಗಿಲಿಟ್ಟುಕೊಂಡಿತು. ಭಾಷೆಯಲ್ಲಿ ಪೊಲೀಸ್ ಭಾಷೆ ಇದೆ. ಚಿತ್ರಕ್ಕೂ ಪೊಲೀಸ್ ಸೋಕಿದೆಯೋ ಎಂಬ ಗುಮಾನಿ ಆತನ ತಲೆಯನ್ನು ಕೊರೆಯಿತು. ಇಷ್ಟಾದರೂ ಯಾಕೆ ಹೆದರುತ್ತೀಯಾ ಎಂದು ಕೇಳಲಿಲ್ಲ. ಹೆದರಬೇಡ ಎಂದು ಧೈರ್ಯ ತುಂಬಲೂ ಪ್ರಯತ್ನಿಸಲಿಲ್ಲ ಯಾಕೆಂದರೆ ಕೆಲವು ಸಲ ಆತನಿಗೂ ಕೂಡ ಹಾ[illegible] ಕಂಡಿದ್ದುಂಟು. ಅಥವಾ ಚಿತ್ರದಲ್ಲಿ ಯಾ[illegible] ಅರ್ಥವೂ ಕಾಣದೇ ಪ್ರಾಪಂಚಿಕ ವಸ್[illegible] ವೊಂದನ್ನು ಆ ಚಿತ್ರದಲ್ಲಿ ಹುಡುಕಲು ಪ್ರಯ[illegible] ಸಿದ. ಮತ್ತು ಹುಡುಕಿ ಸೋತಿದ್ದ. ಇನ್ನೇನು ತೋಚದೇ ಆತ ಆ ಚಿತ್ರವನ್ನು ಪೇಪರ್‌ನ[illegible] ಸುತ್ತಿಟ್ಟ ಒಂದು ವಾರದೊಳಗೆ, ಹೆಂಡತಿ ಹೆ[illegible] ಮಗುವಿಗೆ ಜನ್ಮವಿತ್ತಳು.

ಹಡೆದ ದಿನ, ಮರುದಿನ, ಶಾಂತಿ ತುಂಬ ಸುಸ್ತಿನ ಕಾರಣಕ್ಕೋ ಏನೋ, ಮಗುವಿ[illegible] ರೂಪದ ಬಗ್ಗೆ ಗಮನ ಹರಿಸಲಿಲ್ಲ. ಅಥವಾ

ಊಟ ತರುತ್ತಿದ್ದ ಶಿವಪುತ್ರಪ್ಪ ಕೂಡ ಚೋಟುದ್ದದ ಮಗುವನ್ನು ಸರಿಯಾಗಿ ದೃಷ್ಟಿ ಇಟ್ಟು ನೋಡಿರಲಿಲ್ಲ. ಮಾರನೇ ದಿನ ಕಿಟಕಿ ಹತ್ತಿರ, ಬೆಳಕಿನಲ್ಲಿ ಮಗುವನ್ನು ತೊಡೆಯ ಮೇಲಿಟ್ಟುಕೊಂಡು ಶಾಂತಿ ಕುಳಿತಿದ್ದಾಗ ಶಿವಪುತ್ರಪ್ಪ ಬಂದು ಮಗುವನ್ನು ನೋಡಿದ. ಮತ್ತೊಮ್ಮೆ ನೋಡಿದ. ಒಂದು ಕ್ಷಣ ಹೆಂಡತಿ ಮುಖ ನೋಡಿದವನ ಬಾಯಿಂದ ಉದ್ಗಾರ ಬಂತು. ತನ್ನ ಜವೆ ಗೋಧಿ ಬಣ್ಣವೂ ಅಲ್ಲ. ಹೆಂಡತಿಯ ನಸುಗಪ್ಪು ಇಲ್ಲ. ಕಡು ಕಪ್ಪು ಬಣ್ಣದಲ್ಲಿದ್ದಳು ಆತನ ಮಗಳು.

ಈ ಬಣ್ಣ ಎಲ್ಲಿಂದ ಬಂತೆಂದು ತುಂಬಾ ತಲೆಕೆಡಿಸಿಕೊಂಡಿದ್ದ ಶಿವಪುತ್ರಪ್ಪ, ಉತ್ತರ ಕೇಳಬೇಕೋ ಬೇಡವೊ ಎಂದುಕೊಂಡರೂ, ಹೆಂಡತಿಗೆ ಕೇಳಿದಾಗ ಬಂದ ಉತ್ತರದಿಂದ ಆ ತಕ್ಷಣ ಅರಿವಳಿಕೆ ಕೊಟ್ಟ ಹಲ್ಲಿನಂತಾದ.

''ನಿಮ್ಮ ಚಿತ್ರ ಇಷ್ಟೆಲ್ಲ ಮಾಡಿದ್ದು. ನಾನೇನೂ ಮಾಡಿಲ್ಲ.'' ತುಂಬು ಬಸಿರಲ್ಲಿ ಯಾವುದಾದರೂ ವಸ್ತು ನೋಡಿ ಹೆದರಿದ್ರೆ, ಹೀಗೆ ಆಗುತ್ತದಂತೆ. ನಾನು ನಿಮ್ಮ ಚಿತ್ರ ನೋಡಿ ಹೆದರಿರಲಿಲ್ವ? ಎಂದಳು. ಶಿವಪುತ್ರಪ್ಪ ಕುಸಿದುಹೋದ. ಆಗಲೇ ನಿರ್ಧಾರ ಮಾಡಿದ: ಇದು ಸಾರಾವಳಿ ತರೋ ಚಿತ್ರ ಅಲ್ಲ. ಪ್ರಾಯಶಃ, ಆ ವರ್ಷದ ಜನವರಿ 26 ಬರದೇ ಇದ್ದಿದ್ರೆ, ಶಿವಪುತ್ರಪ್ಪ ಆ ಚಿತ್ರಕ್ಕೆ ಏನಾದರೂ ಗತಿ ಕಾಣಿಸುತ್ತಿದ್ದನೇನೊ? ಕಮೀಷನರ್ ಆಫೀಸಿನಲ್ಲಿ ಚೌಕಟ್ಟು ಹಾಕಿಸಿ ಇಡಿ ಎಂಬ ಕೋರಿಕೆಯನ್ನು ಸಾಹೇಬರ ಎದುರು ಸಲ್ಲಿಸಲು ಅಥವಾ ತನ್ನ ಚೀಟಿನಲ್ಲಿ ಬರೋ ಮಾರವಾಡಿಗಳ ಅಂಗಡಿ ಸಾಲಿನ ಗಲ್ಲಾದ ಮೇಲೆ ಕೂತುಕೊಳ್ಳೋರು ಯಾರಾದರೂ ಕೊಳ್ಳುವಂತೆ ಮಾಡಲು ಕಮೀಷನರ್ ಮೂಲಕ ಹೇಳಿಸೋಣ ಎಂದೂ ವಿಚಾರ ಮಾಡಿದ್ದ. ಮತ್ತೊಂದು ಸುತ್ತಿನಲ್ಲಿ ಯಾವುದಾದರೂ ಕಲಾಪ್ರೇಮಿ ಸಂಘಟನೆಗಳಿಗೆ ದಾನ ಮಾಡಿಬಿಡೋಣ ಎನ್ನುವ ವಿಚಾರ ಕೂಡಾ ಆತನ ತಲೆಯಲ್ಲಿ ಸುಳಿದಿತ್ತು.



ಆದರೆ ಅದ್ಯಾವುದೂ ಒಂದು ರೂಪಕ್ಕೆ ಬರಲಿಲ್ಲ. ಅವನಿಗೆ ಘಂಟಿಕೇರಿಗೆ ವರ್ಗ ಆಯ್ತು. ವರ್ಗವಾಗಿ ಒಂದು ವಾರದೊಳಗೆ ಊರಲ್ಲಿ ಗಲಾಟೆ ಶುರುವಾಗಿ, ಶಿವಪುತ್ರಪ್ಪ ಎಲ್ಲ ಬಿಟ್ಟು ಬಂದೂಕು ಹಿಡಿದು ಓಡಾಡುವಂತಾಯ್ತು. ಅದು ಮೈದಾನದಲ್ಲಿ ತ್ರಿವರ್ಣ ಧ್ವಜ ಹಾರಿಸೋ



ಗಲಾಟೆಯಾಗಿದ್ದರಿಂದ ಆತ ಎಲ್ಲಾ ಮರೆತು ಮೈದಾನದ ಮೂಲೆಯಲ್ಲಿ ಬಂದೂಕು ಹೊತ್ತು ಕೂತುಕೊಳ್ಳುವಂತಾಯಿತು.

ಗಲಾಟೆಯ ದಿನಗಳು ಬರುವುದು ಅಂದ್ರೆ, ಮಧ್ಯ ರಾತ್ರಿಯ ನೀರವತೆ, ಉದ್ವಿಗ್ನತೆ, ಮಧ್ಯಾಹ್ನದ 12ಕ್ಕೆ ಹುಬ್ಬಳ್ಳಿ ಪೇಟೆಗೆ ಮಾರಾಟಕ್ಕೆ ಬರುತ್ತಿತ್ತು. ದಾಜಿಬಾನ್ ಪೇಟೆಯ ಗಲ್ಲಿಯ ಮೂಲೆಯಲ್ಲಿ ಟೊಮೊಟೋ ಕೊಳ್ಳಲು ಬಂದವರು ಶಿವಪುತ್ರಪ್ಪನನ್ನು ನೋಡಿ ಬೆಚ್ಚಿದರು. ಭೂಲೋಕದಿಂದ ಕರೆದುಕೊಂಡು ಹೋಗಲು ಬಂದಿಳಿದ ಯಮಧರ್ಮನನ್ನು ನೋಡಿದಂತೆ ಅವರು ಶಿವಪುತ್ರಪ್ಪನನ್ನು ದಿಟ್ಟಿಸುತ್ತಾ ಹೆಜ್ಜೆ ಹಾಕಿದರು. ಮನೆಯಲ್ಲಿದ್ದ ಸ್ಟಾಕ್ ಖರ್ಚಾಗಿ ಅರ್ಜೆಂಟಾಗಿ ಅಜ್ಜನಿಗೋ, ಅಜ್ಜಿಗೋ ಸಿಹಿಮೂತ್ರದ ಮಾತ್ರೆ ಖರೀದಿಗೆ ಈದ್ಗಾ ಮೈದಾನದೆದುರು ಜಾಫರಿ ಅಂಗಡಿಗೆ ಬಂದವರನ್ನು ಆತ ನೋಡಿದ. ಕುಂಡೆಗೆ ಗುಂಡು ಸೂಜಿ ನಾಟಿದಾಗಿನ ನೋವಿನ ಭಾವನೆ ಅವರ ಕಣ್ಣಲ್ಲಿತ್ತು. ಚಿತ್ರದ ಬಗ್ಗೆ ತಲೆ ಕೆಡಿಸಲು ಸಮಯವಿಲ್ಲದಷ್ಟು ಗೊಂದಲ ಶುರುವಾಯಿತು.

ಮರುದಿನ ರಸ್ತೆಗಳಲ್ಲಿ ಕಲ್ಲೆಸೆತ ನಡೆಯಿತು. ಕುಳಿತುಕೊಳ್ಳಲು ಇದ್ದ ಆರ್ಡರು ಬದಲಾಯ್ತು. ಬಂದೂಕನ್ನು ಬಗಲಿಗೆ ಹಾಕಿಕೊಂಡು ರಸ್ತೆಯಲ್ಲಿ ಓಡುವ ಆರ್ಡರು ಬಂತು. ಅಲ್ಲೊಮ್ಮೆ

ಇಲ್ಲೊಮ್ಮೆ, ಕ್ಷಣ ಮಾತ್ರ ತೆರೆದುಕೊಳ್ಳುತ್ತಿದ್ದ ಮನೆಗಳ ಕಿಟಕಿಗಳ ಇಣುಕುವ ಕಣ್ಣನ್ನು ಬಿಟ್ಟರೆ ಏನೂ ಇರಲಿಲ್ಲ. ಇನ್ನೇನೂ ಆಗುವುದಿಲ್ಲ ಎನ್ನುತ್ತಿದ್ದಾಗಲೇ ಅದೆಲ್ಲಿಂದಲೋ 'ಜನಗಣ ಮನ...' ಕೇಳಿ ಬಂತು. 'ಜಿಂದಾಬಾದ್'.... ತುಂಬಾ ದೊಡ್ಡದಾಗಿ ಕೇಳಿತು. ಯಾವ ಕಮೀಷನರ್ ಬಂದ ಹೊಸದರಲ್ಲಿ ಪೊಲೀಸರ ಕೈಯಲ್ಲಿ ಕುಂಚ ಹಿಡಿಸಿದ್ದನೋ ಆತ, 'ಫೈರ್' ಎಂದು ಆರ್ಡರ್ ಮಾಡಿ ಗುಂಡಿನ ಮಳೆಗಾಗಿ ಸೀಟಿ ನಡೆಸಿದ. 'ಢಂ ಢಂ' ಎನ್ನುತ್ತ ಗುಂಡುಗಳು ಹಾರಿದವು. ಆ ದಿನ ಹುಬ್ಬಳ್ಳಿಯ ನೆಲ ರಕ್ತದಲ್ಲಿ ಸಾರಿಸಿದಂತಾಗಿತ್ತು.

ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ ರಾಣಿ ಚೆನ್ನಮ್ಮ ಕೂಡ ಏನೂ ಮಾಡಲಾಗಲಿಲ್ಲ. ನೋಡಿಯೇ ಇಲ್ಲವೇನೋ ಎಂಬಂತೆ ಕಲ್ಲಾಗಿ ನಿಂತಿದ್ದಳು. ಟ್ರಾಫಿಕ್ ಐಲ್ಯಾಂಡಿನಲ್ಲಿದ್ದ ಅವಳ ಕುದುರೆಯ ಖುರ ಪುಟದ ಬದಲಾಗಿ ಅಂಬುಲೆನ್ಸ್ ಊಳಿಟ್ಟಿತು. ಮುಚ್ಚಿದ ಕಿಟಕಿಯ ಹಿಂದೆ ಉಸಿರು ಬಿಗಿ ಹಿಡಿದು ಕುಳಿತಿದ್ದವರು, ಕಾರ್ಪೊರೇಷನ್ನಿನ ಹೆಣ ಸಾಗಿಸುವ ಹಳೆಗಾಡಿ ಎಷ್ಟು ಬಾರಿ ಬಂತೆಂದು ಕೈ ಬೆರಳಲ್ಲಿ ಎಣಿಸಿದರು.

ಇವೆಲ್ಲಾ ಮುಗಿದು ವರ್ಷ ಕಳೆಯಿತು. ಜನ ಎಲ್ಲವನ್ನು ಮರೆತರು ಅಥವಾ ಮರೆತವರಂತೆ ಇದ್ದರು. ಮೂಲಿಮನಿ ಗುಂಡು ಹಾರಿಸಲು ಆರ್ಡರ್ ಮಾಡಿದ್ದಕ್ಕಾಗಿ ವರ್ಗವಾಗಿ ಹೋದ. ಇನ್ನು ಕೆಲವರು ಬೆಂಗಳೂರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಂಡರು. ಶಿವಪುತ್ರಪ್ಪ, ಉಳಿದ ನಾಲ್ವರ ಜೊತೆ ಸಸ್ಪೆಂಡಾಗಿ ಮನೆಯಲ್ಲಿ ಕುಳಿತುಕೊಳ್ಳುವಂತಾಯ್ತು.

ದಿನಾಲು ಬರುತ್ತಿದ್ದ ಹಫ್ತಾದಲ್ಲಿ ಮಲ್ಲಿಗೆ ಮೊಗ್ಗು, ತಿಂಗಳಿಗೋ ಎರಡು ತಿಂಗಳಿಗೊಮ್ಮೆ ಬರುತ್ತಿದ್ದ ವಿಶೇಷ ಹಫ್ತಾದಲ್ಲಿ ಖರೀದಿಸಿದ್ದ ಕುರ್ಚಿ ಮೇಜು, ದಿವಾನ್‌ಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿಯ ಜೊತೆಗೆ, ಅಕ್ಕಿ, ಕಾಳು ಬೇಳೆಯನ್ನು ಕಾಡಿ ಬೇಡಿ ತರಬೇಕಾದ ಪರಿಸ್ಥಿತಿ ಬಂತು. ಮೂರು ತಿಂಗಳ ಹಿಂದೆ ತಾನೇ ಮಾಡಿಸಿಕೊಂಡ ಬಂಗಾರದ ಉಂಗುರ, ಚೈನಿನ ಮೇಲೆ ಆತನ ಕಣ್ಣು ಬಿತ್ತು. ಬಂಗಾರ ಅಡವಿಟ್ಟು ಒಂದಿಷ್ಟು ದಿನ ಮನೆ ನಡೆಸಿದ.

ಕೆಲಸವಿಲ್ಲದೇ ಇಪ್ಪತ್ನಾಲ್ಕು ಗಂಟೆ ಮನೆಯೊಳಗೆ ಉದ್ದಂಡ ಮಲಗಿಕೊಂಡಿರುತ್ತಿದ್ದ ಶಿವಪುತ್ರಪ್ಪ. ಇತ್ತೀಚೆಗಂತೂ ಸೂರ್ಯ ಕಪಾರಿದ್ದಾನೋ, ಬೆಳಗಾಗಿದ್ದಾನೋ ಎಂದು ಕೇಳಿದರೆ ಕೂಡ ಹೇಳಲಾಗದಂಥ ಸ್ಥಿತಿಯಲ್ಲಿದ್ದ ಆತ.

ತನ್ನ ಬೇಸರ ಮರೆಯಲು ಆಗೊಮ್ಮೆ ಈಗೊಮ್ಮೆ ಚಿತ್ರ ಬಿಡಿಸಲು ನೋಡಿದ. ಕೈ ಓಡಲಿಲ್ಲ. ಕುಂಚ ಬಣ್ಣವನ್ನು ಕಾಗದಕ್ಕೆ ಬಿಟ್ಟು ಕೊಡಲಿಲ್ಲ. ಆತ ಬಿಡಿಸಿದ್ದೆಲ್ಲ ಹೊಟ್ಟೆಕಿಚ್ಚಿಗೆ ಗೀಚಿದಂತೆ ತೋರಿತ್ತು. ಶಾಂತಿಗೆ ಆತ ಕುಂಚ ಹಿಡಿದಾಗಲೆಲ್ಲ ಬಂದೂಕು ಹಿಡಿದೇ ನಿಂತಿದ್ದಾನೇನೋ ಎಂಬ ಭಾವನೆ ಬರುತ್ತಿತ್ತು.

ಆತನ ಚಿತ್ರಗಳೆಲ್ಲ ಆ ಮೆಣಸಿನಕಾಯಿಯ, ಚಿತ್ರದ ಹಿಂದೆ ಕುಳಿತುಕೊಂಡವೇ ಹೊರತು ಎದುರಿಗೆ ಬರುವಷ್ಟು ಛಾತಿ ತೋರಿಸಲಿಲ್ಲ.

ಆ ದಿನ ಕೂಡ ಶಿವರುದ್ರಪ್ಪ ಬೋರಲಾಗಿ ಮಲಗಿ ಅರೆ ನಿದ್ರಾವಸ್ಥೆಯಲ್ಲಿದ್ದ. ನೆರೆಮನೆಯ ಗೇಟಿನೆದುರು ನಿಂತು ಶಾಂತಿ ಹರಟುತ್ತಿದ್ದಳು. ಅಷ್ಟು ಹೊತ್ತು ಅವಳ ಜೊತೆಗೇ ಆಡುತ್ತಿದ್ದ ಮಗಳು ಮನೆಯೊಳಕ್ಕೆ ಹೋಗಿದ್ದನ್ನು ಅವಳು ಗಮನಿಸಲಿಲ್ಲ. ಅಥವಾ ಶಿವಪುತ್ರಪ್ಪನಿಗೆ ಗೊತ್ತಾಗಲಿಲ್ಲ. ಕಿಟಾರನೇ ಕಿರುಚಿಕೊಂಡ ಧ್ವನಿ ಕೇಳಿದಾಗ ಹೋಗಿ ನೋಡಿದರೆ ಮಾಲತಿ ಗೋಡೆಯ ಮೂಲೆಗೆ ಅವಿತುಕೊಂಡು ಬಿಕ್ಕುತ್ತಿದ್ದಾಳೆ. ಭಯಭೀತಳಾಗಿ ದೇವರ ಪೀಠದತ್ತ ನೋಡುತ್ತಿದ್ದಾಳೆ. ಶಾಂತಿ, ಹೊರಗಿನಿಂದ ಒಳಗೆ ಬಂದವಳು ಕಣ್ಣು ಕಿರಿದು ಮಾಡಿ ನೋಡಿದರೆ, ಮೆಣಸಿನಕಾಯಿಯ ಚಿತ್ರದ ಮೇಲಿನ ಹೊದಿಕೆ ಗಾಳಿಗೆ ಹಾರಿಬಿದ್ದಿದೆ.

ಎಲ್ಲವೂ ಅರ್ಥವಾಯ್ತು ಅವಳಿಗೆ, ಮಗಳ ಸಂತೈಸಲು ಎತ್ತಿಕೊಳ್ಳಲು ಹೋದರೆ ಬಟ್ಟೆಯೆಲ್ಲ ಒದ್ದೆಯಾಗಿದ್ದು ಕಂಡಿತು. ಮಾಲತಿ ಹೆದರಿ ಉಚ್ಚೆ ಹೊಯ್ದುಕೊಂಡಿದ್ದಾಳೆ.

ಆ ದಿನ ಮಧ್ಯಾಹ್ನ ಒಲೆ ಉರಿಯುತ್ತಿತ್ತು. ಕಂಬಳಿಯ ಹಾಸಿಗೆ ಬಿಡಿಸಿ, ಚಾದರದಲ್ಲಿ ಮುಖ ಮುಚ್ಚಿಕೊಂಡು ಶಾಂತಿ ಆಗಾಗ ಅಳುತ್ತಿದ್ದ ಧ್ವನಿಯಷ್ಟೇ ಪಕ್ಕದಲ್ಲಿ ಮಲಗಿದ್ದ ಶಿವಪುತ್ರಪ್ಪನಿಗೆ ಕೇಳಿಸುತ್ತಿತ್ತು. ಅವಳು ಅತ್ತಾಗಲೆಲ್ಲ ಅವನ ಹೊಟ್ಟೆಯಲ್ಲಿ ತಳಮಳ ಹೆಚ್ಚಾಗುತ್ತಿತ್ತು. ಇಷ್ಟೆಲ್ಲ ಮಾಡಿದುದಕ್ಕೆ ಪ್ರಾಯಶ್ಚಿತ್ತವೋ ಎಂಬಂತೆ, ಮಗಳನ್ನು ಕರೆದುಕೊಂಡು ಹೋಗಿ ಮಸಾಲೆ ದೋಸೆ ತಿನ್ನಿಸಿಕೊಂಡು ಬಂದ.



ಗಟ್ಟಿ ಮನಸ್ಸು ಮಾಡಿ, ಹಿಂದಿನದೆಲ್ಲವನ್ನೂ ಮರೆತು ಮಗಳನ್ನು ಮನೆಗೆ ಕರೆದುಕೊಂಡು ಹೋಗಲು ಶಾಂತಿಯ ಅಪ್ಪ ಬರದಿದ್ದಿದ್ದರೆ ಶಿವಪುತ್ರಪ್ಪನ ಜೀವನ ನಿರ್ವಾತವಾಗಿ ಬಿಡುತ್ತಿತ್ತೇನೋ. ಆಗಿದ್ದು ಆಗಿಹೋಯಿತು ಅಂತ ಮಗಳು, ಅಳಿಯನನ್ನು ಕರೆದುಕೊಂಡು ಮಾವ ಬ್ಯಾಡಗಿಗೆ ಹಿಂತಿರುಗಿದ.

ಮೈಲುದ್ದದ ಮೆಣಸಿನ ಮಡಿ ನೋಡಿದವನಲ್ಲಿ ಮತ್ತೆ ಮೈ ಮುರಿದು ಎದ್ದು ಕುಳಿತಿತ್ತು ಉಮೇದು. ಊರಿಗೆ ಬಂದರೂ ಸಹ ಸ್ವಂತ ಮನೆಗೆ ಭೇಟಿ ಕೊಡದೇ ಶಿವರುದ್ರಪ್ಪ ತಿರುಗಿ ಬೆಂಗಳೂರಿಗೆ ಬಸ್ಸು ಹತ್ತಿದ. ಈ ಬಾರಿ ಸಸ್ಪೆನ್‌ಶನ್ ರದ್ದು ಮಾಡಿಸಿಕೊಳ್ಳಲೇಬೇಕೆಂದು ಛಲ ಇತ್ತು.

ಮಾವ ತುಂಬಿಸಿ ಕಳಿಸಿದ್ದ ಕಿಸೆ ಖಾಲಿ ಮಾಡಿ, ಮೇಲೆ ಕೆಳಗೆ ಅಂತೆಲ್ಲ ಡಿಜಿ ಆಫೀಸಿನಲ್ಲಿ ಕುಳಿತವರ ಕಿಸೆ ತುಂಬಿದಾಗ, ಅಲ್ಲಿದ್ದವರೆಲ್ಲ ಆತನಿಗೆ ಮೂಲಿಮನಿಯಂತೆ ಹತ್ತಿರದವರಾದರು. ಸಸ್ಪೆನ್‌ಶನ್ ರದ್ದಾದ ಆರ್ಡರು ಹಿಡಿದು ತಿರುಗಿ ಗದಗದ ಬಸ್ಸಿನಲ್ಲಿ ಕುಳಿತಾಗ ಮಧ್ಯರಾತ್ರಿ ಅವನ ಕನಸಿನಲ್ಲಿ ಮತ್ತೆ ಚಿತ್ರ ಬಿಡಿಸಿಕೊಳ್ಳಲು ಕುಳಿತುಕೊಳ್ಳುತ್ತಿದ್ದಂತೆ ತೋರಿತು.

ಹುಬ್ಬಳ್ಳಿಯ ಸಹವಾಸ ಸಾಕೆಂದು ಬೆಂಗಳೂರಿಗೆ ಬಂದು ಬೇಯುವ ಟ್ರಾಫಿಕ್‌ನ ಹೊಗೆಯ ಚಕ್ರವ್ಯೂಹದಲ್ಲಿ ಆತ ಸಿಕ್ಕಿಕೊಂಡ. ಮನೆ ಸಿಗದೇ ಒದ್ದಾಡಿ, ಒದ್ದಾಡಿ ಕೊನೆಗೂ ವಿಜಯ ನಗರದಲ್ಲಿ ಮೂರು ಮೊಳದ ಮನೆ ಹಿಡಿದ. ಹೆಂಡತಿ ಕರೆತಂದು ಜೊತೆಗೆ ಮನೆಯಲ್ಲಿ ಹಾಲುಕ್ಕಿಸಿದ ದಿನ, ಬೆಡ್‌ನ ಪಕ್ಕದಲ್ಲಿ ಮತ್ತೆ ಬಂದು ಕುಳಿತಿತ್ತು ಆ ಮೆಣಸಿಕಾಯಿಯ ಚಿತ್ರ. ಮತ್ತೊಮ್ಮೆ ಆ ಚಿತ್ರಕ್ಕೂ ಮುಕ್ತಿ ಕೊಡುವ ವಿಚಾ ಅವನಿಗೆ ಬಂತು. ಬೆಂಗಳೂರಿನಲ್ಲಿ ಹುಬ್ಬಳ್ಳಿಗಿಂ ಹೆಚ್ಚಿನ ಆರ್ಟ್ ಲವರ್ಸ್, ಆರ್ಟ್ ಸರ್ಕಲ್‌ಗಳ ಇರೋದರಿಂದ ತನ್ನ ಚಿತ್ರ ಮಾರಾಟ ಮಾಡಲ ಪ್ರಯತ್ನಿಸಿದ. ಒಮ್ಮೆ ಕಾನ್‌ಸ್ಟೇಬಲ್ ಬಟ್ಟೆಯ ಹೋಗಿ, ಪೊಲೀಸ್ ಭಾಷ ಉಪಯೋಗಿಸಿದರೂ ಆತ ಚಿತ್ರ ಮಾರಲ ವಿಫಲನಾದ. ಮತ್ತೊಮ್ಮೆ ಸಿವಿಲ್ ಡ್ರೆಸ್‌ನ ಹೋಗಿ, ಹುಬ್ಬಳ್ಳಿಯ ಕನ್ನಡ ಮಾತಾ ಮುಖಭಂಗ ಮಾಡಿಸಿಕೊಂಡ. ಗಡ್ಡ ಬಿಟ್ಟ ಜೀನ್ಸ್ ತೊಟ್ಟು, ಒಂದೇ ಕಿವಿಗೆ ಲೋಲಾಕ

ಹಾಕಿಕೊಂಡು ಸಿಗರೇಟಿನ ಅಲೆ ಅಲೆಯ ಹೊಗೆಯಲ್ಲಿ ಚಿತ್ರ ಬಿಡಿಸುವವರು, ಆ ಚಿತ್ರ ನೋಡಲು, ಕೊಳ್ಳಲು ಬೆಂಝ್ ಕಾರಿನಲ್ಲಿ ಬಂದು ಚಿತ್ರದೆದುರು ನಿಂತು ಕೈ ಕುಣಿಸುವ ಸೂಟಿನವರನ್ನು ಮೊದಲ ಬಾರಿ ನೋಡಿದಾಗ, ಹಾವೇರಿಯ ಎಮ್ಮೆ ಸಂತೆಗೆ ಬರುವವರು ಡ್ರೆಸ್ ಬದಲಾಯಿಸಿಕೊಂಡು ಬಂದಿದ್ದಾರೆಂದು ಆತನಿಗೆ ತೋರಿತು. ಆದರೆ ಕನ್ನಡ ಮಾತಾಡದೇ, ಹಾಕಿಕೊಂಡ ಸೂಟಿನೊಳಗಿಂದ ಸೆಂಟ್ ಉದುರಿಸುತ್ತ, ಇಂಗ್ಲೀಷ್‌ನಲ್ಲಿ ವ್ಯಾಪಾರ ಕುದುರಿಸುವವರ ಮುಂದೆ ಶಿವಪುತ್ರಪ್ಪನ ಮೆಣಸಿನಕಾಯಿಯ ಚಿತ್ರ ಮಾರಾಟವಾಗಲಿಲ್ಲ.


ಯಾರ್ಯಾರದೋ ಕಾಲು ಹಿಡಿದು ಚಿತ್ರಕಲಾ ಪರಿಷತ್ತಿನಲ್ಲಿ ಚಿತ್ರಕಲೆಯ ಎಕ್ಸಿಬಿಷನ್ ಮಾಡಿ ಮೆಣಸಿನಕಾಯಿಯ ಚಿತ್ರಕ್ಕೆ ಹೊಗಳಿಸಿಕೊಂಡರೂ, ಮನೆಗೆ ಕೊಂಡುಹೋಗುವಂಥವರು ಯಾರೂ ಸಿಗದ ಕಾರಣಕ್ಕೆ ನಿರಾಶನಾಗಿ ಚಿತ್ರವನ್ನು ತನ್ನ ಮನೆಗೇ ಹೊತ್ತುಕೊಂಡು ಬಂದ.


ಆತ ಬಿಡಿಸಿದ ಚಿತ್ರ ಅಪರಿಚಿತವಾಗಿ ಮಾನಸಿಕ ಕ್ಲೇಶದಲ್ಲಿದ್ದಾಗಲೇ ಶಿವಪುತ್ರಪ್ಪನಿಗೆ, ಈ ಬಾರಿ ಹಣ, ಬಂಗಾರದ ಬಗ್ಗೆ ಆಗಿರದೇ ಬ್ಯಾಡಗಿಯಿಂದ ಮತ್ತೊಂದು ಪತ್ರ ಬಂತು. ಅದು ಶಾಂತಿಯ ಕೊನೆಯ ತಂಗಿ ವಿನೀತಾ ಮೊದಲ ಬಾರಿಗೆ ಮುಟ್ಟಾಗಿದ್ದಾಳೆ ಎಂಬುದರ ಕುರಿತಾಗಿತ್ತು. ಬರುವ ಶುಕ್ರವಾರ ಒಂದು ಊತಣ ಇದೆ ಎಂಬ ಒಕ್ಕಣೆ ಓದಿದ. ಶಾಂತಿ ಖುಷಿಯಿಂದ ಬೀಗಿದಳು. ಶಿವಪುತ್ರಪ್ಪ ಆ ಪತ್ರ ಓದಿ ನಿಟ್ಟುಸಿರಿಟ್ಟ. ಮಾವ ಹಣ ತಿರುಗಿಸಲು ಕೇಳಿಲ್ಲ ಎಂಬುದು ಆತನಿಗೆ ಸಮಾಧಾನ ತಂದ ಸಂಗತಿಯಾಗಿತ್ತು.


ಹಲ್ಲು ಹುಟ್ಟಿದರೆ ಗಿಫ್ಟ್, ಹಲ್ಲು ಬಿದ್ದರೂ ಗಿಫ್ಟ್ ನೀಡುವ ಬೆಂಗಳೂರಿನ ಗಿಫ್ಟ್ ಕಲ್ಚರ್ ವಾಸನೆಯಲ್ಲಿ ಓಡಾಡಿದ ಇಬ್ಬರೂ, ವಿನೀತಾ ಮೊದಲ ಬಾರಿಗೆ ಮುಟ್ಟಾದ ನೆನಪಿಗೊಂದು 'ಮೆಮೊರಬಲ್ ಗಿಫ್ಟ್' ಕೊಡಲು ನಿರ್ಧರಿಸಿದರು. ಶಾಂತಿ, ಆ ಸೀರೆ, ಈ ಸೀರೆ ಅಥವಾ ದಾರಿಯಲ್ಲಿ ಹೋಗುವಾಗ ಅಂಗಡಿಗಳ ಷೋಕೇಸಿನಲ್ಲಿ ಕಂಡ ವಸ್ತುಗಳಲ್ಲಿ ಯಾವುದಾನ್ನಾದರೂ ಕೊಡೋಣ ಎಂದಳು.

ಗದಗಕ್ಕೆ ಹೋಗಿ ಗಿಫ್ಟ್ ಕೊಡಬೇಕೆಂದು ಹಠ ಹಿಡಿದಿದ್ದ ಶಾಂತಿಯ ಕಾಟ ತಾಳಲಾರದೆ ಕೈಲಿದ್ದ ಪಗಾರ ಖರ್ಚಾಗಿ ಕಂಗಲಾಗಿದ್ದ ಆತ, ಕೈಗಡ ಮಾಡಿ ಗದಗಕ್ಕೆ ಒಂದೇ ಟಿಕೆಟ್ ಬುಕ್ ಮಾಡಿಸಿದ.

ಗಿಫ್ಟ್ ಯಾವಾಗ ತರೋದು ಎಂದು ಕೇಳಿದಾಗಲೆಲ್ಲ 'ತರೋಣ' ಎಂದು ಹೇಳಿದ ಶಿವಪುತ್ರಪ್ಪ, ಆಕೆ ಹೊರಡೋ ದಿನ ಬೆಳಿಗ್ಗೆ ಡ್ರೆಸ್ ಹಾಕಿ ಕೆಲಸಕ್ಕೆ ಹೊರಡೋದಕ್ಕೆ ಮುಂಚೆ ಹೆಂಡತಿಗೆ ಹೇಳಿದ, ''ಗಿಫ್ಟ್ ಅಂತ ಬೇರೆ ಏನೂ ಬೇಡ, ಮೆಣಸಿನ ಕಾಯಿಯ ಚಿತ್ರವನ್ನೇ ಕೊಡೋಣ.'' ಈಗ ಹೋಗಿ ಪ್ಯಾಕಿಂಗ್ ಪೇಪರ್ ತರುತ್ತೇನೆ ಎಂದು ಆತ ಹೊರಬಿದ್ದ.







ವಿವೇಕ ಶಾನಭಾಗ

ಕಥನ ಕುತೂಹಲ

ಸಾಹಿತ್ಯ ಭಾಷೆ

ಕನ್ನಡ ಮಾತೃಭಾಷೆಯಲ್ಲದ, ಮನೆಮಾತಲ್ಲದ ನಮ್ಮ ಹಲವು ಬರಹಗಾರರು ಕನ್ನಡದಲ್ಲೇ ಯಾಕೆ ಬರೆಯತೊಡಗಿದರು ಎಂಬ ಬಗ್ಗೆ ಯೋಚಿಸಿದರೆ ಸರಳ ಉತ್ತರ ದೊರಕುವುದು ಕಷ್ಟ. ಇದರತ್ತ ಬೆರಳು ಮಾಡುವ ಹಲವು ಕಾರಣಗಳಲ್ಲಿ, ಕನ್ನಡ ಮಾಧ್ಯಮದ ಶಿಕ್ಷಣ, ಪರಿಸರದ ಭಾಷೆ ಇತ್ಯಾದಿಗಳು ಕೆಲವು. ಕನ್ನಡವನ್ನು ಸಾಹಿತ್ಯ ಭಾಷೆಯಾಗಿ ಗ್ರಹಿಸಿದ್ದು ಬಹುಶಃ ಇವೆಲ್ಲವುಗಳಿಗಿಂತ ಮುಖ್ಯವಾದ ಕಾರಣ ಎಂದು ನನಗನ್ನಿಸುತ್ತದೆ. ಈ ಗ್ರಹಿಕೆ ರೂಪುಗೊಳ್ಳುವಲ್ಲಿ ಕನ್ನಡ ಪುಸ್ತಕಗಳ ಓದು, ನೋಡಿದ ನಾಟಕಗಳು, ಯಕ್ಷಗಾನಗಳು, ಕೇಳಿದ ಹಾಡುಗಳು, ಕಥೆಗಳು, ಗಾದೆಗಳು, ಜಾನಪದ ಲೋಕ ಎಲ್ಲವೂ ಸೇರಿದೆ. ಈ ಎಲ್ಲದರ ಮೂಲಕ ಭಾವಕೋಶದಲ್ಲಿ ಕನ್ನಡದ ಒಂದು ಪ್ರಪಂಚ ನಿರ್ಮಾಣವಾಗುತ್ತದೆ. ಕನ್ನಡ ಮಾತೃಭಾಷೆಯಾಗಿದ್ದರೂ ಸಹ ಇಂಥ ಒಂದು 'ಕನ್ನಡದ ಪ್ರಪಂಚ' ನಿರ್ಮಾಣವಾಗುವ ಅಗತ್ಯ, ಕನ್ನಡವನ್ನು ಸಾಹಿತ್ಯಭಾಷೆಯಾಗಿ ಗ್ರಹಿಸುವ ಅಗತ್ಯ, ಕನ್ನಡದ ಎಲ್ಲ ಬರಹಗಾರರಿಗೂ ಇರುತ್ತದೆ. ಆದ್ದರಿಂದಲೇ ಇದು ಮಾತೃಭಾಷೆಯೊಡನೆ ಅಥವಾ ಮನೆಭಾಷೆಯೊಡನೆ ಸಂಘರ್ಷ ಹುಟ್ಟಿಸುವುದಿಲ್ಲ. ಬೇಂದ್ರೆ, ಚಿತ್ತಾಲ, ಶಾಂತಿನಾಥ ದೇಸಾಯಿಯವರಂತಹ ಕನ್ನಡದ ಅನೇಕ ಮುಖ್ಯ ಲೇಖಕರ ಮನೆಭಾಷೆ ಕನ್ನಡವಲ್ಲ ಎಂಬುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು.

ಇದನ್ನೇ ತುಸು ಹಿಗ್ಗಿಸಿ ನೋಡಿದಾಗ, ಸಾಹಿತ್ಯ ಭಾಷೆಯಾಗಿ ಕನ್ನಡ ಮತ್ತು ಆಡುವ ಮಾತಾಗಿ ಕನ್ನಡ - ಈ ಎರಡಕ್ಕೂ ಪರಸ್ಪರ ಸಾಮ್ಯ ಇರುವಂತೆ ಮೇಲುನೋಟಕ್ಕೆ ಕಂಡರೂ ಇವೆರಡಕ್ಕೂ ಖಚಿತವಾದ ವ್ಯತ್ಯಾಸಗಳಿವೆ ಅನ್ನುವುದು ಹೊಳೆಯುತ್ತದೆ. ಮತ್ತು ಹಾಗಿರುವುದರಿಂದಲೇ ತಮ್ಮ ಶಕ್ತಿಯನ್ನು ಅವು ಪಡೆಯುತ್ತವೆ. ಹಲವು ಬಗೆಯ, ಹಲವು ಪ್ರಾಂತಗಳ ಕನ್ನಡಗಳು ಸೇರಿ ಕನ್ನಡ ಸಾಹಿತ್ಯಭಾಷೆಯಾಗಿದೆ. ಕನ್ನಡ ಮಾತ್ರವಲ್ಲ, ಎಲ್ಲ ಭಾಷೆಗಳ ಸಾಹಿತ್ಯದಲ್ಲೂ ಅವುಗಳ ಒಳಗೇ ಇಂಥ ಹಲವು ಭಾಷೆಗಳಿವೆ. ಒಂದು ಸಂಸ್ಕೃತಿಯ ವೈವಿಧ್ಯತೆಯನ್ನು, ಅದರ ಸೂಕ್ಷ್ಮ ವ್ಯತ್ಯಾಸಗಳನ್ನು ಗ್ರಹಿಸುವುದಕ್ಕೆ ಇವೆಲ್ಲವೂ ಅತ್ಯಂತ ಅವಶ್ಯ. ಭಾಷೆಯ ನಾಡಿಯನ್ನು ಬಲ್ಲ ಲೇಖಕ ಇವೆಲ್ಲವನ್ನೂ ಒಂದೇ ಎಳೆಯ ಮೂಲಕ ಪರಿಭಾವಿಸಿ ತನ್ನದೇ ಕನ್ನಡವನ್ನು ಸೃಷ್ಟಿಸಿಕೊಳ್ಳುತ್ತಾನೆ. ಎಲ್ಲಿಂದ ಯಾವುದನ್ನು ಪಡೆಯಬೇಕು ಅನ್ನುವುದು, ಎಲ್ಲಿಂದ ಯಾವುದನ್ನು ತೆಗೆಯಬೇಕು ಅನ್ನುವ ಗುಟ್ಟುಗಳು ಅವನಿಗೆ ಗೊತ್ತಿರುತ್ತವೆ. ಈ ಸಾಹಿತ್ಯ ಭಾಷೆಯ ಹಿಂದೆ ಪಂಪ, ಕುಮಾರವ್ಯಾಸ, ಬೇಂದ್ರೆ,, ಕುವೆಂಪು, ಡಿವಿಜಿ, ಅಲ್ಲಮ, ಕಂಬಾರ ಎಲ್ಲರೂ ಏಕಕಾಲಕ್ಕೆ ಇದ್ದಾರೆ ಎಂಬ ಅರಿವು ಭಾಷೆಯ ಬಗ್ಗೆ ಸೂಕ್ಷ್ಮಜ್ಞನಾಗಿರುವ ಲೇಖಕನಿಗೆ ಇರುತ್ತದೆ. ನಮ್ಮ ಉತ್ತಮ ಲೇಖಕರೆಲ್ಲ ತಮ್ಮ ಸ್ವಂತ

ಭಾಷೆಯನ್ನು ಈ ರೀತಿಯಿಂದ ಸೃಷ್ಟಿಸಿಕೊಂಡಿದ್ದಾರೆ. ಹಲವು ಒರತೆಗಳು ಕೂಡಿ ಹುಟ್ಟಿದ ಉಕ್ಕುವ ನದಿಯಂಥ, ಬದಲಾಗುತ್ತ ಮತ್ತು ಬೆಳೆಯುತ್ತ ಹೋಗುವ ಈ ಸಾಹಿತ್ಯಭಾಷೆಯ ಮೂಲವನ್ನು ಯಾವುದೇ ಒಂದು ಪ್ರಾಂತದ ಭಾಷೆಯಲ್ಲಿ ತದ್ವತ್ತಾಗಿ ಹುಡುಕುವುದು ಸಾಧ್ಯವಿಲ್ಲ.

ಆಡುಮಾತು ಸಾಹಿತ್ಯ ಭಾಷೆಯಾಗುವ ರೂಪಾಂತರದ ಹಿಂದೆ ಬೇರೊಂದು ಅನುಭವ, ನಂಬಿಕೆ, ಸಂಸ್ಕೃತಿ, ಜೀವನ ಕ್ರಮಗಳು, ನುಡಿಗಟ್ಟುಗಳು ಸಾಹಿತ್ಯದೊಳಗೆ ಬರುವ ಪ್ರಕ್ರಿಯೆಯಿದೆ. ಒಬ್ಬ ಸಶಕ್ತ ಲೇಖಕನ ಮೂಲಕ ಸಾಹಿತ್ಯಭಾಷೆ ಶ್ರೀಮಂತವಾಗುತ್ತದೆ. ವಿವಿಧ ಪ್ರಾಂತ ಜನಾಂಗಗಳಿಂದ ಸಾಹಿತ್ಯಲೋಕವನ್ನು ಪ್ರವೇಶಿಸಿದ ಬರಹಗಾರರ ಭಾಷೆ ವಿಚಿತ್ರವಾದ ಪ್ರಭೆಯಿಂದ ಹೊಳೆಯುವುದಕ್ಕೆ ಈ ಎಲ್ಲ ಕಾರಣಗಳೂ ಇವೆ. ಅರುಂಧತಿ ರಾಯ್ ಇಂಗ್ಲಿಷಿಗೆ ತಂದ ಕಳೆ ಈ ತರಹದ್ದು. ಅಂತೆಯೇ ಭಾಷಾಂತರಗಳಿಂದಲೂ, ಹೊಸ ಸಂಸ್ಕೃತಿಯನ್ನು, ಹೊಸ ಅನುಭವಗಳನ್ನು ಭಾಷೆಯೊಳಗೆ ತರುವುದರಿಂದಲೂ ಸಾಹಿತ್ಯಭಾಷೆ ಶ್ರೀಮಂತವಾಗುತ್ತದೆ. ವಾಣಿಜ್ಯ ಕಾರಣಗಳಿಂದಾಗಿ ಜಗತ್ತಿನ ನಾನಾ ಭಾಷೆಗಳಿಂದ ಇಂಗ್ಲಿಷಿಗೆ ಆಗುತ್ತಿರುವ ವಿಪುಲ ಅನುವಾದಗಳು ಆ ಭಾಷೆಯನ್ನು ಇನ್ನಷ್ಟು ಸಶಕ್ತಗೊಳಿಸಿವೆ.

ಇತ್ತೀಚೆಗೆ ಪ್ರಕಟವಾದ ಪುಸ್ತಕವೊಂದರ ಮುನ್ನುಡಿಯಲ್ಲಿ ಲೇಖಕಿಯೊಬ್ಬರು, ತಾವು ಕೆಲವು ಕಥೆಗಳಲ್ಲಿ ಉಪಯೋಗಿಸಿದ ಪ್ರಾದೇಶಿಕ ಕನ್ನಡವು ಇಂಥದ್ದೇ ಒಂದು ತಾಲೂಕಿನ ಒಂದು ಪ್ರಾಂತದ್ದು ಎಂದು ಹೇಳಿ, ಅದು ಯಾವ ನಿರ್ದಿಷ್ಟ ಪ್ರದೇಶಗಳಲ್ಲಿ ಬಳಕೆಯಾಗುತ್ತಿದೆ ಎಂದೂ ವಿವರಿಸಿದ್ದಾರೆ. ಇದನ್ನು ಇಷ್ಟು ಒತ್ತಿ ಹೇಳಬೇಕಾಗಿ ಬಂದ ಅವಶ್ಯಕತೆಯನ್ನು ಗಮನಿಸಿದಾಗ ಅದು ಆಡುವ ಭಾಷೆ ಮತ್ತು ಸಾಹಿತ್ಯಭಾಷೆಯ ಸಂಬಂಧದತ್ತ ಬೆರಳುಮಾಡುತ್ತದೆ. ಒಂದು ಸೃಜನಾತ್ಮಕ ಕೃತಿಯಲ್ಲಿ ಬಳಕೆಯಾಗುವ ಭಾಷೆಯನ್ನು ಒಂದು ನಿರ್ದಿಷ್ಟ ಪ್ರದೇಶದ ಭಾಷೆಯೆಂದು ಗ್ರಹಿಸಿದ ಕ್ರಮದಲ್ಲೇ ಇವರು ತಮಗರಿವಿಲ್ಲದೇ ದಿಗ್ಬಂಧನಗಳನ್ನು ಹಾಕಿಕೊಂಡಿದ್ದಾರೆ. ಒಂದು ಭಾಷೆ ಸಾಹಿತ್ಯಕೃತಿಯಲ್ಲಿ ಪ್ರಕಟವಾಗುವ ರೀತಿಗೂ, ಅದು ಜನಜೀವನದಲ್ಲಿ ಉಪಯೋಗದಲ್ಲಿರಬಹುದಾದ ರೀತಿಗೂ ಗಾಢವಾದ ಸಂಬಂಧ ಇದ್ದರೂ ಸಾಹಿತ್ಯ ಭಾಷೆ ಅದರ ತದ್ವತ್ ರೂಪವಾಗಿರುವುದಿಲ್ಲ. ಇಂಥ ಒಂದು ಕಟ್ಟುಪಾಡಿಗೆ ಬರಹಗಾರರು ಒಳಗೊಂಡಾಗ, ಯಾವ ಪಾತ್ರವೂ ನಿಜದಲ್ಲಿ ಆಡಲಾಗದ ಮಾತುಗಳನ್ನು ಬರೆಯಲಾಗದ ಸ್ಥಿತಿಗೆ ತನ್ನನ್ನು ಒಳಪಡಿಸಿಕೊಳ್ಳುವ, ಆ ಮೂಲಕ ಪಾತ್ರಗಳನ್ನೇ ಮಿತಿಗೊಳಪಡಿಸುವ ಅಪಾಯವಿದೆ. 'ಪಾತ್ರಗಳು ಆಡಿದಂತೆ ಬರೆದಿದ್ದೇನೆ.' 'ಈ ಪಾತ್ರಗಳ ಮಾತುಗಳನ್ನು ಅವರು ಆಡಿದ ಭಾಷೆಯಲ್ಲಲ್ಲದೇ ಬೇರೆ ಬರೆಯುವುದು ಸಾಧ್ಯವಿಲ್ಲ' ಎಂದೆಲ್ಲ ಅತಿ ಭಾವುಕವಾಗಿ ಹೇಳುವ ಬರಹಗಾರರಿಗೆ ಭಾಷೆಯ ಬಗ್ಗೆ ಇರುವ ತಿಳುವಳಿಕೆ ಅತಿ ಸರಳವಾದುದು. ಪ್ರತಿ ಸೃಜನಾತ್ಮಕ ಬರಹ ಕೊನೆಗೂ ಒಂದು ಕಲಾಕೃತಿಯೇ ಎಂಬುದನ್ನು ಮರೆಯುವುದು ಸಾಧ್ಯವಿಲ್ಲ. ತಾದಾತ್ಮ್ಯದಷ್ಟೇ ಅಗತ್ಯವಾದದ್ದು ದೂರ ನಿಂತು ನೋಡುವ ಶಕ್ತಿ. ಇದು ಭಾರತೀಯ ಕಲಾ ಮೀಮಾಂಸೆಗಳಲ್ಲಿ ಬಹು ಚರ್ಚಿತ ವಿಷಯವಾದ ರಸಾಸ್ವಾದನೆ ಮತ್ತು ರಸೋತ್ಪತ್ತಿಗೆ ಮೂಲಭೂತ ನೆಲೆಯಲ್ಲಿ ಸಂಬಂಧಪಟ್ಟ ಸಂಗತಿಯಾಗಿದೆ. ಭರತನ ನಾಟ್ಯಶಾಸ್ತ್ರದಲ್ಲಿ ಭಾಷೆಯ ಕುರಿತಾಗಿ ಇರುವ ಸೂಚನೆಗಳು ಸಹ ಪಾತ್ರಸಂಬಂಧಿಯಾಗಿವೆ. ದೇವತೆಗಳಿಗೆ, ರಾಜರಿಗೆ, ಗಣಿಕೆಯರಿಗೆ ಹೀಗೆ ಪಾತ್ರಗಳ ಜಾತಿ ಮತ್ತು ಸ್ಥಾನ ಸಂಬಂಧಗಳನ್ನು ಗಣಿಸಿ ಭಾಷೆಯ ಪ್ರಯೋಗದ ಬಗ್ಗೆ ಸೂಚನೆಗಳಿವೆಯೆನ್ನುವುದನ್ನು ಗಮನಿಸಬಹುದು.

ಈ ಸಾಹಿತ್ಯಭಾಷೆಯ ನಿರ್ಮಾಣದ ಹಿಂದೆ ಅಧಿಕಾರ, ಕೇಂದ್ರೀಕರಣ, ರಾಜಕೀಯ, ಆರ್ಥಿಕ ಇತ್ಯಾದಿ ಹಲವು ಜಟಿಲ ಸಂಬಂಧಗಳಿವೆ ಎಂಬ ಅರಿವು ಇದ್ದರೂ ಈ ಲೇಖನದ ಮಟ್ಟಿಗೆ ಅದಾವುದನ್ನೂ ನಾನು ಚರ್ಚಿಸಲು ಹೋಗಿಲ್ಲ. ■

ಸತ್ಯಜಿತ್ ರೇ

ಪಟೋಲ್ ಬಾಬುವಿನ ಸಿನಿಮಾ ಪ್ರಕರಣ

ಕನ್ನಡಕ್ಕೆ: ಎನ್. ಶ್ರೀನಿವಾಸ ಉಡುಪ



ಆಗಷ್ಟೇ ಪಟೋಲ್ ಬಾಬು ಚೀಲ ಹೆಗಲಿಗೆ ಹಾಕಿಕೊಂಡು ಮಾರ್ಕೆಟ್ಟಿಗೆ ಹೊರಟಿದ್ದರು. ಅಷ್ಟರಲ್ಲಿ ನಿಶಿಕಾಂತ ಬಾಬು ಹೆಬ್ಬಾಗಿಲಲ್ಲಿ ನಿಂತುಕೊಂಡು, ''ಪಟೋಲ್, ಮನೆಯಲ್ಲಿದೀರಾ?'' ಎಂದು ಕೂಗಿದರು.

''ಇದ್ದೀನಿ... ಒಂದ್ ನಿಮಿಷದಲ್ಲಿ ಬಂದೆ'' ಎಂದರು ಪಟೋಲ್.

ನೇಪಾಳ್ ಭಟ್ಟಾಚಾರ್ಯ ಓಣಿಯಲ್ಲಿ ಪಟೋಲ್ ಬಾಬುವಿನ ಮನೆಯಿಂದ ಮೂರು ಮನೆಗಳಾಚೆ ನಿಶಿಕಾಂತ ಘೋಷರ ಮನೆ. ನಿಶಿಕಾಂತರದು ಸ್ನೇಹಪರ ಸ್ವಭಾವ.

ಪಟೋಲ್ ಚೀಲ ಸಮೇತ ಹೊರಬಂದು ಕೇಳಿದರು: ''ಏನ್ಸಮಾಚಾರ? ಇಷ್ಟು ಬೆಳಿಗ್ಗೆ ಬಂದಿದೀರಲ್ಲಾ?''

''ಹೇಳ್ತೇನೆ; ಪೇಟೆಯಿಂದ ಎಷ್ಟೊತ್ತಿಗೆ ವಾಪ್ಸು ಬರ್ತೀರಿ?''

''ಇನ್ನೊಂದು ಘಂಟೆಯೊಳಗೆ ಬರಬಹುದು... ಯಾಕೆ?''

''ಆಮೇಲೆ ಮನೇಲೇ ಇರ್ತೀರಿ ತಾನೆ? ಇವತ್ತು ಟಾಗೂರರ ಜಯಂತಿ ಅಲ್ವಾ?... ನಿನ್ನೆ 'ನೇತಾಜಿ ಫಾರ್ಮಸಿ'ಯಲ್ಲಿ ನನ್ನ ಕಿರೀ ಭಾವ

ಮೈದ ಸಿಕ್ಕಿದ್ದ. ಆತ ಫಿಲ್ಮ್ ಉದ್ಯೋಗದಲ್ಲಿ ಪ್ರೊಡಕ್ಷನ್ ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದಾನೆ. ಈಗ ಷೂಟಿಂಗ್ ನಡೀತಿರೋ ಚಿತ್ರದಲ್ಲಿನ ಒಂದು ದೃಶ್ಯಕ್ಕಾಗಿ ಒಬ್ಬರ ಅಗತ್ಯವಿದೆ ಅಂತ ಹೇಳಿದ. ಸುಮಾರು ಐವತ್ತರ ಅಂಚಿನಲ್ಲಿರೋ ಕುಳ್ಳ, ಬಾಲ್ಡಿ ಮನುಷ್ಯ ಬೇಕಾಗಿದ್ದಾರೆ ಅಂತ ಆತ ಹೇಳಿದೊಡನೇ ನನಗೆ ನಿಮ್ಮ ನೆನಪು ಬಂತು. ನಿಮ್ಮ ವಿಳಾಸ ಕೊಟ್ಟು ನಿಮ್ಮನ್ನು ನೇರವಾಗಿ ಸಂಪರ್ಕಿಸುವಂತೆ ಹೇಳಿ ಬಂದಿದೇನೆ. ಆತ ಬಂದಾಗ ಆಗೊಲ್ಲ ಅಂತ ಹೇಳ್ಬೇಡಿ. ಸ್ವಲ್ಪ ಹಣಾನೂ ಕೊಡ್ತಾರೆ.''

ಬೆಳಗಾ ಬೆಳಿಗ್ಗೆ ಇಂಥ ಸಮಾಚಾರ ಸಿಕ್ಕೀತೆಂಬ ನಿರೀಕ್ಷೆ ಪಟೊಲ್ ಬಾಬುವಿಗೆ ಇರಲಿಲ್ಲ. ಐವತ್ತೆರಡು ವರ್ಷದ ಅನಾಮಧೇಯ ವ್ಯಕ್ತಿಯಾದ ತನಗೆ ಸಿನಿಮಾದಲ್ಲಿ ಅಭಿನಯಿಸಲು ಕರೆ ಬಂದೀತೆಂಬುದು ಅವರ ಕನಸಿನಲ್ಲಿಯೂ ಸುಳಿಯದ ಸಂಗತಿ.

''ಏನಂತೀರಾ? Yes or no?'', ನಿಶಿಕಾಂತ ಬಾಬು ಕೇಳಿದರು, ''ಒಂದು ಕಾಲದಲ್ಲಿ ನೀವು ನಾಟಕಗಳಲ್ಲಿ ಪಾತ್ರ ಮಾಡ್ತಾ ಇದ್ದವರಲ್ಲವೇ?''

''ಅದು ನಿಜ... ಆಗೊಲ್ಲ ಅಂತ ಹೇಳೋದಕ್ಕೆ ಕಾರಣವೇನೂ ಇಲ್ಲ... ಯಾವುದಕ್ಕೂ ನಿಮ್ಮ ಭಾವಮೈದ ಬರಲಿ. ಅವರ ಹತ್ತಿರ ವಿವರ ತಿಳ್ಕೊಂಡು ಮುಂದಿನ ಮಾತು... ಅವರ ಹೆಸರು?''

''ನರೇಶ್; ನರೇಶ್‌ದತ್ತ. ಸುಮಾರು ಮೂವತ್ತು ವರ್ಷದ ಗಟ್ಟಿಮುಟ್ಟಾಗಿರೋ ಹುಡುಗ. ಇಲ್ಲಿಗೆ ಸುಮಾರು ಹತ್ತೂವರೆ ಹೊತ್ತಿಗೆ ಬರ್ತೀನಿ ಅಂತ ಹೇಳಿದಾನೆ.''

ಈ ಸಂಭ್ರಮದಲ್ಲಿ ಪಟೊಲ್ ಬಾಬು ಮಾರ್ಕೆಟ್‌ನಲ್ಲಿ ಎಡವಟ್ಟು ಮಾಡಿಕೊಂಡು, ಹೆಂಡತಿ ಹೇಳಿದ್ದ ಈರುಳ್ಳಿ ತರುವ ಬದಲು ಒಣ ಮೆಣಸಿನಕಾಯಿ ಕೊಂಡರು. ಇನ್ನಾವುದೋ ಪದಾರ್ಥ ಮರತೇಹೋಯಿತು. ಹಾಗಾದುದು ಆಶ್ಚರ್ಯವೇನಲ್ಲ. ಒಂದು ಕಾಲದಲ್ಲಿ ಪಟೊಲ್ ಬಾಬುವಿಗೆ ನಾಟಕದ ಬಗ್ಗೆ ನಿಜವಾದ ಆಸ್ಥೆಯಿತ್ತು. ಅದೊಂದು ರೀತಿಯ ಗೀಳಾಗಿಬಿಟ್ಟಿತ್ತು ಎಂದರೂ ತಪ್ಪಲ್ಲ. ಜಾತ್ರೆಗಳಲ್ಲಿ, ಹವ್ಯಾಸಿ ಕಲಾವಿದರ ಗುಂಪುಗಳಲ್ಲಿ, ಸಂಘ-ಸಂಸ್ಥೆಗಳು ಆಡುವ ನಾಟಕಗಳಲ್ಲಿ ಪಟೊಲ್ ಬಾಬುವಿಗೆ ಸದಾ ಬೇಡಿಕೆಯಿರುತ್ತಿತ್ತು. ಕರಪತ್ರಗಳಲ್ಲಿ ಅವರ ಹೆಸರು ಲೆಕ್ಕವಿಲ್ಲದಷ್ಟು ಬಾರಿ ಕಾಣಿಸಿಕೊಂಡಿತ್ತು. ಒಂದು ಬಾರಿಯಂತೂ, ಕರಪತ್ರದ ಮೇಲ್ಭಾಗದಲ್ಲಿಯೇ ದಪ್ಪಕ್ಷರಗಳಲ್ಲಿ 'ಪರಾಶರನ ಪಾತ್ರದಲ್ಲಿ ಶಿತಾಲಕಾಂತರಾಯ್ (ಪಟೊಲ್ ಬಾಬು)'- ಎಂದು ಮುದ್ರಿತವಾಗಿತ್ತು. ಅವರನ್ನು ನೋಡುವ ಸಲುವಾಗಿಯೇ ಜನ ನಾಟಕಕ್ಕೆ ಟಿಕೆಟ್ ತೆಗೆದುಕೊಂಡು ಬರುತ್ತಿದ್ದ ಕಾಲವೊಂದಿತ್ತು.

ಆಗ ಅವರು ಕಂಚ್ರಪಾರಾ ಎಂಬಲ್ಲಿದ್ದರು. ರೈಲ್ವೆ ಫ್ಯಾಕ್ಟರಿಯಲ್ಲಿ ಕೆಲಸ. 1934ರಲ್ಲಿ 'ಹಡ್ಸನ್ ಅಂಡ್ ಕಿಂಬರ್ಲಿ ಕಂಪೆನಿ'ಯಲ್ಲಿ ಹೆಚ್ಚಿನ ಸಂಬಳ ಸಿಕ್ಕುವ ಗುಮಾಸ್ತ ಹುದ್ದೆ ದೊರೆಯಿತು. ಅದೃಷ್ಟವಶಾತ್ ನೇಪಾಳ್ ಭಟ್ಟಾಚಾರ್ಯ ಓಣಿಯಲ್ಲಿ ಮನೆಯೂ ಸಿಕ್ಕಿತು. ಮುಂಚಿನ ಕೆಲಸ ಬಿಟ್ಟು,

ಪತ್ನೀ ಸಮೇತ ಕಲ್ಕತ್ತೆಗೆ ಬಂದರು. ಕೆಲವು ವರ್ಷ ಜೀವನ ಸುಗಮವಾಗಿತ್ತು. ಮೇಲಧಿಕಾರಿಯ ಕೃಪಾಕಟಾಕ್ಷವೂ ಇತ್ತು. ಆ ವೇಳೆಯಲ್ಲಿ ಅವರಿಗೆ ಅಕ್ಕಪಕ್ಕದವರನ್ನು ಸೇರಿಸಿಕೊಂಡು ಒಂದು ಕ್ಲಬ್ ಪ್ರಾರಂಭಿಸಬೇಕೆಂಬ ಯೋಚನೆಯೂ ಬಂದಿತ್ತು. ಆದರೆ 1943ರಲ್ಲಿ, ಯುದ್ಧದ ದೆಸೆಯಿಂದಾಗಿ ಇದ್ದಕ್ಕಿದ್ದಂತೆ-ಮಿತವ್ಯಯದ ನೆಪದಲ್ಲಿ-ಪಟೋಲ್ ಬಾಬು ಒಂಬತ್ತು ವರ್ಷಗಳಿಂದ ಮಾಡಿಕೊಂಡು ಬಂದಿದ್ದ ಕೆಲಸಕ್ಕೆ ಎರವಾಗಬೇಕಾಯಿತು.


ಅಂದಿನಿಂದ ಜೀವನಕ್ಕಾಗಿ ಪರದಾಟ ಪ್ರಾರಂಭ. ಮೊದಲು ಒಂದು ವೆರೈಟಿ ಅಂಗಡಿ ಆರಂಭಿಸಿದರು. ಐದು ವರ್ಷದ ನಂತರ ಅದನ್ನು ಮುಚ್ಚಬೇಕಾಯಿತು. ಅನಂತರ ಒಂದು ಬಂಗಾಳೀ ಸಂಸ್ಥೆಯಲ್ಲಿ ಕೆಲಸ ಸಿಕ್ಕಿತು. ಆದರೆ ಯಜಮಾನನ ದಬ್ಬಾಳಿಕೆಗೆ ಬೇಸತ್ತು ಅದನ್ನೂ ಕೈಬಿಟ್ಟರು. ಆಮೇಲೆ ಹತ್ತು ದೀರ್ಘ ವರ್ಷಗಳ ಕಾಲ ಇನ್‌ಷೂರೆನ್ಸ್ ಏಜೆಂಟ್ ಆಗಿ, ಇನ್ನೂ ಏನೇನೋ ಆಗಿ, ಜೀವನಕ್ಕಾಗಿ ಹೋರಾಡಿದರು. ಯಾವುದರಲ್ಲೂ ಯಶಸ್ವಿಯಾಗಲಿಲ್ಲ. ಇತ್ತೀಚೆಗೆ ಅವರ ದಾಯಾದಿಯೊಬ್ಬರ ಸಣ್ಣ ಕಬ್ಬಿಣದಂಗಡಿಗೆ, ಕೆಲಸಕ್ಕಾಗಿ ಎಡತಾಕುತ್ತಿದ್ದಾರೆ.

ಮತ್ತೆ ನಾಟಕಾಭಿನಯ? ಅದಂತೂ ಅವರ ಪಾಲಿಗೆ ಓಬೀರಾಯನ ಕಾಲದ ಸಂಗತಿ; ನಿಟ್ಟುಸಿರಿನಿಂದ ಒಮ್ಮೊಮ್ಮೆ ನೆನಪಿಸಿಕೊಳ್ಳುವ ವಿಚಾರ. ನೆನಪಿನ ಶಕ್ತಿ ಚೆನ್ನಾಗಿರುವುದರಿಂದ ತಾವು ನಟಿಸಿದ ಕೆಲವು ಪಾತ್ರಗಳ ಒಳ್ಳೆಯ ಸಾಲುಗಳನ್ನು ಈಗಲೂ ಜ್ಞಾಪಿಸಿಕೊಳ್ಳಬಲ್ಲರು ಅವರು. "ಕೇಳಿ; ರಣಾಂಗಣದಲ್ಲಿ ಶತ್ರುಗಳನ್ನು ಧ್ವಂಸಮಾಡುತ್ತಿರುವ ಮಹಾಧನುಸ್ಸು ಗಾಂಡೀವದ ಸಿಡಿಲ ಠೇಂಕಾರವನ್ನು ಕೇಳಿ. ವೃಕೋದರನ ಕೈಯಲ್ಲಿರುವ ಪರ್ವತಸದೃಶ ಗದೆ, ಗಾಳಿಯನ್ನು ಸೀಳಿ ಗರ್ಜಿಸುವ ಧ್ವನಿಯನ್ನು ಆಲಿಸಿ." - ಈಗ ಇಂಥ ಸಾಲುಗಳನ್ನು ಮನಸ್ಸಿಗೆ ತಂದುಕೊಂಡಾಗ ಪಟೋಲ್ ಬಾಬುಗಳ ಬೆನ್ನು ಹುರಿಯಲ್ಲಿ ಚುಳುಚುಳು ಶುರುವಾಗುತ್ತದೆ.

ನರೇಶ್ ಬಾಬು ಬಂದಾಗ ಹನ್ನೆರಡೂವರೆ ಘಂಟೆ. ಪಟೋಲ್ ಬಾಬು ಅವನ ನಿರೀಕ್ಷೆ ಮಾಡಿ ಮಾಡಿ, ನಿರಾಶರಾಗಿ, ಇನ್ನೇನು ಸ್ನಾನಕ್ಕೆ ಹೊರಡುವವರಿದ್ದರು. ಅಷ್ಟುಹೊತ್ತಿಗೆ ಮುಂದಿನ ಬಾಗಿಲು ಬಡಿದ ಸದ್ದಾಯಿತು.

"ಬನ್ನಿ ಸ್ವಾಮಿ, ಬನ್ನಿ", ಪಟೋಲ್ ಬಾಬು ಹೆಚ್ಚುಕಡಿಮೆ ನರೇಶ್‌ದತ್ತನನ್ನು ಎಳೆದುಕೊಂಡೇ

ಬಂಗಾಲ ನಾಡಿನ ಉಜ್ವಲ ಪ್ರತಿಭೆ ಸತ್ಯಜಿತ್ ರೇ ಯಾವ ಕಲಾ ಪ್ರಕಾರದಲ್ಲಿ ತೊಡಗಿಸಿಕೊಂಡರೂ ಪರಿಪೂರ್ಣತೆಯ ಬೆನ್ನುಹತ್ತುವ ಅಸಾಮಾನ್ಯ ವ್ಯಕ್ತಿತ್ವದವರು. ಸಿನಿಮಾ ನಭದಲ್ಲಿ ಹೊಳೆವ ತಾರೆಯಾಗಿ ಪ್ರತಿಷ್ಠಾಪಿತವಾಗಿರುವ ರೇ, ಇಂಗ್ಲಿಷ್‌ನಲ್ಲಿ ಬರೆದ ಕೆಲವು ಕತೆಗಳೂ ಕೋರೈಸುವಷ್ಟು ಭಾವವ್ಯಂಜಕತೆ, ಪಾರದರ್ಶಕತೆ, ಚುರುಕಾದ ನೋಟ-ನಡೆಗಳನ್ನು ಹೊಂದಿವೆ. ಸಿನಿಮಾ ಜಗತ್ತಿನ ಪಡಿಪಾಟಲು, ತಿಕ್ಕಲುತನ, ಮುಖವಿಲ್ಲದ ಕ್ರೌರ್ಯ ಕಲಾವಿದನನ್ನು ನೋಯಿಸಿದರೂ ಅದರ ಬೆರಗಿಗೆ ಮನಸೋಲದೆ ಇರಲಾರ ಆತ. ವೈಯಕ್ತಿಕ ಸಂಕಷ್ಟವನ್ನು ಮೀರಿ ಕಲಾವಿದನೊಬ್ಬ, ತನಗೆ ಪ್ರಾಮುಖ್ಯತೆಯೇ ಸಿಗದ ವಾತಾವರಣದಲ್ಲಿ ಅರಳುವ ರೀತಿ ಕಲಾವಿದರಿಗಷ್ಟೇ ಅರ್ಥವಾಗುವಂತಹುದು.



ಎಲ್ಲ ಒಳ್ಳೆಯ ಸಾಹಿತ್ಯದ ಆಪ್ತ ಓದುಗರೆನ್ನಬಹುದಾದ ಶ್ರೀನಿವಾಸ ಉಡುಪರು ನಮಗೆ ಈ ಕತೆಯನ್ನು ಕನ್ನಡಕ್ಕೆ ತಂದು ಕೊಟ್ಟಿದ್ದಾರೆ.



ಒಳಹೋದರು. ಕೈ ಮುರಿದ ಕುರ್ಚಿಯೊಂದನ್ನು ಅವನತ್ತ ತಳ್ಳಿ, ಕುಳಿತುಕೊಳ್ಳಲು ಒತ್ತಾಯಿಸಿದರು.

''ಇರಲಿ, ಪರವಾಗಿಲ್ಲ... ಅಂದ್ಹಾಗೇ ನಿಶಿ ಕಾಂತ ಬಾಬು ನನ್ನ ವಿಚಾರ ನಿಮಗೆ ಹೇಳಿರ ಬಹುದಲ್ಲಾ?''

''ಹೇಳಿದಾರೆ... ವಿಚಾರ ಕೇಳಿ ಒಂದು ಥರಾ ಹಿಂಜರಿಕೆ ಆಯ್ತು... ಎಷ್ಟೋ ವರ್ಷಗಳ ನಂತರ...

''ನಿಮ್ಮದೇನೂ ಅಭ್ಯಂತರವಿಲ್ಲ ತಾನೆ?''

''ಪಾತ್ರಕ್ಕೆ ನಾನು ಸರಿಹೋಗಬಹುದೆಂದು ನಿಮಗೆ ಅನ್ನಿಸುತ್ತಿದೆಯೇ?'', ಪಟೋಲ್ ಬಾಬು ತುಂಬಾ ಅಧೈರ್ಯದಿಂದಲೇ ಕೇಳಿದರು.

ಬೆಲೆ ಕಟ್ಟುವ ದೃಷ್ಟಿಯಿಂದ ಪಟೋಲ್ ಬಾಬು ವಿನ ಕಡೆ ಒಂದು ಕ್ಷಣ ನೋಡಿ, ಒಪ್ಪಿಗೆಯ ತಲೆಯಾಡಿಸಿದ ನರೇಶ್,

''ಖಂಡಿತ, ಅದರಲ್ಲಿ ಅನುಮಾನವೇ ಇಲ್ಲ. ಅಂದ್ಹಾಗೇ ನಾಳೆ ಬೆಳಿಗ್ಗೇನೇ ಷೂಟಿಂಗ್ ಇದೆ.''

''ನಾಳೆ? ಭಾನುವಾರ?''

''ಹೌದು. ಆದರೆ ಸ್ಟುಡಿಯೋದಲ್ಲಲ್ಲ. ನೀವು ಎಲ್ಲಿಗೆ ಬರ್‍ಬೇಕೂಂತ ನಾನು ಹೇಳ್ತೀನಿ. 'ಬೆಂಟಿಂಕ್ ಸ್ಟ್ರೀಟ್' ಮತ್ತೆ 'ಮಿಷನ್ ರೋಡು' ಸೇರುವಲ್ಲಿರುವ 'ಫ್ಯಾರಡೇ ಹೌಸ್' ಗೊತ್ತಲ್ಲ ನಿಮಗೆ? ಅದೊಂದು ಏಳಂತಸ್ತಿನ ಕಚೇರಿ ಕಟ್ಟಡ. ಕಚೇರಿ ಹೊರ ಭಾಗದಲ್ಲಿ ಪ್ರವೇಶ ದ್ವಾರದ ಮುಂದೆ ಷೂಟಿಂಗ್ ನಡೆಯುತ್ತೆ... ಸರಿ ಯಾಗಿ ನಾಳೆ ಬೆಳಿಗ್ಗೆ 8-30ಕ್ಕೆ ನೀವು ಅಲ್ಲಿಗೆ ಬನ್ನಿ. ಮಧ್ಯಾಹ್ನದವರೆಗೂ ಅಲ್ಲಿ ಇರ್ಬೇ ಕಾದೀತು.''

ಇಷ್ಟು ಹೇಳಿ, ನರೇಶ್ ದತ್ತ ಹೊರಡಲು ಸಿದ್ಧನಾದ. ಪಟೋಲ್ ಬಾಬು ಕಾತುರದಿಂದ ಅವ ನನ್ನು ''ಅದ್ಸರಿ... ನೀವು ನನಗೆ, ನಾನು ಮಾಡ್ಬೇ ಕಾದ ಪಾತ್ರದ ವಿಚಾರಾನೇ ಹೇಳ್‌ಲಿಲ್ವಲ್ಲಾ?'' ಎಂದು ಕೇಳಿದರು.

''ಹೌದಲ್ಲಾ, ಸಾರಿ... ಅದೊಂದು ಪಾದ ಚಾರಿಯ ಪಾತ್ರ... ಒಬ್ಬ ಅನ್ಯಮನಸ್ಕ ಮುಂಗೋಪಿ ಪಾದಚಾರಿ... ಅಂದ್ಹಾಗೇ ನಿಮ್‌ಹತ್ರ ಕುತ್ತಿಗೆವರೆಗೆ ಗುಂಡಿಹಾಕೋ ಜಾಕೀಟು ಇದೆಯಾ?''

''ಬಹುಶಃ ಇದೆ. ಅದೇ ಓಲ್ಡ್ ಫ್ಯಾಷನ್ಡ್ ಜಾಕೀಟು ತಾನೇ?''

''ಹೌದು, ಅದನ್ನೇ ನೀವು ಹಾಕ್ಕೋಬೇಕು. ಅದ್ರ ಬಣ್ಣ ಯಾವುದು, ನೆನಪಿದೆಯಾ?''

''ಒಂದು ಥರಾ ಕಾಯಿಕಂದು. ಉಣ್ಣೆ ಜಾಕೀಟು.''

''ಸರಿ ಹೋಗುತ್ತೆ. ಕಥೆ ಚಳಿಗಾಲದಲ್ಲಿ ನಡೆಯೋದ್ರಿಂದ ಆ ಜಾಕೀಟು ಹೊಂದಿ ಕೊಳ್ಳುತ್ತೆ... ಮತ್ತೆ, ನಾಳೆ ಬೆಳಿಗ್ಗೆ 8.30ಕ್ಕೆ ಸರಿ ಯಾಗಿ ಬರ್ಬೇಕು... ಫ್ಯಾರಡೇ ಹೌಸ್ ಹತ್ರ... ಮರೀಬೇಡಿ...''

ಇದ್ದಕ್ಕಿದ್ದಂತೆ ಪಟೋಲ್ ಬಾಬುವಿಗೆ ಮುಖ್ಯ ವಾದ ವಿಚಾರವೊಂದನ್ನು ಕೇಳಬೇಕೆನ್ನಿಸಿತು.

''ನಾನು ಮಾಡೋ ಪಾತ್ರಕ್ಕೆ ಸ್ವಲ್ಪ ಮಾತೂ ಇರಬೇಕಲ್ವಾ?''

''ಖಂಡಿತಾ... ಅದು ಮಾತು ಇರೋ ಪಾತ್ರವೇ. ಈ ಹಿಂದೆ ನೀವು ನಟನೆ ಮಾಡಿದ್ದೀರಲ್ವಾ?''

''ಮಾಡಿದ್ದೀನಿ... ಆದ್ರೆ...''

''ಫೈನ್, ಇಲ್ದೇ ಇದ್ರೆ ಕೇವಲ ಎರಡು ಹೆಜ್ಜೆ ನಡೆಯೋ ಪಾತ್ರಕ್ಕಾಗಿ ನಿಮ್‌ಹತ್ರ ನಾನು ಬರ್ತಿರ್ಲಿಲ್ಲ. ಯಾರೋ ದಾರಿಹೋಕರನ್ನು ಅದಕ್ಕಾಗಿ ಆರಿಸ್ಕೋತಿದ್ದೆ... ನೀವು ಮಾಡೋ ಪಾತ್ರಕ್ಕೆ ಮಾತಿದೆ, ನಾಳೆ ನೀವು ಅಲ್ಲಿಗೆ ಬಂದ ತಕ್ಷಣ ನೀವಾಡ್ಬೇಕಾಗಿರೋ ಮಾತನ್ನು ತಿಳಿಸ್ತೇವೆ.''

ನರೇಶ್‌ದತ್ತ ಹೊರಟುಹೋದ ನಂತರ ಪಟೋಲ್ ಬಾಬು ತಮ್ಮ ಹೆಂಡತಿಗೆ ವಿಚಾರ ತಿಳಿಸಿ, ಹೇಳಿದರು:

''ನನಗನಿಸೋ ಮಟ್ಟಿಗೆ ನಾನು ಮಾಡ್ಬೇಕಾ ಗಿರೋ ಪಾತ್ರ, ಅಷ್ಟೇನೂ ದೊಡ್ಡದಲ್ಲ. ದುಡ್ಡೇ ನೋ ಸಿಗುತ್ತೆ. ಆದರೆ ಅದೇ ಮುಖ್ಯ ಅಲ್ಲ.



ನಾಟಕದಲ್ಲಿ ನಾನು ಮಾಡಿದ ಮೊದಲ ಪಾತ್ರ ನೆನಪಿದ್ಯಾ? ಒಬ್ಬ ಸತ್ತ ಸೈನಿಕನ ಪಾತ್ರ! ಕೈಕಾಲು ಚಾಚಿ ರಂಗದ ಮೇಲೆ ಸುಮ್ಮನೇ ಮಲಗಿರಬೇಕಾಗಿದ್ದಷ್ಟೇ ನನ್ನ ಕೆಲಸ ಆಗಿತ್ತು. ಆ ಹಂತದಿಂದ ಹ್ಯಾಗೆ ಮೇಲಕ್ಕೆ ಬಂದೆ ಜ್ಞಾಪಿಸ್ಕೋ. ಮಿಸ್ಟರ್ ವ್ಯಾಟ್ಸ್ ನನ್ನ ಕೈ ಕುಲುಕಿದ್ದೂ, ಪುರಸಭಾಧ್ಯಕ್ಷರು ಬೆಳ್ಳಿಪದಕ ಕೊಟ್ಟಿದ್ದೂ... ನೆನಪು ಮಾಡಿಕೋ... ಮುದ್ದಿನ ಅರ್ಧಾಂಗೀ, ಇದು ಏಣಿಯ ಮೊದಲ ಮೆಟ್ಟಿಲು ಮಾತ್ರ... ದೇವರು ನಡೆಸಿದರೆ, ನಿನ್ನ ಗಂಡನ್ನ ಕೀರ್ತಿಯ ಕಡೆಗೆ, ಅದೃಷ್ಟದ ಕಡೆಗೆ ಕೊಂಡೊಯ್ಯುವ ಮೆಟ್ಟಿಲಾದೀತು, ಯಾರಿಗೆ ಗೊತ್ತು?''

''ಕೂಸು ಹುಟ್ಟೋಕೆ ಮುಂಚೇನೇ ಕುಲಾವಿ ಹೊಲಿಸ್ತಾ ಇದೀರಿ... ನಿಮಗೆ ಯಶಸ್ಸು ಸಿಗದೇನೂ ಇರಬಹುದು''

''ಈ ಬಾರಿ ಖಂಡಿತಾ ಸಿಕ್ಕೇ ಸಿಗುತ್ತೆ, ನೋಡ್ತಾ ಇರು... ಹೋಗು ಒಂದು ಕಡೇ ಟೀ ಮಾಡಿ ತಾ... ರಾತ್ರಿ ಸ್ವಲ್ಪ ಶುಂಠಿ ಕಷಾಯ ಕುಡೀಬೇಕು; ನೆನಪು ಮಾಡು, ಗಂಟಲಿಗೆ ಒಳ್ಳೇದು.''

ಮೆಟ್ರೋಪಾಲಿಟನ್ ಕಟ್ಟಡದ ಗೋಪುರ ಗಡಿಯಾರ ಎಂಟು ಗಂಟೆ ಏಳು ನಿಮಿಷ ತೋರಿ ಸುತ್ತಿದ್ದಾಗ ಪಟೋಲ್ ಬಾಬು ಅಲ್ಲಿದ್ದರು. ಫ್ಯಾರಡೇ ಹೌಸಿಗೆ ಅಲ್ಲಿಂದ ಹತ್ತು ನಿಮಿಷದ ನಡಿಗೆ.

ಕಟ್ಟಡದ ಮುಂದೆ ಜನಗಳ ಸಂತೆ. ರಸ್ತೆಯಲ್ಲಿ ಮೂರೋ ನಾಲ್ಕೋ ಕಾರುಗಳು. ಒಂದು ಬಸ್ಸು. ಅದರ ಛಾವಣಿಯ ಮೇಲೆ ಏನೇನೋ ಉಪಕರಣಗಳು. ರಸ್ತೆಯಂಚಿನಲ್ಲಿ ಮೂರು ಕಾಲಿನ ಒಂದು ಉಪಕರಣ. ತುಂಬಾ ಕೆಲಸವಿದ್ದಂತಿದ್ದ ಕೆಲವರು ಅದರ ಸುತ್ತ ನಿಂತಿದ್ದರು. ಪ್ರವೇಶದ್ವಾರದ ಹತ್ತಿರ ಮೂರು ಕಾಲಿನ ಮೇಲೆ ನಿಂತ ಒಂದು ಎತ್ತರದ ಕಂಬ. ಅದರ ತುದಿಯಲ್ಲಿ ಆಯತಾಕಾರದ ಜೇನುಗೂಡನ್ನು ಹೋಲುವ ಚಿಕ್ಕ ವಸ್ತುವನ್ನು ನೇತಾಡಿಸಲಾದ ಒಂದು ತೋಳಿನಂಥಾ ಕೋಲು. ಈ ಸಲಕರಣೆಗಳ ಸುತ್ತ ನಿಂತಿದ್ದ ಜನಗಳ ಗುಂಪಿನಲ್ಲಿ ಕೆಲವು ಬಂಗಾಳಿಗಳಲ್ಲದವರೂ ಇರುವುದನ್ನು ಪಟೋಲ್ ಬಾಬು ಗಮನಿಸಿದರು. ಅವರ ಕೆಲಸವೇನಿದ್ದಿತೋ ಪಟೋಲ್ ಬಾಬುವಿಗೆ ಗೊತ್ತಾಗಲಿಲ್ಲ.

ಆದರೆ ನರೇಶ್‌ದತ್ತ ಎಲ್ಲಿ? ಪಟೋಲ್ ಬಾಬುಗಳ ಪರಿಚಯವಿರುವುದು ಅವನೊಬ್ಬನಿಗೆ ಮಾತ್ರ. ಸಣ್ಣಗೆ ಎದೆ ಕಂಪಿಸುತ್ತಿದ್ದರೂ ಪಟೋಲ್ ಬಾಬು ಪ್ರವೇಶದ್ವಾರದತ್ತ ನಡೆದರು. ನಡು ಬೇಸಗೆಯ ದಿನಗಳವು. ಕುತ್ತಿಗೆಯವರೆಗೂ ಗುಂಡಿ ಹಾಕಿದ ಜಾಕೀಟು ಭಾರವೆನ್ನಿಸಿತು. ದಪ್ಪ ಕೊರಳ ಪಟ್ಟಿಯ ಮೇಲೆ ಬೆವರಿನ ಹನಿಗಳು ತಟಗುಟ್ಟುತ್ತಿರುವುದು ಪಟೋಲ್ ಬಾಬುವಿಗೆ ಅನುಭವವಾಯಿತು.



"ಅತುಲ್ ಬಾಬು, ಈ ಕಡೆ ಬನ್ನಿ."

ಅತುಲ್ ಬಾಬು? ನರೇಶ್ ದತ್ತ ಬಾಗಿಲಲ್ಲಿ ನಿಂತು ತಮ್ಮತ್ತ ಕೈ ತೋರಿಸುತ್ತಿದ್ದುದನ್ನು ಪಟೊಲ್ ಗಮನಿಸಿದರು. ತಮ್ಮ ಹೆಸರು ಆತನಿಗೆ ಸರಿಯಾಗಿ ಗೊತ್ತಿಲ್ಲ. ಒಂದೇ ಸಾರಿ ತಾವಿಬ್ಬರೂ-ಅದೂ ಕೆಲವೇ ಕ್ಷಣ-ಭೇಟಿಯಾಗಿದ್ದುದರಿಂದ ಹೀಗಾದುದು ಆಶ್ಚರ್ಯವೇನಲ್ಲ. ಪಟೊಲ್ ಬಾಬು ಆ ಕಡೆ ಹೋಗಿ, ಕೈ ಜೋಡಿಸಿ ನಮಸ್ಕರಿಸಿ, "ನಿಮಗೆ ನನ್ನ ಹೆಸರು ಸರಿಯಾಗಿ ಗೊತ್ತಿಲ್ಲ ಅನ್ನಿಸುತ್ತೆ... ಶಿತಾಲಕಾಂತ ರಾಯ್ ಅನ್ನೋದು ನನ್ನ ಹೆಸರು. ಆದರೆ ಜನ ನನ್ನನ್ನು ಪಟೊಲ್ ಅನ್ನೋ ಅಡ್ಡ ಹೆಸರಿನಿಂದಲೇ ಗುರ್ತಿಸ್ತಾರೆ. ನಾನು ನಾಟಕಗಳಲ್ಲಿ ಅಭಿನಯಿಸ್ತಾ ಇದ್ದಾಗ್ಲೂ ಅದನ್ನೇ ಉಪಯೋಗಿಸ್ತಾ ಇದ್ದೆ."

"ಗುಡ್, ಗುಡ್. ಸಮಯಕ್ಕೆ ಸರಿಯಾಗಿ ಬಂದಿದೀರಿ"

ಪಟೊಲ್ ಬಾಬು ಉಬ್ಬಿಹೋದರು. ಅವರೆಂದರು, "ಹಡ್ಸನ್ ಅಂಡ್ ಕಿಂಬರ್ಲಿ ಕಂಪೆನಿಯಲ್ಲಿ ಒಂಬತ್ತು ವರ್ಷ ಇದ್ದೆ. ಒಂದು ದಿನವೂ ತಡವಾಗಿ ಹೋದದ್ದಿಲ್ಲ."

"ಹಾಗೇನು?... ನೋಡಿ, ಅಲ್ಲಿ ನೆರಳಲ್ಲಿ ಕಾಯ್ತಾ ಇರಿ. ಷೂಟಿಂಗ್ ಆರಂಭ ಆಗಲಿಕ್ಕೆ ಪೂರ್ವಭಾವಿಯಾಗಿ ಸ್ವಲ್ಪ ಕೆಲಸ ಇದೆ"

ಅಷ್ಟರಲ್ಲಿ ಮೂರು ಕಾಲಿನ ಉಪಕರಣದ ಬಳಿ ಇದ್ದವರೊಬ್ಬರು, 'ನರೇಶ್' ಎಂದು ಕೂಗಿದರು.

"ಸರ್?"

"ಅವರು ನಮ್ಮ ಪೈಕೀನಾ?"

"ಹೌದು ಸರ್, ಇಬ್ಬರು ಪರಸ್ಪರ ಢಿಕ್ಕಿ

ಹೊಡೆಯೋ ದೃಶ್ಯವಿದೆಯಲ್ಲ. ಅಲ್ಲಿಗೆ ಬೇಕಾದವರು ಇವರೇ''

''ಓಕೇ... ಈಗ ಬಾಗ್ಲಿಂದ ದೂರ ಹೋಗ್ತೀರಾ? ಕೆಲಸ ಪ್ರಾರಂಭ ಮಾಡ್ಬೇಕು''

ಪಟೋಲ್ ಬಾಬು ಅಲ್ಲಿಂದ ಹೊರಟು ಒಂದು ಬೀಡಾ ಅಂಗಡಿಯ ನೆರಳಲ್ಲಿ ನಿಂತುಕೊಂಡರು. ಫಿಲ್ಮ್ ಷೂಟಿಂಗ್ ನಡೆಯುವುದನ್ನು ಅವರು ಈ ಮೊದಲು ಕಂಡೇ ಇರಲಿಲ್ಲ. ಎಷ್ಟೊಂದು ಕಷ್ಟಪಡ್ತಾ ಇದಾರೆ! ಸುಮಾರು ಇಪ್ಪತ್ತು ವರ್ಷದ ತರುಣನೊಬ್ಬ ಮೂರು ಕಾಲಿನ ಆ ಉಪಕರಣವನ್ನು ಹೆಗಲ ಮೇಲೆ ಹೊತ್ತು ಸಾಗಿಸುತ್ತಿದ್ದ. ಕನಿಷ್ಠ ಅರವತ್ತು ಪೌಂಡಾದರೂ ತೂಕವಿದ್ದೀತು.

ಆದರೆ ತಾವು ಹೇಳಬೇಕಾದ ಸಂಭಾಷಣೆ? ಇನ್ನು ಹೆಚ್ಚು ವೇಳೆಯೂ ಇಲ್ಲ. ತಾವು ಏನು ಮಾಡಬೇಕು, ಏನು ಹೇಳಬೇಕು-ಒಂದೂ ತಿಳಿದಿಲ್ಲ.

ಪಟೋಲ್ ಬಾಬುವಿಗೆ ಇದ್ದಕ್ಕಿದ್ದಂತೆ ಸ್ವಲ್ಪ ಗಾಬರಿಯಾಯಿತು. ಯಾರನ್ನಾದರೂ ಕೇಳೋಣವೆ? ಅಲ್ಲಿ ನರೇಶ ದತ್ತ ಇದಾನೆ; ಅವನ ಹತ್ತಿರ ಹೋಗಿ ಈ ವಿಚಾರ ನೆನಪಿಸಲೆ? ಪಾತ್ರ ಚಿಕ್ಕದಾಗಿದ್ದರೆ ಪರವಾಗಿಲ್ಲ; ಆದರೆ ಅದನ್ನೇ ಪರಿಣಾಮಕಾರಿಯಾಗಿ ಅಭಿನಯಿಸಬೇಕಾದರೆ, ತಾವಾಡಬೇಕಾದ ಮಾತುಗಳನ್ನು ಮುಂಚಿತವಾಗಿಯೇ ಕಲಿಯಬೇಕಲ್ಲ? ಅಷ್ಟೊಂದು ಜನರೆದುರು ತಡವರಿಸುವಂತಾದರೆ ಎಷ್ಟು ಅವಮಾನ! ರಂಗದ ಮೇಲೆ ಕೊನೆಯ ಬಾರಿ ಕಾಣಿಸಿಕೊಂಡು ಈಗಾಗಲೇ ಇಪ್ಪತ್ತು ವರ್ಷ ಆಗಿಹೋಗಿದೆ.

ಪಟೋಲ್ ಬಾಬು ಹೆಜ್ಜೆ ಮುಂದಿಡುವಷ್ಟರಲ್ಲಿ 'ಸೈಲೆನ್ಸ್' ಎಂಬ ಕೂಗು ಅವರನ್ನು ಹಿಂದೆಳೆದಂತಾಯಿತು. ಅದರ ಹಿಂದಿನಿಂದಲೇ ನರೇಶ್ ದತ್ತ ಬಾಯಿಗೆ ಕೈ ಅಡ್ಡವಾಗಿ ಹಿಡಿದು ಜೋರಾಗಿ ಕೂಗುವ ಸದ್ದು: ''ಈಗ ಷೂಟಿಂಗ್ ಪ್ರಾರಂಭಿಸುತ್ತಿದ್ದೇವೆ. ದಯಪಟ್ಟು ಮಾತಾಡೋದನ್ನ ನಿಲ್ಲಿಸಿ. ನೀವಿರೋ ಜಾಗದಿಂದ ಮುಂದಕ್ಕೆ ಬರಬೇಡಿ; ಕ್ಯಾಮರಾ ಸುತ್ತ ಗುಂಪು ಕಟ್ಟಬೇಡಿ, ಪ್ಲೀಸ್!''

ಮತ್ತೆ ಹಿಂದೆ ಕೇಳಿದ ಧ್ವನಿ: ''ಸೈಲೆನ್ಸ್! ಟೇಕಿಂಗ್!'' ಈಗ ಪಟೋಲ್ ಬಾಬುವಿಗೆ ಆ ಧ್ವನಿ ಯಾರದೆಂದು ಪತ್ತೆ ಹಚ್ಚಲು ಸಾಧ್ಯವಾಯಿತು. ಆತ ಒಬ್ಬ ಸಾಧಾರಣ ಎತ್ತರದ ಧಡೂತಿ ಮನುಷ್ಯ; ಕ್ಯಾಮರಾ ಹತ್ತಿರದಲ್ಲಿ ನಿಂತಿದ್ದ. ಅವನ ಕುತ್ತಿಗೆಯಿಂದ ಚಿಕ್ಕ ಟೆಲಿಸ್ಕೋಪಿನಂತಹುದೇನೋ ಇಳಿಬಿದ್ದಿತ್ತು. ಅವರೇನಾ ನಿರ್ದೇಶಕರು? ಎಷ್ಟು ವಿಚಿತ್ರವೆಂದರೆ ಪಟೋಲ್ ಬಾಬು ನಿರ್ದೇಶಕರ ಹೆಸರನ್ನು ವಿಚಾರಿಸುವ ಗೋಜಿಗೂ ಹೋಗಿರಲಿಲ್ಲ.

ಈಗ ಒಂದಾದಮೇಲೆ ಒಂದರಂತೆ ಜೋರು ದನಿಯ ಆಜ್ಞೆಗಳು: ''ಸ್ಟಾರ್ಟ್! ಸೌಂಡ್! ರನ್ನಿಂಗ್! ಕ್ಯಾಮರಾ! ರೋಲಿಂಗ್! ಆ್ಯಕ್ಷನ್!''- ಇತ್ಯಾದಿ.

'ಆ್ಯಕ್ಷನ್' ಎಂಬ ಮಾತು ಕೇಳಿದೊಡನೆಯೇ ಕ್ರಾಸಿಂಗ್ ಕಡೆಯಿಂದ ಒಂದು ಕಾರು ಬಂದು ಕಚೇರಿಯ ಪ್ರವೇಶದ್ವಾರದಲ್ಲಿ ನಿಂತುದನ್ನು ಪಟೋಲ್ ಬಾಬು ಗಮನಿಸಿದರು. ಬೂದು ಬಣ್ಣದ ಸೂಟು ಧರಿಸಿದ್ದ, ನಸುಕೆಂಪು ಬಣ್ಣದ ಪ್ರಸಾಧನ ಮಾಡಿಕೊಂಡಿದ್ದ ಯುವಕನೊಬ್ಬ ಕಾರಿನಿಂದ ಕೆಳಗಿಳಿದು, ಪ್ರವೇಶದ್ವಾರದ ಕಡೆಗೆ ಅವಸರದಿಂದ ಕೆಲವು ಹೆಜ್ಜೆ ನಡೆದು, ಇದ್ದಕ್ಕಿದ್ದಂತೆ ನಿಂತುಬಿಟ್ಟ. ಮರುಕ್ಷಣದಲ್ಲಿಯೇ 'ಕಟ್' ಎಂಬ ಕೂಗು; ತತ್‌ಕ್ಷಣ ಜನಗಳ ಗುಜುಗುಜು ಮತ್ತೆ ಪ್ರಾರಂಭವಾಯಿತು.

ಪಟೋಲ್ ಬಾಬುವಿನ ಪಕ್ಕದಲ್ಲಿ ನಿಂತಿದ್ದಾತ ಅವರ ಕಡೆ ತಿರುಗಿ, ''ಈ ಯುವಕ ಯಾರೆಂದು ಗೊತ್ತಾಯ್ತಾ?'' ಎಂದು ಕೇಳಿದ.

''ಇಲ್ಲವಲ್ಲಾ'' ಎಂದರು ಪಟೋಲ್ ಬಾಬು.

''ಚಂಚಲ ಕುಮಾರ್. ಬಹಳ ಬೇಗ ಮೇಲೆ ಬರ್ತಿದಾನೆ. ನಾಲ್ಕು ಚಿತ್ರಗಳಲ್ಲಿ ನಾಯಕನ ಪಾತ್ರ ಮಾಡ್ತಿದಾನೆ.''

ಪಟೋಲ್ ಬಾಬು ಹೆಚ್ಚು ಸಿನಿಮಾ ನೋಡಿರಲಿಲ್ಲ. ಆದರೆ ಚಂಚಲ ಕುಮಾರನ

ಹೆಸರನ್ನು ಕೇಳಿದಹಾಗಿತ್ತು. ಪ್ರಾಯಃ ಮೊನ್ನೆ ಕೋಟೀಬಾಬುಗಳು ಹೊಗಳುತ್ತಿದ್ದ ಹುಡುಗ ಇವನೇ ಇರಬೇಕು. ಚೆನ್ನಾಗಿ ಮೇಕಪ್ ಮಾಡಿ ಕೊಂಡಿದ್ದಾನೆ. ಸೂಟಿನ ಬದಲಾಗಿ ಬಂಗಾಳೀ ಧೋತಿ ಹಾಗೂ ಪಂಜಾಬೀ ಧರಿಸಿ, ಒಂದು ನವಿಲನ್ನೇರಿ ಬಂದಿದ್ದರೆ, ಸಾಕ್ಷಾತ್ ಕಾರ್ತಿಕೇಯ ಸ್ವಾಮಿಯೇ! ಕಂಚ್ರಾಪಾರದ ಮನುತೋಷ್-ಚಿನೂ ಅನ್ನೋದು ಅವರ ಜನಪ್ರಿಯ ಅಡ್ಡ ಹೆಸರು-ನೋಡಲಿಕ್ಕೆ ಹೀಗೇ ಇದ್ದರು. ಸ್ತ್ರೀ ಪಾತ್ರ ಮಾಡೋದರಲ್ಲಿ ಎತ್ತಿದ ಕೈ-ಪಟೊಲ್ ಬಾಬು ಇದನ್ನೆಲ್ಲಾ ನೆನಪು ಮಾಡಿಕೊಂಡರು.

ಪಟೊಲ್ ಬಾಬು ಪಕ್ಕದಲ್ಲಿದ್ದಾತನನ್ನು ಕುರಿತು, ''ನಿರ್ದೇಶಕರು ಯಾರು?'' ಎಂದು ಕೇಳಿದರು.

ಆತ ಹುಬ್ಬೇರಿಸಿ, ''ಗೊತ್ತಿಲ್ವಾ? ಬರೇನ್ ಮಲ್ಲಿಕ್. ಸಾಲಾಗಿ ಅವರ ಮೂರು ಚಿತ್ರ ಜಯಭೇರಿ ಬಾರಿಸಿವೆ'' ಎಂದ. ಕನಿಷ್ಠ ಕೆಲವಾದರೂ ಮುಖ್ಯ ವಿಚಾರ ಸಂಗ್ರಹಿಸಿದಂತಾಯಿತು ಪಟೊಲ್ ಬಾಬುವಿಗೆ. ಮನೆಯಲ್ಲಿ ಹೆಂಡತಿಯೇನಾದರೂ, ಯಾರ ಚಿತ್ರದಲ್ಲಿ, ಯಾವ ನಟನ ಜೊತೆ ಪಾರ್ಟು ಮಾಡಿದ್ದು ನೀವು ಎಂದು ಕೇಳಿದರೆ ತನಗೆ ಗೊತ್ತಿಲ್ಲ ಎಂದು ಹೇಳುವ ಪರಿಸ್ಥಿತಿ ಬರಬಾರದಲ್ಲ.

ಈಗ ನರೇಶ್‌ದತ್ತ ಸಣ್ಣದೊಂದು ಪಿಂಗಾಣಿ ಬಟ್ಟಲಲ್ಲಿ ಚಹಾ ತಂದು, ''ತಗೊಳ್ಳಿ ಸರ್, ಬಿಸಿ ಚಹಾ ನಿಮ್ಮ ಗಂಟಲಿಗೆ ಒಳ್ಳೇದಾದೀತು. ಇನ್ನೇನು ನಿಮ್ಮ ಸರದಿ ಬಂದೇ ಬಿಡುತ್ತೆ'' ಎಂದ.

ಪಟೊಲ್ ಬಾಬು ಈಗ ಕೇಳಲೇ ಬೇಕಾಯಿತು, ''ನಾನು ಆಡ್ಬೇಕಾದ ಮಾತುಗಳನ್ನ ತಿಳಿಸಿದ್ರೆ...''

''ಓ... ಅದಾ? ನನ್ ಜೊತೆ ಬನ್ನಿ.''

ಮೂರು ಕಾಲಿನ ಉಪಕರಣದ ಕಡೆ ನರೇಶ್ ದತ್ತನನ್ನು ಪಟೊಲ್ ಬಾಬು ಹಿಂಬಾಲಿಸಿದರು.

''ಶಶಾಂಕಾ, ಈ ಕಡೆ ಸ್ವಲ್ಪ...''

ಅರೆ ತೋಳಿನ ಅಂಗಿ ಹಾಕಿದ್ದ ತರುಣನೊಬ್ಬ ನರೇಶ್ ದತ್ತನ ಕಡೆಗೆ ತಿರುಗಿದ. ಅವನಿಗೆ ನರೇಶ್ ಹೇಳಿದ: ''ಇವರು ಆಡ್ಬೇಕಾದ ಮಾತು ಬೇಕಂತೆ. ಒಂದು ಕಾಗದದ ಚೂರಲ್ಲಿ ಬರೆದು ಕೊಡ್ತೀಯಾ? ಇವರು ಯಾರು ಗೊತ್ತಲ್ಲ?''

''ಗೊತ್ತು... ಗೊತ್ತು''

ಶಶಾಂಕ, ಪಟೊಲ್ ಬಾಬುವಿನ ಕಡೆ ತಿರುಗಿ ಹೇಳಿದ, ''ಬನ್ನಿ, ಬನ್ನಿ ಅಜ್ಜಾ; ಎಲ್ಲಿ ಜ್ಯೋತಿ, ಒಂದು ಸೆಕೆಂಡ್ ನಿನ್ನ ಪೆನ್ನು ಕೊಡು. ಅಜ್ಜನಿಗೆ ಅವರು ಹೇಳ್ಬೇಕಾದ ಮಾತು ಬರ್‍ಕೊಡಬೇಕಂತೆ''

ಹುಡುಗ ಜ್ಯೋತಿ ಜೇಬಿನಿಂದ ಕೆಂಪು ಡಾಟ್ ಪೆನ್ನು ತೆಗೆದು ಶಶಾಂಕನಿಗೆ ಕೊಟ್ಟ. ಶಶಾಂಕ ತನ್ನ ಕೈಲಿದ್ದ ನೋಟ್‌ಬುಕ್ಕಿನಿಂದ ಒಂದು ಹಾಳೆ ಹರಿದು, ಏನೋ ಗೀಚಿ, ಪಟೊಲ್ ಬಾಬುವಿಗೆ ಕೊಟ್ಟ. ಪಟೊಲ್ ಬಾಬು ಕಾಗದದ ತುಣುಕನ್ನು ನೋಡಿದಾಗ ಅದರಲ್ಲಿ, 'ಓ!' ಎಂಬ ಒಂದೇ ಒಂದು ಪದವಿತ್ತು!

ಇದ್ದಕ್ಕಿದ್ದಂತೆ ಪಟೊಲ್ ಬಾಬುವಿಗೆ ತಲೆಯಲ್ಲಿ ಏನೋ ಹೊಡೆದುಕೊಳ್ಳುವಂತೆ ಅನುಭವವಾಯಿತು. ಸಿಕ್ಕಾಪಟ್ಟೆ ಸೆಖೆಯೆನ್ನಿಸಿ, ಹಾಕಿಕೊಂಡ ಜಾಕೀಟನ್ನು ತೆಗೆದುಬಿಡಬೇಕು ಅನ್ನಿಸಿತು.

ಶಶಾಂಕ ಕೇಳಿದ: ''ಏನಾಯ್ತಜ್ಜಾ... ನಿಮಗೆ ಅಷ್ಟೇನೂ ಖುಷಿಯಾದ್ಹಾಗೆ ಇಲ್ಲ, ಅಲ್ವಾ?''

ಈ ಜನಗಳೆಲ್ಲಾ ಸೇರಿಕೊಂಡು ತನ್ನ ಕಾಲೆಳೀತಾ ಇದಾರೆಯೇ? ಇದೆಲ್ಲಾ ದೊಡ್ಡ ಮೋಸವೇ? ತನ್ನಂಥಾ ಸಾಧು, ನಿರುಪದ್ರವಿ ಪ್ರಾಣಿಯನ್ನು ಅಪಹಾಸ್ಯ ಮಾಡಲು ನಗರದ ಮಧ್ಯದಲ್ಲಿ ಎಳೀತಿದ್ದಾರೆಯೇ?... ಜನ ಇಷ್ಟೊಂದು ಕ್ರೂರಿಗಳಾಗಲು ಸಾಧ್ಯವೇ?

ಅತ್ಯಂತ ಕ್ಷೀಣ ಧ್ವನಿಯಲ್ಲಿ ಪಟೊಲ್ ಬಾಬು ಹೇಳಿದರು, ''ಇದು ಯಾಕೋ ವಿಚಿತ್ರ ಅನ್ನಿಸ್ತಾ ಇದೆ.''

''ಯಾಕಜ್ಜಾ?''

''ಬರಿ 'ಓ!' ಅಷ್ಟೇನಾ ನನ್ನ ಮಾತು?''

ಶಶಾಂಕನ ಹುಬ್ಬು ಮೇಲೇರಿತು. ಆತ ಹೇಳಿದ, ''ಏನ್ಹೇಳ್ತಿದ್ದೀರಿ ಅಜ್ಜಾ? ಆ ಒಂದು ಪದ ಅನ್ನೋದು ಏನೂ ಅಲ್ವಾ? ನಿಮ್ಮದು ನಿಜ್ವಾಗಿಯೂ ಮಾತಾಡೋ ಪಾತ್ರ. ಬರೇನ್ ಮಲ್ಲಿಕರ ಚಿತ್ರದಲ್ಲಿ ಮಾತಾಡೋ ಪಾತ್ರ ಅಂದ್ರೆ ಏನಂತ ಗೊತ್ತಾ ನಿಮಗೆ? ನಿಜ ಹೇಳ್ಬೇಕೂ ಅಂದ್ರೆ, ನಟರಲ್ಲಿ ನೀವು ಅತ್ಯಂತ ಅದೃಷ್ಟ ಶಾಲಿಗಳು. ಗೊತ್ತಾ ನಿಮಗೆ, ಇಷ್ಟರಲ್ಲಿ ನೂರಕ್ಕಿಂತ ಹೆಚ್ಚು ಮಂದಿ ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವರ್‍ಯಾರಿಗೂ ಒಂದೇ ಒಂದು ಮಾತಿಲ್ಲ. ಕ್ಯಾಮರಾದ ಎದುರು ಸುಮ್ಮನೆ ನಡೆಯೋದಷ್ಟೆ. ಕೆಲವರಿಗೆ ಅದಕ್ಕೂ ಅವಕಾಶ ಇಲ್ಲ. ಒಂದು ಜಾಗದಲ್ಲಿ ಸುಮ್ಮನೆ ನಿಂತಿರೋದು, ಅಷ್ಟೆ. ಇನ್ನು ಕೆಲವರ ಮುಖ ಕೂಡಾ ಕ್ಯಾಮರಾದಲ್ಲಿ ಕಾಣಿಸ್ಕೊಂಡಿಲ್ಲ. ಇವತ್ತು ಕೂಡ, ನೋಡಿ, ಅಲ್ಲಿ ದೀಪದ ಕಂಬದ ಕೆಳಗೆ ನಿಂತಿದಾರಲ್ಲ, ಅವರೆಲ್ಲ ಇವತ್ತಿನ ದೃಶ್ಯದ ಚಿತ್ರೀಕರಣಕ್ಕಾಗಿಯೇ ಬಂದವರು. ಅವರ್‍ಯಾರಿಗೂ ಮಾತೇ ಇಲ್ಲ. ಅದಿರ್‍ಲಿ; ಇವತ್ತು ನಮ್ಮ ನಾಯಕ ನಟ ಚಂಚಲ ಕುಮಾರ್‌ಗೂ ಮಾತಾಡೋ ಅವಕಾಶ ಇಲ್ಲ. ನಿಮಗೊಬ್ರಿಗೇ ಮಾತಿರೋದು, ಗೊತ್ತಾ?''

ಈಗ ಜ್ಯೋತಿ ಮುಂದೆ ಬಂದು, ಪಟೋಲ್ ಬಾಬುವಿನ ಹೆಗಲ ಮೇಲೆ ಕೈಯಿರಿಸಿ ಹೇಳಿದ, ''ಅಜ್ಜಾ, ಇಲ್ಕೇಳಿ, ನೀವು ಏನು ಮಾಡ್ಬೇಕೂಂತ ಹೇಳ್ತೀನಿ... ಸಂದರ್ಭ ಹೀಗಿದೆ: ಚಂಚಲ್ ಕುಮಾರ ಒಬ್ಬ ಉದಯೋನ್ಮುಖ ಯುವ ಕಾರ್ಯನಿರ್ವಾಹಕ ಅಧಿಕಾರಿ. ತನ್ನ ಕಚೇರಿಯಲ್ಲಿ ಏನೋ ವಂಚನೆಯ ಪ್ರಕರಣ ನಡೆದಿದೆ ಅಂತ ಅವನಿಗೆ ಗೊತ್ತಾಗಿ, ಅದೇನೆಂದು ಪತ್ತೆ ಹಚ್ಚೋಸಲುವಾಗಿ ಬರ್ತಾರೆ. ಕಾರಿಂದ ಕೆಳಗಿಳಿದು, ಪ್ರವೇಶ ದ್ವಾರದ ಕಡೆ ಧಡಧಡ ಬರ್ತಾ ಇರೋವಾಗ, ಒಬ್ಬ ಅನ್ಯಮನಸ್ಕ ಪಾದಚಾರಿಗೆ ಢಿಕ್ಕಿ ಹೊಡೀತಾರೆ. ಆ ಪಾದಚಾರಿಯೇ ನೀವು. ನಿಮ್ಮ ತಲೆಗೆ ಏಟು ಬಿದ್ದಾಗ 'ಓ!' ಅಂತೀರಿ. ಆದರೆ ಚಂಚಲ ಕುಮಾರ್ ನಿಮ್ಮ ಕಡೆ ಗಮನಾನೇ ಕೊಡದೆ, ನೇರವಾಗಿ ಆಫೀಸಿಗೆ ನುಗ್ತಾರೆ. ಅವರ ಮನಸ್ಸಲ್ಲಿ ಕಚೇರಿಯ ವಿಚಾರ ಎಷ್ಟು ತುಂಬಿಕೊಂಡಿದೆ ಅನ್ನೋದು ಇದ್ರಿಂದ ಗೊತ್ತಾಗುತ್ತೆ- ಅಲ್ವಾ? ಈ ಷಾಟ್ ಎಷ್ಟು ಮಹತ್ವದ್ದು ಅನ್ನೋದನ್ನು ಯೋಚಿಸಿ.''

''ಈಗ ನಿಮಗೆ ಎಲ್ಲಾ ಸ್ಪಷ್ಟವಾಯ್ತೂಂತ ಅಂದ್ಕೊಂಡಿದೀನಿ'', ಶಶಾಂಕ ಹೇಳಿದ. ''ಮತ್ತೆ ನೀವಿದ್ದ ಜಾಗಕ್ಕೇ ಹೋಗ್ತೀರಾ? ಇಲ್ಲಿ ಕಡಿಮೆ ಜನ ಇದ್ದಷ್ಟೂ ಒಳ್ಳೇದು... ನಿಮ್ಮ ಸರದಿ ಬರಬೇಕಾದರೆ ಇನ್ನು ಒಂದೇ ಒಂದು ಷಾಟ್ ಆಗಬೇಕು.''

ಪಟೋಲ್ ಬಾಬು ನಿಧಾನವಾಗಿ ಬೀಡಾ ಅಂಗಡಿಗೆ ವಾಪಸ್ಸಾದರು. ನೆರಳಲ್ಲಿ ನಿಂತುಕೊಂಡು ತಮ್ಮ ಕೈಲಿದ್ದ ಕಾಗದದ ಕಡೆ ದೃಷ್ಟಿ ಹಾಯಿಸಿದರು. ಸುತ್ತಾ ಯಾರೂ ತಮ್ಮನ್ನು ನೋಡುತ್ತಿಲ್ಲ ಎಂಬುವುದನ್ನು ಗಮನಿಸಿ, ಆ ಕಾಗದವನ್ನು ಉಂಡೆ ಮಾಡಿ, ರಸ್ತೆ ಪಕ್ಕದ ಚರಂಡಿಗೆ ಎಸೆದರು.

'ಓ!'

ಅವರ ಹೃದಯದ ಆಳದಿಂದ ಒಂದು ನಿಟ್ಟುಸಿರು ಹೊರಬಂತು.

ಬರೀ ಒಂದು ಪದ-ಪದವೂ ಅಲ್ಲ; ಒಂದು ಸದ್ದು- 'ಓ!'

ಸೆಖೆ ಉಸಿರುಕಟ್ಟಿಸುವಂತಿತ್ತು. ಹಾಕಿಕೊಂಡಿದ್ದ ಜಾಕೀಟು ಒಂದು ಟನ್ನಿನಷ್ಟು ಭಾರವೆನ್ನಿಸುತ್ತಿತ್ತು. ಪಟೋಲ್ ಬಾಬುವಿಗೆ ಒಂದೇ ಸ್ಥಳದಲ್ಲಿ ಇನ್ನಷ್ಟು ಹೊತ್ತು ನಿಂತಿರಲು ಸಾಧ್ಯವಾಗಲಿಲ್ಲ; ಕಾಲು ಭಾರವಾಗಿತ್ತು. ಪಾನ್ ಅಂಗಡಿಯಾಚೆ ಇದ್ದ ಕಚೇರಿಯತ್ತ ಹೋಗಿ, ಅದರ ಮೆಟ್ಟಿಲ ಮೇಲೆ ಕುಳಿತುಕೊಂಡರು. ಗಂಟೆ ಸುಮಾರು ಒಂಬತ್ತೂವರೆ. ಭಾನುವಾರ ಬೆಳಗಿನ

ಹೊತ್ತು ಕರಾಳಿಬಾಬುಗಳ ಮನೆಯಲ್ಲಿ ಕಾಳೀ ಮಾತೆಯ ಪ್ರಾರ್ಥನೆ, ಭಜನೆ ನಡೆಯುತ್ತಿರುತ್ತವೆ. ಪ್ರತಿ ವಾರವೂ ಪಟೋಲ್‌ಬಾಬು ಅಲ್ಲಿಗೆ ಹೋಗಿ, ಸಂತೋಷ ಪಡುತ್ತಿದ್ದರು.

ಈಗಲೂ ಅಲ್ಲಿಗೆ ಹೋದರೆ ಹೇಗೆ? ಏನು ತೊಂದರೆಯಾದೀತು? ಈ ಅಪ್ರಯೋಜಕರ ಮಧ್ಯೆ ಇದ್ದುಕೊಂಡು, ಕಡು ಮೂರ್ಖನಂತೆ ಭಾನುವಾರದ ಬೆಳಗಿನ ಹೊತ್ತನ್ನು ಯಾಕೆ ವ್ಯರ್ಥಮಾಡಿಕೊಳ್ಳಬೇಕು?

'ಸೈಲೆನ್ಸ್!' ಮತ್ತೆ ಕೂಗು.

ಅರ್ಥವಿಲ್ಲದ್ದು! ನಿಮ್ಮ 'ಸೈಲೆನ್ಸ್'ನ ಮನೆ ಹಾಳಾಯಿತು! ಪುಟಗೋಶಿ ವಿಚಾರಕ್ಕೆ ಆಡಂಬರದ ಪ್ರದರ್ಶನ ಮಾಡ್ತಾರೆ ಈ ಜನ! ನಾಟಕದ ಅಭಿನಯವೇ ಎಷ್ಟೋ ಚೆನ್ನಾಗಿತ್ತು.

ನಾಟಕದ ನೆನಪು ಬಂದೊಡನೆಯೇ ಯಾವುದೋ ಕ್ಷೀಣ ನೆನಪಿನ ಎಳೆಯೊಂದು ಮನಸ್ಸಿನಲ್ಲಿ ಮಿಸುಕಾಡಿತು. ಬೆಲೆ ಕಟ್ಟಲಾಗದ ಬುದ್ಧಿವಾದದ ಮಾತೊಂದು ಆಳವಾದ, ಪಕ್ವ ಧ್ವನಿಯಲ್ಲಿ ಕೇಳಿಸಿದಂತಾಯಿತು: 'ಪಟೋಲ್, ಒಂದು ವಿಚಾರ ನೆನಪಿರಲಿ, ಎಷ್ಟೇ ಚಿಕ್ಕ ಪಾತ್ರ ನಿನ್ನ ಪಾಲಿಗೆ ಬಂದಿರಲಿ, ಅದು ನಿನ್ನ ಘನತೆಗೆ ಕಡಿಮೆಯೆಂದು ಭಾವಿಸಬೇಡ. ಒಬ್ಬ ಕಲಾವಿದನಾಗಿ ನಿನಗೆ ಬಂದ ಅವಕಾಶವನ್ನು ಸಂಪೂರ್ಣ ಉಪಯೋಗಿಸಿಕೊಳ್ಳುವುದು, ನೀನಾಡಬೇಕಾದ ಮಾತುಗಳಲ್ಲಿನ ಅರ್ಥದ ರಸದ ಕೊನೆಯ ತೊಟ್ಟು ಬೀಳುವಂತೆ ಬಳಸಿಕೊಳ್ಳುವುದು ನಿನ್ನ ಕರ್ತವ್ಯ. ನಾಟಕವೆಂಬುದು ಒಂದು ಸಮುದಾಯ ಕಲೆ; ಅನೇಕರ ಸಂಘಟಿತ ಯತ್ನದಿಂದಲೇ ನಾಟಕ ಯಶಸ್ವಿಯಾಗುತ್ತದೆ.'

ಈ ಬುದ್ಧಿಮಾತು ಹೇಳಿದವರು ಪಕ್ರಾಶಿಯವರು. ಗಗನ್ ಪಕ್ರಾಶಿ ಪಟೋಲ್ ಬಾಬುವಿನ ಗುರು. ಅದ್ಭುತ ನಟ; ಕಿಂಚಿತ್ತೂ ಗರ್ವವಿಲ್ಲ; ಸಂತನಂತಹ ಮನುಷ್ಯ; ಲಕ್ಷ ಜನರಲ್ಲಿ ಸಿಕ್ಕಬಹುದಾದ ಒಬ್ಬ ಪ್ರತಿಭಾನ್ವಿತ ನಟ.

ಪಕ್ರಾಶಿ ಹೇಳುತ್ತಿದ್ದರು, 'ನಾಟಕದಲ್ಲಿ ಆಡುವ ಪ್ರತಿ ಮಾತೂ ಮರದಲ್ಲಿರುವ ಹಣ್ಣಿನಂತೆ. ಪ್ರೇಕ್ಷಕರಲ್ಲಿ ಪ್ರತಿಯೊಬ್ಬರಿಗೂ ಅದು ಕೈಗೆಟಕೋದಿಲ್ಲ. ಆದರೆ ನಟನೆನ್ನಿಸಿಕೊಂಡವನು ಅದನ್ನು ಕಿತ್ತು, ಅದರಲ್ಲಿನ ಸ್ವಾರಸ್ಯವನ್ನು ಸಂಗ್ರ



ಹಿಸಿ, ಪ್ರೇಕ್ಷಕರ ಆಸ್ವಾದನೆಗೆ ಒದಗಿಸುವುದು ಹೇಗೆಂಬುದನ್ನು ತಿಳಿದಿರಬೇಕು.'

ಗುರುವಿನ ನೆನಪಾದೊಡನೇ ಪಟೋಲ್ ಬಾಬು ಭಕ್ತಿಯಿಂದ ತಲೆಬಾಗಿದರು.

ಇವತ್ತು ತಮಗೆ ಸಿಕ್ಕಿದ ಪಾತ್ರದಲ್ಲಿ ನಿಜವಾಗಿಯೂ ಏನೂ ಇಲ್ಲವೇ ಹಾಗಾದರೆ? ಆಡಲಿಕ್ಕೆ 'ಓ!' ಎಂಬ ಒಂದೇ ಒಂದು ಮಾತು ನಿಜ. ಆದರೆ ಆ ಒಂದು ಪದ ಅರ್ಥಹೀನವೆಂದು ಪೂರ್ತಿಯಾಗಿ ತಳ್ಳಿಹಾಕುವಂಥದೇ?

ಓ, ಓ, ಓ, ಓ... ಒಂದೊಂದು ಬಾರಿಯೂ ಪಟೋಲ್ ಬಾಬು ಅದನ್ನು ಬೇರೆ ಬೇರೆ ಏರಿಳಿತಗಳಲ್ಲಿ ಉಚ್ಚರಿಸಿದರು. ಅನೇಕ ಬಾರಿ ಹೀಗೆ ಮಾಡಿದಾಗ ಅವರಿಗೊಂದು ಅದ್ಭುತ ಸತ್ಯದ ದರ್ಶನವಾಯಿತು. ಒಂದೇ ಉದ್ಗಾರ ಬೇರೆ ಬೇರೆ ರೀತಿಗಳಲ್ಲಿ ಉಚ್ಚರಿಸಲ್ಪಟ್ಟಾಗ ಬೇರೆ ಬೇರೆ ಅರ್ಥ ಛಾಯೆಗಳನ್ನು ಪ್ರಕಟಿಸುತ್ತದೆ. ನೋವಾದಾಗ ಬರುವ 'ಓ' ಎಂಬ ಧ್ವನಿ, ಹತಾಶೆಯ 'ಓ' ಸ್ವರ, ದುಃಖದ 'ಓ' ಎಂಬ ಉದ್ಗಾರ-ಎಲ್ಲವೂ ಬೇರೆ ಬೇರೆಯೇ. ವಾಸ್ತವವಾಗಿ 'ಓ' ಎನ್ನುವುದರಲ್ಲಿ ಅನೇಕ ಬಗೆ. ಕ್ಷಣಿಕವಾಗಿರುವ 'ಓ', ದೀರ್ಘ ಧ್ವನಿಯ 'ಓ', ಗಟ್ಟಿ ದನಿಯ 'ಓ', ಪಿಸುಮಾತಿನ 'ಓ', ಏರು ಸ್ವರದ 'ಓ', ಸೌಮ್ಯ ಸ್ವರದ 'ಓ', ಮೆಲುವಾಗಿ ಪ್ರಾರಂಭವಾಗಿ ಗಟ್ಟಿಯಾಗಿ ಮುಕ್ತಾಯವಾಗುವ 'ಓ', ಗಟ್ಟಿಯಾಗಿ ಪ್ರಾರಂಭವಾಗಿ ಮೆಲುದನಿಯಲ್ಲಿ ಮುಗಿಯುವ 'ಓ'... ಆಶ್ಚರ್ಯ! ಆ ಕ್ಷಣದಲ್ಲಿ ಪಟೋಲ್ ಬಾಬುವಿಗೆ ಆ ಏಕಾಕ್ಷರ ಉದ್ಗಾರವನ್ನು ಕುರಿತು ಒಂದು ಪ್ರೌಢ ಪ್ರಬಂಧ ಬರೆಯಬಹುದು ಎನ್ನಿಸಿತು. ಇಂಥದೊಂದು ಚಿನ್ನದ ಗಣಿಯ ಅರ್ಥಸಂಪತ್ತನ್ನು ಹೊಂದಿರುವ ಪದ ತನಗೆ ದೊರಕಿರುವಾಗ ತಾನು ಯಾಕೆ ನಿರಾಶನಾದದ್ದು? ನಿಜವಾದ ನಟ ಈ ಏಕಾಕ್ಷರದಿಂದಲೇ ಘನತೆ ಸಾಧಿಸಬಲ್ಲ.

'ಸೈಲೆನ್ಸ್'

ನಿರ್ದೇಶಕರ ಕೂಗು ಮತ್ತೆ ಕೇಳಿಬಂತು. ಹುಡುಗ ಜ್ಯೋತಿ ಗುಂಪುಗೂಡಿದ ಜನರನ್ನು ಚದುರಿಸುತ್ತಿದ್ದುದನ್ನು ಪಟೋಲ್ ಗಮನಿಸಿದರು. ಏನೋ ಕೇಳುವ ಸಲುವಾಗಿ ಅವನಲ್ಲಿಗೆ ಸರಸರ ನಡೆದರು.


''ನನ್ನ ಸರದಿ ಬರಬೇಕಾದರೆ ಎಷ್ಟು ಹೊತ್ತಾದೀತು?''

''ಅಜ್ಜಾ, ಯಾಕಿಷ್ಟು ಅವಸರ? ಈ ಉದ್ಯಮದಲ್ಲಿ ತಾಳ್ಮೆಯಿಂದ ಇರೋದನ್ನ ಕಲೀಬೇಕು. ನಿಮ್ಮನ್ನ ಕರೆಯೋದಕ್ಕೆ ಇನ್ನೊಂದು ಅರ್ಧಘಂಟೆ ಆದೀತು''

''ಚಿಂತೆಯಿಲ್ಲ... ಕಾಯ್ತೇನೆ. ರಸ್ತೆಯಾಚೆ ಇರೋ ಬೀದೀಲಿ ನಾನು ಇರ್ತೇನೆ.''

''ಓಕೆ... ತಪ್ಪಿಸಿಕೊಳ್ಳಬೇಡಿ ಮತ್ತೆ''

ಪಟೋಲ್ ಬಾಬು ತುದಿಗಾಲಮೇಲೆ ನಡೆಯುತ್ತಾ, ನಿಶ್ಶಬ್ದವಾಗಿದ್ದ ಚಿಕ್ಕ ಬೀದಿಗೆ ಹೋದರು. ಸ್ವಲ್ಪ ಬಿಡುವು ಸಿಕ್ಕಿದ್ದು ಒಳ್ಳೆಯದೇ ಆಯಿತು. ಈ ಜನಕ್ಕೆ ತಾಲೀಮಿನಲ್ಲಿ



ನಂಬಿಕೆಯಿಲ್ಲದಿದ್ದರೆ ಹೋಗಲಿ; ತಾನಂತೂ ತನ್ನ ಪಾತ್ರದ ತಾಲೀಮು ಮಾಡುವವನೇ ಎಂದು ಕೊಂಡರು. ಸುತ್ತ ಯಾರೂ ಇರಲಿಲ್ಲ. ಅಲ್ಲೆಲ್ಲಾ ಕಚೇರಿ ಕಟ್ಟಡಗಳು; ಹಾಗಾಗಿ ಜನವಸತಿ ಕಡಿಮೆ. ಅಂಗಡಿಯಿಟ್ಟವರು ಕೆಲವರು ವಾಸವಾಗಿದ್ದರೂ, ಈ ದಿನ ಸಿನಿಮಾ ಷೂಟಿಂಗ್ ನೋಡಲು ಹೋಗಿದ್ದಾರೆ.

ಗಂಟಲು ಸರಿಮಾಡಿಕೊಂಡು ಪಟೋಲ್ ಬಾಬು, 'ಓ' ಎಂಬ ಏಕಾಕ್ಷರದ ಉದ್ಗಾರವನ್ನು ಬೇರೆ ಬೇರೆ ರೀತಿಯಲ್ಲಿ ಹೇಳಲು ಪ್ರಾರಂಭಿಸಿದರು. ಜೊತೆಗೆ, ಢಿಕ್ಕಿ ಹೊಡೆದಾಗ ತಮ್ಮ ಶಾರೀರಿಕ ಪ್ರತಿಕ್ರಿಯೆ ಹೇಗಿರಬೇಕೆಂಬು ದನ್ನೂ ಅಭ್ಯಾಸ ಮಾಡತೊಡಗಿದರು. ಹೇಗೆ ನೋವಿನಿಂದ ಮುಖ ಕಿವುಚಿಕೊಳ್ಳಬೇಕು, ಕೈಗಳನ್ನು ಹೇಗೆ ಚಾಚಬೇಕು, ನೋವು ಮತ್ತು ಆಶ್ಚರ್ಯದಿಂದ ತಮ್ಮ ದೇಹ ಹೇಗೆ ಬಾಗ ಬೇಕು-ಇತ್ಯಾದಿ ಎಲ್ಲವನ್ನೂ ಒಂದು ಕಿಟಕಿಯ ದೊಡ್ಡಗಾಜಿನ ಬಾಗಿಲ ಮುಂದೆ ನಟಿಸಿ, ಗಟ್ಟಿ ಮಾಡಿಕೊಂಡರು.

ಸರಿಯಾಗಿ ಅರ್ಧ ಘಂಟೆಯಾಗುವಷ್ಟರಲ್ಲಿ ಪಟೋಲ್ ಬಾಬುವಿಗೆ ಕರೆ ಬಂತು. ಇಷ್ಟರಲ್ಲಿ ಅವರಿಗೆ ತಮ್ಮ ಪಾತ್ರದ ಬಗೆಗಿನ ತಿರಸ್ಕಾರ ಪೂರ್ಣವಾಗಿ ಮಾಯವಾಗಿತ್ತು. ಈಗ ಅವರಲ್ಲಿದ್ದುದು ಒಂದು ತೀವ್ರ ನಿರೀಕ್ಷೆ ಮತ್ತು ಅದುಮಿ ಹಿಡಿಯಲಾದ ಉದ್ವೇಗ. ಇಪ್ಪತ್ತು ವರ್ಷಗಳ ಹಿಂದೆ ನಾಟಕ ರಂಗದ ಮೇಲೆ ಹೆಜ್ಜೆಯಿಡುವ ಮುಂಚೆ ಇರುತ್ತಿದ್ದ ಭಾವ ಈಗ ಅವರಲ್ಲಿ ತುಂಬಿತ್ತು.

ನಿರ್ದೇಶಕ ಬರೇನ್ ಮಲ್ಲಿಕ್ ಪಟೋಲ್ ಬಾಬುವನ್ನು, "ನೀವು ಏನು ಮಾಡ್ಬೇಕು ಅನ್ನೋದು ಗೊತ್ತಿದೆ ತಾನೇ?" ಎಂದು ಕೇಳಿದರು.

"ಓಹೋ, ಗೊತ್ತು."

"ಒಳ್ಳೇದು. ನಾನು ಮೊದಲು 'Start Sound' ಅಂತೇವೆ. ಶಬ್ದಗ್ರಾಹಕ 'Running' ಅಂತಾನೆ. ಇದು ಕ್ಯಾಮರಾ ಚಾಲನೆ ಪ್ರಾರಂಭ ಆಗೋ ಸೂಚನೆ. ಆ ಕೂಡಲೇ ನಾನು 'Action' ಅಂತೇನೆ. ಅದೇ ನಿಮ್ಮ ಸೂಚನೆ. ನೀವು ಆ ಕಂಬದಿಂದ ನಡಕೊಂಡು ಬಂದು, ಕಾರಿನಿಂದ ಇಳಿದು ಆಫೀಸಿನತ್ತ ಬರ್ತಿರೋ ಹೀರೋಗೆ ಎದುರಾಗಬೇಕು... ಸರಿಯಾಗಿ ಲೆಕ್ಕ ಹಾಕಿ ಹೆಜ್ಜೆಯಿಡಿ... ಈ ಜಾಗದಲ್ಲಿಯೇ ಢಿಕ್ಕಿ ಹೊಡೀಬೇಕು... ಹೀರೋ ನಿಮ್ಮನ್ನು ಲೆಕ್ಕಕ್ಕೆ ತಗೊಳ್ಳದೇ ಆಫೀಸಿಗೆ ನುಗ್ತಾನೆ. ನೀವು ನಿಮಗಾದ ನೋವನ್ನು 'ಓ' ಅನ್ನೋದರಲ್ಲಿ ಪ್ರಕಟಿಸಿ, ಕೆಲವು ಸೆಕೆಂಡ್ ಸುಮ್ನೇ ನಿಂತು ಕೊಂಡು, ಮತ್ತೆ ನಡ್ಕೊಂಡು ಹೋಗ್ಬೇಕು... ಗೊತ್ತಾಯ್ತಾ?"

ಒಂದು ಸಾರಿ ರಿಹರ್ಸಲ್ ಮಾಡಿದರೆ ಒಳ್ಳೆಯ ದೆಂದು ಪಟೋಲ್ ಬಾಬು ಸೂಚಿಸಿದಾಗ, ಬರೇನ್ ಮಲ್ಲಿಕ್ ಅಸಹನೆಯಿಂದ ತಲೆಯಾಡಿಸಿದರು.



"ಆಕಾಶದಲ್ಲಿ ಒಂದು ದೊಡ್ಡ ಮೋಡ ಸೂರ್ಯನ ಕಡೆ ಬರ್ತಾ ಇದೆ. ಈ ದೃಶ್ಯವನ್ನು ಸೂರ್ಯನ ಬೆಳಕಿನಲ್ಲೇ ತೆಗೀಬೇಕು."

"ನಂದೊಂದು ಪ್ರಶ್ನೆ...", ಪಟೋಲ್ ಬಾಬು ಹೇಳಿದರು.

"ಕೇಳಿ."

ಈ ಹಿಂದೆ ರಿಹರ್ಸಲ್ ಮಾಡುವಾಗ ಅವರಿಗೊಂದು ಯೋಚನೆ ಬಂದಿತ್ತು. ಅದನ್ನೇ ಹೇಳಿದರು, "ನನಗನ್ನಿಸುತ್ತೆ... ನನ್ನ ಕೈನಲ್ಲಿ ಒಂದು ಪೇಪರ್ ಇದ್ದರೆ ಚೆನ್ನ ಅಂತ. ನನ್ನ ಕಣ್ಣು ಪೇಪರ್ ಮೇಲೆ ಇದ್ದಾಗ ಢಿಕ್ಕಿ ಹೊಡೆದರೆ ಬಹುಶಃ..."

ಬರೇನ್ ಮಲ್ಲಿಕ್ ಅವರ ಮಾತನ್ನು ಅರ್ಧಕ್ಕೇ ತಡೆದು, ಗುಂಪಿನಲ್ಲಿದ್ದ ಒಬ್ಬಾತನನ್ನು ಕುರಿತು, "ನಿಮ್ಮಲ್ಲಿರೋ ಪೇಪರನ್ನು ಒಂದು ಕ್ಷಣ ಇವ್ರಿಗೆ ಕೊಡ್ತೀರಾ, ಈ ಷಾಟ್‌ನ ಮಟ್ಟಿಗೆ? ... ಥ್ಯಾಂಕ್ಸ್... ಸರಿ, ಈಗ ನೀವು ಕಂಬದ ಹತ್ತಿರಕ್ಕೆ ಹೋಗಿ... ಚಂಚಲ್, ಸಿದ್ಧವಾಗಿದ್ದೀರಾ?"

"ಎಸ್ ಸರ್."

"ಗುಡ್. ಸೈಲೆನ್ಸ್."

ಬರೇನ್ ಮಲಿಕ್ ಕೈಯೆತ್ತಿದವರು ಮರುಕ್ಷಣದಲ್ಲಿಯೇ ಕೆಳಗಿಳಿಸಿದರು. "ಒನ್ ಮಿನಿಟ್... ಕೆಸ್ಟೋ, ಪಾದಚಾರಿಗೆ ಒಂದು ಮೀಸೆ ಇದ್ದರೆ ಚೆನ್ನಾಗಿರುತ್ತೇಂತ ನನಗನ್ನಿಸುತ್ತೆ."

"ಎಂಥ ಮೀಸೆ ಸರ್? ನೀರು ನಾಯಿ ಮೀಸೇನಾ? ರೊನಾಲ್ಡ್ ಕೋಲ್‌ಮನ್ ಮೀಸೇನಾ? ಅಥ್ವಾ ಪತಂಗದ ಮೀಸೇನಾ? ಎಲ್ಲ ರೆಡಿಯಾಗಿದೆ."

"ಪತಂಗ ಮೀಸೆ. ಸಟಾಸಟ್ ಹಚ್ಚಬೇಕು."

ಮುದುಕ ಪ್ರಸಾಧನಕಾರ ತನ್ನ ಪೆಟ್ಟಿಗೆಯಿಂದ ಬೂದು ಬಣ್ಣದ ಚಿಕ್ಕ ಮೀಸೆಯೊಂದನ್ನು ತೆಗೆದು ಪಟೋಲ್ ಬಾಬುವಿನ ಮೂಗಿನ ಕೆಳಗೆ ಸ್ಪಿರಿಟ್‌ಗಮ್ಮಿನಿಂದ ಅಂಟಿಸಿದ.

ಪಟೋಲ್ ಬಾಬು ಕೇಳಿದರು, "ಢಿಕ್ಕಿ ಹೊಡೆದಾಗ ಇದು ಕಳಚಿಕೊಳ್ಳಲ್ಲ ತಾನೇ?"

ಪ್ರಸಾಧನಕಾರ ಮುಗುಳ್ನಕ್ಕು ಹೇಳಿದ, "ಢಿಕ್ಕಿ ಇರಲಿ, ನೀವು ದಾರಾಸಿಂಗನ ಜೊತೆ ಕುಸ್ತಿ ಮಾಡಿದ್ರೂ, ಅದು ಇದ್ದಲ್ಲೇ ಇರತ್ತೆ"

ಪಟೋಲ್ ಬಾಬು ಆತನ ಕೈಯಲ್ಲಿದ್ದ ಕನ್ನಡಿಯಲ್ಲಿ ತಮ್ಮ ಮುಖ ನೋಡಿಕೊಂಡರು. ನಿಜ, ಮೀಸೆ ತನ್ನ ಮುಖಕ್ಕೆ ಚೆನ್ನಾಗಿ ಒಪ್ಪುತ್ತಿದೆ. ಮನಸ್ಸಿನಲ್ಲಿಯೇ ನಿರ್ದೇಶಕರ ಸೂಕ್ಷ್ಮಗ್ರಹಣ ಶಕ್ತಿಯನ್ನು ಮೆಚ್ಚಿಕೊಂಡರು.

'ಸೈಲೆನ್ಸ್, ಸೈಲೆನ್ಸ್'

ಈ ಮೀಸೆಯ ಪ್ರಸಂಗ ಸುತ್ತ ನಿಂತಿದ್ದ ಜನ ಏನೇನೋ ಮಾತಾಡಿಕೊಳ್ಳಲು ಅವಕಾಶಮಾಡಿ ಕೊಟ್ಟಿತು. ಬರೇನ್ ಮಲ್ಲಿಕ್ ಗರ್ಜಿಸಿದಾಗ ಜನ ತೆಪ್ಪಗಾದರು. ಬಹಳಷ್ಟು ಮಂದಿ ತನ್ನತ್ತಲೇ ನೋಡುತ್ತಿದ್ದಾರೆಂಬುದನ್ನು ಪಟೋಲ್ ಗಮನಿಸಿದರು.

'ಸ್ಟಾರ್ಟ್ ಸೌಂಡ್'

ಪಟೋಲ್ ಬಾಬು ಗಂಟಲು ಸರಿಮಾಡಿಕೊಂಡರು. ಒಂದು, ಎರಡು, ಮೂರು, ನಾಲ್ಕು, ಐದು... ಸರಿಯಾಗಿ ಐದು ಹೆಜ್ಜೆಯಿಟ್ಟರೆ ಢಿಕ್ಕಿ ಹೊಡೆಯಬೇಕಾಗಿದ್ದ ಜಾಗವನ್ನು ಅವರು ತಲುಪುತ್ತಿದ್ದರು. ಚಂಚಲ್‌ಕುಮಾರ್ ನಾಲ್ಕು ಹೆಜ್ಜೆ ನಡೆಯಬೇಕಾಗಿತ್ತು. ಆದ್ದರಿಂದ ಇಬ್ಬರೂ ಒಟ್ಟಿಗೇ ನಡೆಯುವುದನ್ನು ಪ್ರಾರಂಭಿಸಿದರೆ, ಪಟೋಲ್ ಬಾಬು ಸ್ವಲ್ಪ ಚುರುಕಾಗಿ ನಡೆಯಬೇಕಾಗಿತ್ತು, ಇಲ್ಲದಿದ್ದರೆ...

'ರನ್ನಿಂಗ್'

ಪಟೋಲ್ ಬಾಬು ತೆರೆದ ಪೇಪರನ್ನು ಕೈಯಲ್ಲಿ ಹಿಡಿದುಕೊಂಡರು. 'ಓ' ಎನ್ನುವಾಗ ಅದರಲ್ಲಿ ಶೇಕಡಾ 60 ಭಾಗ ಕೋಪ, 40 ಭಾಗ ಆಶ್ಚರ್ಯ ಇರಬೇಕಾಗಿತ್ತು.

'ಆ್ಯಕ್ಷನ್'

ಕ್ಲಾಪ್, ಕ್ಲಾಪ್, ಕ್ಲಾಪ್, ಕ್ಲಾಪ್, ಕ್ಲಾಪ್- ಧಡಕ್!

ಪಟೋಲ್ ಬಾಬುವಿನ ಕಣ್ಣಿಗೆ ನಕ್ಷತ್ರ ಕಾಣಿಸಿದುವು. ಹೀರೋನ ತಲೆ ಅವರ ಹಣೆಗೆ

ಥೀ ಕೊಟ್ಟಿತ್ತು. ತೀವ್ರ ನೋವಿನಿಂದ ಕೆಲವು ಕ್ಷಣ ಅವರಿಗೆ ಮೂರ್ಛೆ ಬಂದಂತಾಗಿತ್ತು. ಆದರೆ ಮರುಕ್ಷಣದಲ್ಲಿಯೇ ಅದ್ಭುತ ಇಚ್ಛಾಶಕ್ತಿಯಿಂದ ತನ್ನನ್ನು ಸಂಭಾಳಿಸಿಕೊಂಡು, ಶೇ 50 ರಷ್ಟು ನೋವು, 25ರಷ್ಟು ಆಶ್ಚರ್ಯ, 25ರಷ್ಟು ಕೋಪ-ಈ ಪ್ರಮಾಣದಲ್ಲಿ ಕಾಣಿಸಿಕೊಳ್ಳುವಂತೆ 'ಓ' ಎಂದು ಉದ್ಗರಿಸಿ, ಸ್ವಲ್ಪ ಹೊತ್ತು ಬಿಟ್ಟು ಮತ್ತೆ ನಡೆಯಲು ಶುರುಮಾಡಿದರು.

'ಕಟ್'

''ಎಲ್ಲಾ ಸರಿಯಾಗಿತ್ತಾ?'', ಪಟೋಲ್ ಬಾಬು ಬರೇನ್ ಮಲ್ಲಿಕ್‌ರನ್ನು ಕಾತುರದಿಂದ ಕೇಳಿದರು.

''ತುಂಬಾ ಚೆನ್ನಾಗಿತ್ತು. ನಿಜವಾಗಿಯೂ ಪಕ್ಕಾ ನಟ ಕಣ್ರೀ ನೀವು!... ಲೋ, ಶಶಾಂಕ, ಕಪ್ಪು ಕನ್ನಡಕ ಹಾಕಿಕೊಂಡು ಸ್ವಲ್ಪ ಆಕಾಶದ ಕಡೆ ನೋಡ್ತೀಯಾ?''

ಜ್ಯೋತಿ ಪಟೋಲ್ ಬಾಬುವಿನ ಹತ್ತಿರ ಬಂದು, ''ಆಜ್ಜನಿಗೆ ಹೆಚ್ಚೇನೂ ಏಟು ಆಗಿಲ್ಲ ತಾನೆ?'' ಎಂದು ಕೇಳಿದ.

''ಅಬ್ಬಾ! ನಿಮ್ಮ ಲೆಕ್ಕಾಚಾರ ಭಾರೀ ಚೆನ್ನಾಗಿತ್ತು. ಏಟಿನಿಂದ ಹೆಚ್ಚುಕಡಿಮೆ ಮೂರ್ಛೆ ಹೋಗಿದ್ದೆ'', ಚಂಚಲ ಕುಮಾರ ತಲೆ ತಿಕ್ಕಿ ಕೊಳ್ಳುತ್ತಾ ಹೇಳಿದ.

ಗುಂಪನ್ನು ತಳ್ಳಿಕೊಂಡು ನರೇಶ್ ದತ್ತ ಪಟೋಲ್ ಬಾಬುವಿನ ಹತ್ತಿರ ಬಂದು ಹೇಳಿದ, ''ನೀವು ಹಿಂದೆ ಇದ್ದ ಜಾಗಕ್ಕೆ ದಯವಿಟ್ಟು ಹೋಗಿ. ಸ್ವಲ್ಪ ಹೊತ್ತಿನಲ್ಲೇ ನಾನು ನಿಮ್ಮನ್ನ ಕಾಣ್ತೀನಿ.''


ಪಟೋಲ್ ಬಾಬು ಮತ್ತೆ ಬೀಡಾ ಅಂಗಡಿಯತ್ತ ಹೋದರು. ಸೂರ್ಯನ ಮೇಲೆ ಮೋಡ ಕವಿದಿದ್ದುದರಿಂದ ಸೆಖೆ ಕಡಿಮೆ ಯಾಗಿತ್ತು. ಆದರೂ ಪಟೋಲ್ ಬಾಬು ತಮ್ಮ ಜಾಕೀಟು ಕಳಚಿ, ಒಂದು ಬಿಡುಗಡೆಯ ನಿಟ್ಟುಸಿರು ಬಿಟ್ಟರು. ಸಂಪೂರ್ಣ ತೃಪ್ತಿಯ ಭಾವ ಅವರನ್ನು ಆವರಿಸಿತ್ತು. ತಮ್ಮ ಕೆಲಸವನ್ನು ಅವರು ಅಚ್ಚುಕಟ್ಟಾಗಿ ಮಾಡಿದ್ದರು. ಇಷ್ಟು ವರ್ಷಗಳ ಬಾಳ್ವೆಯ ಹೋರಾಟ ಅವರ ಸಂವೇದನಾ ಶಕ್ತಿಯನ್ನು ಮೊಂಡು ಮಾಡಿರಲಿಲ್ಲ. ಗಗನ್ ಪಕ್ರಾಶಿ ಇದ್ದಿದ್ದರೆ ಇವತ್ತಿನ ತಮ್ಮ ಅಭಿನಯ ನೋಡಿ ಖುಷಿಪಡ್ತಾ ಇದ್ದರು. ಆದರೆ ಈ ಒಂದು ಷಾಟ್‌ಗಾಗಿ ತಾವು ಪಟ್ಟ ಶ್ರಮ, ವೆಚ್ಚ ಮಾಡಿದ ಕಲ್ಪನಾ ಶಕ್ತಿ... ಈ ಜನಕ್ಕೆ ಅದನ್ನೆಲ್ಲಾ ಮೆಚ್ಚುವಷ್ಟು ಶಕ್ತಿಯಿದೆಯೆ? ಪಟೋಲ್ ಬಾಬುವಿಗೆ ಈ ಬಗ್ಗೆ ಸಂದೇಹವಿದ್ದೇ ಇದೆ. ಸುಮ್ಮನೆ ಕೆಲವರನ್ನು ಹಿಡಿದುಕೊಂಡು, ಹಾಗೆ ಹೀಗೆ ಸುತ್ತಾಡಿಸಿ, ಅವರ ಶ್ರಮಕ್ಕೆ ಸ್ವಲ್ಪ ಹಣ ಕೊಟ್ಟು, ಎಲ್ಲವನ್ನೂ ಮರೆತು ಬಿಡುತ್ತಾರೆ. ಹಣ ಕೊಡ್ತಾರೆ... ಆದರೆ ಎಷ್ಟು? ಹತ್ತು? ಹದಿನೈದು? ಇಪ್ಪತ್ತು ರೂಪಾಯಿ? ಪಟೋಲ್ ಬಾಬುವಿಗೆ ಹಣದ ಅಗತ್ಯ ತೀವ್ರವಾಗಿತ್ತು. ನಿಜ. ಆದರೆ ಇಷ್ಟು ಚಿಕ್ಕ ಕೆಲಸವನ್ನು ಪರಿಪೂರ್ಣವಾಗಿ ಅರ್ಪಣಾ ಭಾವದಿಂದ ನಿರ್ವಹಿಸಿದಾಗ ಉಂಟಾದ ಪೂರ್ಣ ತೃಪ್ತಿಯ ಮುಂದೆ ಇಪ್ಪತ್ತು ರೂಪಾಯಿ ಎಲ್ಲಿ?

ಹತ್ತೋ ಹದಿನೈದೋ ನಿಮಿಷಗಳ ನಂತರ ನರೇಶ್ ದತ್ತ ಬೀಡಾ ಅಂಗಡಿಯತ್ತ ಹೋಗಿ, ಪಟೋಲ್ ಬಾಬುವಿಗಾಗಿ ಹುಡುಕಾಡಿದ. ಆದರೆ ಅವರು ಅಲ್ಲಿರಲಿಲ್ಲ. ''ಎಲಾ, ಆ ಮನುಷ್ಯನಿಗೆ ದುಡ್ಡೇ ಸಂದಿರಲಿಲ್ಲ. ಎಂಥ ವಿಚಿತ್ರ ಪ್ರಾಣಿ!'' ಎಂದುಕೊಂಡ ನರೇಶ್.

''ಸೂರ್ಯ ಮೋಡದಿಂದೀಚೆಗೆ ಬಂದಿದ್ದಾನೆ'', ಬರೇನ್ ಮಲ್ಲಿಕ್ ಕೂಗುತ್ತಾ ಇದ್ದರು, ''ಸೈಲೆನ್ಸ್, ಸೈಲೆನ್ಸ್! ನರೇಶ್, ಬೇಗ ಬಾರಯ್ಯಾ, ಈ ಜನಗಳನ್ನು ದಾರಿಯಿಂದ ಆ ಕಡೆ ಓಡಿಸು!''

ಗಾಳಿ ಸ್ರುಟ್

'ಶತಮಾನದ ಕಾವ್ಯ'



ಕಾಂತಾವರ ಕನ್ನಡ ಸಂಘ' ತನ್ನ ಬೆಳ್ಳಿಹಬ್ಬದ ಆಚರಣೆಯ ಅಂಗವಾಗಿ 'ದಕ್ಷಿಣ ಕನ್ನಡದ ಶತಮಾನದ ಕಾವ್ಯ'-ಸಂಗ್ರಹವನ್ನು ಪ್ರಕಟಿಸಿದೆ. 116 ಕವಿಗಳನ್ನೊಳಗೊಂಡಿರುವ ಈ ಪ್ರಾತಿನಿಧಿಕ ಸಂಕಲನದ ಹಿಂದೆ ನಾ. ಮೊಗಸಾಲೆ, ಬಿ. ಜನಾರ್ದನ ಭಟ್ ಮತ್ತು ಶ್ರೀನಿವಾಸ ಜೋಕಟ್ಟೆಯವರ ಶ್ರಮ ಇದೆ. ಇದನ್ನು ಸಂಕಲಿಸಿ, ಕಾವ್ಯದ ಬಗ್ಗೆ ತುಂಬಾ ಸೂಕ್ಷ್ಮವಾದ, ಸುದೀರ್ಘ, 150 ಪುಟದ ಪೀಠಿಕೆ ಬರೆದಿರುವ ಬಿ. ಜನಾರ್ದನ ಭಟ್‌ರ ಅಭಿರುಚಿ ಮತ್ತು ಸಂವೇದನೆ ಈ ಸಂಗ್ರಹಕ್ಕೊಂದು ಅಪರೂಪದ ಚೈತನ್ಯವನ್ನು ತಂದಿದೆ. ಆ್ಯಂಥಾಲಜಿಯ ಪ್ರತಿ ಕವಿಯ ವಿಶಿಷ್ಟತೆಯನ್ನು ಗುರುತಿಸುತ್ತಲೇ, ಕಾವ್ಯ ಲಕ್ಷಣಗಳ ವಿಕಾಸದ ಬಗ್ಗೆ ನಿಖರತೆ ಮತ್ತು ಸ್ಪಷ್ಟತೆಯಿಂದ ಜನಾರ್ದನ್ ಬರೆದಿದ್ದಾರೆ. ಜನಾರ್ದನ್‌ರಂಥ ತಾಜಾ ನೋಟದ ಸಾಹಿತ್ಯಕ ವ್ಯಾಖ್ಯಾನಕಾರರು, ಹೆಚ್ಚಿಗೆ ಬರೆಯಬೇಕು. ಬರೀ ವಿಚಾರ ಸಂಕಿರಣಗಳಿಗಾಗಿ ಹೊಸೆದ ಶುಷ್ಕ ದುರ್ಗಮ ಪ್ರಬಂಧ, ಕಾಟಾಚಾರದ ಪತ್ರಿಕಾ ರಿವ್ಯೂಗಳಿಂದ ಜಡಗಟ್ಟಿರುವ ಕನ್ನಡ ಕಥನೇತರ ಬರವಣಿಗೆಗೆ ಹೊಸ ಗಾಳಿ, ಬೆಳಕು ಹಾಯಿಸಬೇಕು.

ಹೊಸ ಕವಿಗಳು, ಹೊಸ ಕತೆಗಾರರಂತೆ, ಹೊಸ ವಿಮರ್ಶಕರು ಯಾಕೆ ಸಹಜವಾಗಿ ಉದಯಿಸುತ್ತಿಲ್ಲ? ಹೊಸ ವಿಮರ್ಶಕರನ್ನು ರೂಪಿಸುವ ಹೊಣೆ ಹಿರಿಯ ವಿಮರ್ಶಕರ ಮೇಲಿದೆಯೆ? ಅಥವಾ ನಮ್ಮ ಸ್ನಾತಕೋತ್ತರ ಪಠ್ಯಕ್ರಮಗಳಲ್ಲಿದೆಯೆ? ಅಥವಾ ಸಾಹಿತ್ಯದ ಕುರಿತಾದ ವ್ಯಾಮೋಹದ ವಾತಾವರಣದಲ್ಲಿದೆಯೇ?



ವಚನ 'ವೃಂದಾ'ವನ

ವೃಂದಗಾನದ ಅನುಭೂತಿಯೇ ಬೇರೆ. ಖಾಸಗೀ ಅಳಲನ್ನು ಅಳಿಸಿ, ವಿಶಾಲ ಮಾನವೀಯ ರಾಗ ಲಯದಲ್ಲಿ ನಮ್ಮನ್ನು ಒಂದಾಗಿಸುವ ಈ 'ಕೋರಸ್' ಗಾನ, ಆರ್ತತೆ, ಆವೇಶ ಮತ್ತು ಅನುರಕ್ತಿ ಎಲ್ಲವನ್ನೂ ಆಳವಾಗಿ ಉಕ್ಕಿಸುತ್ತದೆ. ಶಾಲೆಯ ಪ್ರಾರ್ಥನೆ, ರಾಷ್ಟ್ರಗೀತೆ, ಸೈನಿಕರ ಮಾರ್ಚಿಂಗ್ ಗಾನ-ಇವೆಲ್ಲವುಗಳ ವಿಚಿತ್ರ ಶಕ್ತಿ ಈ 'ವೃಂದಗಾನ'ದಲ್ಲಿದೆ. ಬಸವಣ್ಣನ ಐವತ್ತು

'ಸ್ಫಟಿಕದ ಶಲಾಕೆ'ಯಂಥ ವಚನಗಳನ್ನು, ಈಗ ಹತ್ತು 'ವೃಂದಗೀತೆ'ಗಳನ್ನಾಗಿ ಪೋಣಿಸಿರುವ ಸಿ. ಅಶ್ವಥ್, ತಮ್ಮ ಪ್ರಯೋಗಶೀಲತೆಯ ಸಾರ್ಥಕ ನೆಲೆಗೆ ತಲುಪಿದ್ದಾರೆ. ವ್ಯಕ್ತಿ ಅಳಿಸಿ ವ್ಯಕ್ತವೊಂದೇ ಸ್ಥಾಯಿಯಾಗಿ ಅನುರಣನಗೊಳ್ಳುವಂಥ ಇಲ್ಲಿಯ ಪ್ರತಿ ಹಾಡು, ನಾಲ್ಕೈದು ವಚನಗಳನ್ನು ವಿಶಿಷ್ಟ ರಾಗದಲ್ಲಿ ಒಳಗೊಂಡಿದೆ. ರಾಜಸ್ಥಾನೀ, ಪಹಾಡಿ, ಕಂಸಾಳೆ, ಗುಜರಾತಿ ಹೀಗೆ ದೇಶದ ವಿಭಿನ್ನ ಜನಪದದ ಲಯಗಳನ್ನು ಬೇರೆ ಬೇರೆ ಹಾಡುಗಳಿಗೆ ಬಳಸಲಾಗಿದೆ. ಎಂಥವನನ್ನೂ ಆರ್ತ ಆವೇಶದಲ್ಲಿ ಕುಣಿಸಿ, ಮಣಿಸಿ, ವಿನಮ್ರನಾಗಿಸುವಂತಿರುವ, ಒಂದು ಗಂಟೆಯ ಕಾಲಾವಧಿಯ ಈ ವಚನ 'ವೃಂದಾ'ವನ, ಬಲುಬೇಗ ಕ್ಯಾಸೆಟ್ ಅಥವಾ ಸಿಡಿ ರೂಪದಲ್ಲಿ ಕನ್ನಡಿಗರಿಗೆ ಸಿಗುವಂತಾಗಬೇಕು.

ನೆರೂದ ಮತ್ತು ರೂಪಕ

ಚಿಲಿ ಕವಿ ಪಾಬ್ಲೊ ನೆರೂದ, ತನ್ನ ದೇಶದಿಂದ ಬಹಿಷ್ಕರಿಸಲ್ಪಟ್ಟು ಸ್ಪೇನ್‌ನಲ್ಲಿ ಇದ್ದಾಗ, ಆತ ಅಜ್ಞಾತನಾಗಿ ವಾಸಿಸುತ್ತಿದ್ದ ಪುಟ್ಟ ಹಳ್ಳಿಯ ಅಂಚೆ ಕಚೇರಿಗೊಂದು ಸಮಸ್ಯೆ ಬಂತು. ಹಳ್ಳಿಯಿಂದ ದೂರ ಒಂದು ಸಣ್ಣ ನಡುಗಡ್ಡೆಯಲ್ಲಿ ಇದ್ದ ನೆರೂದನ ಹೆಸರಿಗೆ ಬರುವ ಭರಪೂರ ಕಾಗದಗಳನ್ನು ಅವನಿಗೆ ತಲುಪಿಸುವುದೇ ಒಂದು ತಲೆಬೇನೆಯಾಯಿತು. ಸ್ವಂತ ಸೈಕಲ್ ಹೊಂದಿರುವ ವ್ಯಕ್ತಿಯೊಬ್ಬನನ್ನು ಇದಕ್ಕೆಂದೇ ನೇಮಿಸಲಾಯಿತು. ಆ ಅಂಚೆಪೇದೆ ಪ್ರತಿದಿನ ಎಷ್ಟೋ ಹೊತ್ತು ಸೈಕಲ್ ತುಳಿದು, ಹೊಳೆ ದಾಟಿ, ನೆರೂದನಿಗೆ ಅವನ ಅಭಿಮಾನಿಗಳ ಪತ್ರಗಳನ್ನು ತಲುಪಿಸುತ್ತಿದ್ದ. ಕವಿಯೊಬ್ಬನನ್ನು ಪ್ರಥಮ ಬಾರಿಗೆ ನೋಡಿದ ಆತ ಕೌತುಕದಿಂದಲೇ ಕವಿಗೆ ಸಮೀಪನಾದ.




ತನ್ನನ್ನು ಅಕ್ಕರೆಯಿಂದ ಬರಮಾಡಿಕೊಳ್ಳುತ್ತಿದ್ದ ನೆರೂದನನ್ನು ಒಮ್ಮೆ ಭಯ ಭಕ್ತಿಯಿಂದ ಆತ, ''ರೂಪಕ ಅಂತಾರಲ್ಲ ಸಾರ್, ಹಾಗಂದರೇನು?'' ಎಂದ. ಅದಕ್ಕೆ ನೆರೂದ, ''ನಾನು ಆಕಾಶ ಅಳುತ್ತದೆ ಎಂದರೆ ನಿನಗೇನನಿಸುತ್ತದೆ?'' ಎಂದ. ಅಂಚೆಯವ, ''ಮಳೆ'' ಎಂದ. ''ಸರಿ, ಇದೇ ರೀತಿ ನಮ್ಮೊಳಗಿನ ತಳಮಳಕ್ಕೆ ಈ ಸಮುದ್ರ ರೂಪಕವಾಗಬಹುದು. ನಿನ್ನ ಒಂಟಿತನಕ್ಕೆ ಆ ಮರ ರೂಪಕವಾಗಬಹುದು'' ಎಂದು ನೆರೂದ ವಿವರಿಸಿದ. ಎಲ್ಲವನ್ನೂ ತಿಳಿಯುತ್ತ ಕುಳಿತ ಅಂಚೆಪೇದೆ ಕೊನೆಗೆ ಅಳುಕಿನಿಂದಲೇ ಕೇಳಿದ, ''ಹಾಗಾದರೆ.. ನೀವು, ನಾನು, ಈ ಜಗತ್ತು ಇದೆಲ್ಲ ಯಾವುದಕ್ಕೆ ರೂಪಕ?'' ನೆರೂದ ವಿಸ್ಮಯದಿಂದ ಅವನನ್ನೇ ನೋಡುತ್ತ ಕೂತ.


ನೆರೂದ ಮತ್ತು ಈ ಅಂಚೆ ಪೇದೆಯ ನಂಟನ್ನು ಚಿತ್ರಿಸುವ 'ಎಲ್‌ಪೋಸ್ಟಿನೋ' ಚಿತ್ರಕ್ಕೆ ಕಳೆದ ಬಾರಿಯ ಓಸ್ಕರ್ ಪುರಸ್ಕಾರ ಬಂತು. ಈ ಚಿತ್ರ ಆಗಾಗ 'ಸ್ಟಾರ್‌ಮೂವೀಸ್' ಚಾನಲ್‌ನಲ್ಲಿ ಬರುತ್ತದೆ. ತಪ್ಪಿಸಿಕೊಳ್ಳಬೇಡಿ.


ಮೆಚ್ಚುಗೆ ಪಡೆದ ಚಿತ್ರಗಳು




ನಮ್ಮ ವಿಶೇಷಾಂಕದ ವ್ಯಂಗ್ಯಚಿತ್ರ ಸ್ಪರ್ಧೆಯಲ್ಲಿ ಮೆಚ್ಚುಗೆ ಗಳಿಸಿದ ಚಿತ್ರಗಳಿವು. ಈ ಪುಟಕ್ಕೆ ಇನ್ನು ಮುಂದೆಯೂ ವ್ಯಂಗ್ಯಚಿತ್ರಗಾರರು ತಮ್ಮ ಚಿತ್ರಗಳನ್ನು ಕಳುಹಿಸಬಹುದು.









ತಮ್ಮಣ್ಣ ಬೀಗಾರ




ವಿವೇಕ ಸಿದ್ದಾಪುರ




ವೆಂಕಟ ಭಟ್



ಶರದ ಕುಲಕರ್ಣಿ







‘ಪುಟ್ಟಂಜಿ’ಯ ಉಮಾಶ್ರೀ, ‘ತರ್ಕ’ದ ದೇವರಾಜ್, ‘ಮಾಲ್ಗುಡಿ ಡೇಸ್’ನ ವಿವಿಧ ಹಳ್ಳಿಗರು... ನಮ್ಮ ಮನದಲ್ಲಿ ನೆಲೆ ನಿಂತಿರುವ ಇಂಥ ಅಚ್ಚಳಿಯದ ಮೋರೆಗಳ ಹಿಂದೆ, ಆಯಾ ಮುಖಕ್ಕೆ ಆಯಾ ಸ್ವರೂಪ ಕೊಟ್ಟ ಮೇಕಪ್ ಕಲಾವಿದ ಬೆಂಗಳೂರು ನಾರಾಯಣಸ್ವಾಮಿಯವರ ಕೈವಾಡ ಇದೆ. ಕಳೆದ ಮೂರು ದಶಕಗಳಿಂದ ರಂಗಭೂಮಿ, ಟೆಲಿವಿಜನ್ ಮತ್ತು ಸಿನಿಮಾ ರಂಗಗಳಲ್ಲಿ ಪ್ರಸಾಧನ ಕಲಾವಿದನಾಗಿ ತೆರೆಮರೆಯಲ್ಲಿ ದುಡಿಯುತ್ತ ಬಂದಿರುವ, ‘ಬಹುರೂಪಿ ನಾಣಿ’ ಎಂದೇ ಪ್ರಸಿದ್ಧರಾಗಿರುವ ನಾರಾಯಣಸ್ವಾಮಿ, ತಮ್ಮ ಕಸುಬು, ಕಾರ್ಯ ವೈಖರಿಯ ಬಗ್ಗೆ ಇಲ್ಲಿ ನಿಮ್ಮೊಂದಿಗೆ ಮಾತಾಡಿದ್ದಾರೆ.

ತೆರೆಯ ಮೇಲೆ ಕಣ್ಣಿಟ್ಟು ಮುಖಕ್ಕೆ ಬಣ್ಣ ಬಳಿಯಬೇಕು

ಬಹುರೂಪಿ ನಾಣಿ



‘ಬೆಳ್ಳಿ ಕಸುಬು’

ಉಕ್ತಲೇಖ: ಜಯಂತ ಕಾಯ್ಕಿಣಿ

ಮೇಕಪ್ ಕಲಾವಿದನ ಕಸುಬುಗಾರಿಕೆಯ ವಿರೋಧಾಭಾಸ ವೆಂದರೆ-ಅದು ಕೆಟ್ಟದಾದಷ್ಟೂ ಎದ್ದು ಕಾಣುತ್ತದೆ ಮತ್ತು ಒಳ್ಳೆಯದಾದಷ್ಟು ಕಣ್ಣಿಗೆ ಕಾಣದಂತಾಗುತ್ತದೆ.

“ಮೇಕಪ್ ಅಂದರೆ ಮೋರೆಗೆ ಬಣ್ಣ ಬಳಿದು ಸ್ಟೇಜಿನ ಮೇಲೆ ಬಿಡೋದು ಎಂಬ ಪ್ರತೀತಿ ಇದೆ. ಇದು ತಪ್ಪು. ಮೇಕಪ್ ಬರೇ ಬಣ್ಣ ಬಳಿಯೋದಲ್ಲ. ಅದು ಎಷ್ಟೆಲ್ಲ ಕೆಲಸಗಳನ್ನು ಮಾಡುತ್ತದೆ.

- ಮೊಗದಲ್ಲಿಯ ಕುಂದುಕೊರತೆ, ಒರೆ ಕೋರೆಗಳನ್ನು ಅದು ಮರೆಮಾಚುತ್ತದೆ. ಎಷ್ಟೋ ನಟ ನಟಿಯರ ಮುಖದಲ್ಲಿ ಕಪ್ಪು ಕಲೆಗಳಿರುತ್ತವೆ, ಗುಳಿಗಳಿರುತ್ತವೆ. ಮೇಕಪ್ ಅದನ್ನೆಲ್ಲ ಮರೆಮಾಚುತ್ತದೆ. ಬೆಳಕು ಸರಿಸಮನಾಗಿ ಪ್ರತಿಫಲಿಸುವಂತೆ ಹೊರಮೈಯ textureನ್ನು ಸಮನಾಗಿಸುತ್ತದೆ.
- ಒಳ್ಳೆಯ ಲಕ್ಷಣಗಳನ್ನು highlight ಮಾಡುತ್ತದೆ. ಕೆಲವರ ಗಲ್ಲದ ಆಕಾರ, ಮೂಗಿನ ಆಕಾರ ವಿಶೇಷವಾಗಿರುತ್ತದೆ. ಅದನ್ನು ಮೇಕಪ್‌ನಿಂದ highlight ಮಾಡಬಹುದು.
- ಸಹಜತೆಯನ್ನು ಕಾಪಾಡೋದು, ಆದಷ್ಟು natural ಆಗಿಸೋದು.
- ಹೊಸ ಲಕ್ಷಣಗಳನ್ನು ಕೊಡೋದು. ಮಚ್ಚೆ, ಗಾಯದ ಗುರುತು, ವಿಲಕ್ಷಣವಾದ ಮೀಸೆ, ಗಡ್ಡ, ನೆರಿಗೆ... ಹೀಗೆ ವ್ಯಕ್ತಿಯಲ್ಲಿಲ್ಲದ ಚಿಹ್ನೆಗಳನ್ನು ಮುಖಕ್ಕೆ ಕೊಟ್ಟು, ಅದು ಮಾಸದಂತೆ ನೋಡಿಕೊಳ್ಳೋದು.
- ಹಂತಹಂತವಾಗಿ ‘ವಯಸ್ಸಾಗುವ’ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ತೋರಿಸ ುವುದು. ರಂಗಭೂಮಿಯಲ್ಲಾದರೆ ಇದನ್ನು ‘ಅನುಕ್ರಮ’ವಾಗಿಯೇ ಒಂದು ನಿಗದಿತ ಕಾಲಾವಧಿಯಲ್ಲಿ ಮಾಡಿಬಿಡಬಹುದು. ಆದರೆ ಸಿನಿಮಾದಲ್ಲಿ ಚಿತ್ರೀಕರಣ, ಕಥೆಯ ಅನುಕ್ರಮದಲ್ಲಿ ನಡೆಯದಿರೋದರಿಂದ, ಕಥೆಯ ಪಾತ್ರದ ಆಯಾ ದಿನದ ಸಂದರ್ಭವನ್ನು ಒಟ್ಟಾರೆ ಚಿತ್ರದ ಕಥೆಯ ವಿನ್ಯಾಸದಲ್ಲಿ ನೋಡಿಕೊಂಡು ಮಾಡಬೇಕಾಗುತ್ತದೆ. ಇದರಲ್ಲಿ ಸ್ವಲ್ಪ

ನಾಣಿ ಕೈಚಳಕದ ವಿಶಿಷ್ಟ ಮುಖಗಳು

ಏರುಪೇರಾದರೂ ಚಿತ್ರದಲ್ಲಿ ಆಭಾಸ ಆಗುತ್ತದೆ. ಪ್ರೇಕ್ಷಕರು ನಟನ ಅಭಿನಯ ನೋಡಿ, 'ವಾಹ್ ಎಂಥ ಪರಿಪಕ್ವ ಅಭಿನಯ' ಅನ್ನುತ್ತಾರೆ. ಆದರೆ ಆ ಪಕ್ವತೆಯ ಹಿಂದಿನ ನಮ್ಮ ಕಸುಬನ್ನು ಮರೆತೇ ಬಿಡುತ್ತಾರೆ.

ಸೂಕ್ಷ್ಮವಾಗುತ್ತಿರುವ ಕ್ಯಾಮರಾ ಕಣ್ಣು

ಕಾಲ ಬದಲಾದಂತೆ ಮೇಕಪ್‌ನ ಶೈಲಿ, ವಿಧಾನಗಳೂ ಬದಲಾಗುತ್ತಿವೆ. ಮೂವತ್ತು ವರುಷಗಳ ಹಿಂದೆ ಸ್ಟುಡಿಯೋಗಳಲ್ಲೇ ಚಿತ್ರೀಕರಣ ಆಗ್ತಿತ್ತು. ಆಗ ಐತಿಹಾಸಿಕ, ಪೌರಾಣಿಕ ಚಿತ್ರಗಳ ಪ್ರಭಾವ ಇತ್ತು. ರವಿವರ್ಮನ ಮಾದರಿಯಿತ್ತು! ಹೀಗಾಗಿ ಮೇಕಪ್ ಸಹ ತುಂಬಾ ದಟ್ಟವಾಗಿ, ಕೃತಕವಾಗಿ ಇರುತ್ತಿತ್ತು. ಕ್ರಮೇಣ ಸಾಮಾಜಿಕ ಚಿತ್ರಗಳು, ಹೊರಾಂಗಣಗಳು ಬಂದ ನಂತರ ಮೇಕಪ್‌ನ ದಟ್ಟತೆ ಅಥವಾ 'ಗಾಡಿನೆಸ್' ಕಡಿಮೆ ಆಗತೊಡಗಿತು. ಕಲಾತ್ಮಕ ಚಿತ್ರಗಳು ಬಂದ ನಂತರ 'ವಾಸ್ತವಿಕ ಮೇಕಪ್'ಗೆ ಆದ್ಯತೆ ಬಂತು. ಛಾಯಾಗ್ರಹಣ ಕೂಡ ಈಗ ತುಂಬ ಹರಿತವಾಗಿದೆ. ಲೆನ್ಸುಗಳು ತುಂಬಾ ಸೂಕ್ಷ್ಮವಾಗಿವೆ. ಕ್ಯಾಮೆರಾದ ಕಣ್ಣಿಂದ ಮುಖದ ಒಂದು ರೋಮವೂ ತಪ್ಪಿಸಿಕೊಳ್ಳುವಂತಿಲ್ಲ. ಈಗ ಕಮರ್ಶಿಯಲ್ ಚಿತ್ರಗಳಿಗೆ ಸುಂದರವಾದ, ಕಣ್ಣಿಗೆ ಹಿತವಾದ look ಮುಖ್ಯವಾಗಿರೋದ್ರಿಂದ, ನಟ ನಟಿಯರ skin tone (ಮೈಕಾಂತಿ!) ಕಾಯ್ದುಕೊಳ್ಳುವುದು ಬಲು ನಾಜೂಕಿನ ಕೆಲಸ.

ಮೇಕಪ್ ಮಾಡಿದಾಗ, ಶೂಟಿಂಗ್ ಹೊತ್ತಿಗೆ ಹೇಗೆ ಕಾಣ್ತಾರೆ ಅನ್ನೋದು ಮುಖ್ಯವಲ್ಲ. ತೆರೆಯ ಮೇಲೆ ಹೇಗೆ ಕಾಣ್ತಾರೆ ಅನ್ನೋದು ಮುಖ್ಯ. ಇಲ್ಲಿ, ಈ ಪ್ರಖರ ಬೆಳಕಲ್ಲಿ ಹೀಗೆ ಕಾಣ್ತಾ ಇರೋ ಈ ಮುಖ, ಎಷ್ಟೋ ತಿಂಗಳ ನಂತರ ಪ್ರಾಜೆಕ್ಟರ್ ಮೂಲಕ ತೆರೆ ಮೇಲೆ ಬಿದ್ದಾಗ ಹೇಗೆ ಕಾಣುತ್ತೆ ಅನ್ನೋ ಪರಿಜ್ಞಾನ ನಮಗೆ ಇರಬೇಕಾಗಿರುತ್ತೆ. ಈ 'ಹದ', ಅನುಭವದಿಂದ, ಸತತ ಆಸಕ್ತಿಯಿಂದ ಬರುತ್ತೆ. ಚಿತ್ರಗಳನ್ನು ತೆರೆಯ ಮೇಲೆ ನೋಡಿ, ಅದರಲ್ಲಿ ನಾವು ಮಾಡಿದ್ದ ಕೆಲಸವನ್ನು ಜ್ಞಾಪಿಸಿಕೊಂಡು, ಹೋಲಿಸಿ, ಮನಸ್ಸಿನಲ್ಲಿ ಟಿಪ್ಪಣಿ ಮಾಡ್ಕೋತೀನಿ. ಅದರಿಂದ ತಿದ್ದುಪಡಿ, ಬದಲಾವಣೆ, ಹೊಸತನ ಬರೋಕೆ ಸಹಾಯ ಆಗತ್ತೆ. ಅದೇ ರೀತಿ ಕಥೆಯನ್ನು ತಿಳ್ಕೋಳ್ಳೋದ್ರಿಂದ, ನಿರ್ದೇಶಕರ ಜೊತೆ ಕತೆ ಚರ್ಚಿಸೋದ್ರಿಂದ ಪಾತ್ರಗಳಿಗೆ ತೊಸ ಜೀವವನ್ನು ತುಂಬೋಕೂ ಸಾಧ್ಯ.

'ಖಾಸಗಿ ಮೇಕಪ್'

ಸಾಮಗ್ರಿ, ಮತ್ತು ಕೆಲಸದ ಗುಣಮಟ್ಟ, ಅಭಿರುಚಿ, ಪ್ರಾಮಾಣಿಕತೆ ನೋಡಿ ಕೆಲವು ಮೇರು ನಟ ನಟಿಯರು ತಮ್ಮ ಖಾಸಗಿ ಮೇಕಪ್‌ಮನ್‌ರನ್ನು ಇಟ್ಟುಕೋತಾರೆ. ಪ್ರತಿ ನಟಿಯದೂ, ನಟನದೂ

ಏನೋ ಒಂದು ವಿಶೇಷತೆ ಇರುತ್ತದೆ ಅಥವಾ ಕುಂದುಕೊರತೆ ಇರುತ್ತದೆ. ಅದನ್ನು ತಿಳಿದುಕೊಂಡಂಥ ಮೇಕಪ್‌ಮನ್ ಇದ್ರೆ ಅವರಿಗೆ ಅಷ್ಟು ನಿರಾತಂಕ. ಏಕೆಂದರೆ ಪ್ರತಿ ಮೇಕಪ್ ಮನ್‌ದೂ ಒಂದೊಂದು ಕಾರ್ಯವೈಖರಿ.

'ನಿರೋಧ್' ಎಫೆಕ್ಟ್!

ಹಾಲಿವುಡ್‌ನಲ್ಲಿರೋ ಸೌಲಭ್ಯಗಳು ನಮ್ಮಲ್ಲಿ ಕೈಗೆಟುಕದೇ ಇರೋದ್ರಿಂದ, ಇಲ್ಲಿ ನಾವೇ ಕಂಡುಕೊಂಡಿರೋ ಕೆಲ 'ದೇಸೀ ಫಾರ್ಮುಲಾ'ಗಳಿವೆ. ಸುಟ್ಟಗಾಯದ ಪರಿಣಾಮ ಸಾಧಿಸೋದಕ್ಕೆ ನಾವು ಬಳಸೋ ಸಾಮಗ್ರಿ ಯಾವುದು ಗೊತ್ತೆ?-ನಿರೋಧ್! ನಿರೋಧ್‌ನ ಆ ತೆಳು ರಬ್ಬರ್ ಹರಿದು ಹಚ್ಚಿ, ಸುಟ್ಟ ಚರ್ಮದ ಪರಿಣಾಮ ತರಬಹುದು. ಅದೇ ರೀತಿ ಗ್ಲಿಸರಿನ್ ಮತ್ತು ಫೆವಿಕಾಲ್‌ಗಳನ್ನು ಮೆತ್ತಿ ಗಾಯಗಳನ್ನು 'ಹೃದಯವಿದ್ರಾವಕ'ವಾಗುವಷ್ಟು ವಿರೂಪಗೊಳಿಸಬಹುದು. 'ತರ್ಕ'ದಲ್ಲಿ ದೇವರಾಜ್‌ರ ಕತ್ತು ಕುಯ್ದ ದೃಶ್ಯ ಇದೆಯಲ್ಲ - ಆ ಭಯಂಕರ ಗಾಯವನ್ನು ಒಂದು 'ಲೇಟೆಕ್ಸ್ ರಬ್ಬರ್'ನಿಂದ ಮಾಡಿದ್ದೆ. ಹೀಗೆ ನಮ್ಮ ನಮ್ಮ ಐಡಿಯಾ ಮಾಡಿಕೊಂಡು ಏನೋ ಮಾಡ್ತೇವೆ. ಆದರೆ ಅಷ್ಟಕ್ಕೆ ಮುಗಿಯಲಿಲ್ಲ! ಆ ಗಾಯವನ್ನು ಮುಂದಿನ ಶೂಟಿಂಗ್‌ಗೆ ಮತ್ತೆ ಹಾಗೇ ಮಾಡುವಂತೆ ಇರಬೇಕು. ಏಕೆಂದರೆ ಆ ದೃಶ್ಯದ ಚಿತ್ರೀಕರಣ ತಿಂಗಳುಗಟ್ಟಲೆ ನಡೆಯಬಹುದು. ಹೀಗಾಗಿ ಈ ಕೃತ್ರಿಮ ಗಾಯದ 'ನೋವು' ನಿಜವಾದ ಗಾಯಕ್ಕಿಂತ ಜಾಸ್ತಿ! ಹೊಸದನ್ನು ಮಾಡಿದರಾಗಲಿಲ್ಲ, ಮತ್ತೆ ಅದನ್ನು ಬೇಕೆಂದಾಗ, ಬೇಕೆಂದಲ್ಲಿ ಸುಲಭವಾಗಿ ಪುನರ್ ಸೃಷ್ಟಿ ಮಾಡುವಂತಿರಬೇಕು!



'ನಟಿಯರ ಚಾಡಿ'

ನಟ ನಟಿಯರ ಜತೆ ನಮ್ಮ ವ್ಯವಾಟು ನೇರವಾಗಿ ಆಪ್ತವಾಗಿರುವುದರಿಂದ, ನಮ್ಮಲ್ಲಿ ಚಾಡಿಯ ಚಾಳಿ ಬೀಳದಂತೆ ಎಚ್ಚರ ವಹಿಸಬೇಕಾಗುತ್ತದೆ. ಕೆಲವು ನಟಿಯರಂತೂ 'ಅವಳ ಹುಬ್ಬು ಎಷ್ಟು ಚೆಂದಾಗಿ ಮಾಡಿದ್ದೀ, ನನ್ನದು ಅವಳಿಗಿಂತ ಚೆಂದ ಮಾಡು' ಎಂದೋ, 'ಅವಳದು ಸ್ವಲ್ಪ ಡಲ್ ಇರಲಿ, ನಂದೇ ಮೇನ್ ರೋಲು'-ಎಂದೋ ತುಂಬಾ ಕೀಳಾಗಿ ರಾಜಕೀಯ ಮಾಡುವುದೂ ಉಂಟು. ನಮ್ಮಲ್ಲಿ ಕೆಲವರು ದುರಾಸೆಯಿಂದ ಇಂಥವರ ಚಮಚಾಗಿರಿ ಮಾಡುವುದೂ ಉಂಟು. ಆದರೆ ಕೊನೆಗೂ ನಿಮ್ಮ ಕೆಲಸ ಇಲ್ಲಿ ಮುಖ್ಯ. ಕೆಲಸದ ಗುಣಮಟ್ಟ ಮತ್ತು ಪ್ರಾಮಾಣಿಕತೆಯ ಮೇಲೇ ನಿಮಗೆ ಡಿಮಾಂಡ್ ಇರುತ್ತದೆ. ಏಕೆಂದರೆ ಕೆಟ್ಟ ಮೇಕಪ್, ಮೇಕಪ್ ಮಾಡದಿರುವ ಮುಖಕ್ಕಿಂತ ಅಧ್ವಾನವಾಗಿರುತ್ತದೆ!

ನನ್ನ ಕಲಾ ಜೀವನದಲ್ಲಿ, ಶಂಕರ್‌ನಾಗ್‌ರ 'ಮಾಲ್ಗುಡಿ ಡೇಸ್', 'ಪುಟ್ನಂಜಿ'ಯ ಉಮಾಶ್ರೀ ಪಾತ್ರ, ಸುನೀಲ್‌ಕುಮಾರ್ ದೇಸಾಯಿ ಚಿತ್ರಗಳು ನನಗೆ ಸಮಾಧಾನ ಮತ್ತು ಒಳ್ಳೆಯ ನೆನಪುಗಳನ್ನು ಕೊಟ್ಟಿವೆ. ಚಲನಚಿತ್ರದ ಎಲ್ಲಾ ವಿಭಾಗಗಳಲ್ಲಿ ಹೊಸ ಬದಲಾವಣೆಗಳು ಆಗುತ್ತವೆ. ಅದನ್ನು ಆಸಕ್ತಿಯಿಂದ ತಿಳಿದು ಅದಕ್ಕೆ ತಕ್ಕಂತೆ ನನ್ನ ಕಾರ್ಯಶೈಲಿಯಲ್ಲಿ ಬದಲಾವಣೆ, ವಿಕಾಸ ಮಾಡಿಕೊಳ್ಳಲು ಪ್ರಯತ್ನಿಸುತ್ತಲೇ ಇರುತ್ತೇನೆ."

■



ಬುದ್ಧ ಕವಿತೆ

ಕಾವ್ಯ ಧಾರಾವಾಹಿ -3

ಕೆ. ವಿ. ತಿರುಮಲೇಶ್

ಉಪವಾಸ ಮಾಡಿದೆ ದೇಹ ದಂಡನೆ ಮಾಡಿದೆ
ಕೈಕಾಲು ಕಡ್ಡಿಗಳಾದುವು
ಮೌನ ವ್ರತ ಆಚರಿಸಿದೆ ಮರದ ಕೆಳಗೆ ಕುಳಿತು
ಜ್ಞಾನ ಬರುತ್ತದೆ ಅಂದುಕೊಂಡೆ
ಬಂದುದು ಬವಳಿ

ಸುಜಾತ! ಆಗ ನೀ ಬಂದಿ
ಅನ್ನದ ತಪ್ಪಲೆ ಇರಿಸಿದಿ ನನ್ನ ಬಳಿ

ಜ್ಞಾನ ಅನ್ನದ ರೂಪದಲ್ಲಿತ್ತೆ? ಇಲ್ಲ
ನೀಡುವುದರ ಮತ್ತು ಪಡೆಯುವುದರ ರೂಪದಲ್ಲಿತ್ತು
ಅವತ್ತು

★

ಕತೆ ಹೇಳೆಂದು ಪೀಡಿಸುತ್ತಾರೆ ಜನ
ಅಶ್ವಘೋಷನ

ಚಬ್ಬಿಪಾಲಂದಾಯ್ತು ಮದ್ದಕುಂಡಲಿ ತಿಸ್ಸತೇರಂ-
ದಾಯ್ತು ಚುಲ್ಲಕಾಲ ಮಹಾಕಾಲ
ರಾಣೀ ಸಮವತಿ ಚುಲ್ಲಪಂತಕ
ಹಾಗೂ ಲೋಕತಿಸ್ಸಂದಾಯ್ತು

ಕಾಶಿ ಶ್ರಾವಸ್ತಿ ಜೇತವನ
ಬಿಹಾರ ಪಾಟಲೀಪುತ್ರ, ಎಲ್ಲವನ
ಸುತ್ತಿದುದಾಯ್ತು ಎಷ್ಟೋ ಸರ್ತಿ
ಜಾತಕ ಕತೆಗಳೂ ಹೇಳಿ ಮುಗಿದುವು
ಹಲವು ಬಾರಿ
ಹೊಸಕತೆಗಳು ಬೇಕೆಂದು ಜನ
ಕಾಡುತ್ತಾರೆ ಕತೆಗಾರನ

ಅವನು ಯೋಚಿಸುತ್ತಾನೆ ಅರ್ಧನಿಮೀಲಿತನೇತ್ರ
ಕಾಲದೇಶಗಳ ಬದಲಾಯಿಸುತ್ತಾನೆ
ಹಳೆ ಪಾತ್ರಗಳಿಗೆ ಹೊಸ ಹೆಸರುಗಳ ಕೊಡುತ್ತಾನೆ
ಕತೆಹೇಳುವ ರೀತಿಯಲ್ಲೂ ಸುಧಾರಣೆಗಳ ತರುತ್ತಾ
ಉದಾಹರಣೆಗೆ: ಮಧ್ಯಪ್ರವೇಶಿಯಾಗುತ್ತಾನೆ
ಅಥವ ಕೊನೆಯಿಂದ ಸುರುಮಾಡುತ್ತಾನೆ
ಗದ್ಯದ ನಡುವೆ ಪದ್ಯಗಳ ಸೇರಿಸುತ್ತಾನೆ

ಆಮೇಲೆ ತಟ್ಟನೇ ಎದ್ದು:
ಇಷ್ಟೂ ದಿನ ಹೇಳಿದೆ-ಏನಾದರೂ ಆಯ್ತೆ-
ಕಾಲ ಬರಬೇಕು ಹೊಸ ಕತೆಗೆ, ಮಕ್ಕಳಿರ!
ಎಂದು ಹೊರಟುಹೋಗುತ್ತಾನೆ? ಇಲ್ಲ!
ಅದು ಮಾತ್ರ ಕತೆಗಾರನಿಗೆ ಸಲ್ಲ-
ಕತೆಯ ಚಕ್ರವ್ಯೂಹದಲ್ಲಿ ಅವನೂ
ಸಿಗಹಾಕಿಕೊಂಡಿರುವ! ಇದರಿಂದ ಮಾತ್ರ
ಬಿಡುಗಡೆಯಿಲ್ಲ
ಮಾತಿರುವವರೆಗೆ ಕತೆಯಿರುತ್ತದೆ-ಎಂದ



ಪ್ರೀತಿ ಸಂಯುಕ್ತಾ

★

ಒಂದು ಕಡಲ ಹಕ್ಕಿ ಹೊತ್ತು ತರುತ್ತದೆ
ಇಡೀ ಸಮುದ್ರವ

ಒಂದು ಸೂರ್ಯ ಕಿರಣ ಬಯಲುಮಾಡುತ್ತದೆ
ಇಡೀ ಕಾಡಿನ ಬಣ್ಣವ
ಕಲ್ಲುಗಳಲ್ಲಿ ಬರೆಸಿದ ಕಂಭಗಳಲ್ಲಿ ಬರೆಸಿದಿ...

★

ಉರಿದೆ ಕಣ್ಣುಗಳಲ್ಲಿ ಉರಿದೆ ನಾಲಿಗೆಯಲ್ಲಿ
ಉರಿದೆ ಶ್ರವಣೇಂದ್ರಿಯಗಳಲ್ಲಿ ಉರಿದೆ
ನರನರಗಳಲ್ಲಿ

ಉರಿದೆ ವಿಚಾರಗಳಲ್ಲಿ ಉರಿದೆ ಕಲ್ಪನೆಗಳಲ್ಲಿ
ಉರಿದೆ ಕನಸುಗಳಲ್ಲಿ ಉರಿದೆ
ಕ್ಷಣಕ್ಷಣಗಳಲ್ಲಿ

ತಣಿಸುವುದಕ್ಕೆ ಹಾತೊರೆಯುತ್ತಿದ್ದೆ ನಾನು
ನನ್ನ ತೃಷ್ಣೆಯ ಯಾವ ನದಿ ಹಿಂಗಿಸುತ್ತದೆ-
ಯೆಂದು ತಿಳಿಯದೆ ಇದ್ದೆ

ಆಮೇಲೆ ತೃಷ್ಣೆಯನ್ನೇ ಬಿಟ್ಟೆ. ನಂತರ ಎಲ್ಲವೂ ಬಂದುವು
ನನ್ನ ಬಳಿ, ಆಮ್ರಪಾಲಿ! ಬಿಡುವುದನ್ನು
ಕಲಿ !

(ಮುಂದುವರೆಯುವುದು)

ಮುಂಬಡು



ಯೇ 'ಚೀಜ್' ಕ್ಯಾ Cheese ಹೈ?

ಎನ್ಕೆ

ಬೇಂದ್ರೆಯವರನ್ನು ಕೆಣಕಿ ಕನ್ನಡ ಚೀಜ್ ಬರೆಯಲು ಪ್ರೇರೇಪಿಸಿದ ಒಂದು ಪ್ರಸಂಗ

ವರಕವಿ ಬೇಂದ್ರೆ ಅವರು ಕೆಲ ಕಾಲ ಧಾರವಾಡ ಆಕಾಶವಾಣಿಯಲ್ಲಿ ಸಾಹಿತ್ಯ ಸಲಹಾಕಾರರಾಗಿದ್ದರು. ಅದೇ ಕಾಲಕ್ಕೆ ಗ್ವಾಲೀರ್ ಘರಾಣೆಯ ಗಾಯಕರಾದ ಖ್ಯಾತ ಗಾಯಕ, ಧಾರವಾಡದ ಶ್ರೀಗುರುರಾವ್ ದೇಶಪಾಂಡೆ ಅವರು ಅಲ್ಲಿ ಮ್ಯೂಜಿಕ್ ಪ್ರೊಡ್ಯೂಸರ್. (ನಾನಾಗ ಕಾರ್ಯಕ್ರಮ ನಿರ್ವಾಹಕ.)

ಒಂದು ದಿನ ನಾವೆಲ್ಲ ಸೇರಿ, ಹಿಂದೀ ಚೀಜುಗಳು ಮತ್ತು ಹಿಂದುಸ್ಥಾನೀ ರಾಗಗಳ ಚರ್ಚೆ ನಡೆಸಿದ್ದೆವು. ದರ್ಬಾರೀ ಕಾನಡಾ ರಾಗದ ಒಂದು ಚೀಜ್ ಹಾಡುತ್ತ, ಅದರ ಕನ್ನಡ ಅರ್ಥ ಹೇಳುತ್ತ ಅದರ ರಸಾನಂದವನ್ನು ಹಂಚಿಕೊಳ್ಳುತ್ತಿದ್ದೆವು.

'ಸೈನ್‌ಸೊ ಸೈನ್ ಮಿಲಾರ ಹೋಗೆ' ಎಂದು ಆರಂಭವಾಗುತ್ತಿತ್ತು ಆ ಚೀಜು. ಇದರರ್ಥ ನನಗೆ ತಂತಾನೇ ಹೊಳೆದಿತ್ತು. ಗುರುರಾಯರು ಅರ್ಥೈಸಬೇಕಾಗಿರಲಿಲ್ಲ. ನಾನು ನಗುತ್ತ 'ಎಂತಹ ಶೃಂಗಾರ ರಸದ ಚೀಜ್ ಇದು!' ಎಂದು ನನ್ನ ಮೆಚ್ಚುಗೆ ವ್ಯಕ್ತಪಡಿಸಿದೆ. ಇದರಿಂದ ಸ್ಫೂರ್ತಿಗೊಂಡ ಗುರುರಾಯರು ಇನ್ನೊಂದು ಠುಮರೀ ಪದದ ಅರ್ಥ ಹೇಳಲು ಸುರುಮಾಡಿದರು:


ಗೋಪಾಬಲ ಗೇಂದ ಖೇಲತ- ಅಂದರ ಚೆಂಡು ಆಡುತಿದ್ದ. ಅದು ಎಲ್ಲೊ ಚೋಲಿಯೊಳಗೆ ಅಡಗಿತ್ತು. ತಲೆಯ ಮೇಲೆ, ಬಗಲೊಳಗೆ ಹಾಲಿನ ಕುಂಭ ಇಟ್ಟುಕೊಂಡ ಗೋಪಿಯೊಬ್ಬಳು ಬರುತ್ತಿದ್ದಳು. ಈ ಬಾಲಕ ಆಕೆಯ ಬಳಿ ಹೋಗಿ, ನನ್ನ ಚೆಂಡು ತಗೊಂಡಿದ್ದೀಯಾ? ಎಂದು ಕೇಳಿದ. ಆಕೆ ಇಲ್ಲ ಎಂದರೂ ಕೇಳದೆ ಶೋಧಿಸತೊಡಗಿ, 'ಹಾ! ಒಂದು ಚೆಂಡು ಕಳೆದರೆ ಎರಡು ಚಂಡು ಸಿಕ್ಕವು ಅಂತ ಕುಣಿದಾಡತೊಡಗಿದ...' ಎಂದು ಹೇಳುತ್ತಿರುವಷ್ಟರಲ್ಲಿ, ಕೊನೆಯ ಎರಡು ಸಾಲುಗಳು ಬೇಂದ್ರೆ ಅವರ ಕಿವಿಯ ಮೇಲೆ ಬಿದ್ದವು.

'ಓಹೋ ಚೀಜ್, 'Cheese' ಅಂದರ ಇದೇ ಏನು?-ಹಾಲಿನ ಕುಂಭದ Cheese ಉ! ಎಂದು ಚೇಷ್ಟೆ ಮಾಡುತ್ತ, 'ಶೃಂಗಾರ ರಸ ಬಿಟ್ಟು ಬೇರೆ ಚೀಜ್ ಇರೋದೆ ಇಲ್ಲೇನು?' ಎಂದು ಪ್ರಶ್ನಿಸಿದರು.

'ಯಾಕಿಲ್ರೀ ಮಾಸ್ತರ್ ಸಾಹೇಬ್! ನಮ್ಮ ಅಬ್ದುಲ್ ಕರೀಂಖಾನ್ ಸಾಹೇಬರ ಒಂದು ಕರುಣಾ ರಸದ ಚೀಜ್ ಕೇಳೀರಿಲ್ಲೊ? 'ಗೋಪಾಲಾ ಮೇರೇ, ಕರುಣಾ ಕ್ಯೂಂ ನಹಿ ಆವೇ.' ಇದನ್ನ ಕೇಳಿದ ಸರ್ತಿಗೊಮ್ಮೆ ನಾ ಕಣ್ಣೀರು ಹಾಕೀನಿ' ಎಂದು ಉತ್ತರಿಸಿದರು ಗುರುರಾಯರು.

'ಭಕ್ತಿರಸದ ಚೀಜುಗಳು?', ಮಾಸ್ತರ್ ಕೇಳಿದರು.

'ಮೀರಾಭಜನ್‌ಗಳವಲ್ಲಾ-ಬೇಕಾದಷ್ಟು ಭಕ್ತಿಪರ',



ಚಿತ್ರ: ಶಂಕರ ಪಾಟೀಲ

ಗುರುರಾಯರು ಹೇಳಿದರು. 'ನಮ್ಮ ದಾಸರ ಪದಗಳು ನೀವು ಹೇಳೋ ಚೀಜ್ ಆಗೋದಿಲ್ಲೇನು?', ಮಾಸ್ತರ್. 'ಆಗಬಹುದು, ಆದರ ಐದೈದು, ಏಳೇಳು ನುಡಿಗಳ ಕೀರ್ತನಾ ರಾಗದಾರೀ ಚೀಜ್ ಅಂತ ಹ್ಯಾಂಗ ಹಾಡೋದು? ಇನ್ನು ಕರ್ನಾಟಕೀ ಸಂಗೀತದೊಳಗ ತ್ಯಾಗರಾಜರ ಕೀರ್ತನೆಗಳವ. ಮರಾಠಿಯೊಳಗ ಸಂತರ ಅಭಂಗಗಳವ. ಅವು ಚಿಕ್ಕದಾಗಿ ಸರಾಗವಾಗಿ ಹಾಡಲಿಕ್ಕೆ ಯೋಗ್ಯ ಅವ. ಹಾಂಗ ಕನ್ನಡದೊಳಗೆಲ್ಲವ? ಶರಣರ ವಚನಗಳವ. ಅವು ಸರಿಯಾಗಿ ಇಂಥಾದ್ದೇ ತಾಳಕ್ಕಂತ ಯೋಜಿಸಲ್ಪಟ್ಟಿಲ್ಲ' ಎಂದು ಗುರುರಾಯರು ಹೇಳಿದ್ದು ಬೇಂದ್ರೆ ಮಾಸ್ತರರಿಗೆ ಪಟಾಯಿಸಿತು.

'ಹಾಂಗಾರ ನಾನು ರಚನಾ ಮಾಡಿಕೊಟ್ಟರ ನಿಮಗೆ ಹಾಡಲಿಕ್ಕೆ ಆಗತದೇನು?'/'ರಚನಾ ಮಾಡ್ರಿ. ತೀನ್ ಲಾಲ, ಏಕ ಲಾಲ್, ಕೇರವಾ-ಇಂಥಾ ತಾಳಕ್ಕ ಸರಿಯಾಗಿ!'/'ನಿಮ್ಮ ತಾಳದ ಮಾತ್ರಾ, ನಮ್ಮ ಕಾವ್ಯದ ಛಂದೋ ಮಾತ್ರಾ, ಸರಿ ಹೋಗಲಿಕ್ಕೇ ಬೇಕು. ರಗಳೆಗಳು ಅಂದರೂ ಐದೈದು ಮಾತ್ರಾದ ನಾಲ್ಕು ನಾಲ್ಕು ಗಣಾ ಸಿಗತಾವ.'


ಗಂಗೂಬಾಯಿ ಮತ್ತು ಕೃಷ್ಣಾ ಹಾನಗಲ್

'ನೀವು ರಚನಾ ಮಾಡಿ ಕೊಡ್ರಿ, ನೋಡೋಣ. ಆದರ, ಕುಣಿಯೋಣು ಬಾರ ಕುಣಿಯೋಣು ಬಾ ಅಂದರ ರಾಗದಾರೀ ಸಂಗೀತ ಆಗೋದಿಲ್ಲ' ಎಂದು ಗುರುರಾಯರು ಸ್ವಲ್ಪ ನಕ್ಕರು.

ಬೇಂದ್ರೆ ಅವರ್ನ ಇದು ಸ್ವಲ್ಪ ಕೆರಳಿಸಿತು. 'ಕುಣಿಯೋಣು ಬಾ ಜಾನಪದ ಧಾಟಿ. ನಿಮಗಂತ ಹೊಸಾ ರಚನಾ ಮಾಡಿಕೊಡ್ತೀನಿ. ನೀವು ಹಾಡಲಿಕ್ಕೆ ತಯಾರಾಗರಿ' ಎಂದು ಸವಾಲೆಸೆದರು ಬೇಂದ್ರೆ ಮಾಸ್ತರ್.

ಒಂದು ಚೀಜ್ ತಯಾರಾಯಿತು.

''ಶ್ರೀರಾಮಾ ಜಯ ರಾಮಾ ಜಯ ಜಯ ರಾಮಾ'' ಎಂದು ಈ ಬಗೆಯಲ್ಲಿ ಮಾಡಲಾಗಿತ್ತು. ಆದರೆ ಆ ರಚನೆ ಗುರುರಾಯರ ಕೈಗೆ ಎಟುಕಲೇ ಇಲ್ಲ.

ಮುಂದೆ ಪಂಡಿತ ಭೀಮಸೇನ ಜೋಶಿಯವರ ಶಿಷ್ಯ ಮಾಧವ ಗುಡಿಯವರ ಕೈಗೆ ಆ ಚೀಜ್ ಬಂತು. ಮಾಧವ ಗುಡಿ ತಮ್ಮ ಬೈಠಕ್ ಇದ್ದಾಗೆಲ್ಲಾ, 'ಶ್ರೀರಾಮಾ ಜಯರಾಮ' ಹಾಡತೊಡಗಿದರು. ಚೀಜ್ ಯಶಸ್ವಿಯಾದ ಭಕ್ತಿಪರ ರಚನೆಯಾಗಿ ರಸಿಕರ ತಲೆದೂಗಿಸಿತ್ತು.

ಮಾಧವ ಗುಡಿಯ ನಂತರ ಬೇಂದ್ರೆ ಅದನ್ನ ಖ್ಯಾತ ಕೃಷ್ಣಾ ಹಾನಗಲ್‌ಗೆ ಕೊಟ್ಟರು. ಕೃಷ್ಣಾ ಹಾನಗಲ್ ಬಾಯಿಂದ ಈ ಹಾಡು ಕೇಳಿ, 'ಗಂಗೂಬಾಯಿ ಸಂಗೀತ ಹಿಮಾಲಯದಾಗ ಹರೀತದ. ಕೃಷ್ಣಾನ ಸಂಗೀತ ನಮ್ಮ ನಾಡಿನ್ಯಾಗ ಹರೀತದ' ಎಂದರು. ಅನ್ಯಾ ಸಂತೋಷದಿಂದ ತಮ್ಮ ಕಚೇರಿಗಳಲ್ಲಿ ಇದನ್ನು ಹೊಂದಿಸಿಕೊಂಡರು. ಗಂಗೂಬಾಯಿಯವರೂ. ಆದರೆ ಬೇಂದ್ರೆ ಅವರಿಗೆ ಮತ್ತೆ ಆ ಲಹರಿ ಬರಲಿಲ್ಲವೊ, ಗಾಯಕರ ದುರ್ದೈವವೊ, ರಸಿಕ ಶ್ರೋತೃಗಳ ದುರ್ದೈವವೊ ಮುಂದೆ ಬೇಂದ್ರೆ ಲೇಖನಿಯಿಂದ ಇಂತಹ ಗೇಯ ರಚನೆಗಳು ಗಾಯಕರ ಕೈಗೆ ಎಟುಕಲೇ ಇಲ್ಲ.

ಇಂದಿಗೂ ನಮ್ಮ ಶಾಸ್ತ್ರೀಯ ಗಾಯಕರ ಕೈಗೆ ಗೇಯಯೋಗ್ಯ, ಗಾನಯೋಗ್ಯ ಕನ್ನಡ ಚೀಜುಗಳು ಉದಿಸಿ ಬರಲೇ ಇಲ್ಲ. ಈ ಚೀಜಿನ ಪ್ರಶ್ನೆ ಪ್ರಶ್ನಾರ್ಥಕವಾಗಿ ಇನ್ನೂ ಹಾಗೇ ಉಳಿದಿದೆ. ನಮ್ಮ ಕವಿಗಳಿಗೆ ಸವಾಲಾಗಿ. ■



ಅನುಭವವಿಲ್ಲ, ನೋಡಿ

ಸಿ. ಎಸ್. ರಾಮಚಂದ್ರನ್

ತೇಜಸ್ವಿಯವರ 'ತಬರನ ಕಥೆ'ಯನ್ನು ಓದಿದ ನಂತರ, ಒಂದೊಂದು ವರ್ಷ ಕಳೆದು, ನನ್ನ ನಿವೃತ್ತಿಯ ಕಾಲ ಹತ್ತಿರ ಬಂದಂತೆ, ನನ್ನ ಎದೆಯ ಬಡಿತ ಜೋರಾಗುತ್ತಿತ್ತು; ರಾತ್ರಿಯ ನಿದ್ದೆ ಕಮ್ಮಿಯಾಗುತ್ತಿತ್ತು. ನಿವೃತ್ತಿಯ ನಂತರ ಬರಬೇಕಾದ ಪೆನ್ಷನ್, ಇತ್ಯಾದಿ ಸೌಲಭ್ಯಗಳಿಗೆ ಎಷ್ಟು ಕಾಯಬೇಕೋ, ಯಾರುಯಾರನ್ನು ಬೇಡಬೇಕೋ, ಎಂದು ಚಿಂತೆಯಾಗುತ್ತಿತ್ತು.

ಆದರೆ, ಅದೃಷ್ಟವಶಾತ್ ನನ್ನ ಉದ್ಯೋಗವಿದ್ದುದು ಒಂದು ವಿಶ್ವವಿದ್ಯಾನಿಲಯದಲ್ಲಾದುದರಿಂದ, ನನ್ನ ಚಿಂತೆಗೆ ಯಾವ ಕಾರಣವೂ ಇಲ್ಲವೆಂದು ನಿವೃತ್ತಿಯ ನಂತರ ಗೊತ್ತಾಯಿತು. ನಿವೃತ್ತನಾದ ಕೆಲವು ತಿಂಗಳುಗಳ ಒಳಗೇ ಹೆಚ್ಚುಕಮ್ಮಿ ನನ್ನ ಎಲ್ಲಾ ಕೆಲಸಗಳೂ ಮುಗಿದಿದ್ದುವು.

''ನಿಮ್ಮ ಎಲ್ಲಾ ದಾಖಲೆಗಳೂ ಸರಿಯಾಗಿವೆ, ಸಾರ್. ಇನ್ನೊಂದು ಮಾತ್ರ ಮರೆತುಬಿಟ್ಟಿದ್ದೀರಿ'' ಎಂದಳು ವಿತ್ತ ಶಾಖೆಯ ವಿಭಾಗ ಮುಖ್ಯಸ್ಥೆ.

''ಯಾವುದೂ ಮರೆತಿಲ್ಲವಲ್ಲ, ಇವರೆ. ... ನೋಡಿ, ಎಲ್ಲಾ ದಾಖಲೆಗಳೂ ನಾಲ್ಕು ಪ್ರತಿಗಳಲ್ಲಿವೆ'' ಎಂದೆ ನಾನು, ಹೆದರುತ್ತಾ.

''ನೀವು ಮತ್ತು ನಿಮ್ಮ ಮಿಸೆಸ್ ಒಟ್ಟಿಗೇ ಇರುವ ಒಂದು ಫೋಟೋ ಬೇಕು.''


ನನಗೆ ಆಶ್ಚರ್ಯವಾಯಿತು. ಏನಿದು, ನಿವೃತ್ತಿಯಾದ ಎಲ್ಲಾ ದಂಪತಿಗಳ ಫೋಟೋಗಳನ್ನು ಕಟ್ಟು ಹಾಕಿಸಿ ವಿತ್ತ ಶಾಖೆಯಲ್ಲಿ ಪ್ರದರ್ಶನಕ್ಕಿಡುತ್ತಾರೆಯೆ? ಹಾಗಿದ್ದರೆ, 20-25 ವರ್ಷಗಳ ಹಿಂದಿನ ಫೋಟೋ ಕೊಟ್ಟರೆ ಆಗುತ್ತದೆಯೆ?

''ಅಲ್ಲ... ನಿವೃತ್ತನಾಗುತ್ತಿರುವುದು ನಾನು; ನನ್ನ ಶ್ರೀಮತಿಯವರ ಫೋಟೋ ಯಾಕೆ?''

''ಹಾಗಲ್ಲ, ಸಾರ್. ಈಗ... ಡೋಂಟ್ ಮಿಸ್ಟೇಕ್ ಮಿ. ... ನಿಮಗೇನಾದರೂ ಆದರೆ, ಯಾರಿಗೆ ನಾವು ಫ್ಯಾಮಿಲಿ ಪೆನ್ಷನ್ ಕೊಡಬೇಕು? ಅದಕ್ಕಾಗಿ. ಅಂದ ಹಾಗೆ, ಮತ್ತೆ ಮರೆಯಬೇಡಿ, ನಿಮ್ಮ ಫ್ಯಾಮಿಲಿ ಫೋಟೋ ಕೆಳಗಡೆ ಇವರೇ ಶ್ರೀ... ಅವರ ನಿಜವಾದ ಮತ್ತು ಏಕಮಾತ್ರ ಪತ್ನಿ' ಎಂದು ಯಾರಾದರೂ ಗೆಜೆಟೆಡ್ ಆಫೀಸರ್ ಸರ್ಟಿಫೈ ಮಾಡಬೇಕು.''

''ಏನು ನೀವು ಹೇಳೋದು? ಇಂತಹ ವಿಷಯದಲ್ಲಿಯೂ ನಾವು ಸುಳ್ಳು ಹೇಳುತ್ತೇವೆಯೇ? ಯು ಆರ್ ಇನ್ಸಲ್ಟಿಂಗ್ ಮಿ'' ಎಂದೆ ನಾನು ಕೋಪದಿಂದ. ಆದರೆ ಅವಳು ಮಾತ್ರ ಶಾಂತವಾಗಿಯೇ ಹೇಳಿದಳು: ''ಕೋಪ ಯಾಕ್ ಸಾರ್? ಎಲ್ರಿಗೂ ಒಬ್ಬರೇ ಹೆಂಡತಿಯರು ಇರುತ್ತಾರೆಯೇ? ಅಲ್ಲದೆ ಇವರೇ ನಿಮ್ಮ ಹೆಂಡತಿ ಎಂದು ನಮಗೆ ಗೊತ್ತಿರುತ್ತದೆಯೇ? ಇವೆಲ್ಲಾ ರುಟೀನ್ ಸಾರ್''

ಅವಳು ಹೇಳಿದ ಧಾಟಿ, ನೋಡಿದ ನೋಟ, ಇವುಗಳನ್ನು ಹೇಗೆ ಅರ್ಥಮಾಡಿಕೊಳ್ಳಬೇಕೆಂದು ಇಂದಿಗೂ ನನಗೆ ಗೊತ್ತಾಗಿಲ್ಲ. ಆದ್ದರಿಂದ, ''ಸರಿ ಇವರೆ, ಥ್ಯಾಂಕ್ಯು'' ಎಂದು ಹೇಳಿ ಮನೆಗೆ ಬಂದೆ, ಸುಸ್ತಾಗಿ.



ರಾವ್‌ಬೈಲ್

ಮನೆಯಲ್ಲಿ ನನಗೂ ನನ್ನ ಶ್ರೀಮತಿಯವರಿಗೂ ನಡೆದ ದೀರ್ಘ ಚರ್ಚೆಯ ಸಾರಾಂಶವನ್ನು ಹೇಳಬೇಕಾದರೆ: ಇಂತಹ ಫೋಟೋ ತೆಗೆಸಿಕೊಳ್ಳುವುದು ನನ್ನ ತಿಕ್ಕಲುತನದ ನಿದರ್ಶನವಲ್ಲ; ನಿಜವಾಗಿಯೂ ಅಂತಹ ನಿಯಮವೊಂದಿದೆ. ನಿಮಗೆ ಪೆನ್ಶನ್ ಬೇಕಾದರೆ ನಾವು ಈ ಕೆಲಸ ಮಾಡಲೇಬೇಕು ಎಂದು ಕೊನೆಗೂ ಅವರನ್ನು ಒಪ್ಪಿಸಿ, ಒಂದು ಜೊತೆ ಫೋಟೋ ತೆಗೆಸಿ, ಮಿತ್ರರೊಬ್ಬರ ಸಹಿಯೊಡನೆ (ಮುಖ್ಯವಾಗಿ ಅವರ ಹುದ್ದೆಯನ್ನು ಸೂಚಿಸುವ ಸೀಲ್ ಹಾಕಿಸಿ) ವಿತ್ತ ಶಾಖೆಗೆ ಕೊಟ್ಟು ಬಂದೆ. ಕೊನೆಗೂ ಎಲ್ಲಾ ವಿಧಿಗಳೂ ಕ್ರಮಬದ್ಧವಾಗಿ ಮುಗಿದಿವೆ ಎಂದು ಹಾಯಾಗಿದ್ದೆ.

ಇದಾಗಿ ಒಂದು ಆರು ತಿಂಗಳು ಕಳೆದಿರಬಹುದು. ಮತ್ತೊಂದು ಶುಭ ಮುಹೂರ್ತದಲ್ಲಿ ವಿತ್ತಶಾಖೆಯಿಂದ ಕರೆ ಬಂದಿತು. ಹೋದ ಕೂಡಲೇ ಅದೇ ವಿಭಾಗ ಮುಖ್ಯಸ್ಥೆ, ಈಗಲಂತೂ ಅವಳು ನನ್ನನ್ನು ನೋಡಿದಕೂಡಲೇ ನಿಜವಾಗಿಯೂ ನಗಲು ಪ್ರಾರಂಭಿಸಿದಳು ಮತ್ತು ಆ ನಗೆ ನನ್ನ ಯಾವುದೋ ಪೆದ್ದುತನದ ಬಗ್ಗೆಯೇ ಎಂದು ನನಗೆ ಖಾತ್ರಿಯಾಯಿತು. ''ಏನ್ ಸಾರ್, ಹೀಗೆ ಮಾಡಿದೀರ?'' ಎನ್ನುತ್ತಾ ನನ್ನ ಲೈಫ್ ಸರ್ಟಿಫಿಕೆಟ್ ಹೊರತೆಗೆದಳು. ನಾನು ಅದನ್ನು ಮತ್ತೆ ಮತ್ತೆ ನೋಡಿದರೂ ನನಗೆಲ್ಲೂ ತಪ್ಪು ಕಾಣಲಿಲ್ಲ: 'ಶ್ರೀ... ಅವರು ಇಂತಹ ದಿನಾಂಕ ಜೀವಂತವಾಗಿದ್ದಾರೆ ಎಂದು ಈ ಮೂಲಕ ಪ್ರಮಾಣಿಸುತ್ತೇನೆ' ಎಂದಿತ್ತು. ನನ್ನ ಸಹಿಯೂ ಇತ್ತು. ಪ್ರಶ್ನಾರ್ಥಕವಾಗಿ ಅವಳನ್ನೇ ನೋಡಿದೆ.

''ಅಲ್ಲಾ ಸಾರ್, ನೀವು ಬದುಕಿದ್ದೀರಿ ಅಂತ ನೀವೇ ಪ್ರಮಾಣಪತ್ರ ಕೊಟ್ರೆ ಹೇಗೆ ಸಾರ್?''

''ನನಗ್ಗೊತ್ತಾಗಲಿಲ್ಲ'' ಎಂದೆ, ದೀನನಾಗಿ. ನಿಜವಾಗಿಯೂ ನನಗೇನೂ ಗೊತ್ತಾಗಿರಲಿಲ್ಲ.

''ಅಲ್ಲ ಸಾರ್; ನೀವು ಬದುಕಿದ್ದೀರಿ ಅಂತ ಬೇರೆಯವರು ಯಾರಾದರೂ ಗೆಜೆಟೆಡ್ ಆಫೀಸರ್ ಸರ್ಟಿಫೈ ಮಾಡಬೇಕು. ನೀವೇ ಸೈನ್ ಮಾಡಿ ಕಳಿಸಿದರೆ ಹೇಗೆ ಸಾರ್?''

ನನ್ನ ತಲೆ ಗಿರ್ರೆಂದು ತಿರುಗಿತು. ಕಣ್ಣು ಕುಕ್ಕುವ ಬೆಳಕು ಒಂದು ಕ್ಷಣ ನನ್ನೆದುರು ಹಾದ ಹಾಗೆ ಆಯಿತು. ಹೌದಲ್ಲ! ನಾನು ಬದುಕಿದೀನೋ ಇಲ್ಲವೋ ಅಂತ ಇನ್ನೊಬ್ಬರು ಹೇಳಬೇಕು ತಾನೆ? ನಾನೇ ಹೇಳುವುದು ಹೇಗೆ? ನಾನು ಉಸಿರಾಡುತ್ತಿದ್ದರೂ, ಚಲಿಸುತ್ತಿದ್ದರೂ ಸಮಾಜದ ದೃಷ್ಟಿಯಲ್ಲಿ ನಿರುಪಯುಕ್ತನಾಗಿರಬಹುದು; ಎಂದರೆ ಸತ್ತಿರಬಹುದು.

ಅತ್ಯಂತ ನಮ್ರನಾಗಿ ಗುರುವಿನೆದುರಿಗೆ ಹೇಳಿದ: ''ನೋಡಿ ಇವರೆ, ನೀವು ಹೇಳೋದು ನಿಜ. ಆದರೆ ನನಗೆ ಇದರ ಅನುಭವವಿಲ್ಲ ನೋಡಿ. ನಾನು ರಿಟೈರ್ ಆಗ್ತಾ ಇರೋದು ಇದೇ ಮೊದಲನೇ ಸಲ.''

ಮುಖ್ಯಸ್ಥೆ ನನ್ನನ್ನು ಒಂದು ಕ್ಷಣ ಗಂಭೀರವಾಗಿ ನೋಡಿದಳು: ಅನಂತರ ನನ್ನ ಮಾತಿನಲ್ಲಿ ವ್ಯಂಗ್ಯ-ಕಟಕಿ ಇತ್ಯಾದಿ ಏನೂ ಇಲ್ಲವೆಂದು ಖಚಿತಪಡಿಸಿಕೊಂಡು, ಲೈಫ್ ಸರ್ಟಿಫಿಕೇಟ್ ಹೇಗಿದ್ದರೆ ಕ್ರಮಬದ್ಧವಾಗಿರುತ್ತದೆ ಎಂಬುದನ್ನು ವಿವರಿಸಿದಳು.


ಇದೇ ನೋಡಿ, ಅತ್ಯಂತ ನೋವಿನ ಅಥವಾ ಖೇದದ ಸಂಗತಿ. ನಮ್ಮ ಬದುಕಿನ ಯಾವುದೇ ಮುಖ್ಯ ಘಟನೆಯಾದಾಗಲೂ ನಮಗೆ ಅದರ ಅನುಭವವಿರುವುದಿಲ್ಲ; ಆ ಘಟನೆಗಳು ಮತ್ತೊಮ್ಮೆ ಘಟಿಸುವುದಿಲ್ಲ-ಜನನ, ಪ್ರಥಮ ಪ್ರಣಯ, ಮುಪ್ಪು, ಸಾವು, ಇತ್ಯಾದಿ. ಒಂದು ನಾಲ್ಕೈದು ಬಾರಿ ಹುಟ್ಟಿ, ಸತ್ತು, ಆ ಅನುಭವವಿದ್ದರೆ...


ಉದಾಹರಣೆಗೆ ಹುಟ್ಟು. ನಮ್ಮ ಹಿಂದಿನ ಅನುಭವದ ಹಿನ್ನೆಲೆಯಲ್ಲಿ ನಾವು ನಮ್ಮ ತಂದೆ-ತಾಯಂದಿರನ್ನು ಹಾಗೂ ಧರ್ಮ-ಜಾತಿ-ಭಾಷೆಗಳನ್ನು ಆರಿಸಿಕೊಳ್ಳಬಹುದಿತ್ತು. ಅದು ಸಾಧ್ಯವಿಲ್ಲದಿದ್ದರೆ, ಕನಿಷ್ಠ ಪಕ್ಷ, ಶುಭ ದಿನ-ಶುಭ ನಕ್ಷತ್ರದಲ್ಲಿ ಹುಟ್ಟುವ, ಆಸ್ಪತ್ರೆಗೆ ಹೋಗುವ ದಾರಿಯಲ್ಲಿಯೇ ರಿಕ್ಷಾದಲ್ಲಿಯೋ, ಬಸ್ಸಿನಲ್ಲಿಯೋ ಹುಟ್ಟುವ ಆತುರ ತೋರದಿರುವ, ಆಸ್ಪತ್ರೆಯಲ್ಲಿಯೂ ದಾದಿಗಳ ಅಚಾತುರ್ಯದಿಂದಾಗುವ ಅನಾಹುತಗಳ ಅರಿವಿದ್ದು ಸದಾ ಎಚ್ಚರದಿಂದಿರುವ ಪರಿಜ್ಞಾನವಿರುತ್ತಿತ್ತು. ಹುಟ್ಟಿದ ಕೂಡಲೆ ಅಳದೆ ನಗಬೇಕೆಂದು ಗೊತ್ತಿರುತ್ತಿತ್ತು. ಪೌಡರ್ ಹಾಲನ್ನು ಕುಡಿಸಲು ಬಂದರೆ ಕುಡಿಯದೆ, ತಾಯಿಯ ಹಾಲೇ ಬೇಕೆಂದು ಹಠ ಹಿಡಿಯಬಹುದಿತ್ತು...

ಅಥವಾ ಪ್ರಣಯ. ಮುಂದೆ ಬಹುಬೇಗ ಇದು ತಣ್ಣಗಾಗುತ್ತದೆಂಬ ಅನುಭವದ ಹಿನ್ನೆಲೆಯಲ್ಲಿ ಮೊದಲಿನ ಹುಚ್ಚು ಆವೇಗ-ಉನ್ಮಾದಗಳಿರುತ್ತಿರಲಿಲ್ಲ. ಬ್ಯಾಂಕಿನಲ್ಲಿರುವ ಸೀಮಿತ ಹಣವನ್ನು ಕಂತುಗಳಲ್ಲಿ ನಿಧಾನವಾಗಿ ಬಳಸಬಹುದಿತ್ತು. ಮುಪ್ಪಿನ ಅನುಭವವಿದ್ದರೆ, ಬೆರಳುಗಳಡಿಯಲ್ಲಿ ಸೋರಿಹೋಗುವ ಮರಳನ್ನು ಸ್ವಲ್ಪ ಹೆಚ್ಚು ಹೊತ್ತು ಕೈಯಲ್ಲಿಟ್ಟುಕೊಳ್ಳಬಹುದಿತ್ತು. ...

ಆದರೆ, ಹಾಗಾಗುವುದು ಸಾಧ್ಯವಿದ್ದರೆ, ಬದುಕಿನಲ್ಲಿ ಯಾರಿಗಾದರೂ ಆಸಕ್ತಿಯಿರುತಿತ್ತೆ?

ಗೊತ್ತಿಲ್ಲ.





ಸಾಲ್‌ಮಿಂಚು

ಮಿಂಚುಗಣ್ಣಿನ ಹುಡುಗಿ ಕನಸು ಕಾಣುವಾಗ ಹೊರಗೆ ಮಳೆ ಸುರಿಯುತ್ತದೆ.

ಜೈರಾಮ ಶೀಗೆಹಳ್ಳಿ

ಮೋಡಗಳಿಗೆ ಅಲೆಮಾರಿ ಸ್ವಭಾವ. ನಿಂತಲ್ಲಿ ನಿಲ್ಲುವುದಿಲ್ಲ.

ಮಂಜುನಾಥ ಮಹಲಿಂಗಿಪುರ

ಸುಮ್ಮನಿರುವ ಗಿಡಮರ ಬಳ್ಳಿಗಳಿಗೆ ಬೆಳದಿಂಗಳ ಬಟ್ಟೆ ತೊಡಿಸುತ್ತದೆ ರಾತ್ರಿ.

ಲಕ್ಕೂರು. ಸಿ. ಆನಂದ

ಇಲ್ಲಿ ಯಾರೂ ಕೈಗಡ ಕೊಡುವುದಿಲ್ಲ; ಕನಸುಗಳನ್ನು ಮಾರಿಕೊಂಡೇ ಬದುಕಬೇಕು

ಚಂದ್ರಶೇಖರ ಸು. ಪಾಟೀಲ

ಸೂರ್ಯನೆಂದರೆ ನೆರಳುಗಳ ನಿರ್ಮಾಪಕ. **ಆರ್.ಜಿ. ತುಕ್ಕಪ್ಪನವರ**

ಮುಂಬೆಳಕಿನ ಮನದಲಿ ಗೋರಿಗಳು ಮಾತಾಡುತಿವೆ: ಹೊರಬೆಳಕಿನ ಪರದೆಯಲಿ ದಾರಿಗಳು ಮರೆಯಾಗುತ್ತಿವೆ **ಮಲ್ಲಿಕಾರ್ಜುನ ಬ. ಡಂಗಿ**

ನಿನ್ನ ಕಣ್ಣೊಳಗೊಂದು ಹಣತೆಯಿದೆ, ನನ್ನ ಸಣ್ಣತನಗಳನ್ನು ಸುಟ್ಟುಬಿಡು; ನಿನ್ನ ಎದೆಯೊಳಗೊಂದು ಒರತೆಯಿದೆ ನನ್ನ ಪಾಪಗಳನ್ನು ತೊಳೆದುಬಿಡು.

ಎಂ. ಡಿ. ಒಕ್ಕುಂದ

ನನ್ನ ಬೈತಲೆಯ ಅಂಚಲ್ಲಿ ಒಂದೆರಡು ಬೆಳ್ಳಿ ನರೆ; ನೆನಪಾಯಿತು ದೊರೆ, ನಿನ್ನ ಪ್ರಾಯದ ಲೆಕ್ಕ.

ರಂಜನಿ ಪ್ರಭು

ಅವಳು ಕೆದರಿದ ಕೇಶ ಸರಿಪಡಿಸಿಕೊಂಡಳು
ಅವನು ಅವಳಿಗೆ ಅವಳದೇ ಹೇರ್‌ಪಿನ್ ನೀಡಿದ
ಅವಳು ಅವನಿಗೆ ಅವನದೇ ಅಂಗಿ ಗುಂಡಿ ನೀಡಿದಳು.

ಮಹೇಶ್ ಕೆ. ಮಠದ್



ಥಾಮಸ್ ಮನ್

ವಾರ್ಡ್‌ರೋಬ್

ಕನ್ನಡಕ್ಕೆ : ಎ.ಎನ್. ಪ್ರಸನ್ನ

ಬರ್ಲಿನ್-ರೋಮ್ ಎಕ್ಸ್‌ಪ್ರೆಸ್ ಅರೆಗತ್ತಲಲ್ಲಿ, ಆ ಸಾಧಾರಣ ಮಟ್ಟದ ಸ್ಟೇಷನ್ ತಲುಪಿದಾಗ ಮೋಡ ಮುಸುಕಿ ಥಂಡಿಯಿತ್ತು. ಲೇಸ್ ಕವರ್‌ಗಳನ್ನು ಹೊಂದಿದ್ದ ಸೀಟುಗಳಿರುವ ಫಸ್ಟ್ ಕ್ಲಾಸ್ ಕಂಪಾರ್ಟ್‌ಮೆಂಟನಲ್ಲಿ ಒಬ್ಬನೇ ಪ್ರಯಾಣಿಕನಾಗಿದ್ದ ಆಲ್‌ಬ್ರೆಕ್ಟ್ ವಾನ್ ದೆ ಕ್ವಾಲೆ ಎಚ್ಚರಗೊಂಡು ಎದ್ದು ಕುಳಿತ. ಬಹು ದೂರ ಸಾಗಿ ಬಂದ ರೈಲು ನಿಂತಾಗ, ಆ ಪ್ರಯಾಣ ತಂದೊಡ್ಡುವ ಅಷ್ಟೇನೂ ಮನಸ್ಸೊಪ್ಪದ ಭಾವನೆ ಮೂಡುವುದರ ಜೊತೆ, ಬಾಯೊಳಗೆ ಒಂದು ಬಗೆ ಒಗರು ಉಂಟಾಯಿತವನಿಗೆ. ಅಲ್ಲದೆ ಈವರೆಗಿದ್ದ ಲಯಬದ್ಧ ಚಲನೆ ನಿಂತು, ಆಚೆಯ ಸದ್ದು-ಕೂಗುಗಳು ನಮ್ಮ ಗಮನಕ್ಕೆ ಬರುತ್ತವೆ. ಇದೊಂದು ರೀತಿ ಕುಡಿತದ ಅಮಲಿನಿಂದ ತಿಳಿದು ಬಂದ ಹಾಗೆ ಅಥವಾ ಮರಗಟ್ಟಿದ ಮೈಯನ್ನು ಅಟ್ಟಿದ ಹಾಗೆ. ನಮ್ಮ ನರಗಳನ್ನು ಬೆಂಬಲಿಸಿದ್ದ ಲಯಬದ್ಧ ಚಲನೆ ನಿಂತು ಹೋಗಿದ್ದರಿಂದ ನರಗಳು ಅವಾಕ್ಕಾಗಿ, ದಿಕ್ಕಿಲ್ಲದಂತಾಗುತ್ತವೆ. ರೈಲಿನಲ್ಲಿ ನಾವು ಗಾಢ ನಿದ್ದೆಯಿಂದ ಎದ್ದರೆ ಇವುಗಳ ಪ್ರಮಾಣ ಹೆಚ್ಚು.

ಆಲ್‌ಬ್ರೆಕ್ಟ್ ವಾನ್ ದೆ ಕ್ವಾಲೆ ಕೊಂಚ ಮೈ ಚಾಚಿ, ಕಿಟಕಿಯ ಬಳಿ ಜರುಗಿ, ಅದನ್ನು ಕೆಳಗಿಳಿಸಿದ. ಅವನು ರೈಲಿನುದ್ದಕ್ಕೂ ನೋಡಿದ. ಟಪಾಲು ಬೋಗಿಯ ಹತ್ತಿರ ಜನರು ಪಾರ್ಸಲ್ಲುಗಳನ್ನು ತೆಗೆಯುವ ಮತ್ತು ತುಂಬುವುದರ ಗಡಿಬಿಡಿಯಲ್ಲಿದ್ದರು. ಇಂಜಿನ್ ನಿಂತಲ್ಲೆ ಹಲವು ಬಗೆ ಶಬ್ದಮಾಡಿ, ಕುದುರೆಯಂತೆ ಗೊರಸುಗಳನ್ನೆತ್ತಿ, ಕಿವಿಗಳನ್ನು ನಿಮಿರಿಸಿ, ಅಲ್ಲಾಡದೆ ನಿಂತು ಮುಂದೆ ಹೋಗುವ ಸಿಗ್ನಲ್ಲಿಗಾಗಿ ತವಕಿಸುತ್ತ ನಿಂತಿತ್ತು. ತುಂಬಿದ ರೇನ್ ಕೋಟ್ ತೊಟ್ಟಿದ್ದ ಎತ್ತರದ ಧಡೂತಿ ಹೆಂಗಸೊಬ್ಬಳು ನೂರು ಪೌಂಡಿನ ಸೂಟ್‌ಕೇಸನ್ನು ತನ್ನ ಒಂದು ಮೊಣಕಾಲಿಂದ ಮುಂದೆ ತಳ್ಳುತ್ತಿದ್ದಳು. ಅವಳೇನೂ ಮಾತಾಡುತ್ತಿರಲಿಲ್ಲ. ಆದರೆ ಅವಳ ಮುಖ ಕಾವೇರಿ ಸಂಕಷ್ಟಕ್ಕೆ ಒಳಗಾದಂತಿತ್ತು. ಅವಳ ಉಬ್ಬಿದ ತುಟಿಗಳ ಮೇಲೆ ಬೆವರ ಹನಿಗಳಿದ್ದು ದೀನಳಾಗಿ ಕಾಣುತ್ತಿದ್ದಳು. 'ಅಯ್ಯೋ, ಬಡಪಾಯಿಯೇ, ನಾನು ನಿನಗೆ ಸಹಾಯ ಮಾಡುವುದಾದರೆ... ಆ ಮೇಲ್ದುಟಿಗೋಸ್ಕರ ನಿನ್ನನ್ನು ಒಳಗೆ ಕರೆದುಕೊಳ್ಳಲು ಸಾಧ್ಯವಾದರೆ?... ಆದರೆ ಪ್ರತಿಯೊಬ್ಬನೂ ತನ್ನಷ್ಟಕ್ಕೆ ತಾನು. ಜೀವನದ ರೀತಿಯೇ ಹಾಗೆ. ನಾನಿಲ್ಲಿ ಆರಾಮಾಗಿ ನಿಂತು ಬೆನ್ನ ಮೇಲೆ ಬಿದ್ದ ಹುಳುವನ್ನು ನೋಡುತ್ತಿರುವಂತೆ ನಿನ್ನನ್ನು ನೋಡುತ್ತಿದ್ದೇನೆ' ಎಂದುಕೊಂಡ ಆಲ್‌ಬ್ರೆಕ್ಟ್.



ಸ್ಟೇಷನ್‌ನಲ್ಲಿ ಅರೆಗತ್ತಲು. ಅದು ಬೆಳಗಿನ ಜಾವವೋ ಅಥವಾ ಸಂಜೆಗತ್ತಲೋ ಅವನಿಗೆ ತಿಳಿಯಲಿಲ್ಲ. ಅವನು ಮಲಗಿಬಿಟ್ಟಿದ್ದ; ಎರಡೋ, ಐದೋ, ಹನ್ನೆರಡೋ ಯಾರಿಗೆ ಹೇಳಲು ಸಾಧ್ಯ? ಕೆಲವು ಸಲ ಅವನು ಇಪ್ಪತ್ತನಾಲ್ಕು ಗಂಟೆ ಮತ್ತು ಅದಕ್ಕಿಂತ ಹೆಚ್ಚು ಗಾಢ ನಿದ್ರೆಯಲ್ಲಿ ತಡೆಯಿಲ್ಲದೆ ಒಂದೇ ಸಮನೆ ಮಲಗಿದ್ದ. ಚಳಿಗಾಲಕ್ಕೊಪ್ಪುವ, ಸಾಂದ್ರ ಕಂದು ಬಣ್ಣದ, ವೆಲ್ವೆಟ್ ಕಾಲರಿನ, ಮೊಂಡು ಓವರ್‌ಕೋಟ್ ತೊಟ್ಟಿದ್ದ. ಅವನ ಮೈಕಟ್ಟಿನಿಂದ ಅವನ ವಯಸ್ಸನ್ನು ಸರಿಯಾಗಿ ಹೇಳುವುದು ಕಷ್ಟ. ಆದರೆ ಯಾರೇ ಆಗಲಿ ಇಪ್ಪತ್ತೈದರಿಂದ ಮೂವತ್ತು ಎಂದು ಅಂದಾಜು ಮಾಡಬಹುದು. ಪಕ್ಕ ಬೈತಲೆಯ ಕಪ್ಪುಗೂದಲಿನ ಅವನಿಗೆ, ಮೈಬಣ್ಣ ಹಳದಿ. ಅವನ ಕಣ್ಣುಗಳು ಕಲ್ಲಿದ್ದಲಿನಂತೆ. ಅವುಗಳ ಸುತ್ತಲೂ ಛಾಯೆ. ಆ ಕಣ್ಣುಗಳೇನೂ ಒಳ್ಳೆಯದನ್ನು ಹೇಳುತ್ತಿರಲಿಲ್ಲ. ನಿರ್ಭಿಡೆಯಿಂದ ಎದುರೆದುರು ಮಾತಾಡಿದ ಅನೇಕ ಡಾಕ್ಟರುಗಳು ಅವನಿಗೆ ಕೇವಲ ಕೆಲವು ತಿಂಗಳು ಬದುಕುವ ಗಡುವು ಕೊಟ್ಟಿದ್ದರು.

ಬರ್ಲಿನ್‌ನಲ್ಲಿ-ಅದೇನೂ ಅವನು ಪ್ರಯಾಣ ಆರಂಭಿಸಿದ ಸ್ಥಳವಾಗಿರಲಿಲ್ಲ-ರೈಲು ಹೊರಡುತ್ತಿದ್ದ ಹಾಗೆ ಕೈಯಲ್ಲೊಂದು ಕೆಂಪು ಲೆದರ್ ಬ್ಯಾಗ್ ಹಿಡಿದು ಹತ್ತಿಕೊಂಡಿದ್ದ. ಅನಂತರ ನಿದ್ದೆ ಹೋದ ಅವನಲ್ಲೀಗ ಉತ್ಸಾಹ ಮೂಡಿತ್ತು. ತಾನು ಕತ್ತಿನಲ್ಲಿ ಹಾಕಿಕೊಂಡಿದ್ದ ಬಂಗಾರದ ಚೈನಿನ ಮತ್ತೊಂದು ಕೊನೆಯಲ್ಲಿ ಪದಕವೊಂದಿದ್ದು, ಅದು ವೇಸ್ಟ್ ಕೋಟಿನ ಪಾಕೆಟ್ಟಿನಲ್ಲಿ ಇರುವುದರ ಅರಿವಾಗಿ ಅವನಿಗೆ ಸಂತೋಷವಾಯಿತು. ಅವನಿಗೆ ವಾರದಲ್ಲಿ ಇದು ಯಾವ ದಿನ, ಗಂಟೆ ಇತ್ಯಾದಿಗಳ

ಗೊಡವೆಯೇ ಬೇಕಿರಲಿಲ್ಲ. ಅಲ್ಲದೆ ಕ್ಯಾಲೆಂಡರುಗಳಿಗೂ ಅವನಿಗೂ ಹೊಂದಾಣಿಕೆ ಯಾಗುತ್ತಿರಲಿಲ್ಲ. ತಿಂಗಳು, ವಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟು ಸಾಕಷ್ಟು ಸಮಯವಾಗಿತ್ತು. ಪ್ರತಿಯೊಂದಕ್ಕೂ ಅವಕಾಶವಿರಬೇಕು ಎಂದುಕೊಂಡ. ಈ ಮಾತು ಅಸ್ಪಷ್ಟವಾದರೂ ಎಲ್ಲವನ್ನೂ ಒಳಗೊಳ್ಳುತ್ತದೆ. ತನ್ನನ್ನು ಉದ್ರಿಕ್ತನನ್ನಾಗಿಸುವ ಎಲ್ಲ ವಿಷಯಗಳನ್ನೂ ದೂರವಿರಿಸಿದ್ದ. ಅವನಿಗೆ ಸುಮಾರಾಗಿ ಇದು ಯಾವ ಋತು ಎಂದು ತಿಳಿದಿದ್ದರೆ ಸಾಕಲ್ಲವೆ? 'ಇದು ಹೆಚ್ಚು ಕಡಿಮೆ ತರದೃತು ಇರಬೇಕು' ಎಂದುಕೊಂಡ. ಹೊರಗಡೆಯ ಮಂಕು ಮುಚ್ಚಿದ ಶೀತಲ ರೈಲು ಶೆಡ್ಡುಗಳನ್ನು ನೋಡಿ, 'ಇದಕ್ಕಿಂತ ಹೆಚ್ಚಿಗೆ ನನಗೆ ಗೊತ್ತಿಲ್ಲ. ನಾನೆಲ್ಲಿದ್ದೇನೆ ಎನ್ನುವುದಾದರೂ ಗೊತ್ತಿದೆಯ?' ಎಂದುಕೊಂಡ.

ಈ ಆಲೋಚನೆಯಿಂದ ಅವನಿಗೆ ಒಂದು ರೀತಿಯ ಥ್ರಿಲ್ ಎನ್ನಬಹುದಾದ ಸಮಾಧಾನ ಉಂಟಾಯಿತು. ಇಲ್ಲ, ಅವನಿಗೆ ತಾನೆಲ್ಲಿದ್ದೇನೆಂದು ಗೊತ್ತಿರಲಿಲ್ಲ. ಅನುಮಾನವೇ ಇರದ ಹಾಗೆ ಅವನು ಇನ್ನೂ ಜರ್ಮನಿಯಲ್ಲಿಯೇ ಇದ್ದಾನೆಯೇ... ನಾರ್ತ್ ಜರ್ಮನಿಯಲ್ಲಿ? ಅದನ್ನಿನ್ನೂ ನೋಡಬೇಕಾಗಿದೆ. ಅವನ ಕಣ್ಣುಗಳು ಇನ್ನೂ ನಿದ್ದೆಯಿಂದ ಭಾರವಾಗಿದ್ದಂತೆ, ಅವನಿದ್ದ ಕಂಪಾರ್ಟ್‌ಮೆಂಟ್, ಸ್ಟೇಷನ್ ಒಂದರ ಹೆಸರನ್ನು ಸೂಚಿಸುವ ಉದ್ದೀಪನ ನಾಮ ಫಲಕವೊಂದನ್ನು ಹಾಯ್ದು ಹೋಯಿತು. ಆದರೆ ಅದರ ಒಂದಕ್ಷರವೂ ಅವನ ತಲೆಯೊಳಗೆ ಹೋಗಲಿಲ್ಲ. ಅದರ ಕಂಡಕ್ಟರ್ ಕೂಡ ಆ ಹೆಸರನ್ನು ಎರಡು ಮೂರು ಸಲ ಕೂಗಿದ್ದು ಅವನಿಗೆ ಕೇಳಿಸಿತು. ಆದರೆ ಅವನಿಗೆ ಕಿಂಚಿತ್ ಗ್ರಹಿಸಲಾಗಲಿಲ್ಲ. ಬೆಳಿಗ್ಗೆಯೋ, ಸಂಜೆಯೋ ಎಂದು ಅವನಿಗೆ ಅರಿವಾಗದಂತಿದ್ದ ಆ ಮುಸ್ಸಂಜೆಯ ಆವರಣ



ಥಾಮಸ್ ಮನ್ (1975-1955)

ಥಾಮಸ್ ಮನ್ ಜರ್ಮನಿಯ ಇಪ್ಪತ್ತನೆ ಶತಮಾನದ ಶ್ರೇಷ್ಠ ಲೇಖಕ. 'ಮ್ಯಾಜಿಕ್ ಮೌಂಟನ್', 'ಡಾಕ್ಟರ್ ಫಾಸ್ಟಸ್' ಜಗತ್ತಿನ ಮನ್ನಣೆ ಪಡೆದ ಅವನ ಮಹಾನ್ ಕಾದಂಬರಿಗಳು. ಇವಲ್ಲದೆ 'ಟೋನಿ ಕ್ರೋಜರ್', 'ವೆನಿಸ್ಸಿನಲ್ಲಿ ಸಾವು' ಮುಂತಾದ ಅತ್ಯುತ್ತಮ ಸಣ್ಣ ಕತೆಗಳನ್ನು ಬರೆದಿದ್ದಾನೆ. ಥಾಮಸ್ ಮನ್‌ನ ಕಾದಂಬರಿಗಳಲ್ಲಿ ಜರ್ಮನಿಯ ಸಾಂಸ್ಕೃತಿಕ ನೆಲೆಯ ಬಗ್ಗೆ ಪ್ರಬುದ್ಧ ವಿಶ್ಲೇಷಣೆ ದೊರಕುತ್ತದೆ. ಸಣ್ಣ ಕತೆಗಳಲ್ಲಿ ಹೆಚ್ಚು ವಿಷಾದದ ಛಾಯೆ ಕಾಣುತ್ತದೆ. ಹಿಟ್ಲರ್ ಅಧಿಕಾರಕ್ಕೆ ಬಂದಾಗ ಜರ್ಮನಿ ತೊರೆದು ಅಮೆರಿಕದಲ್ಲಿ ನೆಲೆಸಿ, ಆ ದೇಶದ ಪ್ರಜೆಯಾದ.



'ವಾರ್ಡ್‌ರೋಬ್'ನಲ್ಲಿ ಮಾಯಾ ವಾಸ್ತವತೆಯ ಯಶಸ್ವಿ ಬಳಕೆ ಕಂಡುಬರುತ್ತದೆ. ಸಾವಿನ ನಿರೀಕ್ಷೆಯಲ್ಲಿರುವ ಯುವಕನೊಬ್ಬ ಅಪರಿಚಿತ ಊರು ಹಾಗೂ ಜನರ ನಡುವೆ ಹೋಟೆಲಿನ ರೂಮೊಂದರಲ್ಲಿ ಕಾಲ ಕಳೆಯುತ್ತಾನೆ. ಅಲ್ಲಿ ಅವನಿಗೆ ಸಾವನ್ನು ಸೂಚಿಸುವ ಹುಡುಗಿಯೊಬ್ಬಳು ಅದರ ನಿಷ್ಠುರತೆ ಕುರಿತು ಕತೆಗಳನ್ನು ಹೇಳುತ್ತಾಳೆ.

ಥಾಮಸ್ ಮನ್‌ನ ಈ ಕತೆಯನ್ನು ಕನ್ನಡಕ್ಕೆ ತಂದಿರುವ ಎ.ಎನ್. ಪ್ರಸನ್ನ ಕನ್ನಡ ಕಥಾ ಲೋಕದ ಒಂದು ವಿಶಿಷ್ಟ ದನಿ.

ದಲ್ಲಿ ಅಪರಿಚಿತ ಊರೊಂದಿತ್ತು. ಆಲ್‌ಬ್ರೆಕ್ಟ್ ರ್‍ಯಾಕ್‌ನಿಂದ ಫೆಲ್ಟ್ ಹ್ಯಾಟ ತೆಗೆದು, ಕೆಂಪು ಲೆದರ್ ಬ್ಯಾಗ್ ಹಾಗೂ ಛತ್ರಿ ಎತ್ತಿಕೊಂಡು, ಟಿಕೆಟ್‌ನಲ್ಲಿ ಫ್ಲಾರೆನ್ಸ್ ಎಂದಿದ್ದರೂ ಕಂಪಾರ್ಟ್‌ಮೆಂಟ್ ಮತ್ತು ರೈಲಿನಿಂದ ಆಚೆ ಬಂದು, ಕ್ಲೋಕ್ ರೂಮಿಗೆ ಹೋಗಿ ಸಾಮಾನುಗಳನ್ನು ಅಲ್ಲಿಟ್ಟು, ಛತ್ರಿ ಮತ್ತು ಕೈ-ಬೆತ್ತವನ್ನು ಅಲ್ಲಿಯೇ ಬಿಟ್ಟು, ಸಿಗಾರ್ ಹಚ್ಚಿ ಕೊಂಡು, ಕೈಗಳನ್ನು ಓವರ್‌ಕೋಟ್‌ನಲ್ಲಿ ಇಳಿ ಬಿಟ್ಟು ಸ್ಟೇಷನ್‌ನಿಂದ ಹೊರಟ.

ಹೊರಗಡೆ ಥಂಡಿ, ಮಬ್ಬುಗತ್ತಲು. ಬಿಕೋ ಎನ್ನುತ್ತಿದ್ದ ಚೌಕದಲ್ಲಿ ಐದಾರು ಕುದುರೆ ಗಾಡಿಗಳಿ ದ್ದವು. ಅವುಗಳನ್ನು ಓಡಿಸುವವರು ಚಾವಟಿಯನ್ನು ಆಡಿಸುತ್ತಿದ್ದರು. ಉದ್ದನೆಯ ಕೋಟು, ಟೋಪಿ ಹಾಕಿಕೊಂಡಿದ್ದ ಅವರಲ್ಲೊಬ್ಬ, 'ಹೋಟೆಲ್ಲಿಗಾ' ಎಂದ. ಅವನಿಗೆ ವಂದಿಸಿ ಆಲ್‌ಬ್ರೆಕ್ಟ್ ಮುಂದೆ ಹೊರಟ. ದಾರಿಯಲ್ಲಿ ಕಂಡ ಕೆಲವರು ಕೋಟಿನ ಕಾಲರನ್ನು ಮೇಲೆ ಮಾಡಿಕೊಂಡಿದ್ದರು. ಅವನೂ ಹಾಗೆಯೇ ಗಲ್ಲ ಮುಚ್ಚುವವರೆಗೆ ಮೇಲೆ ಮಾಡಿಕೊಂಡು, ಸಿಗಾರಿನ ಹೊಗೆ ಬಿಡುತ್ತಾ ಹೆಜ್ಜೆ ಹಾಕಿದ.

ಚಿಕ್ಕ ಗೋಡೆಯ ಪಕ್ಕದಲ್ಲಿ ನಡೆದ. ಮುಂದೆ ದೊಡ್ಡ ಗೋಪುರಗಳಿದ್ದ ಗೇಟು. ಕೈ ಹಿಡಿಕೆಯಲ್ಲಿ ವಿಗ್ರಹಗಳಿದ್ದ ಸೇತುವೆಯನ್ನು ದಾಟಿದ. ಕೆಳಗೆ ನೀರು ನಿಧಾನ ಹರಿಯುತ್ತಿತ್ತು. ಅದರಲ್ಲಿ ಉದ್ದನೆಯ ಗಳು ಹಿಡಿದುಕೊಂಡು ಜರ್ಜರಿತ ಗೊಂಡ ಹಳೆಯ ಬೋಟನ್ನು ಮುಂದೋಡಿಸುತ್ತ ಒಬ್ಬ ಬಂದ. ಕ್ವಾಲೆ ಕೈ ಹಿಡಿಕೆಗೆ ಒರಗಿಕೊಂಡು ಸ್ವಲ್ಪ ಕಾಲ ನೋಡಿದ. 'ಇಲ್ಲೊಂದು ನದಿ ಇದೆ; ಇಲ್ಲಿರುವುದೇ ನದಿ. ನನಗೆ ಇದರ ಹೆಸರು ಗೊತ್ತಿಲ್ಲ. ಅದಕ್ಕೆ ಹಾಗೆ ಹೇಳುತ್ತೇನೆ. ಹಾಗೆ ತಿಳಿದುಕೊಳ್ಳಲು ಖುಷಿಯಾಗುತ್ತೆ' ಎಂದು ತನಗೆ ತಾನೆ ಹೇಳಿಕೊಂಡು ಮುಂದೆ ನಡೆದ.

ಅವನು ಅಷ್ಟೇನೂ ಚಿಕ್ಕದಲ್ಲದ, ಅಗಲ ವಲ್ಲದ ರಸ್ತೆಯ ಫುಟ್‌ಪಾತಿನ ಮೇಲೆ ನಡೆದು ಎಡಕ್ಕೆ ತಿರುಗಿದ. ಆಗ ಸಾಯಂಕಾಲ. ವಿದ್ಯುತ್ ದೀಪಗಳು ಮಿನುಗುತ್ತಿದ್ದವು. ಅಂಗಡಿಗಳು ಮುಚ್ಚುತ್ತಿದ್ದವು. 'ಎಲ್ಲಾ ರೀತಿಯಲ್ಲೂ ಇದು ಶರದೃತುವೆಂದು ನಾವು ಹೇಳಬಹುದು' ಎಂದು ಕೊಂಡು ಆಲ್‌ಬ್ರೆಕ್ಟ್ ಕಪ್ಪಾದ ಜಂಗು ಜಾಡಿನಲ್ಲಿ ಹೆಜ್ಜೆ ಹಾಕಿದ. ಅಂದವಾದ ಅವನ ಬೂಟುಗಳು ಗಟ್ಟಿಯಾಗಿದ್ದವು.

ಅವನು ಎಡ ಭಾಗದಲ್ಲಿಯೇ ನಡೆದ. ವ್ಯವಹಾರದ ಕಾರಣ ಅನೇಕರು ಅವನನ್ನು ದಾಟಿ ಅವಸರದಿಂದ ಹಿಂದಕ್ಕೋ, ಮುಂದಕ್ಕೋ ಓಡಾಡುತ್ತಿದ್ದರು. 'ನಾನೂ ಅವರ ಜೊತೆ ಸೇರಿ ಕೊಳ್ಳುತ್ತೇನೆ... ನಾನಿಲ್ಲಿ ಒಬ್ಬಂಟಿ, ಅಪರಿಚಿತ, ನನ್ನನ್ನು ಯಾರೂ ಈ ಮೊದಲು ನೋಡಿಲ್ಲ. ನನಗೆ ಗೊತ್ತಿಲ್ಲ, ಗುರಿಯಿಲ್ಲ; ಹಿಂದಿಲ್ಲ ಮುಂದಿಲ್ಲ. ನಾನು ಸ್ವತಂತ್ರ. ಎಲ್ಲದರಿಂದ ದೂರ. ನಾನು ಯಾರಿಗೂ ಬಿಡಿಗಾಸು ಕೊಡ ಬೇಕಾಗಿಲ್ಲ; ನನಗೂ ಯಾರೂ ಕೊಡ ಬೇಕಾಗಿಲ್ಲ. ದೇವರು ನನಗೆಂದೂ ಆಶೀರ್ವದಿ ಸಿಲ್ಲ. ಅವನಿಗೆ ನಾನು ಗೊತ್ತೇ ಇಲ್ಲ. ಯಾವುದೇ ಹಂಗಿರದ ಅಸಂತೋಷ ಒಂದು ರೀತಿ ಒಳ್ಳೆ ಯದೇ. ಆಗವನು ದೇವರಿಗೆ ಹೇಳಬಹುದು: ನಾನೇನೂ ದೇವರಿಗೆ ಋಣಿಯಲ್ಲ' ಎಂದುಕೊಂಡ.

ಅವನು ಅಷ್ಟರಲ್ಲಿಯೇ ಊರಿನಂಚಿಗೆ ಬಂದಿದ್ದ. ಮಧ್ಯದಲ್ಲಿ ಎಲ್ಲೋ ಅವನು ಅಡ್ಡ ದಾರಿ ಹಿಡಿದಿರಬೇಕು. ಅವನೀಗ ಮನೆ, ಮರಗಳಿರುವ ದೊಡ್ಡ ರಸ್ತೆಯಲ್ಲಿದ್ದ. ಪಕ್ಕಕ್ಕೆ ತಿರುಗಿ ಎರಡು ಮೂರು ಚಿಕ್ಕ ಅಡ್ಡ ರಸ್ತೆಗಳನ್ನು ದಾಟಿದ. ಅಲ್ಲಿ ಬೀದಿ ದೀಪಗಳು ಮಾತ್ರ ಕಂಡವು. ಅವನಿನ್ನೂ ಮುಂದಕ್ಕೆ ಹೋಗಿ, ಕೊಂಚ ಅಗಲವಾದ ರಸ್ತೆಗೆ ಬಂದು, ಮರದ ಬಾಗಿಲಿದ್ದ ಮನೆಯ ಮುಂದೆ ನಿಂತ. ಒಂದು ರೀತಿ ಊದಿಕೊಂಡಂತೆ ಕಾಣುತ್ತಿದ್ದ ಆ ಮನೆಗೆ ಗಾಜಿನ ಕಿಟಕಿಗಳಿದ್ದವು. ಮನೆಯ ಬಾಗಿಲ ಮೇಲೆ, 'ಮೂರನೆ ಮಹಡಿಯಲ್ಲಿ ರೂಮುಗಳು

ಬಾಡಿಗೆಗೆ ಇವೆ' ಎಂದು ಬರೆದಿತ್ತು. 'ಅಬ್ಬ' ಎಂದು ಮುಗಿಯುತ್ತಿದ್ದ ಸಿಗಾರನ್ನು ಆಚೆ ಎಸೆದು, ಬಾಗಿಲು ತಳ್ಳಿ, ಒಳಗೆ ಹೋದ. ಒಳಗೆ ಎರಡು ಭಾಗಗಳಾಗಿ ನಿರ್ಮಿಸಿದ್ದ ಕಟ್ಟಡದ ಮಧ್ಯೆ ನಡೆದು, ಎಡಕ್ಕೆ ತಿರುಗಿ ಮರದ ಮೆಟ್ಟಿಲು ಹತ್ತಿದ.

ಹಲವಾರು ಅಪಾರ್ಟಮೆಂಟಿನ ಬಾಗಿಲುಗಳು ಸಾಧಾರಣವಾಗಿದ್ದವು. ಕೆಲವಕ್ಕೆ ಅದರೊಳಗಿದ್ದವರ ನಾಮಫಲಕಗಳಿದ್ದವು. ಹತ್ತುತ್ತ ದಿಕ್ಕು ಬದಲಿಸುವ ಕಡೆ ಎಣ್ಣೆ ದೀಪಗಳಿದ್ದವು. ಮೂರನೆ ಮಹಡಿಗೆ ಬಂದು ಎಡಗಡೆಯ ಬೆಲ್ ಮಾಡಿದ. ಏನೂ ಉತ್ತರವಿರಲಿಲ್ಲ. ಬಲಗಡೆಯ ಬೆಲ್ ಮಾಡಿದ. ಒಳಗಿಂದೆಲ್ಲೋ ಹೆಜ್ಜೆ ಶಬ್ದ ಕೇಳಿಸಿತು. ಅದು ಹತ್ತಿರವಾಗಿ ಬಾಗಿಲು ತೆರೆಯಿತು.

ತೆಳ್ಳಗೆ, ಬೆಳ್ಳಗೆ, ಮಾಸಿದ ಕಪ್ಪು ಗೌನ್ ತೊಟ್ಟಿದ್ದ ವಯಸ್ಸಾದವಳೊಬ್ಬಳು ನಿಂತಿದ್ದಳು. ಆಕೆಯ ಉಬ್ಬು ಹಣೆ ಮತ್ತು ಅದರ ಮೇಲಿನ ಕೆಟ್ಟ ಚರ್ಮ, ಗುಳಿಬಿದ್ದ ಗಲ್ಲಗಳು ಅವನಿಗೆ ಇಷ್ಟವಾಗಲಿಲ್ಲ.

'ನಮಸ್ಕಾರ... ರೂಮುಗಳು?' ಎಂದ ಆಲ್‌ಬ್ರೆಕ್ಟ್.

ಆಕೆ ತಲೆ ಹಾಕಿದಳು. ಸಣ್ಣಗೆ ನಕ್ಕು, ತನ್ನ ನೀಳ ಕೈಯೆತ್ತಿ ಎಡಗಡೆ ತೋರಿಸಿ ಒಳಗೆ ಹೋದಳು. ಬೀಗದ ಕೀಯನ್ನು ತಂದ ಅವಳನ್ನು ನೋಡುತ್ತ, 'ಇವಳೊಳ್ಳೆ ದೆವ್ವದ ಥರ ಇದಾಳೆ' ಎಂದುಕೊಂಡ ಆಲ್‌ಬ್ರೆಕ್ಟ್. ಅವಳು ಅಲ್ಲಿದ್ದ ಎಣ್ಣೆ ದೀಪವನ್ನು ಎತ್ತಿಕೊಂಡು ಅವನನ್ನು ಒಳಗೆ ಕರೆದುಕೊಂಡು ಹೋದಳು.

ಅದೊಂದು ಚಿಕ್ಕ ರೂಮು. ಕಂದು ನೆಲ, ಕಡಿಮೆ ಎತ್ತರದಲ್ಲಿ ತಾರಸಿ. ಗೋಡೆಗಳಿಗೆಲ್ಲ ಒಣ ಹುಲ್ಲಿನ ಬಣ್ಣದ ಚಾಪೆ ತೂಗು ಹಾಕಿತ್ತು. ಅಲ್ಲಿ, ಬಲಗಡೆ, ಹಿಂದಕ್ಕೆ ಬಿಳಿ ಮಸ್ಲಿನ್ ಪರದೆ ಇಳಿಬಿಟ್ಟಿದ್ದ ಕಿಟಕಿ. ಪಕ್ಕದ ರೂಮಿಗೆ ಹೋಗಲು ಬಲ ಭಾಗದಲ್ಲೊಂದು ಬಿಳಿ ಬಣ್ಣದ ಬಾಗಿಲು. ದಿಟ್ಟಿಸಿ ನೋಡುವ ಬಿಳಿ ಗೋಡೆಗಳು, ಕ್ರೀಂನಿಂದ ಹೊರಗೆ ಚಾಚುವ ಸ್ಟ್ರಾಬೆರಿಯಂತೆ ಎದ್ದು ಕಾಣುವ ಪಿಂಕ್ ಬಣ್ಣದ ಮೂರು ಕುರ್ಚಿಗಳು, ಮಧ್ಯದಲ್ಲೊಂದು ಭಾರಿ ಹಾಸಿಗೆ, ಕನ್ನಡಿಯಿದ್ದ ವಾಶ್ ಬೇಸಿನ್, ಒಂದು ವಾರ್ಡ್‌ರೋಬ್- ಇವುಗಳನ್ನು ಬಿಟ್ಟರೆ ಉಳಿದದ್ದೆಲ್ಲ ಖಾಲಿ.

'ಏನಾದ್ರೂ ತೊಂದರೆ... ಅಲ್ಲ, ಕೇಳಿದೆ,' ಎಂದಳು, ತನ್ನ ಹಣೆಯ ಮೇಲಿನ ಕೆಟ್ಟ ಚರ್ಮದ ಮೇಲೆ ಕೈಯಾಡಿಸುತ್ತ.


'ಏನಿಲ್ಲ... ರೂಮು ನನಗಿರಲಿ. ಫರ್ನಿಚರ್ ಚೆನ್ನಾಗಿವೆ. ಸ್ಟೇಷನ್ನಿಂದ ನನ್ನ ಲಗೇಜನ್ನ ಯಾರಾದ್ರೂ ತರಬೇಕಷ್ಟೆ. ಟಿಕೇಟ್ ಇಲ್ಲಿದೆ. ಹಾಸಿಗೆ ಸರಿಪಡಿಸಿ, ಕುಡಿಯಲಿಕ್ಕೆ ಒಂದಿಷ್ಟು ನೀರು ಕೊಟ್ಟರೆ ಒಳ್ಳೆಯದು. ಮುಂಬಾಗಿಲ ಕೀ ಮತ್ತು ಅಪಾರ್ಟ್‌ಮೆಂಟಿನ ಕೀ ನಾನು ತೆಗೆದುಕೊಳ್ತೀನಿ... ನನಗೆ ಒಂದೆರಡು ಟವೆಲ್ ಬೇಕು. ಕೈ-ಕಾಲು-ಮುಖ ತೊಳೆದುಕೊಂಡು ಸಿಟೀಗೆ ಹೋಗಿ ಊಟ ಮಾಡಿಕೊಂಡು ಬರ್ತೀನಿ.'

ಅವನು ಪಾಕೆಟ್ ಒಳಗಿಂದ ನಿಕ್ಕಲ್ ಕೇಸ್ ಹೊರತೆಗೆದ. ಅದರೊಳಗಿದ್ದ ಸೋಪ್ ತೆಗೆದ. ಕಮಾನು ಕಿಟಕಿಯಾಚೆ ಕಾಣುವ, ಗ್ಯಾಸ್ ಸಾಲುದೀಪಗಳ ರಾಡಿ ರಸ್ತೆ, ಮನೆಗಳನ್ನ ನೋಡುತ್ತಾ ಮುಖ ತೊಳೆದುಕೊಂಡ. ಒರೆಸಿಕೊಳ್ಳುತ್ತ ವಾರ್ಡ್‌ರೋಬ್ ಬಳಿ ಹೋದ. ಅದು ಚಚ್ಚೌಕವಾಗಿತ್ತು. ಮೇಲೊಂದು ಕಮಾನು ವಾರ್ನಿಶ್ ಹಚ್ಚಿತ್ತು. ಬಲ ಗೋಡೆಯ ನಡುವೆ ಎರಡನೇ ಬಿಳಿ ಬಾಗಿಲಿಗೆ ಹೊಂದಿಕೊಂಡಿತ್ತು. 'ಎಲ್ಲಾ ಚೆನ್ನಾಗಿ ಮಾಡಿದ್ದಾರೆ. ಈ ವಾರ್ಡ್‌ರೋಬ್ ಈ ಗೋಡೆಗೆ ಹೇಳಿ ಮಾಡಿಸಿದಂತಿದೆ' ಎಂದುಕೊಂಡ ಆಲ್‌ಬ್ರೆಕ್ಟ್ ಅದರ ಬಾಗಿಲು ತೆಗೆದ. ಅದು ಪೂರ್ತಿ ಖಾಲಿಯಾಗಿತ್ತು. ಮೇಲುಗಡೆ ಸಾಲು ಸಾಲು ಹುಕ್ಕುಗಳಿದ್ದವು. ಅದಕ್ಕೆ ಹಿಂಭಾಗವೇ ಇದ್ದಂತಿರಲಿಲ್ಲ. ಹಿಂದುಗಡೆ ಗೋಣಿ ತಾಟು ಮುಚ್ಚಿ, ನಾಲ್ಕು ಮೂಲೆಗೆ ಮೊಳೆ ಹೊಡೆದಿತ್ತು.


ಆಲ್‌ಬ್ರೆಕ್ಟ್ ವಾರ್ಡ್‌ರೋಬ್ ಮುಚ್ಚಿ, ಹ್ಯಾಟ್ ತೆಗೆದುಕೊಂಡು, ಕೋಟಿನ ಕಾಲರ್ ಮತ್ತೊಮ್ಮೆ ಸರಿಪಡಿಸಿಕೊಂಡು, ಕ್ಯಾಂಡಲ್ ಆರಿಸಿ, ಹೊರಟ. ಮುಂದುಗಡೆ ರೂಮನ್ನು ದಾದು ಹೋಗುವಾಗ ತನ್ನ ಹೆಜ್ಜೆಯ ಶಬ್ದದ ಜೊತೆ ಪಕ್ಕದ ರೂಮಿನಿಂದ ಮೃದುವಾದ, ಸ್ಪಷ್ಟವಾದ ಲೋಹದ ಶಬ್ದ ಕೇಳಿಸಿದಂತಾಯಿತು. ಅಥವಾ ತಾನು ತಪ್ಪು ತಿಳಿದುಕೊಂಡಿರಬಹುದು ಎಂದುಕೊಂಡ. ಬಂಗಾರದ ಉಂಗುರವನ್ನು ಬೆಳ್ಳಿ ಬೇಸಿನ್ನಿನಲ್ಲಿ ಹಾಕಿದ ಹಾಗೆ ಎಂದುಕೊಳ್ಳುತ್ತ ಹೊರಬಾಗಿಲಿಗೆ ಬೀಗ ಹಾಕಿದ. ಮೆಟ್ಟಿಲಿಳಿದು, ಗೇಟ್ ದಾಟಿ, ಊರ ಕಡೆ ಹೊರಟ.

ಜನಸಂದಣಿ ಹೆಚ್ಚಾಗಿದ್ದ ರಸ್ತೆಯೊಂದರದಲ್ಲಿ ಝಗ ಝಗಿಸಿ ಬೆಳಗುತ್ತಿದ್ದ ಹೋಟೆಲ್ ಹೊಕ್ಕು, ಇಡೀ ಜಗತ್ತಿಗೆ ವಿಮುಖವಾಗಿ, ಮುಂಭಾಗದ ಟೇಬಲ್ ಆರಿಸಿಕೊಂಡು ಕುಳಿತ. ಸೂಪ್ ಕುಡಿದು, ಮೊಟ್ಟೆಯಿಂದ ಮಾಡಿದ ತಿಂಡಿಯಲ್ಲದೆ ಮತ್ತಷ್ಟು ತಿಂದು, ವೈನ್ ಕುಡಿದೆದ್ದ. ದುಡ್ಡು ಕೊಟ್ಟು, ಕೋಟ್ ಹಾಕಿಕೊಳ್ಳುತ್ತ ರಷ್ಯಾದ ಸಿಗಾರ್ ಹಚ್ಚಿಕೊಂಡು, ಒಂದೆರಡು ದಂ ಎಳೆದು ಹೊರಬಿದ್ದ. ಸ್ವಲ್ಪ ಹೊತ್ತು ತಿರುಗಾಡಿ, ಹಿಂತಿರು ಗುವ ದಾರಿ ಗುರುತು ಹಿಡಿದು, ನಿಧಾನವಾಗಿ ಹೆಜ್ಜೆ ಹಾಕಿದ.

ಗಾಜಿನ ಕಿಟಕಿಗಳಿದ್ದ ಆ ಮನೆಯ ಬಾಗಿಲು ತೆಗೆದು ಆಲ್‌ಬ್ರೆಕ್ಟ್ ಒಳಗೆ ಹೋದಾಗ ಕತ್ತಲು ಹಾಗೂ ಮೌನ ಆವರಿಸಿತ್ತು. ಬೆಂಕಿ ಕಡ್ಡಿಗಳನ್ನು ಗೀರಿ, ಅರೆ ಬೆಳಕಲ್ಲಿ ಮೆಟ್ಟಿಲು ಹತ್ತಿ, ಮೂರನೆ ಅಂತಸ್ತಿನ ಹಡಿಯ ತನ್ನ ರೂಮು ಹೊಕ್ಕ. ಹ್ಯಾಟ್ ಮತ್ತು ಓವರ್ ಕೋಟನ್ನು ದಿವಾನಿನ ಮೇಲೆಸೆದು, ಟೇಬಲ್ ಮೇಲಿದ್ದ ದೊಡ್ಡ ದೀಪವನ್ನು ಹೊತ್ತಿಸಿದ. ಅವನ ಹ್ಯಾಂಡ್‌ಬ್ಯಾಗ್ ಮತ್ತು ಚಿಕ್ಕ ಗಂಟು ಅದರ ಮೇಲಿತ್ತು. ಗಂಟು ಬಿಚ್ಚಿ ಅದರೊಳಗಿದ್ದ ವಿಸ್ಕಿ ಬಾಟಲನ್ನು ತೆಗೆದ. ಗ್ಲಾಸಿನಲ್ಲಿ ಹಾಕಿಕೊಂಡು ಒಂದು ಗುಟುಕು



ಕುಡಿದ. 'ಏನೇ ಆಗಲಿ ಜಗತ್ತಿನಲ್ಲಿ ವಿಸ್ಕಿ ಇರುವುದು ಎಂಥಾ ಅದೃಷ್ಟ...' ಎಂದುಕೊಂಡ. ಆಮೇಲೆ ಅವನು ಬೆಡ್ ರೂಮಿಗೆ ಹೋಗಿ, ಅಲ್ಲಿ ಟೇಬಲ್ ಮೇಲಿದ್ದ ಕ್ಯಾಂಡಲ್ ಹಚ್ಚಿ, ಬಟ್ಟೆ ಬದಲಾಯಿಸಲು ಪ್ರಾರಂಭಿಸಿದ. ಗ್ರೇ ಸೂಟನ್ನು ಮಂಚದ ಪಕ್ಕದ ಕೆಂಪು ಕುರ್ಚಿಯ ಮೇಲೆ ಹಾಕಿದ. ಅವನಿಗೆ ಹ್ಯಾಟ್ ಮತ್ತು ಓವರ್ ಕೋಟ್ ನೆನಪಾಯಿತು. ದಿವಾನ್ ಮೇಲಿದ್ದ ಅವುಗಳನ್ನು ತಂದು ವಾರ್ಡ್‌ರೋಬ್ ತೆಗೆದ... ತಕ್ಷಣವೇ ಅವನು ಒಂದು ಹೆಜ್ಜೆ ಹಿಂದೆ ಸರಿದು, ಮಂಚದ ಅಂಚಿನಲ್ಲಿದ್ದ ತಾಮ್ರದ ಹಿಡಿಯನ್ನು ಹಿಡಿದುಕೊಂಡ. ಬಿಳಿಯ ನಾಲ್ಕು ಗೋಡೆಗಳ ಆ ರೂಮಿನಲ್ಲಿ ಕ್ರೀಮಿನ ತುದಿಯಲ್ಲಿರುವಂತೆ ಪಿಂಕ್ ಬಣ್ಣದ ಮೂರು ಕುರ್ಚಿಗಳು ಕ್ಯಾಂಡೆಲ್ಲಿನ



ಗೀತಾ ಸಾಳುಂ

ಹೊಯ್ದಾಡುವ ಬೆಳಕಿನಲ್ಲಿ ದ್ದವು. ವಾರ್ಡ್ ರೋಬ್ ತೆರೆದಿತ್ತು. ಆದರೆ ಅದು ಖಾಲಿ ಇರಲಿಲ್ಲ. ಅದರೊಳಗೆ ಅತಿ ಸುಂದರವಾದ ಬೆತ್ತಲೆ ಹುಡುಗಿ ನಿಂತಿದ್ದಳು. ಅವಳು ತನ್ನ ನೀಳ ಕೈಯೊಂದನ್ನು ಮೇಲೆತ್ತಿ ಸೀಲಿಂಗಿನಲ್ಲಿದ್ದ ಹುಕ್ಕೊಂದನ್ನು ತೋರು ಬೆರಳಿಂದ ಹಿಡಿದು ಕೊಂಡಿದ್ದಳು. ಗಕ್ಕನೆ ಆಲ್ ಬ್ರೆಕ್ಸ್‌ನ ಎದೆ ಬಡಿತ ನಿಂತು ಕ್ರಮೇಣ ಸಹಜ ಸ್ಥಿತಿಗೆ ಬಂತು. ಕಂದು ಬಣ್ಣದ ಕೇಶ ರಾಶಿ ಅವಳ ಭುಜದ ಮೇಲೆ ಇಳಿದಿತ್ತು. ಅವಳ ಎಲ್ಲ ಅಂದಕ್ಕೆ ಅವನ ತಡೆ ತಡೆದು ಹೊಮ್ಮುತ್ತಿದ್ದ ದೀರ್ಘ ಉಸಿರಾಟವೇ ಉತ್ತರವಾಗಿತ್ತು. ಅವಳ ಕಪ್ಪು ಕಣ್ಣಲ್ಲಿ ಕ್ಯಾಂಡಲ್ ಬೆಳಕು ಪ್ರತಿಫಲಿಸುತ್ತಿತ್ತು. ಬಾಯಿ ಕೊಂಚ ಅಗಲವೆನಿಸಿದರೂ ನೋವಿನ ದಿನಗಳ ನಂತರ ಹುಬ್ಬಿಗೆ ಮುತ್ತಿಟ್ಟು ಮಲಗಿಸುವ ಭಾವ ಹೊಂದಿತ್ತು. ಅವಳ ನೀಳ ಮೊಣಕಾಲು-ಪಾದಗಳು ಒಂದಕ್ಕೊಂದು ಬೆಸೆದುಕೊಂಡಿದ್ದವು.

ಆಲ್‌ಬ್ರೆಕ್ಸ್ ಒಮ್ಮೆ ಕಣ್ಣುಜ್ಜಿಕೊಂಡು ದಿಟ್ಟಿಸಿ ನೋಡಿದ. ಹಿಂದುಗಡೆ ಬಲಮೂಲೆಯಲ್ಲಿ ಗೋಣಿ ತಾಟು ಸ್ವಲ್ಪ ಬಿಚ್ಚಿಕೊಂಡಿತ್ತು. 'ಏನು... ಒಳಗೆ ಬರುವುದಿಲ್ಲವೇ?... ಅಥವಾ ಹೇಗೆ ಹೇಳಲಿ-ಅದರಿಂದ ಹೊರಗೆ?...' ಎಂದ ಅವನು ಮುಂದುವರೆದು, 'ಸ್ವಲ್ಪ ವಿಸ್ಕಿ ತೆಗೆದು ಕೊಳ್ಳೋದಿಲ್ಲವೇ?... ಅರ್ಧ ಗ್ಲಾಸ್?...' ಎಂದ. ಇದಕ್ಕೆ ಅವಳಿಂದ ಅವನು ಉತ್ತರ ನಿರೀಕ್ಷಿಸಿರಲಿಲ್ಲ. ಅವನಿಗೇನೂ ಉತ್ತರ ಸಿಗಲಿಲ್ಲ. ಅವಳ ನಿಗೂಢ, ಕಪ್ಪನೆಯ, ಚೂಪು ಕಣ್ಣುಗಳ ಭಾವರಹಿತವಾಗಿ ಅವನ ಕಡೆ ತಿರುಗಿದ್ದವು. ಆದರೆ ಅನ್ಯ ಮನಸ್ಕತೆಯಿದ್ದ ಆ ನೋಟ ಅವನನ್ನು ನೋಡುತ್ತಿಲ್ಲವೇನೋ ಎನ್ನುವಷ್ಟು ಅಸ್ಪಷ್ಟವಾಗಿತ್ತು.

ಇದ್ದಕ್ಕಿದಂತೆ ಅವಳು ತಗ್ಗಿದ ಗೊಗ್ಗರ ದನಿಯಲ್ಲಿ, 'ನಾನೊಂದು ಕತೆ ಹೇಳಲೇ?..' ಎಂದು ಕೇಳಿದಳು.

'ಆಗಲಿ ಹೇಳು' ಎಂದು ಅವ ಕುಳಿತುಕೊಳ್ಳುವ ಭಂಗಿಯಲ್ಲಿ ಮಂಚದಂಚಿ

ಕುಸಿದು ಬಿದ್ದಿದ್ದ. ಮಂಡಿಯ ಮೇಲೆ ಹರಡಿದ ಓವರ್ ಕೋಟಿನ ಸುತ್ತ ಕೈಗಳನ್ನು ಜೋಡಿಸಿ ಹಿಡಿದಿದ್ದ. ಅರೆಗಟ್ಟು-ಬಾಯಿ ಬಿಟ್ಟಿದ್ದ. ರಕ್ತದೊತ್ತಡ ಕೊಂಚ ಹೆಚ್ಚಾಗಿ ಕಿವಿಯೊಳಗೆ ಮೆಲುದನಿ ಕೇಳಿಸುತ್ತಿತ್ತು. ಅವಳು ಕೂಡ ವಾರ್ಡ್‌ರೋಬ್‌ನಲ್ಲಿ ಕೆಳಗೊರಗಿ ಒಂದು ಮಂಡಿಯನ್ನು ಮಡಚಿ ತನ್ನ ನೀಳ ಕೈಗಳಿಂದ ಸುತ್ತಿ ಹಿಡಿದು ಮತ್ತೊಂದನ್ನು ಉದ್ದ ಚಾಚಿದ್ದಳು. ಮೇಲಿನ ಕೈ ಅವಳ ಪುಟ್ಟ ಮೊಲೆಗಳನ್ನು ಒತ್ತಿತ್ತು. ಮಿರುಗುವ ಮತ್ತೊಂದು ಮಂಡಿ ಹೊಳೆಯುತ್ತಿತ್ತು. ಅವಳು ಮಾತಾಡುತ್ತಿದ್ದಳು... ಮೆಲುದನಿಯಲ್ಲಿ ಮಾತಾಡುತ್ತಿದ್ದಳು... ಉದ್ದಕ್ಕೂ ಕ್ಯಾಂಡಲ್‌ನ ಬೆಳಕು ಸದ್ದಿಲ್ಲದೆ ತನ್ನಷ್ಟಕ್ಕೆ ಲಾಸ್ಯವಾಡುತ್ತಿತ್ತು.

ಅವರಿಬ್ಬರೂ ಕುರುಚಲು ಗಿಡಗಳ ಪಕ್ಕದಲ್ಲಿ ಹೆಜ್ಜೆ ಹಾಕಿದರು. ಅವಳ ತಲೆ ಅವನ ಭುಜದ ಮೇಲೆ. ಸುತ್ತಲೂ ಸುಗಂಧದ ಬೆಳೆ ಹಬ್ಬಿತ್ತು. ಸಂಜೆಯ ಮಂಜು ಇಳಿಯಲು ತೊಡಗಿತ್ತು. ಪ್ರಾರಂಭ ಹಾಗೆಯೇ. ಆಗಾಗ ಹೋಲಿಕೆಗೆ ನಿಲುಕದ ಮೃದು ಲಯದ ಕಾವ್ಯದಂತೆ... ಆಗಾಗ ಜ್ವರದ ತಾಪದ ಅರೆ ನಿದ್ದೆಯಲ್ಲಿ ಬಂದೊದಗುವ ಕಾವ್ಯದ ತೊರೆಯಂತೆ. ಆದರೆ ಅದು ಕೊನೆಯಾದದ್ದು ವಿಷಾದದಲ್ಲಿ. ಅವರಿಬ್ಬರೂ ಬೇರ್ಪಡಿಸಲಾಗದ ಅಪ್ಪುಗೆಯಲ್ಲಿದ್ದರು. ಅವರ ತುಟಿಗಳು ಪರಸ್ಪರ ಚುಂಬಿಸುತ್ತಿದ್ದರೆ, ಒಬ್ಬರು ಮತ್ತೊಬ್ಬರನ್ನು ಖುಷಿಯಿಂದ ಸೊಂಟದಿಂದ ಮೇಲೆ ಅಗಲವಾದ ಚಾಕುವಿನಿಂದ ತಿವಿಯುತ್ತಿದ್ದರು. ಮುಕ್ತಾಯ ಹಾಗೆ. ಅನಂತರ ಅವಳು ಚೆಲುವಿನಿಂದ ಎದ್ದು ನಿಂತು, ಬಲಗಡೆ ಮೂಲೆಯ ಗೋಣಿ ತಾಟನ್ನು ಮೇಲೆತ್ತಿದಳು. ಅನಂತರ ಅಲ್ಲಿ ಅವಳಿರಲಿಲ್ಲ.

ಆಗಿನಿಂದ ಪ್ರತಿ ಸಂಜೆ ಅವನು ವಾರ್ಡ್‌ರೋಬ್‌ನಲ್ಲಿ ಅವಳನ್ನು ಕಾಣುತ್ತಿದ್ದ ಮತ್ತು ಅವಳು ಹೇಳುವ ಕತೆಗಳನ್ನು ಕೇಳುತ್ತಿದ್ದ. ಎಷ್ಟು ಸಂಜೆ? ಅವನು ಎಷ್ಟು ವಾರ, ಎಷ್ಟು ತಿಂಗಳು ಆ ಮನೆಯಲ್ಲಿ, ಆ ಊರಿನಲ್ಲಿ ಇದ್ದ? ಅವುಗಳಿಂದ ಯಾರಿಗೂ ಉಪಯೋಗವಿಲ್ಲ. ಸಂಕಷ್ಟದಲ್ಲಿ ಇರುವವರ ಅಂಕಿ ಅಂಶಗಳು ಯಾರಿಗೆ ಬೇಕಾಗಿದೆ? ಆಲ್‌ಬ್ರೆಕ್ಟ್ ಕೇವಲ ಕೆಲವೇ ತಿಂಗಳು ಬದುಕುತ್ತಾನೆಂದು ಅನೇಕ ಡಾಕ್ಟರ್ ಹೇಳಿದ್ದಾರೆಂದು ನಮಗೆ ಗೊತ್ತಿದೆ. ಅವಳು ಅವನಿಗೆ ಕತೆಗಳನ್ನು ಹೇಳಿದಳು. ಅವು ನಿರಂತರ ನೋವಿನ ಕತೆಗಳು. ಆದರೆ ಅವು ಅವನ ಹೃದಯದ ಮೇಲೆ ಹಗುರಾಗಿ ಕುಳಿತವು. ಮತ್ತು ಧನ್ಯತೆಯಿಂದ ಕೊಂಚ ಹೆಚ್ಚು ಕಾಲ ಬಡಿಯುತ್ತಲಿರುವಂತೆ ಮಾಡಿದವು. ಅನೇಕ ಬಾರಿ ಅವನು ತನ್ನನ್ನೇ ಮರೆತುಬಿಡುತ್ತಿದ್ದ. ಅವನ ರಕ್ತ ಉಕ್ಕೇರುತ್ತಿತ್ತು. ಅವಳಿಗಾಗಿ ಕೈ ಚಾಚುತ್ತಿದ್ದ. ಅವಳು ನಿರಾಕರಿಸುತ್ತಿರಲಿಲ್ಲ. ಆದರೆ ಅವನು ಹಲವಾರು ಸಲ ಅವಳನ್ನು ವಾರ್ಡರೋಬ್‌ನಲ್ಲಿ ಕಾಣುತ್ತಿರಲಿಲ್ಲ. ಅವಳು ವಾಪಸು ಬಂದ ಮೇಲೆ ಅನೇಕ ಸಂಜೆ ಅವನಿಗೇನೂ ಹೇಳುತ್ತಿರಲಿಲ್ಲ. ಕ್ರಮೇಣ ಹಂತ ಹಂತವಾಗಿ ಪ್ರಾರಂಭಿಸುತ್ತಿದ್ದಳು. ಅವನು ತನ್ನನ್ನೇ ತಾನು ಮರೆಯುವ ತನಕ.


ಇದೆಷ್ಟು ಕಾಲ ನಡೆಯಿತು-ಯಾರಿಗೆ ಗೊತ್ತು? ಆಲ್‌ಬ್ರೆಕ್ಟ್ ಆ ದಿನ ಎಚ್ಚರಗೊಂಡು, ಅರಿಯದ ಆ ಊರೊಳಗೆ ಹೋದನೆಂದಾದರೂ ಯಾರಿಗೆ ಗೊತ್ತು. ಅವನು ಫಸ್ಟ್ ಕ್ಲಾಸ್ ಬೋಗಿಯೊಳಗೆ ಮಲಗಿಕೊಂಡೇ ಇದ್ದು ಬರ್ಲಿನ್-ರೋಮ್ ಎಕ್ಸ್‌ಪ್ರೆಸ್ ತನ್ನನ್ನು ಪರ್ವತಗಳ ಮೇಲೆ ಕೊಂಡೊಯ್ಯಲು ಬಿಟ್ಟನೋ ಹೇಗೆ? ನಮ್ಮಲ್ಲಿ ಯಾರಾದರೂ ಖಚಿತವಾದ ಉತ್ತರ ಕೊಡುವ ಜವಾಬ್ದಾರಿ ತೆಗೆದುಕೊಳ್ಳುವರೆ? ಯಾವುದೂ ಸರಿಯಲ್ಲ. 'ಪ್ರತಿಯೊಂದಕ್ಕೂ ಅವಕಾಶವಿರಬೇಕು.'

ಎಳನಿಂಬೆಯ ಪರಿಮಳ...

ರಾಮದಾಸ್

ಕಡುಕಾರ್ಪಣ್ಯದಲ್ಲಿ ಹೋಟೆಲ್ ಕಾರ್ಮಿಕನಾಗಿ ದುಡಿಯುತ್ತಲೇ, ವಿದ್ಯಾರ್ಜನೆಯನ್ನೂ ಮಾಡಿ ಪರಿಶ್ರಮದಿಂದ ಬೆಳೆದುಬಂದ ಉಡುಪಿಯ ರಾಮದಾಸ್, ಸಾಹಿತ್ಯ, ರಂಗಭೂಮಿ, ಅಧ್ಯಾಪನ ಕ್ಷೇತ್ರದಲ್ಲಿ ಸುದೀರ್ಘ ಕಾಲ ವಿಶಿಷ್ಟವಾಗಿ ದುಡಿದವರು. ಅವರು ಈಚೆ ಪ್ರಕಟಿಸಿರುವ ಆತ್ಮಕಥನದ ಮೊದಲ ಭಾಗ 'ಎಳ ನಿಂಬೆ' ಯಿಂದ ಆಯ್ದ ಕೆಲ ಪರಿಚ್ಛೇಧಗಳನ್ನು ಇಲ್ಲಿ ಕೊಡುತ್ತಿದ್ದೇವೆ.





"ಅಪ್ಪನ ಹೋಟೆಲಿನ ವ್ಯಾಪಾರ ಕುಸಿಯುತ್ತ ಬಂತು. ನನ್ನ ದೊಡ್ಡಮ್ಮ, ದೊಡ್ಡಪ್ಪ, ನಮ್ಮೊಡನೆ ಕೆಲವು ದಿನ ಇರಲೆಂದು ಗುಂಡ್ಲುಪೇಟೆಗೆ ಬಂದರು. ಅಪ್ಪ ತಮ್ಮ ವ್ಯಾಪಾರದ ಬವಣೆಯನ್ನು ದೊಡ್ಡಪ್ಪನಿಗೆ ಹೇಳಿ ಅಲವತ್ತುಕೊಂಡಾಗ ದೊಡ್ಡಪ್ಪ, 'ನಿಮ್ಮ ಹಣದ ಮುಗ್ಗಟ್ಟಿಗೆ ನೀವೇ ಕಾರಣರು. ನಿಮ್ಮ ವ್ಯಾಪಾರದಿಂದ ಲಾಭವಾಗಲೇಬೇಕು. ಎರಡು ತಿಂಗಳು ನಾನು ಹೇಳಿದಂತೆ ನೀವೆಲ್ಲರೂ ಕೇಳಿದರೆ ನಿಮಗೆ ಒಳ್ಳೆಯ ಲಾಭ ಮಾಡಿ ತೋರಿಸುತ್ತೇನೆ' ಎಂದರು.

ಮಾರನೆಯ ದಿನವೇ ದೊಡ್ಡಪ್ಪ ಹೋಟೆಲಿನ ಆಡಳಿತವನ್ನು ಕೈಗೆತ್ತಿಕೊಂಡರು. ಅಷ್ಟೇ ಆಗಿದ್ದರೆ ನಾವು ಬಚಾವಾಗುತ್ತಿದ್ದೆವು. ಹೊಟೇಲಿನ ಜತೆಗೆ ಮನೆಯ ಆಡಳಿತವೂ ಅವರ ನಿಯಂತ್ರಣಕ್ಕೆ ಒಳಪಟ್ಟಿತು. ಯಾವಾಗೆಂದರೆ ಆವಾಗ ಹೊಟೇಲಿಗೆ ಹೋಗಿ, ಷೋಕೇಸಿನಲ್ಲಿರಿಸಿದ್ದ ತಿಂಡಿಗಳಲ್ಲಿ, ಮುಖ್ಯವಾಗಿ ಚೌಚೌವನ್ನು ಹಿಡಿ ತುಂಬ ತೆಗೆ ತೆಗೆದು ಮುಕ್ಕುತ್ತಿದ್ದ ನನಗೆ, ದೊಡ್ಡಪ್ಪ ಅಡ್ಡ ಬಂದಾಗ ಗಳಗಳನೆ ಅಳುವಂತಾಯಿತು. ಸಂಜೆಯ ಹೊತ್ತು, ಒಮ್ಮೆ ಮಾತ್ರ ಅವರು ಕೈಯಾರೆ ಕೊಟ್ಟದ್ದನ್ನು ಮಾತ್ರ ತಿನ್ನುವಂತಾಯ್ತು. ಪ್ರತಿ ದಿನ ಬೆಳಗ್ಗೆ ಇಡ್ಲಿ ಬೆಣ್ಣೆ, ತಪ್ಪದೆ ದೋಸೆ ತಿನ್ನುತ್ತಿದ್ದ ನಮ್ಮ ಬಾಯಿಗೆ ಬೀಗ ಬಿತ್ತು. ಮಕ್ಕಳು ಯಾರಿಗೂ ಉಪನಯನ ಆಗಿರಲಿಲ್ಲವಾದ್ದರಿಂದ ಹಿಂದಿನ ದಿನ ಉಳಿದಿದ್ದ ತಂಗಳು ತಿಂಡಿ, ಅನ್ನ, ದೋಸೆಗಳನ್ನು ತಿನ್ನಬೇಕೆಂಬ ಅಪ್ಪಣೆ ಆಯಿತು. ತಣ್ಣೀರಿನಲ್ಲೇ ಸ್ನಾನ ಮಾಡಬೇಕು ಎಂಬ ಆಜ್ಞೆ ಆಯಿತು.

ಅಪ್ಪನೊಡನೆ ಮಾತನಾಡುತ್ತ, 'ತಿಂಡಿ ಮಾಡಲು ನಿಮಗೆ ಬರುತ್ತದಲ್ಲ, ಅದಕ್ಕೊಬ್ಬ ಕೆಲಸದವ ಯಾಕೆ ಬೇಕು?' ಎಂದು ತಿಂಡಿ ಕೆಲಸದವನನ್ನು ತೆಗೆದು ಹಾಕಿದರು. ಹೋಟೆಲಿನಲ್ಲಿ ಟೇಬಲ್ ಕ್ಲೀನ್ ಮಾಡುವವನು ಒಬ್ಬನಾದರೆ, ಒಳಗೆ ಅವುಗಳನ್ನು ತೊಳೆಯಲು ಮತ್ತೊಬ್ಬನಿದ್ದ. 'ಹೊರಗಿನವನೊಬ್ಬನೇ ಸಾಕು, ಒಳಗಿನ ಕೆಲಸವನ್ನು ನೀವೇ ಮಾಡಿ' ಎಂದು ನನ್ನ ಹಾಗೂ ಮಾಧವನ ಮುಖ ನೋಡಿದರು.

ಬಡತನದಲ್ಲೂ ಸಮೃದ್ಧ ಜೀವನ ಸಾಗಿಸುತ್ತಿದ್ದ ನಮ್ಮ ಕುಟುಂಬ, ದೊಡ್ಡಪ್ಪನಿಂದಾಗಿ ಎರಡು ತಿಂಗಳ ಕಾಲ, ಕಾರ್ಪಣ್ಯದ ಕಠಿನ ವ್ರತವನ್ನು ಪಾಲಿಸಬೇಕಾಯಿತು. ದೊಡ್ಡಪ್ಪನಿಗೆ ಮಾತು ಕೊಟ್ಟು ಅಡಕತ್ತರಿಯಲ್ಲಿ ಸಿಕ್ಕಿಕೊಂಡಂತಾಗಿದ್ದ ಅಪ್ಪನ ಮನಸ್ಸು, ನಮ್ಮ ಅವಸ್ಥೆ ಕಂಡು ಪರಿತಪಿಸುತ್ತಿದ್ದದ್ದು ನನಗೂ ಗೊತ್ತಾಗುತ್ತಿತ್ತು.


ದೊಡ್ಡಪ್ಪ ಮೊದಲ ತಿಂಗಳ ತಮ್ಮ ಆಡಳಿತದಲ್ಲಿ ಹತ್ತಿಪ್ಪತ್ತು ರೂಪಾಯಿ ಲಾಭ ತೋರಿಸಿದವರು, ಎರಡನೆಯ ತಿಂಗಳಲ್ಲಿ ನೂರಾರು ರೂಪಾಯಿ ಲಾಭ ತೋರಿಸಿದರು! ಅಷ್ಟರಲ್ಲಿ ಬೇಸಗೆಯ ರಜಾ ಮುಗಿಯುತ್ತ ಬಂದಿತ್ತು. ದೊಡ್ಡಪ್ಪ ಹೆಂಡತಿ ಮಕ್ಕಳೊಡನೆ ಊರಿಗೆ ವಾಪಸಾದರು. ನಾವು ಬಚಾವಾದೆವು.

ಮಳೆಯ ಉಂಗುರ!

ಒಂದು ದಿನ ಹೋಟೇಲಿನಲ್ಲಿ ಕೃಷಿಕ ಮಾದೇಗೌಡ, ಹಾಲಿನ ಈರಯ್ಯ ಮೊದಲಾದ ನಾಲ್ಕಾರು ಜನ ಕುಳಿತು, 'ಬಹಳ ದಿನಗಳಾದರೂ ಮಳೆ ಬಂದಿಲ್ಲ, ಭಯಂಕರ ಬರಗಾಲ ಬರಲಿದೆ' ಎಂದು ಮಾತಾಡಿಕೊಳ್ಳುತ್ತಿದ್ದರು. ತಟಕ್ಕನೆ ನಾನು ಯಾವ ಮುಂದಾಲೋಚನೆಯೂ ಇಲ್ಲದೆ, 'ನಾನು ಮಳೆ ಬರುವಂತೆ ಮಾಡುತ್ತೇನೆ, ನನಗೇನು ಕೊಡುತ್ತೀರಿ' ಎಂದೆ. ನನ್ನ ಮಾತಿಗೆ ಯಾರೂ ನಗಲಿಲ್ಲ ಎಂಬ ನೆನಪು ನನಗೆ. ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ.

ಮಾದೇಗೌಡರು ಸಣಕಲು ದೇಹದ ಗಿಡ್ಡ ವ್ಯಕ್ತಿ. ಅವರು ತಮ್ಮ ಬೆರಳಲ್ಲಿದ್ದ ಉಂಗುರವನ್ನು ತೋರಿಸಿ, 'ಈ ಉಂಗುರವನ್ನು ಕೊಡುತ್ತೇನೆ' ಎಂದರು. 'ಇನ್ನು ತೊಂಬತ್ತು ನಿಮಿಷಗಳಲ್ಲಿ ಮಳೆ ಬರುತ್ತದೆ' ಎಂದು ನಾನು ಹೊರಗೆ ಹೋಗಿ ಆಕಾಶ ನೋಡುತ್ತ ನಿಂತೆ. ಕಾಲ ಬಹಳ ನಿಧಾನವಾಗಿ ಸರಿದು, ತೊಂಬತ್ತು ನಿಮಿಷವಾಗುತ್ತಿದ್ದಂತೆ ಮಳೆ ಸುರಿಯಿತು! ದಿಗ್ಭ್ರಾಂತರಾದ ಅವರೆಲ್ಲ ಹೊರಗೆ ಬಂದು ಸುರಿಯುವ ಮಳೆ ನೋಡಿದರು. ಮಾದೇಗೌಡರು ನನ್ನ ಬೆನ್ನು ತಟ್ಟಿ, ತಮ್ಮ ಉಂಗುರ ತೆಗೆದು ನನಗೆ ತೊಡಿಸಿದರು.

ಕಾಕತಾಳೀಯವಾದ ಈ ಘಟನೆಯಿಂದ ದೇವರು ನನಗೆ ಮತ್ತೂ ಹತ್ತಿರದವನಾದ.



ಹಸಿರು ರೇಷ್ಮೆ ಹೊಳಪಿನ ಹೊನ್ನೆ ದುಂಬಿ

ಬಯಲಿನಾಚೆಯ ಹೊಲದ ಬೇಲಿಯ ತೊಂಡೆ ಬಳ್ಳಿಯ ಕೆಂಪು ಹಣ್ಣು ನನಗೆ ಹೆಚ್ಚು ಆಕರ್ಷಕ ಎನ್ನಿಸಿತ್ತು. ಕ್ರಿಕೆಟ್ ಬಗ್ಗೆ ಅ ಆ ಇ ಈ ಗೊತ್ತಿರದ ನಾನು ಒಂದು ದಿನ ಕ್ರಿಕೆಟ್ ಆಡಲು ಹೋದೆ. ನನ್ನನ್ನು ಫೀಲ್ಡಿಂಗ್ ಮಾಡಲು ನಿಲ್ಲಿಸಿದರು. ಬ್ಯಾಟೂ ಕೊಡದೆ, ಚೆಂಡೂ ಕೊಡದೆ ನನ್ನನ್ನು ಕೀಳಾಗಿ ಕಂಡರು ಅನ್ನಿಸಿ ಮುಂದೆಂದೂ ಕ್ರಿಕೆಟ್ ಆಡಲು ಹೋಗಲಿಲ್ಲ. ಬಯಲಿಗೆ ಸೇರಿದಂತೆಯೇ ಮಳೆಯ ಪ್ರಮಾಣವನ್ನು ಅಳೆಯುವ ವ್ಯವಸ್ಥೆ ಇದ್ದ, ಕಬ್ಬಿಣದ ಸರಳಿನ ಬೇಲಿಯ ಆವರಣ. ಹೇಗೆ ಕೆಲಸ ಮಾಡುತ್ತದೆ ಎಂದು ನಮಗೆ ಯಾರೂ ಹೇಳಿರಲಿಲ್ಲ. ಮತ್ತಷ್ಟು ದೂರದಲ್ಲಿ ನಾವು ದೆವ್ವಗಳಿವೆ ಎಂದು ನಂಬಿದ್ದ 'ಯೆಣಾ ಕುಯ್ಯೋ ಮನೆ'. ಮಿಕ್ಕ ಸಹಪಾಠಿಗಳ ಕಣ್ಣು ತಪ್ಪಿಸಿ, ಇಬ್ಬರು ಅಥವಾ ಮೂವರು ಒಟ್ಟಾಗಿ ಹೆಣ ಕುಯ್ಯುವ ಮನೆಯ ಆಚೆ ಪೊದೆ, ಕುರುಚಲು ಇದ್ದ ಎಡೆಯಲ್ಲಿ ಹೊನ್ನೆ ದುಂಬಿಯನ್ನು ಹುಡುಕುವ ಕೆಲಸ ತುಂಬ ಪ್ರಿಯವಾಗಿತ್ತು. ಮೈಸೂರು ರಸ್ತೆಯ ಸಾಲುಮರಗಳಲ್ಲಿದ್ದ ಗೋಂದನ್ನು ಸಂಗ್ರಹಿಸುವುದು ಕೂಡ ಅಷ್ಟು ಪ್ರಿಯವಾಗಿರಲಿಲ್ಲ. ಹಸಿರು ರೇಷ್ಮೆ ಸೀರೆಯ ಹೊಳಪಿನ ರೆಕ್ಕೆಯುಳ್ಳ, ನೀಲಿ-ಹಸಿರು ಮಿಶ್ರಿತ ತಲೆಯ ಹೊನ್ನೆ ದುಂಬಿ ತನ್ನ ಬಣ್ಣದ ಮಾದಕತೆಯಿಂದ ನಮ್ಮನ್ನು ಆಕರ್ಷಿಸುತ್ತಿತ್ತು. ಬರಿಗೈಯಲ್ಲಿ ಅದನ್ನು ಹಿಡಿದು, ಅದರ ಕೊರಳಿಗೊಂದು ನೂಲು ಕಟ್ಟಿ, ಹಾರಾಡಿಸಿ ಆಮೇಲೆ ಅದನ್ನು ಖಾಲಿ ಬೆಂಕಿ ಪೆಟ್ಟಿಗೆಯಲ್ಲಿಟ್ಟು ಸಾಕುವ ಉಮೇದು ನಮಗೆ. ಅದಕ್ಕೆ ಆಹಾರವಾಗಿ ಯಾವುದೋ ಪೊದೆಯ ಸೊಪ್ಪನ್ನು ಹಾಕಿ ಮುಚ್ಚಿಟ್ಟು, ದುಂಬಿ ಮೊಟ್ಟೆ ಇಟ್ಟಿದೆಯೇನೋ ಎಂದು ದಿನಕ್ಕೆ ಹತ್ತು ಸಲವಾದರೂ ತೆರೆದು ನೋಡುವ ಹುಚ್ಚು ಕುತೂಹಲ. ಬಂಗಾರದ ಬಣ್ಣದ, ಗೋಧಿ ಕಾಳಿನಂಥ ಮೊಟ್ಟೆಗಳೇನಾದರೂ ಕಂಡುಬಂದರೆ ಗೆಳೆಯರೆದುರು ಕೊಚ್ಚಿಕೊಳ್ಳಲು ಸಾಮ್ರಾಜ್ಯವೇ ಕೈ ಸೇರಿತೇನೋ ಎಂಬ ಹೆಮ್ಮೆ!

ಕೆರೆಯ ದಡದಲ್ಲಿದ್ದ ಅಶ್ವತ್ಥ ಮರದ ಮೇಲೆ ಹಾರಾಡುವ ಗಿಳಿಗಳನ್ನು ನೋಡಲು ಚಿಕ್ಕ ಕೆರೆಯ ಬಯಲಿನ ಕಡೆಗೋ, ಹುಣಿಸೆಕಾಯಿ, ಮಾವಿನ ಕಾಯಿ ಕಿತ್ತು ತಿನ್ನಲು ದೊಡ್ಡ ಕೆರೆಯ ಬಯಲಿನ ಕಡೆಗೋ ಹೋಗುತ್ತಿದ್ದೆವು. ಹಾಗೊಮ್ಮೆ ಚಿಕ್ಕ ಕೆರೆಯ ಬಯಲಿನಲ್ಲಿ ಪಾಪಾಸುಕಳ್ಳಿಯ ಊದಾ ಬಣ್ಣದ ಹಣ್ಣು ಕಂಡು. ತಿನ್ನಬಹುದು ಎಂದುಕೊಂಡು ಅದರ ಮುಳ್ಳು ತೆಗೆದು ತಿಂದದ್ದೂ ಉಂಟು.

ದಟ್ಟ ಕಾಡಿನ ಹೆದ್ದಾರಿಯಲ್ಲಿ ದೌಡಾಯಿಸಿ...

ಹೀಗೆಯೇ ಸುತ್ತಾಡುವಾಗ ಒಮ್ಮೆ ದೊಡ್ಡ ಕೆರೆಯ ಹತ್ತಿರ ಹುಲಿಯೊಂದರ ಚರ್ಮವನ್ನು ಸುಲಿಯುತ್ತಿದ್ದ ದೃಶ್ಯವನ್ನು ನಾನು ಕಂಡಿದ್ದೆ. ಆ ಸುಂದರ ದೈತ್ಯನ ಚರ್ಮ ಸುಲಿದು, ಅದಕ್ಕೆ ಉಪ್ಪು ಹಾಕಿ ತಿಕ್ಕುತ್ತಿದ್ದುದನ್ನೂ ನೋಡಿದೆ. ಬಂಡೀಪುರದ ದಟ್ಟವಾದ ಕಾಡು ಗುಂಡ್ಲುಪೇಟೆಗೆ ಎಂಟೋ ಹತ್ತೋ ಮೈಲು ದೂರ, ಅಷ್ಟೆ.

ನಾನು ಎರಡನೆಯ ತರಗತಿಯಲ್ಲಿರುವಾಗಲೇ ಬೇರೊಂದು ರೀತಿಯಲ್ಲಿ ಈ ಹೆದ್ದಾರಿ ನನ್ನನ್ನು ಆಕರ್ಷಿಸಿತ್ತು. ಎರಡು ಮೂರು ವಾರಗಳಿಗೊಮ್ಮೆ ಮಿಲಿಟರಿ ವಾಹನಗಳು ಅತ್ತಿಂದ ಇತ್ತಲೋ, ಇತ್ತಿಂದ ಅತ್ತಲೋ ಹೋಗತೊಡಗಿದರೆ, ಹುಡುಗರೆಲ್ಲರಿಗೂ ಉತ್ಸಾಹ ಉಕ್ಕುತ್ತಿತ್ತು. ಆಗ, ಹಾಗೆ ಹೋಗುವ ವಾಹನಗಳನ್ನು ಲೆಕ್ಕ ಹಾಕುತ್ತ ನಿಂತು, ಅಷ್ಟು ಇಷ್ಟು ಎಂದು ಪರಸ್ಪರ ಚರ್ಚಿಸಿ ಹೆಮ್ಮೆ ಪಡುತ್ತಿದ್ದೆವು. ಮಿಲಿಟ

ಟ್ರಕ್ಕುಗಳೊಡನೆ ಒಮ್ಮೊಮ್ಮೆ ಮಾತ್ರ ಬರುತ್ತಿದ್ದ ಜೀಪುಗಳು ನನ್ನ ಮಟ್ಟಿಗೆ ಅತ್ಯಂತ ಆಕರ್ಷಣೆಯ ಕೇಂದ್ರವಾಗಿದ್ದವು. ಎಂದಾದ ರೊಂದು ದಿನ ನನ್ನದೇ ಜೀಪಿನಲ್ಲಿ ಕುಳಿತುಕೊಂಡು, ಹೆದ್ದಾರಿಯನ್ನು ಬಿಟ್ಟು ಹಳ್ಳ-ದಿಣ್ಣೆ, ಏರು-ತಗ್ಗು, ಗುಡ್ಡ-ಬೆಟ್ಟಗಳ ಮೇಲೆ ದೌಡಾಯಿಸಬೇಕೆಂಬ ಆಸೆ ಹುಟ್ಟುತ್ತಿತ್ತು.



ಮೊಮ್ಮಗಳು ನೇಹಾಳೊಂದಿಗೆ

'ಎಲವೆಲವೋ' ವೇಷ !

ಪ್ರತಿ ವರ್ಷ ಯಾವುದಾದರೊಂದು ನಾಟಕದ ಕಂಪೆನಿ ಗುಂಡ್ಲುಪೇಟೆಗೆ ಬರುತ್ತಿತ್ತು. ಆಗ ಬಹುಜನರ ಬಾಯಲ್ಲಿ ನಾಟಕದ ಹಾಡುಗಳು ನಲಿಯುತ್ತಿದ್ದವು, ನಾಟಕಗಳೆಂದರೆ ಹಾಡುಗಳೇ ಎಂಬಂತೆ.

ಅಪ್ಪನ ಹತ್ತಿರ ಒಂದು ಗ್ರಾಮೊಫೋನ್ ಇತ್ತು. ಐದಾರು ನಾಟಕಗಳ ರೆಕಾರ್ಡುಗಳೂ ಇದ್ದವು. ಪೌರಾಣಿಕ ನಾಟಕಗಳನ್ನು ನಾನು ಇಷ್ಟಪಡುತ್ತಿದ್ದೆ. ನಾಟಕ ಕಂಪೆನಿಗಳೂ ಅಂಥ ನಾಟಕಗಳನ್ನೇ ಪ್ರದರ್ಶಿಸುತ್ತಿದ್ದವು. ನಾನು ನೋಡಿದ 'ಶ್ರೀ ಕೃಷ್ಣ ಗಾರುಡಿ'ಯಲ್ಲಿ ಅರ್ಜುನ ಮಾಯಾ ಕುದುರೆಯನ್ನೇರಿ ಹೋಗುವುದು; ಭೀಮ ರಂಗದ ಅಗಲಕ್ಕೂ ಚಾಚಿಕೊಂಡಿದ್ದ ಹೆಬ್ಬಾವನ್ನು ಎತ್ತಲಾರದೆ ಏಗುವುದು ನನ್ನ ನೆನಪಿನಲ್ಲುಳಿದಿದೆ. ನಾಟಕಗಳನ್ನು ನೋಡಿದ ಪರಿಣಾಮವಾಗಿ ನಾನು, ತೆಳುವಾದ ರಟ್ಟಿನಿಂದ ಮುಂಗೈ ಪಟ್ಟಿ, ಭುಜಕೀರ್ತಿ, ಕಿರೀಟಗಳನ್ನು ಮಾಡಿ, ಅವಕ್ಕೆ ಬಿಂಗರವನ್ನು ಅಂಟಿಸಿ, ನೂಲು ಕಟ್ಟಿ ಧರಿಸಿಕೊಂಡು ಪಂಚೆಯ ಪರದೆಯನ್ನು ಪಕ್ಕಕ್ಕೆ ಸರಿಸಿ, 'ಎಲವೆಲವೋ...!' ಎಂದು ಬಾಯಿಗೆ ಬಂದದ್ದನ್ನು ಹೇಳಿಕೊಂಡು ಸಂತೋಷ ಪಡುತ್ತಿದ್ದೆ.

ಮಾಧ್ಯಮಿಕ ಶಾಲೆಯ ಪಕ್ಕದ ಬಯಲಿನಲ್ಲಿ, ಮೂರು ತಿಂಗಳ ಅವಧಿಗೆ ಲೈಸನ್ಸ್ ಪಡೆದ ಟೂರಿಂಗ್ ಟಾಕೀಸುಗಳು ಬರುತ್ತಿದ್ದವು. ಸಿನಿಮಾ ಆಕರ್ಷಣೆ ಊರಿನವರಿಗೆಲ್ಲ ಹುಚ್ಚು ಹಿಡಿಸುತ್ತಿತ್ತು. ಕನ್ನಡ, ತಮಿಳು ಸಿನಿಮಾಗಳು ಬಹುವಾಗಿ ಪ್ರದರ್ಶಿತವಾಗುತ್ತಿದ್ದರೂ ಒಮ್ಮೊಮ್ಮೆ ಹಿಂದಿ ಸಿನಿಮಾವೂ ಬರುತ್ತಿತ್ತು.

'ಭಟರ್ ತಿರಾಜೋ'

ಪರಿಚಿತರಾಗಿದ್ದ ಡಾಕ್ಟರ್ ಭಟ್ಟರ ಮನೆಗೆ ಆಗಾಗ ಕೇರಂ ಆಡಲು ಹೋಗ್ತಿದ್ದೆ. ನನ್ನನ್ನು ಪ್ರೀತಿಯಿಂದ ಕೂಡಿದ ಹಾಸ್ಯ ಚಟಾಕಿಗಳಿಂದ ಮಾತನಾಡಿಸಿ, ಮುದ್ದು ಕೊಡುತ್ತಿದ್ದರು. ನನಗಿಂತ ಕಿರಿಯರಾದ ಇಬ್ಬರು ಗಂಡು ಮಕ್ಕಳು, ಡಾಕ್ಟರಿಗೆ. ನಾನಲ್ಲಿಗೆ ಹೋದಾಗಲೆಲ್ಲ ಆ ಹುಡುಗರು ಒಂದರ್ಧ ಘಂಟೆಯಾದರೂ ಅವರೊಡನೆ ನನ್ನನ್ನು ಉಳಿಸಿಕೊಳ್ಳುತ್ತಿದ್ದರು. ನಾಲ್ಕನೆಯ ಸ್ಥಾನಕ್ಕೆ ಒಮ್ಮೊಮ್ಮೆ ಡಾಕ್ಟರ ಹೆಂಡತಿ, ಅವರು ಯಾವುದಾದರೂ ಕೆಲಸದಲ್ಲಿದ್ದರೆ ಅವರ ಸಾಕು ಮಗಳು ಜ್ಯೋತಿ, ಆಡಲು ಬರುತ್ತಿದ್ದರು.

ಶಾಲೆಯಲ್ಲಿ ಒಂದು ದಿನ ಕೆಲವು ಹುಡುಗರ ಒಂದು ಗುಂಪು ಕುಹಕ ದೃಷ್ಟಿಯಿಂದ ನನ್ನನ್ನು ನೋಡುತ್ತ, 'ಭಟರ್ ತಿರಾಜೋ' ಎಂದು ಹೇಳಿ ನಗುತ್ತಿದ್ದರು. ಸ್ವಲ್ಪ ದೂರದಲ್ಲಿ ನಿಂತಿದ್ದ ರಾಜಣ್ಣ ಕೂಡ ಮುಸಿಮುಸಿ ನಗುತ್ತಿದ್ದ. ರಾಜಣ್ಣ ಹೇಳಿಕೊಟ್ಟದ್ದರಿಂದಲೇ ಆ ಹುಡುಗರು ಹಾಗೆ ಹೇಳುತ್ತ ನನ್ನನ್ನು ಲೇವಡಿ ಮಾಡಿದರೆಂದು ಆಮೇಲೆ ತಿಳಿಯಿತು. ನಾನು, ರಾಜಣ್ಣ ಇಬ್ಬರೇ ಇದ್ದಾಗ ಅವನನ್ನು ತುಂಬ ಒತ್ತಾಯದಿಂದ ಕೇಳಿಕೊಂಡಾಗ, ಆ ಮಾತಿನ ಅರ್ಥ ಹೇಳಿದ ರಾಜಣ್ಣ. ಭಟರ್ ಎಂದರೆ ಡಾಕ್ಟರ್ ಭಟ್ಟರು. ಅವರು ಸಾಕು ಮಗಳು ಜ್ಯೋತಿ. ಜ್ಯೋತಿ ಮತ್ತು ರಾಮದಾಸ್-ತೀರಾಜೋ ಎಂದು!

ಜ್ಯೋತಿ ನಾಲ್ಕಾರು ಬಾರಿ, ಕೇರಂ ಆಡುವಾಗ ನನ್ನೊಡನೆ ಇದ್ದದ್ದು ನಿಜವಾದರೂ ಅವಳ ಬಗ್ಗೆ ನನಗೇನೂ ಆಸಕ್ತಿ ಇರಲಿಲ್ಲ. ಆದರೆ ಪ್ರತಿದಿನ ದಾರಿಯಲ್ಲಿ ಶಾಲೆಗೆ ಹೋಗುವಾಗ ಕಾಣಸಿಗುತ್ತಿದ್ದ ಪಟ್ಟಣಶೆಟ್ಟರ ಮಗಳು ಸುಗುಣಾ ನನ್ನನ್ನು ಆಕರ್ಷಿಸಿದ್ದಳು. ಈ ರಾಜಣ್ಣ, ಜ್ಯೋತಿಯ ಹೆಸರಿನ ಬದಲು, ಸುಗುಣಳ ಹೆಸರನ್ನು ನನ್ನ ಹೆಸರಿನ ಜತೆಗೆ ಸೇರಿಸಿ ಹೇಳಬಾರದಿತ್ತೇ ಎಂದು ನಾನಂದುಕೊಂಡದ್ದು ಎಷ್ಟೋ ಸಲ!

ರೋಸಿ ಕಣ್ಣಿಗೆ ಬೀಳದಿರಲಿ!

ನಾವು ನರಸೀಪುರಕ್ಕೆ ಬಂದ ನಾಲ್ಕನೇ ದಿನ, ಶನಿವಾರ ಸಂಜೆ ನಾಲ್ಕಕ್ಕೆ ತಮ್ಮ ಚಂದ್ರ ತೀರಿಕೊಂಡ. ಹಾಗಾಗಿ ಅಪ್ಪಯ್ಯನ ಹೋಟೆಲಿನ ವ್ಯವಹಾರ ಆರಂಭದಲ್ಲೇ ಅಡ್ಡಿಯನ್ನೆದುರಿಸಬೇಕಾಯಿತು. ಚಂದ್ರು ಸಾವಿನಿಂದ ಕಾವುಗಟ್ಟಿದ್ದ ಗಾಢ ಮೌನ ಹಾಗೂ ಅನಿರ್ವಚನೀಯವಾದ ದುಃಖದಿಂದ ಹೊರಬರಲು ನಾನು ಅಮ್ಮನ ಬಳಿ ಹೋಗಿ, 'ನಂಗೆ ತಡ್ಕೋಕಾಗಲ್ಲಮ್ಮ ಸಿನೆಮಾಕ್ಕಾದರೂ ಹೋಗಿ ಬರ್ತೇನೆ, ನಾಲ್ಕಾಣೆ ಕೊಡಿ' ಎಂದೆ. ಚಂದ್ರು ಸತ್ತ ಮಾರನೇ ದಿನವೇ ಸಿನೆಮಾ ನೋಡಿದ ನನ್ನ ಮನಸ್ಸನ್ನು ಅರ್ಥಮಾಡಿಕೊಳ್ಳಲು ನನಗಿನ್ನೂ ಸಾಧ್ಯವಾಗಿಲ್ಲ.

ಒಮ್ಮೆ ಅಪ್ಪಯ್ಯ ಎರಡು ಬಿದಿರಿನ ಬುಟ್ಟಿಗಳನ್ನು ತಂದರು. ಇಡ್ಲಿ ಮಾಡುವ ಬದಲು ಕೋಡುಬಳೆ, ಚಕ್ಕುಲಿ, ಮುಸ್ಸೋರೆ ಮತ್ತು ಮಸಾಲೆ ವಡೆಗಳನ್ನು ತಯಾರಿಸಿದರು. ತಿಂಡಿಯನ್ನು ಪಾಲು ಮಾಡಿ ಎರಡೂ ಬುಟ್ಟಿಗಳಲ್ಲಿ ಜೋಡಿಸಿಟ್ಟು, ಹೋಗಿ, ಮಾರಿಕೊಂಡು ಬನ್ನಿ, ಎಂದರು.

ಹತ್ತಿರದಲ್ಲೇ ಶಾಲೆ. ನಾನು ಎಂಟನೆಯ ತರಗತಿಯ ವಿದ್ಯಾರ್ಥಿ. ನನಗಂತೂ ಅದು ತೀರ ಅಪ್ರಿಯವಾದ ಕೆಲಸ. ನನ್ನ ಸಹಪಾಠಿಗಳು ಈ ಸ್ಥಿತಿಯಲ್ಲಿ ನನ್ನನ್ನು ನೋಡಿ ನಕ್ಕಾರು, ಹಾಸ್ಯ ಮಾಡಿಯಾರು ಎಂಬ ಹಿಂಜರಿಕೆ. ನಮ್ಮ ಆ ಮನೆಯೆದುರೇ ನನ್ನ ಸಹಪಾಠಿ ಬ್ರಿಜಮೋಹನ ಕುಮಾರನ ಮನೆ. ಅವನೋ, ನನಗೆ ಮತ್ತೆ ಮತ್ತೆ ನೋಡಬೇಕು ಎಂಬ ಆಸೆಯನ್ನು ಕೆರಳಿಸುತ್ತಿದ್ದ ಅವನ ತಂಗಿ ರೋಸಿಯೋ ಈ ಅವಸ್ಥೆಯಲ್ಲಿ ನನ್ನನ್ನು ನೋಡಿದರೆ ಏನು ಗತಿ ಎಂಬ ಅಳುಕು. ಶಾಲೆಯಲ್ಲಿ ನನಗಿಂತ ಬ್ರಿಜಮೋಹನ, ಅವನಿಗಿಂತ ನಾನು ಮಹಾವಿಷ್ಣುವಿನ ಚಿತ್ರ ಬಿಡಿಸುವುದರಲ್ಲಿ ಗಟ್ಟಿಗರೆಂದು ಸ್ಪರ್ಧಿಸುತ್ತಿದ್ದೆವು. ಆದರೀಗ...?

'ನಾನು ಹೋಗುವುದಿಲ್ಲ' ಎಂದು ಸಿಟ್ಟು ಅಸಹನೆ, ದುಃಖಗಳಿಂದ ಕೂಗಿಕೊಂಡೆ. ಅಪ್ಪಯ್ಯ ಜೋರು ಮಾಡಲಿಲ್ಲ; ಕುರುಡುನೋಟ ನೋಡುತ್ತ ಕೂತರು. ಅಮ್ಮ ಕಣ್ಣೀರು ತುಂಬಿಕೊಂಡು ಓಲೈಸಿದರು. ಆಗಾಗ ಒಂದು ಹೊತ್ತು ಉಪವಾಸ ಮಾಡುತ್ತಿದ್ದುದನ್ನು ನೆನಪಿಸಿದರು. ಅಮ್ಮನ ಮಾತು ನಿಜ ಅನ್ನಿಸಿತು.

ಹೆಗಲ ಮೇಲೆ ಬುಟ್ಟಿ ಹೊತ್ತು, 'ವಡೇ... ಚಕ್ಲೀ... ಕೋಡುಬಳೆ... ಮುಸ್ಸೋರೆ...' ಎಂದು ಸಾರಿಕೊಂಡು ಹೋಗಬೇಕಾಗಿದ್ದ ನಾನು, ರೋಸಿಯ ಮನೆಯೆದುರು ಮೌನವಾಗಿ, ಮುಖ ತಿರುಗಿಸಿ, ತಲೆ ತಗ್ಗಿಸಿ ಹೋಗುತ್ತಿದ್ದರೂ ಬ್ರಿಜಮೋಹನನ ತಾಯಿ ನನ್ನನ್ನು ಕರೆದು ನಾಲ್ಕೂ ತಿಂಡಿಗಳನ್ನು ಒಂದೊಂದಾಣೆಗೆ ಕೊಂಡರು. ಯಾವಾಗಲೂ ರೋಸಿ ಕಣ್ಣಿಗೆ ಬೀಳಲಿ ಎಂದು ತವಕಿಸುತ್ತಿದ್ದ ನಾನು, ಅಂದು ಮಾತ್ರ, 'ದೇವರೇ ರೋಸಿ ಹೊರಗೆ ಬರದಿರಲಿ' ಎಂದು ಪ್ರಾರ್ಥಿಸುತ್ತಿದ್ದೆ.

ನನ್ನ ತರಗತಿಯಲ್ಲಿ ಓದುತ್ತಿದ್ದ ರಾಧಾಕೃಷ್ಣ ಶೆಟ್ಟಿಯ ಮನೆಯವರು ಒಮ್ಮೊಮ್ಮೆ ನನ್ನಿಂದ ಒಂದೆರಡಾಣೆಯ ತಿಂಡಿ ಕೊಳ್ಳುತ್ತಿದ್ದರು. ಒಂದು ದಿನ ಪ್ರಾಯಶಃ ಒಂದೇ ಡ್ರೆಸ್ಸಿನಲ್ಲಿ ನನ್ನನ್ನು ಕಂಡಿದ್ದ ರಾಧಾಕೃಷ್ಣ ಶೆಟ್ಟಿಯ ತಂದೆ, ತಾವಾಗಿಯೇ ಮಗನ ಎರಡು ಶರಟು, ಎರಡು ಪಾಯಿಜಾಮಗಳನ್ನು, ಬೇಡ ಬೇಡ ಎನ್ನುತ್ತಿದ್ದರೂ ಒತ್ತಾಯದಿಂದ ನನಗೆ ಕೊಟ್ಟರು. ನನಗೆ ನೆನಪಿರುವಂತೆ ಮನುಷ್ಯತ್ವದ ಕೃತಜ್ಞತೆಗಾಗಿ ನಾನು ಕಣ್ಣೀರು ಮಿಡಿದ ಮೊದಲ ಸಂದರ್ಭ ಅದು.

ಒಮ್ಮೆ ವ್ಯಾಸರಾಯ ಮಠದಲ್ಲಿ ಏರ್ಪಾಡಾಗಿದ್ದ ಮಾಸ್ಟರ್ ಹಿರಣ್ಣಯ್ಯ ಪ್ರಸ್ತುತಪಡಿಸಿದ ಒಂದು ನಾಟಕ ಅರ್ಥವಾಗದಿದ್ದರೂ, ಅವರ ಮಾತಿನ ಓಘ ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡಿಸಿತ್ತು. ಅವರು ಆಡಿದ, 'ಅನ್ಯಾಯದ್ದಾರೀಲಿ ಇರೋದೇ ಇಳಿಜಾರು' ಎಂಬ ಒಂದು ಮಾತು ಮಾತ್ರ ನನ್ನ ಆಳದಲ್ಲಿ ಬೇರೂರಿತು.

ಸಿಗರೇಟು, ಸಿನಿಮಾ ಪೋಸ್ಟರು...

ಮುಂದೆ ನಾನು ನಂಜನಗೂಡಿನ 'ಗಣೇಶ ವಿಲಾಸ'ದಲ್ಲಿ ಕೆಲಸ ಮಾಡುತ್ತಿದ್ದಾಗ ಒಂದು ದಿನ, ನನ್ನ ಜತೆ ರೆಸ್ಟಿಗೆ ಬಂದ ಮತ್ತೊಬ್ಬ ಹುಡುಗನ ಒತ್ತಾಯದಿಂದ ಒಂದು ಬರ್ಕ್‌ಲೀ ಸಿಗರೇಟು ಕೊಂಡು ಸೇದಿದೆ. ಹಾಗೆ ಸಿಗರೇಟು ಸೇದಿದಾಗೊಮ್ಮೆ ಇಡಿಯ ಮೈ ಪುಲಕಿತವಾಗಿ ನಾನೊಬ್ಬ 'ಗಂಡಸು' ಎಂಬ ವಿಚಿತ್ರ ಸಂವೇದನೆಯ ಉಲ್ಲಾಸ ಕಾಣಿಸಿಕೊಳ್ಳುತ್ತಿತ್ತು. ಮನೆಯ ಹಾಗೂ ಅಮ್ಮನ ಪ್ರೀತಿಯ ರಕ್ಷಣೆಯಿಂದ ದೂರವಾಗಿ, ಮನೆಯ ಗುಂಗಿನಲ್ಲೇ ಇರುತ್ತಿದ್ದ ನನ್ನನ್ನು ಈ ಹೊಸ ಅನುಭವ, ನಿಧಾನವಾಗಿ ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳತೊಡಗಿತು.

ನಾನು ಹೋಟೆಲಿನ ಹೊರಗೆ, ಬಾಗಿಲ ಬಳಿ ಮೆಟ್ಟಲಿನಂತಿದ್ದ ಹಾಸುಗಲ್ಲಿನ ಮೇಲೆ ಮಲಗುತ್ತಿದ್ದೆ. ಅಲ್ಲಿ ಮಲಗಲು ನನಗೆ ಮುಖ್ಯ ಆಕರ್ಷಣೆಯಾಗಿದ್ದದ್ದು ಎದುರು ಕಾಂಪೌಂಡಿನ ಮೇಲೆ ನಡುರಾತ್ರಿಯ ಹೊತ್ತು ಸಿನೆಮಾದವರು ಅಂಟಿಸುತ್ತಿದ್ದ ವರ್ಣರಂಜಿತ ಪೋಸ್ಟರುಗಳು. ಅದೂ ಮುಖ್ಯವಾಗಿ ಗುರುವಾರ ರಾತ್ರಿ. ನಿದ್ದೆ ಮಾಡದೆ, ಪೋಸ್ಟರು ಹಚ್ಚಬರುವವರನ್ನು ಕಾದು ಕೂತು, ಅವರು ಬಂದು ಹೋದ ಮೇಲೆ ಅಳುಕುತ್ತಳುಕತ್ತ ಎದ್ದು ನಿಂತು, ಅತ್ತಿತ್ತ ನೋಡಿ, ಮೂತ್ರ ವಿಸರ್ಜನೆಗೆ ಎಂಬಂತೆ ಎದುರು ಕಾಂಪೌಂಡ್ ಬಳಿ ಕೂತು ಆಮೇಲೆ, ಆಕರ್ಷಕವಾದ ಪೋಸ್ಟರುಗಳನ್ನು ಅವು ಹರಿದುಹೋಗದಂತೆ ಮೆಲ್ಲಗೆ ಕಿತ್ತುಕೊಂಡು ಬರುತ್ತಿದ್ದೆ. ಅವನ್ನೊಂದು ನಿಧಿ ಎಂಬಂತೆ ಕೆಲವು ದಿನ ಕಾದಿರಿಸುತ್ತಿದ್ದೆ. ಪೋಸ್ಟರುಗಳ ಆಸೆಯಿಂದ ನಿದ್ದೆಗೆಟ್ಟು, ಹೊರಗೆ ಮಲಗಿ, ಚಳಿಗೆ ನಡುಗಿ, ಬೆಳಗಿನ ಇಬ್ಬನಿಯಿಂದ ತೋಯಿಸಿಕೊಳ್ಳುತ್ತಿದ್ದುದರ ಪರಿಣಾಮ ಆಗಂತೂ ತಿಳಿಯಲಿಲ್ಲ.

ಬೆಣ್ಣೆ ಕಳ್ಳ

ನಾನು 'ರಾಜಭವನ' ಸೇರಿ ನಾಲ್ಕು ತಿಂಗಳಾಗಿತ್ತು. ಬೇರೆ ಸಪ್ಲೈಯರುಗಳಿಗೆಲ್ಲ ಹದಿನೆಂಟರಿಂದ ಇಪ್ಪತ್ನಾಲ್ಕು ರೂಪಾಯಿಯ ಸಂಬಳವಿತ್ತು. ನನಗೆ ಮಾತ್ರ ಹದಿನಾರು ರೂಪಾಯಿ. ಇಪ್ಪತ್ತು ರೂಪಾಯಿ ಕೊಡಬೇಕೆಂದು ಸಾಹುಕಾರರನ್ನು ಕೇಳಲು ಸಮಯ ಕಾಯುತ್ತಿದ್ದೆ. ಒಂದು ದಿನ ಬೆಳಗಿನ ಹೊತ್ತು, ರಷ್ ಕಡಿಮೆ ಇದ್ದಾಗ ಕೇಳಿದೆ.

''ಹೌದಯ್ಯಾ, ನೀನು ಮಾಡುವ ಕೆಲಸಕ್ಕೆ ಇಪ್ಪತ್ತು ರೂಪಾಯಿ ಕೊಡಬೇಕು, ನಿಜ. ನೀನು ಒಳ್ಳೆಯ ಕೆಲಸಗಾರ. ಆದರೆ ದಿನವೂ ಬೆಳಗ್ಗೆ ನೀನು ಟಿಫನ್ ಮಾಡುವಾಗ ದೋಸೆಯ ಒಳಗೆ ಇಷ್ಟಿಷ್ಟು...'' ಎನ್ನುತ್ತ ಬಲಗೈ ಬೆರಳುಗಳನ್ನರಳಿಸಿ ಮುಷ್ಟಿಯ ಗಾತ್ರವನ್ನಭಿನಯಿಸಿ ತೋರಿಸುತ್ತ, ''ಇಷ್ಟಿಷ್ಟು ಬೆಣ್ಣೆ ಹಾಕ್ಕೊಂಡ್ ತಿಂತೀಯಲ್ಲ; ನಿನ್ನ ಸಂಬಳ ಹೆಚ್ಚು ಮಾಡೋದು ಹೇಗೆ?'' ಎಂದು ಅತ್ಯಂತ ತಾಳ್ಮೆಯಿಂದ ಗಂಭೀರವಾಗಿ, ಯಾವ ವ್ಯಂಗ್ಯವೂ ಇಲ್ಲದೆ ಹೇಳಿ, ನನ್ನ ಮುಖ ದಿಟ್ಟಿಸಿದರು ರಾಜಾರಾಯರು.

ಆ ಮಾತು ಕೇಳುತ್ತಿದ್ದಂತೆ ನಾನು ತೀರ ಸಣ್ಣವ ಅನ್ನಿಸಿತು. ತಲೆ ತಗ್ಗಿಸಿ ನಿಂತೆ.

ಅವರು ಹೇಳಿದ ಮಾತು ನಿಜವಾಗಿತ್ತು. ನಾನು ತಿನ್ನುತ್ತಿದ್ದ ಬೆಣ್ಣೆಗೆ ಹಣ ಕೊಡುವುದಿದ್ದರೆ ದಿನಕ್ಕೆ ಎಂಟಾಣೆ ಆಗುತ್ತಿತ್ತು. ಅವರ ಮಾತಿಗೆ ಶಾಬ್ದಿಕ ಪ್ರತಿಕ್ರಿಯೆ ತೋರಿಸಲು ಅಸಮರ್ಥನಾದ ನಾನು, ಮನಸ್ಸಿನಲ್ಲಿಯೇ ಒಂದು ಪ್ರತಿಜ್ಞೆ ಮಾಡಿದೆ.

'ಇನ್ನು ಮುಂದೆ ಬೆಣ್ಣೆ ತಿನ್ನುವುದಿಲ್ಲ. ಇಲ್ಲಿ ಮಾತ್ರವಲ್ಲ, ಎಲ್ಲಿಯೂ ತಿನ್ನುವುದಿಲ್ಲ' ಎಂದು!

ದುಷ್ಟರ ಕೂಟ

ವಸತಿಗೃಹದ ಕೋಣೆಯೊಂದರಲ್ಲಿ ನಡೆದ ಆ ಘಟನೆ, ಅಮಾಯಕ ಹೆಂಗಸೊಬ್ಬಳಿಗೆ ಗಂಡಸರು ತೋರಿಸಬಹುದಾದ ಕ್ರೌರ್ಯದ ಪರಮಾವಧಿ ಎಂದು ನನ್ನ ನೆನಪಿನಲ್ಲಿ ಉಳಿದುಬಿಟ್ಟಿದೆ. ಏನೆಲ್ಲ ಆಸೆಗಳನ್ನು ಹೊತ್ತು ಹಳ್ಳಿಯ ಹುಡುಗಿಯೊಬ್ಬಳು ಒಬ್ಬ ಗಂಡಸಿನೊಡನೆ ಆ ಕೋಣೆಯಲ್ಲಿ ತಂಗಿದ್ದಳು! ರಾತ್ರಿ ಬೆಳಗಾಗುವಷ್ಟರಲ್ಲಿ ಅವಳ ಬಟ್ಟೆಬರೆ, ಪರ್ಸು, ಒಡವೆಗಳು ಯಾವುವೂ ಅವಳ ಮೈಮೇಲಿರಲಿಲ್ಲ. ಅವಳ

ಒಡನಾಡಿ ಅವುಗಳನ್ನೆಲ್ಲ ಅಪಹರಿಸಿ, ಹೊರಗಿನಿಂದ ಕೋಣೆಗೆ ಬೀಗವನ್ನೂ ಹಾಕಿ ಪರಾರಿಯಾಗಿದ್ದ.

ಆ ಹೆಂಗುಸು ಒಳಜಗಲಿಯ ಕಡೆಗಿದ್ದ ಕಿಟಕಿಯನ್ನು ಸ್ವಲ್ಪವೇ ತೆರೆದು ಅಲ್ಲಿ ಮಲಗಿದ್ದ ಹೋಟೆಲ್ ಕೆಲಸಗಾರರಲ್ಲಿ ಒಬ್ಬನೊಡನೆ ತನ್ನ ಪರಿಸ್ಥಿತಿಯನ್ನು ಹೇಳಿಕೊಂಡಳು. ಸುದ್ದಿ ತಿಳಿದ ಮೇಸ್ತ್ರಿ ನಾರಾಯಣನ್ ನಾಯರ್, ದೋಸೆ ಭಟ್ಟನೊಡನೆ ಆ ಕಿಟಕಿಯ ಬಳಿ ಬಂದು, ಏನೋ ಸಂಧಾನ ನಡೆಸಿದ. ಅವಳ ತಲೆದಿಂಬಿನ ಅಡಿಯಲ್ಲಿ ಆಕಸ್ಮಿಕವಾಗಿ ಉಳಿದುಕೊಂಡಿದ್ದ ಏಳು ರೂಪಾಯನ್ನು ಅವಳಿಂದ ಪಡೆದು, ಒಂದು ಸೀರೆ ಖರೀದಿಸಿ ತಂದುಕೊಡಬೇಕೆಂಬುದು ಅವಳ ಬೇಡಿಕೆ. ಅದನ್ನು ಮಾಡಲು ನಾಯರ್ ಒಂದು ಕರಾರು ಹಾಕಿದ. ಹೊರಗಿನ ಬೀಗ ತೆರೆಯುವ ಮುಂಚೆ ತಮ್ಮಿಬ್ಬರನ್ನೂ ಸಂತೋಷಪಡಿಸಿದರೆ ಸೀರೆ ತಂದುಕೊಡುತ್ತೇವೆ ಎಂದು. ಅದಕ್ಕೊಪ್ಪದೆ ಅವಳಿಗೆ ಬೇರೆ ದಾರಿ ಇರಲಿಲ್ಲ.

ಅವಳನ್ನು ಕರೆತಂದಿದ್ದ ಗಂಡಸಿನ, ಮೇಸ್ತ್ರಿಯ ಹಾಗೂ ದೋಸೆಭಟ್ಟನ ಕ್ರೌರ್ಯ ನನ್ನನ್ನು ಕಲಕಿಬಿಟ್ಟಿತ್ತು.

ಮೈಸೂರಿನ ವಿವಿಧ ಹೋಟೆಲುಗಳಲ್ಲಿ ಕೆಲಸ ಮಾಡುತ್ತಿದ್ದವರಿಗೆಲ್ಲ 'ಇಂದ್ರಭವನ'ದಲ್ಲಿ ಕೆಲಸ ಗಳಿಸಿಕೊಳ್ಳುವುದು ಜೀವನದ ಬಹು ದೊಡ್ಡ ಕನಸಾಗಿತ್ತು.

ಆಗ ರೂಪಾಯಿಗೆ ಹದಿನಾರಾಣೆ. ಹತ್ತಾಣೆ ಆಗುತ್ತದೆ ಎಂಬ ಗುಸುಗುಸು ಇತ್ತು. ನಮಗೆಲ್ಲ ಹೀಗಾದರೆ ಹೇಗೆ ಎಂಬ ಚಿಂತೆ. ಆ ದಿನ ಬಂದೇ ಬಂತು. ಹೋಟೆಲಿನೆದುರು ಫುಟ್‌ಪಾತಿನಲ್ಲಿ ನಾಲ್ಕಾರು ಜನರ ನಡುವೆ ಇಂದ್ರಭವನ್ ಮ್ಯಾನೇಜರ್ ಚಿದಂಬೀಲಾಲರು ಕುತೂಹಲ, ಉತ್ಸಾಹಗಳಿಂದ ಆಗ ತಾನೆ ಬಿಡುಗಡೆಯಾಗಿದ್ದ 'ನಯಾ ಪೈಸಾ' ನಾಣ್ಯವನ್ನು ನೋಡುತ್ತಿದ್ದರು. ಹೊರಗೆ ಹಣಿಕಿದ ನನ್ನನ್ನು ಕೂಡ ಕೂಗಿ ಕರೆದು ಉತ್ಸಾಹದಿಂದ ತಮ್ಮಲ್ಲಿದ್ದ ಪೈಸಾವನ್ನು ಸಣ್ಣ ಮಗುವಿನ ಹಾಗೆ ತೋರಿಸಿದರು. ಥಳ ಥಳ ಹೊಳೆಯುತ್ತಿದ್ದ ತಾಮ್ರದ ಒಂದು ಪೈಸೆಯ ಪುಟ್ಟ ನಾಣ್ಯವನ್ನು ನೋಡುವುದೇ ಒಂದು ಸಂಭ್ರಮವಾಗಿತ್ತು.

ಆ ದಿನಗಳಲ್ಲಿ ನನಗೆ ದಿನಚರಿ ಬರೆಯುವ ರೂಢಿ ಇತ್ತು. ಅಪ್ಪ ಸತ್ತ ರಾತ್ರಿ, ನಾನು ದಿನಚರಿಯಲ್ಲಿ ಬರೆದದ್ದು ಬಹುಮಟ್ಟಿಗೆ ಹೀಗಿತ್ತು: 'ವಿದ್ಯೆ ಕಲಿಯಬೇಕೆಂದರೆ ಶಾಲೆಗೇ ಹೋಗಬೇಕೆಂದೇನೂ ಇಲ್ಲ. ಕಲಿಯುವ ಮನಸ್ಸಿದ್ದರೆ ಎಲ್ಲಿಯೂ ಕಲಿಯಬಹುದು... ನನ್ನ ಹಿತೈಷಿಗಳು ನೀಡಿದ್ದ ಎಚ್ಚರಿಕೆ ನಿಜವಾಯ್ತು.'

ಅಪ್ಪನ ಜತೆ 'ಕನ್ಯಾ ನಿರೀಕ್ಷೆ'!


ದೇವಸ್ಥಾನದ ಬಳಿಯ ಇಬ್ಬರು ಹುಡುಗಿಯರು. ಮುಖಮಂಟಪದ ಹತ್ತಿರ ನೇಲಿಸಿದ್ದ ಪಂಜರದ ಗಿಳಿಯನ್ನು ಮಾತಾಡಿಸುವಂತೆ, ನನ್ನ ಕಡೆ ನೋಡುತ್ತ, 'ರಾಮು, ರಾಮು, ಏನ್ಮಾಡ್ತಿದ್ದೀ' ಎಂದು ಕೇಳಿ ನನ್ನ ಗಮನ ಸೆಳೆಯುತ್ತಿದ್ದರು. ಒಂದು ದಿನ ಸಂಜೆ ಎಂಟಕ್ಕೆ ದೇವಾಲಯದೆದುರು ಅವರ ನೃತ್ಯ ನೋಡಿದ ನನ್ನ ಮನಸ್ಸು, ಹಿರಿಯವಳಿಗೆ ಮಾರುಹೋಯ್ತು. ನಾನದರ ಬಗ್ಗೆ ಅಮ್ಮನ ಹತ್ತಿರ ಹೇಳಿದ್ದೆ. ಅಮ್ಮ ಅಪ್ಪನಿಗೆ. ಅಪ್ಪ ಮುಗ್ಧತೆಯಿಂದ ದೇವಾಲಯದ ಹುಡುಗಿಯನ್ನು ನೋಡಲು ನನ್ನ ಜತೆ ಬಂದಿದ್ದರು. ಸಂಪ್ರದಾಯದಂತೆ ಹೆಣ್ಣು ನೋಡಲು ಅಲ್ಲ. ನಾನು ಹೇಳಿದ್ದೆ, 'ದೇವರಿಗೆ ಕೈ ಮುಗಿಯಲು ಹೋಗೋಣ. ನಾನಲ್ಲಿಗೆ ಹೋದಾಗಲೆಲ್ಲ ಅವಳು ಬರುತ್ತಾಳೆ. ಬಂದರೆ ತೋರಿಸುತ್ತೇನೆ' ಎಂದು. ಅಪ್ಪಯ್ಯ ನನ್ನ ಜತೆ ಎರಡು ಸಲ ಬಂದರು. ಅವಳು ಕಾಣಸಲಿಲ್ಲ.

ಹದಿನೇಳರ ಹುಡುಗನ ಹುಚ್ಚು ಮೋಹದ ಮಾತು ಎಂದು ಅಲಕ್ಷಿಸದೆ ನನ್ನ ಮೋಹವನ್ನು ಗಂಭೀರವಾಗಿ ಪರಿಗಣಿಸಿದ ಅಪ್ಪನ ಮುಗ್ಧ ಪ್ರೇಮ ಘನವಾದ್ದು.

■


('ಎಳ ನಿಂಬಿ' - ಸುಮಂತ ಪ್ರಕಾಶನ, 1-183 ಗಾಳದ ಕಟ್ಟೆ ರಸ್ತೆ, ಉಪ್ಪಿನಕೋಟೆ, ಬ್ರಹ್ಮಾವರ-576 213. ಉಡುಪಿ ಜಿಲ್ಲೆ. ಪುಟ : 164 ಬೆಲೆ : ರೂ. 75)





ಗಣೇಶ್ ಯಲ್ಲಾಪುರ

ಪೋರನಿಗೇ ಒಂದು ದಾರಿ



ಅಪ್ಪಯ್ಯ ಚಿಂತಾಕ್ರಾಂತನಾಗಿದ್ದುದು ಮಾಣಿಯ ಗಮನಕ್ಕೂ ಬಂದಿತ್ತು. ಮೂರು ದಿನಗಳಿಂದ ಒಂದೇ ಥರ. ನೆಲದ ಮೇಲೆ ಕೂತನೆಂದರೆ ಅದೇನೋ ಯೋಚಿಸುತ್ತ ಕೂತೇ ಇರುತ್ತಿದ್ದ. ಗೋಡೆಗೆ ಬೆನ್ನುಕೊಟ್ಟು ನಿಂತನೆಂದರೆ ನಿಂತುಬಿಡುತ್ತಿದ್ದ. ಯಾವ ಕಾರಣವೂ ಇಲ್ಲದೇ ಆ ಕೋಣೆಯಿಂದ ಈ ಕೋಣೆಗೆ, ಅಡಿಕೆ ಅಟ್ಟಕ್ಕೆ, ಮೆತ್ತಿಗೆ ಶಥಪಥ ತಿರುಗಾಡೂದು ನೋಡಿ ಮಾಣಿಗೋ ಅಯೋಮಯ.

ಯಾವಾಗ್ಲೂ ಹೀಗಿದ್ದವನಲ್ಲ ಅಪ್ಪಯ್ಯ. ಕಡ್ಡಿ ತುಂಡು ಮಾಡಿದವನಂತೆ ಮಾತು, ನಿಲ್ಲೂದೂಂದ್ರೆ ನಿಂತೇ ಬಿಡುವುದು. ಕೂರುವುದೆಂದರೆ ಅದೇ ಸರಿ. ತಿರುಗಾಡುವಾಗಲೂ ಗಾಳಿಯನ್ನು ಸೀಳಿಕೊಂಡು ಬಿರಬಿರನೆ ನಡೆಯುತ್ತಿದ್ದ.

ನಿರ್ಧಾರ ಅಂದ್ರೆ ನಿರ್ಧಾರ. ಹೆಚ್ಚಿನ ಸಂದರ್ಭಗಳಲ್ಲಿ ಆತ ನಿರ್ದ್ವಂದ್ವಿ. ಇಲ್ಲೇ ಅಂದ್ರೆ ಇಲ್ಲ. ಹೌದು ಅಂದ್ರೆ ಅದೇ ಶಾಸನವೆಂಬಂತೆ ಸಾಧಿಸ ಹೊರಡುತ್ತಿದ್ದ ಈ ಪ್ರಾಣಿಗೆ ಅದೇನು ಕೇಡುಗಾಲ ಬಂತು? ಎಂದು ಪ್ರಶ್ನೆ ಕೇಳಿಕೊಂಡವ, ಬಾಯಿಗೆ ಬಲಗೈಯಿಂದ ಬೀಡ ತುರುಕಿಕೊಳ್ಳುತ್ತ, ಎಡಗೈಯಿಂದ ಚಿಟಿಕೆ ಹಾರಿಸುತ್ತ 'ಓಹೋ ಹೀಗಿರಬಹುದು' ಎಂದುಕೊಂಡ.

ಮಾಣಿ ಕ್ಷಿಪ್ರಗತಿಯಲ್ಲಿ ಯೋಚಿಸಲಾರಂಭಿಸಿದ. ನೆನಪುಗಳು ಹಿಂದಕ್ಕೆ ನೆಗೆದವು. ಎಷ್ಟೆಂದರೆ ಐದು ವರ್ಷ!

ಒಂದು ದಿನ ಬೆಳಿಗ್ಗೆ ಮಠದ ಶ್ರೀಪಾದ ಒಂದು ಸುದ್ದಿ ತಂದ. 'ಅಚ್ಚೆಮನೆ ನರಸಣ್ಣ ಯಲ್ಲಾಪುರದಲ್ಲಿ ಒಂದು ಅಡಿಕೆ ಮಂಡಿ ತೆಗೀತಾನಂತೆ' ಅಪ್ಪಯ್ಯ ಅಂದು ಆರಾಮಕುರ್ಚಿಯಲ್ಲಿ ಕೂತಿದ್ದುದು, ಒಮ್ಮೆಗೆ ಯೋಚನೆಗೊಳಗಾದುದು ಮಾಣಿಗಿನ್ನೂ ಮರೆತಿಲ್ಲ. ಬೆತ್ತದ ಕುರ್ಚಿಯ ಮೇಲೆ ಕೂತು ಅಡಿಕೆ ಹೋಳು ಮಾಡುತ್ತಿದ್ದ ಮಾಣಿ, ಪ್ರಶ್ನಾರ್ಥಕವಾಗಿ ಅಪ್ಪಯ್ಯನ ಮುಖ ನೋಡಿದ್ದ.

ಮುಖಭಾವದಲ್ಲಿ, ಗೆರೆಗಳಲ್ಲಿ ಅಂತಹ ಬದಲಾವಣೆಯೇನೂ ಕಾಣಸಲಿಲ್ಲ. ತೋರುಬೆರಳನ್ನು ಗಾಳಿಯಲ್ಲಿ ಆಡಿಸಿ, 'ಹೂಂ... ಊಹುಂ... ಊಹುಹುಂ! ಹೂಊಂ!' ಎಂದ. 'ಹಾಗಾದರೆ ಹೀಗೆ, ಹೀಗಾದರೆ ಹಾಗೆ-ಅಲ್ಲಲ್ಲ. ಹಾಗೆ... ಅಲ್ಲಲ್ಲ, ಹೀಗೆ. ಅಲ್ಲ ಅದೂ ಅಲ್ಲ' ಎಂದುಕೊಳ್ಳುತ್ತಿರಬೇಕು.

ಆಮೇಲೊಮ್ಮೆ, 'ಮಾಣಿ' ಎಂದ.

'ತಮ್ಮನಿಗೊಂದ್ಸಲ ಫೋನ್ ಮಾಡು. ಅರ್ಜೆಂಟಾಗಿ ಬರಲು ಹೇಳು.' ಮಾಣಿ ಯಾಕೆ ಅಂತ ಕೇಳಲಿಲ್ಲ. ಅದು ಅವನ ಅಭ್ಯಾಸ ಸಹ ಅಲ್ಲ.

ಧಾರವಾಡದ ಹಾಸ್ಟೆಲಿಗೆ ಫೋನ್ ಮಾಡಿ, ಎಂಕಾಂ ಓದುತ್ತಿದ್ದ ತಮ್ಮನನ್ನು ಆದಷ್ಟು ಬೇಗ ಕರೆಸಿದ್ದ. ತಮ್ಮ ಬಂದ. ಅಪ್ಪಯ್ಯ ಹೇಳಿದ್ದು ಒಂದೇ ಮಾತು, 'ನೀನಿನ್ನು ಉದ್ಧಾರ ಮಾಡಿದ್ದು ಸಾಕು. ಪೇಟೆಯಲ್ಲಿ ಒಂದು ಮಂಡಿ ತೆರೆಯೋಣ'


ತಮ್ಮ ಊಹುಂ ಎನ್ನಲಿಲ್ಲ. ಅವನ ಆಸೆಯೂ ಅದೇ ಆಗಿರಬೇಕು.

'ನಾರಾಯಣ ಟ್ರೇಡರ್ಸ್' ಎಂಬ ಹೆಸರಿನಲ್ಲಿ ಅಡಿಕೆ ಅಂಗಡಿ ತಲೆ ಎತ್ತಿಯೇ ಬಿಟ್ಟಿತು. ಪಕ್ಕದ ಮನೆ ನರಸಣ್ಣನದು ಆರಂಭವಾಗುವುದಕ್ಕಿಂತಲೂ ಒಂದು ವಾರ ಮೊದಲೇ!



ಅಂಗಡಿ ಶುರುವಾಗಿಯೇಹೋಯ್ತು. ಮಾಣಿ ತನ್ನ ದೈನಂದಿನ ಚಟುವಟಿಕೆಗಳನ್ನು ನಿಭಾಯಿಸುತ್ತ ಸುಮ್ಮನಿದ್ದ. ತಮ್ಮ ಪೇಟೆಯಲ್ಲಿ ಅಂಗಡಿ ತೆರೆದುದರಿಂದ ಅವನಿಗೇನೂ ಇರಿಸುಮುರಿಸಾಗಿರಲಿಲ್ಲ. ಮನೆಗೆ ತಮ್ಮ ಮರಳುವುದರಿಂದ ತನ್ನ ಸ್ಥಾನಮಾನವೇನಾದರೂ ಕಳೆದು ಹೋಗಬಹುದೆಂಬ ಚಿಂತೆ ಸಹ ತಪ್ಪಿಯೂ ಅವನನ್ನು ಕಾಡಿರಲಿಲ್ಲ. ಏಕೆಂದರೆ ಅಲ್ಲಿ ಸ್ಥಾನಮಾನಗಳೆಂಬುದಕ್ಕೆ ಹೆಚ್ಚಿನ ಅರ್ಥಗಳಿರಲಿಲ್ಲ. ಮನೆಯಿಡೀ ಅಪ್ಪಯ್ಯನೇ ತುಂಬಿರುತ್ತಿದ್ದ. ಮನೆ ಅಪ್ಪಯ್ಯನೇ ಕಟ್ಟಿಸಿದ್ದು. ಒಂದೊಂದು ಕೋಣೆಗಳನ್ನೂ ಆತ ಹೇಳಿದಂತೆಯೇ ಕಟ್ಟಲಾಗಿದೆ. ದೇವರ ಕೋಣೆ, ಅಡುಗೆಮನೆ, ಜಗುಲಿ-ಎಲ್ಲವೂ ಆತ ಇಷ್ಟಪಟ್ಟಂತೆ. ಹೆಬ್ಬಾಗಿಲಲ್ಲಿ ಇರುವ ಫೋಟೋ ಅಪ್ಪಯ್ಯ ಕಾಶಿಗೆ ಹೋದಾಗ ತಂದಿದ್ದು. ಜಗುಲಿಯಲ್ಲಿರುವ ಆರಾಮ ಕುರ್ಚಿಯ ಮೇಲೆ ಆತನಲ್ಲದೇ ಬೇರಾರೂ ಕುಳಿತುಕೊಳ್ಳುವುದು ಅವನಿಗೆ ಇಷ್ಟವಾಗುವುದಿಲ್ಲ. ಮುಂದಿನ ಟೀಪಾಯಿಯ ಮೇಲಿನ ಕವಳದ ಪೇಳಿಯೂ ಅವನಿಷ್ಟಪಟ್ಟಂತೆಯೇ ಇದೆ. ಅಡಕತ್ತರಿ ಅವನ ಮಾತು ಕೇಳುತ್ತದೆ. ಜಗುಲಿಯ ಗೋಡೆಗೆ ತೂಗುಹಾಕಿರುವ ದೊಡ್ಡ ಗಡಿಯಾರವೊಂದನ್ನು ಬಿಟ್ಟರೆ ಮನೆಯಲ್ಲಿ ಯಾವೊಂದು ವಸ್ತುವೂ ಆತನಿಚ್ಛೆಯಿಲ್ಲದೆ ಕದಲುವುದಿಲ್ಲ ಎಂಬಂತೆ ಸ್ಥಾಪಿಸಲ್ಪಟ್ಟಿದೆ. ಆದ್ದರಿಂದ ಮಾಣಿಯ ಸ್ಥಾನಮಾನಗಳ ಪ್ರಶ್ನೆಯೇ ಅಲ್ಲಿಯವರೆಗೂ ಬಂದಿರಲಿಲ್ಲ.

ಅಚ್ಚೆಮನೆಯ ನರಸಣ್ಣ ಕೈ ಕೈ ಹಿಸುಕಿಕೊಳ್ಳುತ್ತಿದ್ದಾನೆಂಬ ಸುದ್ದಿ ಮಾಣಿಗೆ ಕೇಳಿಸಲಾರಂಭಿಸಿತ್ತು. ಅವರ ನಡುವಿನ ಜಗಳಕ್ಕೆ, ಈರ್ಷ್ಯೆಗೆ, ತಾನು ಯಾವ ಬೆಂಬಲವನ್ನು ನೀಡಬೇಕೋ ಬೇಡವೋ ಎಂಬ ಬಗ್ಗೆ ಮಾಣಿಯೇ ಸ್ವತಃ ಗೊಂದಲದಲ್ಲಿದ್ದ. ನರಸಣ್ಣನ ಮಾತೆತ್ತಿದ್ದರೆ ಕೆಂಡಾಮಂಡಲನಾಗಿ ದೊಡ್ಡ ದನಿಯಲ್ಲಿ ಅದನ್ನೇ ಮಾತಾಡುವ



ಅಪ್ಪಯ್ಯ ಒಂದೆಡೆ. ದಿನವೂ ಮನೆಯಲ್ಲಿ ಅದೇ ಚರ್ಚೆ, ಒಣಶುಂಠಿ ವೇದಾಂತ ಬೇಸರ ತರಿಸಿಬಿಟ್ಟಿತ್ತು. ಯಾವುದೇ ವಿಷಯದ ಬಗ್ಗೆ ಕೂಡ ಏನೂ ಮಾತಾಡದಿರುವ ನಿರ್ಧಾರಕ್ಕೆ ಬಂದುಬಿಟ್ಟ.

ಅಪ್ಪಯ್ಯ ಹಗಲೆಲ್ಲ ನರಸಣ್ಣನನ್ನು ಬೈದರೆ, ಸಂಭಾವಿತನಂತೆ ಪಕ್ಕದಲ್ಲಿ ಕುಳಿತು ಕವಳ ಮೆಲ್ಲುತ್ತ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದನೇ ಹೊರತು, ಮಾತೊಂದನ್ನೂ ಆಡುತ್ತಿರಲಿಲ್ಲ!

ಅದೊಂದು ಸಂಜೆ.

ಅಪ್ಪಯ್ಯ ತಮ್ಮನ ಬಳಿ ಅದೇನೋ ಘರ್ಜಿಸುತ್ತಿದ್ದ. ಅಂಥದ್ದೇನು ಬಂತು? ನರಸಣ್ಣನಿಂದ ಯಾವ ಮಹಾನ್ ಕಾರ್ಯ ಸಾಧ್ಯವಾಗಿರಬಹುದು? ಮಾಣಿಯ ಶಂಕೆ ಸರಿಯಾಗಿಯೇ ಇತ್ತು. ನರಸಣ್ಣ ಯಲ್ಲಾಪುರದಲ್ಲಿ ಒಂದು ಹೊಸ ಮನೆ ಕಟ್ಟಿಸುತ್ತಿದ್ದಾನಂತೆ. 'ತಾನೇ ದೊಡ್ಡ ಕೊತ್ವಾಲ ಅಂದುಕೊಂಡಿದ್ದಾನೆ. ನಮಗೂ ಮನೆ ಕಟ್ಟಲು ಸಾಧ್ಯವಿಲ್ಲವಾ ಅಂತ ನೋಡೇಬಿಡೋಣ' ಎಂದ ಅಪ್ಪಯ್ಯ. ಪೇಟೆಯ ಬಗ್ಗೆ ಹೆಚ್ಚಿನ ಮಾಹಿತಿ ಇರುವ ಖಾರೆಮನೆ ಭಾವನನ್ನು ಕರೆಸಿ ಮನೆಗೆ ಎಲ್ಲಾದರೂ ಜಾಗ ಸಿಗುತ್ತೋ ಅಂತ ನೋಡೋಣ ಅಂತಾಯ್ತು. ಹೈವೇ ಅಂಚಿಗೆ ಕಾಮತ್ ಹೊಟೆಲಿನ ಪಕ್ಕದಲ್ಲಿ ಜಾಗವಿದೆ ಅಂತ ಗೊತ್ತೂ ಆಯ್ತು. ಮನೆಯಿಂದ ಬರೇ ಎಂಟು ಕಿಮೀ ದೂರದಲ್ಲಿದ್ದ ಪೇಟೆಯಲ್ಲಿ. ಯಾರ ಉಪಯೋಗಕ್ಕೋ ಗೊತ್ತಿಲ್ಲ! ಮನೆಯಂತೂ ತಲೆಯೆತ್ತಿತು.

ಆ ಮನೇಲಿ ತಮ್ಮ, ಕಾಲೇಜಿಗೆ ಹೋಗುವ ತಂಗಿ ಉಳಿದರು. ಮಾಣಿ ಈ ಎಲ್ಲ ಬೆಳವಣಿಗೆಗಳಲ್ಲಿ ತೊಡಗಿಸಿಕೊಂಡೂ ತೊಡಗಿಸಿಕೊಳ್ಳದವನಂತೆ ಉಳಿದಿದ್ದ. ತಮ್ಮನಿಗೆ ತಿರುಗಾಡಲು ಒಂದು ಕಾರು ಸಹ ಬಂತು. ತಮ್ಮನ ಲಾಭ ಬೆಳೆಯುತ್ತಿತ್ತು. ಅಪ್ಪಯ್ಯನ ಮುಖದಲ್ಲಿ ಮಿರುಗುತ್ತಿದ್ದ ನಗುವೇ ಅದನ್ನು ಹೇಳುತ್ತಿತ್ತು. ಮಂಡಿ ತೆಗೆದ ಮಾರನೆ ದಿನದಿಂದಲೇ ಊರವರೆಲ್ಲ ಪಾರುಪತ್ಯ ಒಪ್ಪಿಕೊಂಡವರಂತೆ ಅಪ್ಪಯ್ಯನಿಗೆ, 'ಹೆಗಡೇರಿಗೆ ನಮಸ್ಕಾರ' ಎನ್ನುತ್ತಿದ್ದುದು ಮಾಣಿಯ ಗಮನಕ್ಕೂ ಬಂದಿತ್ತು. ಹಾಗಿದ್ದೂ ಅದೇ ಗೌರವ ಅಚ್ಚೆಮನೆಯ ನರಸಣ್ಣನಿಗೂ ಸಿಗುತ್ತಿದ್ದುದು ಅಪ್ಪಯ್ಯನ ಮಟ್ಟಿಗೆ ನುಂಗಲಾರದ ತುತ್ತಾಗಿತ್ತೆನಿಸುತ್ತದೆ.

ಒಂದು ದಿನ ಬೆಳಗಾಯ್ತು. ಒಕ್ಕಲಿನವರ ಮನೆಗಳಲ್ಲಿ ಕೋಳಿ ಕೂಗೋ ಹೊತ್ತು. ಅಪ್ಪಯ್ಯ

ಗೊರಕೆ ಹೊಡೆಯುವ ಸದ್ದಿನ ಮಧ್ಯೆಯೇ ಮಾಣಿ ಎಚ್ಚೆತ್ತ. ಅದಕ್ಕೇನು ಅಪ್ಪಯ್ಯನ ಪರ್ಮಿಶನ್ ಬೇಕಾಗಿರಲಿಲ್ಲ. ಮದುವೆಯಾಗಿದ್ದು 'ಮಾಣಿಗೆ ಮದುವೆ ಮಾಡಬೇಕು' ಅಂತ ಅಪ್ಪಯ್ಯನಿಗೆ ಅನ್ನಿಸಿದ ಮೇಲೆ ಆಗಿತ್ತಾದರೂ, ಮಲಗಲು, ಏಳಲು ಸ್ವತಂತ್ರನಿದ್ದ. ದೇವರ ಪೂಜೆ ಮಾಡಿ ಮುಗಿಸಿ, ಹೆಂಡತಿ ಮಾಡಿದ ತೆಳ್ಳಗಿನ ಬಿಸಿ ದೋಸೆ ತಿಂದು, ಇನ್ನೇನು ತೋಟಕ್ಕೆ ಹೋಗಬೇಕು ಅಂತಿದ್ದ. ಅಷ್ಟರಲ್ಲಿ ಮಠದ ಶ್ರೀಪಾದನ ಆಗಮನವಾಯಿತು.

'ಬಂದೆಯಾ ಮನೆಹಾಳು ನಾರದ ಮುನಿಯೇ' ಅಂತ ಮನಸ್ಸಿನಲ್ಲೇ ಶಪಿಸಿಕೊಂಡ ಮಾಣಿ, ಸೊಂಟಕ್ಕೆ ಕತ್ತಿ ಉಡುಕೊಕ್ಕೆ ಕಟ್ಟಿಕೊಳ್ಳುತ್ತಲೇ, 'ಶ್ರೀಪಾದಣ್ಣ, ಮತ್ತೆಂತ ಸುದ್ದಿ' ಎಂದು ಕೇಳಿದ.

ದಿನದ ಮೊದಲ ಕವಳ ಉಗಿಯುವ ಮೊದಲೇ ಧೂರ್ತ ದರ್ಶನವಾಗಿದ್ದು ಅವನಿಗೇನೂ ಶುಭ ಶಕುನದಂತೆ ಕಾಣಲಿಲ್ಲ.

'ಅಪ್ಪಯ್ಯ ಇಲ್ಯ' ಎಂದು ಕೇಳುತ್ತ ಶ್ರೀಪಾದ ಒಳಗೇ ಹೊಕ್ಕ. ಅಪ್ಪಯ್ಯನ ಬಳಿಗಷ್ಟೇ ಹೇಳುವ ಸುದ್ದಿಯೆಂದರೆ ಏನೋ ಕಾದಿದೆಯೆಂದು ಮಾಣಿಗೆ ಅನಿಸಿಬಿಟ್ಟಿತು. ಪ್ರತಿಕ್ರಿಯಿಸದೆ ಚೊಬ್ಬೆ ಕೈಯ್ಯಲ್ಲಿ ಹಿಡಿದವನೇ ನೇರ ತೋಟಕ್ಕೆ ಕಾಲ್ಬೆಳೆಸಿದ.

ಏಲಕ್ಕಿ ಕೊಯ್ಯುತ್ತಿದ್ದ. ಅರೆ ಅರಿಶಿನ, ಅರೆ ಹಸಿರು ಬಣ್ಣದ ಏಲಕ್ಕಿಗಳು ಒಂದಾಗಿ, ಹತ್ತಾಗಿ, ನೂರಾಗಿ ಚೊಬ್ಬೆ ತುಂಬಿಕೊಳ್ಳುತ್ತಿದ್ದವು. ಈ ಸಲ ಒಳ್ಳೆ ರೇಟು ಬಂದರೆ ಅಪ್ಪನ ಹತ್ತಿರ ಹೇಳಿ ತೋಟದಲ್ಲಿ ಏನೆಲ್ಲ ಸುಧಾರಣೆ ಮಾಡಿಸಬಹುದೆಂದು ಯೋಚಿಸುತ್ತಿದ್ದ. ಇತ್ತೀಚೆಗೆ ಅಪ್ಪಯ್ಯನಿಗೆ ಮಂಡಿ ಮತ್ತು ಅಚ್ಚಿಮನೆ ರಾಜಕೀಯದಲ್ಲೇ ಹೆಚ್ಚು ಆಸಕ್ತಿ ಬೆಳೆಯುತ್ತಿದ್ದಂತಿತ್ತು. ಏನೇ ಹೇಳಿದರೂ ಸರಿ, ಹಾಗೇ ಮಾಡೋಣ ಅನ್ನುತ್ತಿದ್ದ. ಮತ್ತೊಂದು ಕ್ಷಣಕ್ಕೇ ವಿಷಯಗಳನ್ನು ಮರೆಯುತ್ತಿದ್ದ.

ಕಳೆದ ಸಲ ಕೊನೆ ಕೊಯ್ಯುವಾಗ ಹಾಗೇ ಆಯಿತು. ಅಂದು ಕೊನೆ ಕೊಯ್ಯುವುದೆಂದು ಮಾಣಿ ಆಳಿಗೆ ಹೇಳಿ ಬಂದಿದ್ದ. ಅಪ್ಪಯ್ಯನೂ ಅಡ್ಡ ಭಾವಿಸುತ್ತ ಹೂಂ ಎಂದಿದ್ದ. ನಂತರ ಆ ದಿನ ಬೆಳಗ್ಗೆ ಅಮಾಸೆ ಎಂದು ಅಪ್ಪಯ್ಯನಿಗೆ ಅದ್ಹೇಗೆ ನೆನಪಾಯ್ತೋ ಏನೋ. ಕೊನೆ ಕೊಯ್ಯುವ ಕೆಲಸ ಕ್ಯಾನ್ಸಲ್! ಆಳನ್ನು ಸುಮ್ಮನೇ ಕಳಿಸಿದ್ದಾಯ್ತು.

ಎರಡು ಬರಣ ಕೊಯ್ದು ಮುಗಿಯುವುದರೊಳಗೇ ಏಲಕ್ಕಿ ಚೊಬ್ಬೆ ತುಂಬುತ್ತಿತ್ತು. ಈ ಬಾರಿ ಬಂಪರ್ ಪೀಕ್ ಅಂತ ಅನ್ನಿಸಲಾರಂಭಿಸಿತು. ಯಾರೋ ಕೂಗಿದಂತಾಯ್ತು. ಕೈಗಳನ್ನು ಯಾಂತ್ರಿಕವಾಗಿ ಕೆಲಸ ಮಾಡಲು ಬಿಟ್ಟು ಆಲೋಚನೆಯ ಗುಂಗಿನಲ್ಲಿದ್ದ ಮಾಣಿ, ಅರ್ಧ ನಿದ್ದೆಯಲ್ಲಿ ಎತ್ತಿ ಎಸೆಯಲ್ಪಟ್ಟವನಂತೆ ಹಠಾತ್ ಎಚ್ಚರಗೊಂಡ.

ಎರಡನೇ ಸಾರಿ ಕರೆ ಕೇಳಿಸಿದಾಗ ಧ್ವನಿ ಅಪ್ಪಯ್ಯನದೆಂದು ಗೊತ್ತಾಯ್ತು.

ಧ್ವನಿ ಬಂದತ್ತ ಚೊಬ್ಬೆ ಹಿಡಿದು ಏಲಕ್ಕಿ ಹಿಂಡುಗಳು ಮುರಿಯದಂತೆ ಅರ್ಜೆಂಟಾಗಿ ಧಾವಿಸಿದ. ಅಪ್ಪಯ್ಯ, ನರಸಣ್ಣನ ಜೊತೆ ಕಾಳಗ ಆರಂಭವಾದ ಮೇಲೆ ತೋಟಕ್ಕೆ ಬರುವುದನ್ನೇ ಬಿಟ್ಟುಬಿಟ್ಟಿದ್ದ. ಮೊದಲು, ಕೈ ಬೀಸುತ್ತ, ಹಾಗಾಗಬೇಕು, ಈ ಕೆಲಸ ಹೀಗೆ ಮಾಡಬೇಕು ಎನ್ನುತ್ತಿದ್ದವ, ನಂತರ ತೋಟದ ಕಡೆಗಾಗಲೀ, ಕೆಲಸಗಳ ಕಡೆಗೇ ಆಗಲೀ ತಲೆ ಹಾಕುತ್ತಲೇ ಇರಲಿಲ್ಲ. ಆತ ಕರೆಯುತ್ತಿದ್ದ ಧಾಟಿ ನೋಡಿಯೇ, ಬಂದಿದ್ದು ಕೆಲಸಕ್ಕಾಗಿಯಂತೂ ಅಲ್ಲ ಎಂಬುದನ್ನು ಊಹಿಸಿದ. ಮತ್ತೊಮ್ಮೆ ಕರೆಯುವ ವೇಳೆಗೆ ಆತನ ಬಳಿ ನಿಂತಿದ್ದ.

'ಇಷ್ಟು ವಯಸ್ಸಾಯ್ತು. ಬುದ್ಧಿ ಮಾತ್ರ ಬೆಳೀಲಿಲ್ಲ ನಿಂಗೆ. ತಂಗಿಗೆ ಮದುವೆ ಮಾಡಬೇಕು ಅನ್ನೋ ಜ್ಞಾನ ಇರಬೇಕಲ್ಲ'


ಅಪ್ಪನಿಗೆ ತಂಗಿಯ ಮೇಲೆ ಹಠಾತ್ ಅಷ್ಟೆಲ್ಲ ಕಾಳಜಿ ಬಂದುಬಿಟ್ಟಿದ್ದರ ಹಿಂದೆ ಮನಸ್ಸು ಮತ್ತೇನನ್ನೋ ಶಂಕಿಸಿತು. ಆದರೂ ಉಭಕ್ಕಿಲ್ಲದ



ಶುಭಕ್ಕಿಲ್ಲದ ತನ್ನನ್ನು ಗುರಿಯಾಗಿಸಿದ್ದು ಮಾತ್ರ ಸರಿ ಕಾಣಲಿಲ್ಲ ಮಾಣಿಗೆ. ಅಷ್ಟಕ್ಕೂ ತಂಗಿಗೇನು ವಯಸ್ಸು ಮೀರಿತು ಎನ್ನುವ ಹಾಗಿದೆಯೇ? ಅವಳಿಗೆ ಬರೀ ಹತ್ತೊಂಬತ್ತು! 'ಅಚ್ಚೆಮನೆ ನರಸನ ಮಾಣಿ ನೋಡು. ತನ್ನ ಅಮೇರಿಕಾದಲ್ಲಿರುವ ಸ್ನೇಹಿತನಿಗೆ ತಂಗಿಯನ್ನು ಕೊಟ್ಟು ಮದ್ವೆ ಮಾಡೋ ತಯಾರಿ ಮಾಡಿದಾನೆ. ನೀನಿದ್ದೀ ನೋಡು!' ಅಪ್ಪಯ್ಯನ ಮೂದಲಿಸುವ ಧ್ವನಿ ಅವನಿಗಿಷ್ಟವಾಯ್ತೆಂದಲ್ಲ. ಆದರೂ ಮನೆಯನ್ನು ಕುರುಕ್ಷೇತ್ರವಾಗಿಸಲಿಚ್ಛಿಸದೆ ಸುಮ್ಮನುಳಿದ. ಪ್ರತಿಸಾರಿ ಅವ ಮಾಡುತ್ತಿದ್ದುದು ಸಹ ಅದೇ.

ಸರಿ, ತಂಗಿಯ ಮದುವೆಗೆ ಅಂತ ಓಡಾಡುವ ಪಾಳಿ ಇನ್ನು ತನ್ನದಾಯ್ತೆಂದು ಮಾಣಿಗೆ ಅರ್ಥವಾಯ್ತು.

ಆದರೆ ಯೋಗವೆಂಬುದು ತುಂಬ ವಿಚಿತ್ರ. ಕೆಲವರು ಕೈಯಿಟ್ಟಲ್ಲೆಲ್ಲ ಗೆದ್ದುಬಿಡುತ್ತಾರೆ. ಅಮೇರಿಕಾದಲ್ಲಿದ್ದವರ‍್ಯಾರೋ ಕೇಳಿಕೊಂಡು ಬಂದರು. ಮದುವೆಯೂ ಆಗಿಬಿಟ್ಟಿತು.



ಆದರೆ ಅಪ್ಪಯ್ಯನಲ್ಲಿ ಈರ್ಷ್ಯೆ ಹುಟ್ಟಿಸುತ್ತಿದ್ದ ಅಚ್ಚೆಮನೆ ನರಸಣ್ಣನ ಪಾಲಿಗೆ ಜೀವನವೇನೂ ಹೂವಿನ ಹಾಸಿಗೆಯಾಗಿರಲಿಲ್ಲ. ಮಂಡಿ ವ್ಯವಹಾರ ಪೂರ್ತಿ ಲಾಸ್‌ನಲ್ಲೇ ಇರುವ ಸುದ್ದಿಯೂ ಅಪ್ಪಯ್ಯನ ಮೂಲಕ ಮಾಣಿಗೆ ತಿಳಿಯಿತು.

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಪೇಟೆಯಲ್ಲಿ ನರಸಣ್ಣ ಕಟ್ಟಿಸಿದ್ದ ಮನೆ ಮುರಿದು ಬಿದ್ದಿರುವ ಸುದ್ದಿಯೂ ಸಿಕ್ಕಿತು. ಅದನ್ನು 'ನರಸಣ್ಣ ತನ್ನ ಮಂಡಿ ತೆರೆಯಲು ಸಖತ್ ಸಾಲ ಮಾಡಿದ್ದನಂತೆ' ಎಂಬ ಸುದ್ದಿಯೂ ಹಿಂಬಾಲಿಸಿತು. ಅದರ ಬೆನ್ನಹಿಂದೆ ಅಮೇರಿಕಾಕ್ಕೆ ಕೊಟ್ಟಿದ್ದ ನರಸಣ್ಣನ ಮಗಳು ವರದಕ್ಷಿಣೆಗಾಗಿ ಪೀಡಿಸಲ್ಪಟ್ಟು ವಾಪಸಾದ ಸುದ್ದಿಯೂ ಸೇರಿತು.

ಆಯಿ ಭಯಪಟ್ಟಳು.

'ಅಮೇರಿಕಾದಲ್ಲಿ ಇರುವವರೆಂದರೆ ಅಷ್ಟೇ. ಅವರಿಗೆ ಅಪ್ಪ, ಅಮ್ಮ, ಅತ್ತೆ, ಮಾವ ಅಂತ ಯಾರೂ ನೆನಪೇ ಇರುವುದಿಲ್ಲವಂತೆ. ನಾನು ಮೊದಲೇ ಹೇಳಿದ್ದೆ. ದೂರ ದೇಶದ ಸಂಬಂಧ ಬೇಡ ಅಂತ' ಎಂದಳು.

ಆದರೆ ಅಂಥದ್ದೇನೂ ಆಗಲಿಲ್ಲ. ದೀಪಾವಳಿಗೆ ಅಳಿಯ, ಮಗಳು ಇಬ್ಬರೂ ಬಂದು ಹೋದರು.

ನರಸಣ್ಣ ಮಾಡಿದ ಎಂಬ ಹೊಟ್ಟೆಕಿಚ್ಚಿಗೇ ಆದರೂ ಅಪ್ಪಯ್ಯ ಮುಟ್ಟಿದ್ದೆಲ್ಲ ಬಂಗಾರವಾಗುತ್ತಿತ್ತು. ನರಸಣ್ಣ ಎಲ್ಲದರಲ್ಲೂ ನಷ್ಟ ಅನುಭವಿಸಿದ. ಈ ಮಧ್ಯೆ, ಅವನಿಗಿದ್ದ ಒಬ್ಬನೇ ಮಾಣಿ, ಹುಬ್ಬಳ್ಳಿಗೆ ಹೋಗುತ್ತಿದ್ದಾಗ ಕಾರು ಅಪಘಾತವಾಗಿ ಕಾಲು ಮುರಿದುಕೊಂಡ.

'ದೇವರೆ, ನಮಗೂ ಒಂದಷ್ಟು ಕಷ್ಟಕೊಡು. ಅಪ್ಪಯ್ಯನಿಗೆ ಜೀವನದ ಪಾಠಗಳನ್ನು ಕಲಿಸು' ಎಂದು ಮಾಣಿ ಆ ದಿನ ಬೆಳಿಗ್ಗೆ ಪೂಜೆ ಮಾಡುವಾಗ ಬೇಡಿಕೊಂಡ. ಸ್ವಲ್ಪ ಹೊತ್ತಿನಲ್ಲೇ ಶ್ರೀಪಾದನಿಂದ ಸುದ್ದಿ ಬಂತು.

ನರಸಣ್ಣ ಕಾಣುತ್ತಿಲ್ಲವಂತೆ, 'ನನಗೆ ಬದುಕಿನ



ಮೇಲೆ ಆಸೆಯಿಲ್ಲ' ಅಂತ ಚೀಟಿಯಲ್ಲಿ ಬರೆದಿಟ್ಟು ಅರ್ಧರಾತ್ರಿಯಲ್ಲೇ ಮನೆ ಬಿಟ್ಟಿದ್ದಾನಂತೆ. ಬೆಳಗ್ಗೆ ಎಬ್ಬಿಸಲು ಹೋದ ಹೆಂಡತಿಗೆ ಗಂಡ ಹಾಸಿಗೆಯಲ್ಲಿಲ್ಲದಿದ್ದುದು ಗೊತ್ತಾಗಿದೆ. ಊರಿನಲ್ಲಿರುವ ಕೆರೆ, ಬಾವಿ ಎಲ್ಲ ಹುಡುಕುತ್ತಿದ್ದಾರಂತೆ!

'ನಾವೂ ಹೋಗಿ ನೋಡೋಣ' ಎಂದ ಮಾಣಿ.

'ಏನ್ ಬೇಡ. ನೀ ಸುಮ್ನೆ ಕೂತ್ಕ' ಎಂದು ಅಪ್ಪ ಗೊಗ್ಗರು ಧ್ವನಿಯಲ್ಲಿ ಹೇಳಿದ.

ಮಾಣಿ ಟವೆಲನ್ನು ತಲೆಗೆ ಸುತ್ತಿಕೊಂಡು ತೋಟದ ಕಡೆ ಹೆಜ್ಜೆ ಹಾಕಿದ.

ಸಂಕ ದಾಟಿ ಹೋದರೆ ತೆಂಗಿನ ಮರಗಳ ಸಾಲು. ಮುಂದೆ ಪಂಪ್‌ಸೆಟ್ ಮನೆ. ಪಕ್ಕದಲ್ಲೇ ಬಾವಿ. ನಂತರ ಬರುತ್ತದೆ ತೋಟ. 'ತೋಟಕ್ಕೆ ನೀರು ಬಿಟ್ಟು ತುಂಬ ದಿನಗಳೇ ಆದವು' ಎಂದು ನೆನಪಿಸಿಕೊಂಡವ ಪಂಪ್ ಚಾಲೂ ಮಾಡಲೆಂದು ಪಂಪ್‌ಸೆಟ್ ಮನೆಗೆ ಹೋದ.

ಪಂಪ್ ಆನ್ ಆಯಿತು.

ಬಾವಿಯಲ್ಲಿ ನೀರೆಷ್ಟಿದೆ, ಸದ್ಯ ಮಳೆಯೂ ಬರಲಿಲ್ಲ ಎಂದು ಕೊಳ್ಳುತ್ತ ಬಾವಿ ನೀರನ್ನು ನೋಡಿದವನೇ ಬೆಚ್ಚಿದ. ಅದೇನೆಂಬ ಬಗ್ಗೆ ಯಾವ ಸಂಶಯ ಕೂಡ ಇರಲಿಲ್ಲ. ಅದು ಹೆಣ ಎಂದು ಅರ್ಥವಾಗುತ್ತಲೇ ಕಿರುಚಿದ.



ಆಮೇಲೆ ಅಪ್ಪಯ್ಯ ಪೊಲೀಸ್ ಕಂಪ್ಲೇಂಟ್ ಕೊಡುತ್ತೇನೆಂದು ಪಟ್ಟುಹಿಡಿದ, ನರಸಣ್ಣನ ಹೆಂಡತಿ ಮಕ್ಕಳು ಬೇಡ ಎಂದು ಅಂಗಲಾಚಿದರೂ ಕೇಳದೆಯೇ. ದ್ವೇಷ ಸಾಧಿಸಲೆಂದಲ್ಲ. ತನ್ನ ಮತ್ತು ಕುಟುಂಬದ ಮೇಲೆ ಬರಬಹುದಾದ ಆರೋಪಗಳಿಂದ ಬಚಾವಾಗಲೆಂದೇ ಇರಬಹುದು.

ಅಷ್ಟಾಯ್ತು.

ಅಪ್ಪಯ್ಯ ಶತ್ರುವೆಂದು ಭಾವಿಸಿದ್ದ ನರಸಣ್ಣ ತನ್ನನ್ನೇ ಸಂಹರಿಸಿಕೊಂಡಿದ್ದ. ಇನ್ನಾದರೂ ಅಪ್ಪಯ್ಯನ ರೋಗ ವಿಮುಕ್ತಿಯಾಗುತ್ತೆಂದುಕೊಂಡಿದ್ದ ಮಾಣಿ. ಆದರೆ ಅಪ್ಪಯ್ಯನಲ್ಲಿ ಮೊದಲಿನ ವಿಜೃಂಭಣೆ, ನರಸಣ್ಣನನ್ನು ಒಮ್ಮೊಮ್ಮೆ ಗೆದ್ದಾಗಲೂ ಕಾಣಸುತ್ತಿದ್ದ ವಿಜಯದ ಕೇಕೆ ಈಗ ಅದೆಲ್ಲಿ ಹೋಗಿತ್ತೋ!

ಐದು ವರ್ಷಗಳಲ್ಲಿ ಇಷ್ಟೆಲ್ಲ ನಡೆದುಬಿಟ್ಟಿತು. ಈರ್ಷ್ಯೆ ತನ್ನ ಬಲಿಯನ್ನು ತೆಗೆದುಕೊಂಡಿತು. ಅದೃಷ್ಟವಶಾತ್ ತಮ್ಮ ಕುಟುಂಬ ಅದರಿಂದ ಪಾರಾಯ್ತು ಎಂದುಕೊಂಡ ಮಾಣಿಗೆ, ಅಪ್ಪಯ್ಯ ಈಗ ಇರುವ ರೀತಿ ಒಮ್ಮೆ ಆಶ್ಚರ್ಯ ತರುತ್ತಿತ್ತು. ಆದರೆ ಯೋಚಿಸಿದಂತೆಲ್ಲ ಅದರ ಅರ್ಥಗಳೂ ಕಾಣಸುತ್ತಿದ್ದವು. ನರಸಣ್ಣನನ್ನು ಹೇಗೆ ಹದ್ದುಬಸ್ತಿನಲ್ಲಿಡುವುದು ಎಂದೇ ಹಗಲೂ, ರಾತ್ರಿ ನಿದ್ದೆ

ಬಾರದಿದ್ದಾಗಲೂ ಯೋಚಿಸುತ್ತಿದ್ದವನಿಗೆ ಈಗೇನು ಕೆಲಸವಿರಬಹುದು? ನರಸಣ್ಣನ ಶವವನ್ನು ಪೋಸ್ಟ್ ಮಾರ್ಟಂ ಮಾಡಿ ಸಂಜೆ ಊರಿಗೆ ತರುತ್ತಿದ್ದಾರೆ, ಶವಸಂಸ್ಕಾರ ಮಾಡುತ್ತಾರೆ ಎಂಬ ಸುದ್ದಿ ಸಿಕ್ಕಿತು. ಅಪ್ಪಯ್ಯನ ಬಳಿ 'ಹೋಗಿ ಬರ್ತೆ' ಎಂದ. ಅಪ್ಪಯ್ಯ ಹೂಂ ಎನ್ನಲಿಲ್ಲ. ಊಹುಂ ಎಂದೂ ಹೇಳಲಿಲ್ಲ. ಅದನ್ನೇ ಅನುಮತಿ ಎಂದು ಪರಿಗಣಿಸಿದ ಮಾಣಿ, ಆಯಿ, ಹೆಂಡತಿಯರನ್ನೂ ಕರೆದುಕೊಂಡು ನರಸಣ್ಣನ ಮನೆಗೆ ಧಾವಿಸಿದ.

ದುಃಖದಲ್ಲಿದ್ದವರನ್ನು ಸಾಂತ್ವನಿಸಿ, ಧೈರ್ಯ ತುಂಬುತ್ತ, ಕಾಲು ಕಳೆದುಕೊಂಡಿದ್ದ ನರಸಣ್ಣನ ಮಗನಿಗೆ ಹೆಣ ಹೊರಲೂ ಸಹಕರಿಸಿದ ಮಾಣಿ. ಮಾಣಿ ನೋಡನೋಡುತ್ತಲೇ ನರಸಣ್ಣನ ಮಗ ಅಪ್ಪನ ಶವಕ್ಕೆ ಬೆಂಕಿ ಹೊತ್ತಿಸಿದ. ನೀಲಾಕಾಶದ ಕತ್ತಲೊಳಗೆ ಲೀನವಾಗುತ್ತಿದ್ದ ಹೊಗೆಯನ್ನೇ ದಿಟ್ಟಿಸುತ್ತ ನಿಟ್ಟುಸಿರಿಟ್ಟ ಮಾಣಿ.

ರಾತ್ರಿ ಆಯಿ ಮತ್ತು ಮಾಣಿ ಮನೆಗೇನೋ ಬಂದರು.

ಅಪ್ಪಯ್ಯ ಎಲ್ಲೂ ಕಾಣಿಸಲಿಲ್ಲ. ಮನೆಯ ಜಗುಲಿ, ಅಡುಗೆಮನೆ, ಒಳಕೋಣೆ, ಮೆತ್ತು ಎಲ್ಲ ಹುಡುಕಿಯೇ ಹುಡುಕಿದರು. ಮಾಣಿಗೆ ಏನೋ ಅನುಮಾನ ಬಂದಂತಾಗಿ ಟಾರ್ಚ್ ಹಿಡಿದು, ಮನೆ ಮೆಟ್ಟಲಿಳಿದು ಸರಬರ ಹೆಜ್ಜೆ ಹಾಕುತ್ತ ಹಳ್ಳಕ್ಕೆ ಹಾಕಿದ್ದ ಸಂಕ ದಾಟಿ, ತೆಂಗಿನ ಮರದ ಸಾಲನ್ನೂ ದಾಟಿ ಪಂಪ್‌ಮನೆಯ ಆ ಕಡೆ ಬಾವಿಯ ನೀರಿಗೆ ಗುರಿಯಿಟ್ಟು ಟಾರ್ಚ್ ಬೆಳಗಿಸಿದ.

ಅನುಮಾನ ನಿಜ.

ಏನೋ ತೇಲುತ್ತಿದೆ.

ಬಿಳಿ ಪಂಚೆ ತೇಲುತ್ತಿದ್ದಂತೆ, ಬಿಳಿ ಶರಟು ತೇಲುತ್ತಿದ್ದಂತೆ... ದೇಹ ಅದರೊಳಗಿದ್ದಂತೆ... ಮಾಣಿ ಮತ್ತೂ ಜೋರಾಗಿ ಕಿರುಚಿದ. ಅದು ಅಪ್ಪಯ್ಯನೆಂಬ ಬಗ್ಗೆ ಅವನನ್ನು ಯಾವ ಅನುಮಾನವೂ ಕಾಡಲಿಲ್ಲ.

ಊರ ತುಂಬ ಅದೇ ಮಾತು.

ಆಚೀಚೆ ಮನೆಯವರ ನಡುವಿನ ಸಮರ ಹೀಗೆ ಮುಕ್ತಾಯವಾದ ಬಗ್ಗೆ ಮಾತೋ ಮಾತು. ನರಸಣ್ಣ ಸತ್ತ, ಸರಿ, ಸಾಕಷ್ಟು ಸಾಲ ಸೋಲ ಮಾಡಿದ್ದ, ಸತ್ತ. ಆದರೆ ಗಣಪಯ್ಯನಿಗೇನಾಗಿತ್ತು? ಎಂಬುದೇ ಎಲ್ಲರ ಬಾಯಲ್ಲೂ ಕೇಳಿಬರುತ್ತಿದ್ದ ಪ್ರಶ್ನೆ.

ಬೆಳಗ್ಗೆ ಮೊದಲು ಬರುವ ಬಸ್‌ಗಾಗಿ ಕಾಯುತ್ತಿದ್ದ ಯಂಕಣ್ಣ, ಛಳಿಗೆ, 'ಹಾಹಾ ಅಹಹ' ಎನ್ನುತ್ತ ಕೈಕಟ್ಟಿಕೊಂಡು, ಶೀಗೆಮನೆ ಸುಬ್ರಾಯನ ಬಳಿ, 'ನಿನಗೆ ಮತ್ತೊಂದು ಮಜಾ ಗೊತ್ತಿದೆಯಾ...? ಊರಿಗೊಂದು ದಾರಿಯಾದರೆ ಪೋರನಿಗೆ ಬೇರೆಯದೇ ದಾರಿಯಂತೆ. ಗಣಪಯ್ಯನ ಮಗ ತನ್ನ ಅಪ್ಪಯ್ಯನನ್ನು ಸುಡುವ ಬದಲು ಗುಡ್ಡೆ ತುದಿಯ ಮೇಲೆ ಹುಗಿದು ಬಂದನಂತೆ' ಎಂದ.

ದೇವರೆ, ನಮಗೂ ಒಂದಷ್ಟು ಕಷ್ಟ ಕೊಡು. ಜೀವನದ ಪಾಠಗಳನ್ನು ಕಲಿಸು!' ಎಂದು ಮೊನ್ನೆ ಆ ದಿನ ಪೂಜೆ ಮಾಡುವಾಗ ಬೇಡಿಕೊಂಡೆ. —ಗಣೇಶ್ ಯಲ್ಲಾಪುರ



ಕ್ಯಾನ್‌ವಾಸ್




ಸತ್ಯಂ ಸುಂದರಂ

- ಅಪಾರ

ಬಾದಾಮಿ ಮೂಗಿನ, ದುಂಡು ಮೊಗದ, ಮುದ್ದು ತರಳೆಯರು, ನೀಟು ಕ್ರಾಪಿನ, ನೀಳ ಮೂಗಿನ ಜೇಮ್ಸ್ ಬಾಂಡ್ ಲಕ್ಷಣಗಳ ಯುವಕರು, ಸಾವಿರ ಸುಕ್ಕುಗಟ್ಟಿದ ಮುಖದ ಮುದ್ದು ಅಜ್ಜ ಅಜ್ಜಿಯರು, ಪಳಫಳ ಬೊಗಸೆಗಂಗಳ ಮಕ್ಕಳು... ಹೀಗೆ ತಾವು ಬಿಡಿಸಿದ ಚಂದದ ಚಿತ್ರಗಳಿಂದ, ಕನ್ನಡ ಓದುಗರ ಮನಸೂರೆಗೊಂಡ ವಿಶಿಷ್ಟ ರೇಖಕರು- ಜೆ.ಕೆ. ಸತ್ಯ. ಪ್ರಮಾಣಬದ್ಧ ಅನಾಟಮಿ, ಮುಗ್ಧತೆಯೇ ಮೈವೆತ್ತ, ಭಾವಗೀತೆಯಂತೆ ಮಧುರವಾದ ಚಿತ್ರಗಳಿಂದ ಮನೆಮಾತಾಗಿರುವ ಈ ಚಿತ್ರಗಾರನ ಜತೆ, ಪುಟ್ಟ ಮಾತುಕತೆ.

''ಚಿಕ್ಕವನಿದ್ದಾಗ ಕನ್ನಡಿಯ ಮುಂದೆ ಕೂತು, ನನ್ನ ಬಿಂಬವನ್ನೇ ನೋಡಿ ಇದ್ದಿಲು ಚೂರಿನಿಂದ ಚಿತ್ರ ಬಿಡಿಸುತ್ತ ಕುಳಿತು, ಮನೆಯವರಿಂದ ಬೈಸಿಕೊಳ್ಳುತ್ತಿದ್ದೆ. ಆದರೆ ನನ್ನ ಚಿಕ್ಕಪ್ಪ ಜೆ. ನಾರಾಯಣ, ನನ್ನೊಳಗಿನ ಪ್ರತಿಭೆ ಗುರ್ತಿಸಿ ಬಣ್ಣ ತಂದುಕೊಟ್ಟರು. ಆಗ ಚಿತ್ರದುರ್ಗದ ನಮ್ಮ ಮನೆಯ ಮಹಡಿಯ ಮೇಲೆ ಕೇರಳದ ಕಲಾವಿದ


Wedding




ಗಾಂಧಿ ಮಾಲಿಕೆಯ ಒಂದು ಚಿತ್ರ

ಜಯವರ್ಮ (ರವಿವರ್ಮರ ಮೊಮ್ಮಗ) ಬಾಡಿಗೆಗಿದ್ದರು. ಅವರು ಬಿಡಿಸಿದ ಲವ, ಕುಶ, ಸೀತೆಯರ ಬೃಹತ್ ಪೇಂಟಿಂಗ್‌ಗಳನ್ನು ನೋಡುತ್ತ ನನ್ನ ಅಭಿರುಚಿ ರೂಪುಗೊಳ್ಳತೊಡಗಿತು. ಯಾವ ಕಲಾಶಿಕ್ಷಣದ ಹಿನ್ನೆಲೆಯೂ ಇರದಿದ್ದ ನಾನು, ಒಂದು ವರ್ಷ ಅವರ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಮೊದಲ ಪಾಠಗಳನ್ನು ಕಲಿತೆ. ಕಾಗದದ ಮಧ್ಯೆ ಒಂದು ಗೆರೆ ಎಳೆದು, ಅದರ ಎಡಗಡೆ ತಾವೊಂದು ಬಳ್ಳಿ ಬಿಡಿಸಿ, ಬಲಬಾಗದಲ್ಲಿ ಅದನ್ನೇ ಚಿತ್ರಿಸುವಂತೆ ಅವರು ಹೇಳುತ್ತಿದ್ದರು.

ಕಾಪಿ ಅವಗುಣವೇನಲ್ಲ

ಬೇರೆಯವರ ಚಿತ್ರಗಳನ್ನು ಕಾಪಿ ಮಾಡುವುದು ತಪ್ಪು ಎಂಬ ಅಭಿಪ್ರಾಯ ಕೆಲವರಲ್ಲಿದೆ. ಆದರೆ ಹೊಸ ಕಲಾವಿದ್ಯಾರ್ಥಿಗೆ ಕಾಪಿ ಅವಗುಣವೇನಲ್ಲ; ಅತ್ಯವಶ್ಯಕ ಕೂಡ. ಮನುಷ್ಯರನ್ನೋ, ಪ್ರಕೃತಿಯನ್ನೋ ನೋಡಿಕೊಂಡು ಬರೆದಂತೆ, ಇಷ್ಟದ ಕಲಾವಿದರ ಚಿತ್ರಗಳನ್ನು ಕಾಪಿ ಮಾಡಿದರೆ ತಪ್ಪಿಲ್ಲ. ವರ್ಷಗಟ್ಟಲೇ ಕಾಪಿ ಮಾಡಿದರೆ ಕೈ ಪಳಗುತ್ತದೆ. ರೇಖೆಗಳ ಮೇಲೆ ಹಿಡಿತ ಸಿಗುತ್ತದ
ನಂತರ ಸ್ವಂತ ಕಲ್ಪನೆಗಳನ್ನು ಚಿತ್ರಿಸುವಾ
ಮನಸ್ಸಿನ ವೇಗಕ್ಕೆ ಕೈ ಓಡುತ್ತದೆ. ನಾನು
ಆರಂಭದಲ್ಲಿ 'ಆನಂದವಿಕಟನ್', 'ಕುಮುದಂ
'ಕಲ್ಕಿ' ಮೊದಲಾದ ತಮಿಳು ಮ್ಯಾಗಜಿನ್‌ಗಳಲ್ಲಿ
ಚಿತ್ರಗಳನ್ನು ಕಾಪಿ ಮಾಡಿದವನೇ.



ನಾನು ಹನ್ನೊಂದು ವರ್ಷದವನಿದ್ದಾಗೊಮ್ಮೆ ನೆಹರೂ ಚಿತ್ರದುರ್ಗಕ್ಕೆ ಬಂದಿದ್ದರು. ಪಂಚಶೀಲ ತತ್ವದ ಹಿನ್ನೆಲೆಯಲ್ಲಿ ನಾನು ಬಿಡಿಸಿದ್ದ ಚಿತ್ರಗಳನ್ನು ಅವರಿಗೆ ತೋರಿಸಿದೆ. ಅವನ್ನು ನೋಡಿ ಮೆಚ್ಚಿದ ನೆಹರೂ, ನನ್ನ ಬೆನ್ನುತಟ್ಟಿ, ಶಾಂತಿನಿಕೇತನ ಕಲಾಶಾಲೆಗೆ ಶಿಫಾರಸು ಪತ್ರವನ್ನೂ ಬರೆದರು. ಆದರೆ ಆಗಿನ್ನೂ ಎಸ್ಸೆಸ್ಸೆಲ್ಸಿಯನ್ನೂ ಮುಗಿಸಿರದಿದ್ದ ನಾನು ಶಾಂತಿನಿಕೇತನ ಸೇರಲಾಗಲಿಲ್ಲ.

1957ರ ಹೊತ್ತಿಗೆ ಬೆಂಗಳೂರಿಗೆ ಬಂದದ್ದು ನನ್ನ ಜೀವನದ ಪ್ರಮುಖ ತಿರುವು. ಅಷ್ಟು ಹೊತ್ತಿಗಾಗಲೇ ನನ್ನ ವಿಶಿಷ್ಟ ರೇಖೆಗಳಿಂದ ಸಾಕಷ್ಟು ಗಮನ ಸೆಳೆದಿದ್ದ ನನಗೆ, ತರಾಸು, ಅನಕೃರಂಥ ಪ್ರಮುಖ ಕಾದಂಬರಿ ಕಾರರ ಪುಸ್ತಕಗಳಿಗೆ ಹೊದಿಕೆಚಿತ್ರ ರಚಿಸುವ ಅವ ಕಾಶಗಳು ಸಿಗತೊಡಗಿದವು. ಒಂದು ಮುಖಪುಟಕ್ಕೆ 35ರೂ ಸಿಗುತ್ತಿತ್ತು. ತಿಂಗಳಿಗೆ ಏಳೆಂಟಾದರೂ ಅವಕಾಶ ಸಿಗುತ್ತಿದ್ದವು. ಅದೇ ಹೊತ್ತಿಗೆ ಗೆಳೆಯ, ಹಿತೈಷಿ, ಸಾಹಿತಿ ಮ. ರಾಮಮೂರ್ತಿ ನನ್ನನ್ನು ಬಿ.ಎನ್. ಗುಪ್ತಾರಿಗೆ ಪರಿಚಯಿಸಿದರು. 'ಮಲ್ಲಿಗೆ' ಸೇರಿದೆ. ಆಗ ಕನ್ನಡದ ಏಕೈಕ ಕಥಾ ಪ್ರಧಾನ ಮಾಸಿಕ ವಾಗಿದ್ದ 'ಮಲ್ಲಿಗೆ'ಯಲ್ಲಿ ಐದು ವರ್ಷಗಳ ಕಾಲ ಅವಿರತ ದುಡಿದೆ. ನಂತರ 'ಸುಧಾ'ದಿಂದ ಕರೆ ಬಂತು. 'ಸುಧಾ'ದಲ್ಲಿದ್ದ ವಿಶೇಷ ಸೌಲಭ್ಯ, ಹೆಚ್ಚಿನ ಸಮಯಾವಕಾಶ ಮತ್ತು ಸಿಂಹ, ರಮೇಶ್, ಚಂದ್ರ ನಾಥ್ ಆಚಾರ್ಯರಂತಹ ಪ್ರತಿಭಾವಂತರ ಒಡ ನಾಟದಿಂದಾಗಿ ನಾನು ಕಲಾವಿದನಾಗಿ ಬೆಳೆದಿದ್ದು ಅಲ್ಲೇ.

ಆರಂಭದ ಏಕವರ್ಣ, ದ್ವಿವರ್ಣಗಳ ದಿನ ಗಳನ್ನು ದಾಟಿ ಬಹುವರ್ಣದ ಆಫ್‌ಸೆಟ್ ಯುಗಕ್ಕೆ ಕಾಲಿರಿಸಿದಾಗ ನಮಗೆಂಥಾ ರೋಮಾಂಚನ ವಾಗಿತ್ತೆಂಬುದನ್ನು ವರ್ಣಿಸಲಾಗದು.


ಸೃಜನಶೀಲತೆ ಮತ್ತು ಕಸುಬುಗಾರಿಕೆ

ರಂಗೋಲಿ ಹಾಕುವ ಹುಡುಗಿಯಿಂದ, ಮನೆಯನ್ನು ಓರಣವಾಗಿರಿಸುವ ಗೃಹಿಣಿಯಿಂದ





ಕತೆಗೆ ಬರೆದ ಚಿತ್ರಗಳು



ಕಾದಂಬರಿಯ ಮುಖಪುಟ



...ತೆಯ ಬೆಳಕು' ಮಾಲಿಕೆಯ ಒಂದು ಚಿತ್ರ

ಒಡಿದು ಪ್ರತಿಯೊಬ್ಬನಲ್ಲೂ ಸೃಜನಶೀಲತೆಯಿರುತ್ತದೆ. ಕಲಾವಲಯದಲ್ಲಿ ಕೇಳಿಬರುವ, ಕಸುಬುಗಾರಿಕೆಗಿಂತ ಸೃಜನಶೀಲತೆಯೇ ಮುಖ್ಯ ಎಂಬ ಮಾತುಗಳು ನನಗೇನೂ ಒಪ್ಪಿಗೆಯಾಗುವುದಿಲ್ಲ. ಮೊದಲು ಮೂರ್ತ ಚಿತ್ರ ರಚನೆಯಲ್ಲಿ ಪಳಗಬೇಕು; ನಂತರ ಅಮೂರ್ತದೆಡೆ ಸಾಗಬೇಕು. ಹಾಗೆಯೇ ಚಿತ್ರವೊಂದನ್ನು ಓದಬಾರದು; ನೋಡಬೇಕು, ಅನುಭವಿಸಬೇಕು. ಬಣ್ಣ ಆಕಾರಗಳನ್ನು ಗಮನಿಸಬೇಕೇ ಹೊರತು ಬಿಡಿ ವಿವರಗಳನ್ನಲ್ಲ.

ಧಾರಾವಾಹಿ ಮತ್ತು ಕತೆ

ಧಾರಾವಾಹಿಗಿಂತ ಕತೆಗೆ ಚಿತ್ರ ಬರೆಯುವುದೇ ನನಗೆ ಹೆಚ್ಚು ಇಷ್ಟ ಮತ್ತು ಸವಾಲಿನದೆನಿಸುತ್ತದೆ. ಏಕೆಂದರೆ ಧಾರಾವಾಹಿಗಳಲ್ಲಿ ನಿರ್ದಿಷ್ಟ ಸನ್ನಿವೇಶವನ್ನು ಯಥಾವತ್ತಾಗಿ ಬಿಡಿಸುವಷ್ಟಕ್ಕೆ ರೇಖಕ ಸೀಮಿತನಾಗಿಬಿಡುತ್ತಾನೆ. ಆದರೆ ಒಂದು ಕತೆಗೆ ಚಿತ್ರ ಬಿಡಿಸುವಾಗ ಕಲಾವಿದನಿಗೆ ಹೆಚ್ಚು ಸಾಧ್ಯತೆಗಳಿರುತ್ತವೆ. ಇಲ್ಲಿ ಕಲಾವಿದ ಒಂದು ಕತೆಗೆ ನಾಲ್ಕು ತರದ ಚಿತ್ರಗಳನ್ನು ರಚಿಸಬಹುದು. ಕತೆಯ ಪಾತ್ರವೊಂದನ್ನು ಚಿತ್ರಿಸಬಹುದು. ಅಥವಾ ಕತೆಯ ಸನ್ನಿವೇಶವೊಂದನ್ನು ಬರೆಯಬಹುದು. ಇಲ್ಲವೇ ಕತೆ ನೀಡುವ ಅನುಭವವನ್ನು ಚಿತ್ರವಾಗಿಸಬಹುದು. ಅಥವಾ ಇಡೀ ಕತೆ ಒಟ್ಟಾರೆ ತನ್ನನ್ನು ತಟ್ಟಿದ ಬಗೆಯನ್ನು ಚಿತ್ರಿಸಬಹುದು. ನಿತ್ಯ ಎಷ್ಟೋ ಕತೆಗಳಿಗೆ ಚಿತ್ರಬರೆಯಬೇಕಾಗಿರುವ ರೇಖಕ, ಸೂಕ್ತ ಸಾಧ್ಯತೆಗಳನ್ನು ಬಳಸಿ ಏಕತಾನತೆಯಿಂದ ಪಾರಾಗಬಹುದು. ಧಾರಾವಾಹಿಗಳು 15ಕ್ಕಿಂತಲೂ ಹೆಚ್ಚು ಕಂತಿಗೆ ಮುಂದುವರೆದರೆ, ಚಿತ್ರ ಬಿಡಿಸುವ ಆಸಕ್ತಿ ಇಂಗುತ್ತಾ ಹೋಗುತ್ತದೆ.

ಅಕ್ರಿಲಿಕ್ ಬಣ್ಣ ನನಗಿಷ್ಟವಾದ ಮಾಧ್ಯಮ. ಏಕೆಂದರೆ ಅದರಲ್ಲಿ ಜಲವರ್ಣದ ಸರಾಗತೆ ಮತ್ತು ತೈಲವರ್ಣದ ಪರಿಣಾಮ ಎರಡೂ ಇರುತ್ತವೆ. 2-3 ದಿನಗಳಲ್ಲಿ ಒಂದು ಪೇಂಟಿಂಗ್ ಪೂರ್ಣಗೊಳಿಸುತ್ತೇನೆ. ಬಂಗಾರದ ಹಳದಿ ನನ್ನನ್ನು ಮತ್ತೆ ಮತ್ತೆ ಕಾಡುವ ಬಣ್ಣ. ಆ ಬಣ್ಣದ ಬೆಚ್ಚನೆಯ ಜೀವಂತಿಕೆ ಇಷ್ಟವಾಗುತ್ತದೆ.''

ತಮ್ಮ ಸುದೀರ್ಘ ರೇಖಾಟನೆಯ ಜೀವನದಿಂದ ನಿವೃತ್ತಿ ಹೊಂದಿ ಈಗ ಮನೆಯಲ್ಲೇ, ತಮಗಿಷ್ಟವಾಗುವ ಪೇಂಟಿಂಗ್‌ಗಳಲ್ಲಿ ತೊಡಗಿಕೊಂಡಿರುವ ಜಿ.ಕೆ. ಸತ್ಯ, ಮೂಡು, ಏಕಾಂತ, ನಿರ್ದಿಷ್ಟ ಸಮಯಗಳ ಹಂಗಿಲ್ಲದೆ ಚಿತ್ರ ಬಿಡಿಸುತ್ತಲೇ ಇರುವ ಪ್ರತಿಭಾವಂತ. 'ತರಂಗ'ಕ್ಕೆ ತಾವು ರಚಿಸಿದ ಭಗವದ್ಗೀತೆಯನ್ನಾಧರಿಸಿದ 'ಗೀತೆಯ ಬೆಳಕು' ಮಾಲಿಕೆಯ ಚಿತ್ರಗಳು ಸಂತೃಪ್ತಿ ತಂದಿವೆಯೆನ್ನುವ ಸತ್ಯ, ಈಗ 'ಶಾಕುಂತಲಾ' ಮಾಲಿಕೆಯ ಚಿತ್ರಗಳಲ್ಲಿ ತಲ್ಲೀನರಾಗಿದ್ದಾರೆ. ತಮ್ಮ ಚಿತ್ರಗಳಂತೆಯೇ ನೇರ, ಸರಳ, ಸುಂದರವಾಗಿ ಮಾತನಾಡುವ, ಈ ಮೋಹಕ ರೇಖಕನ ಬೆರಗಿನ ಬೆರಳುಗಳು ಇನ್ನೂ ಬಹುಕಾಲ ಕ್ರಿಯಾಶೀಲವಾಗಿರಲಿ. ■

ತೆರೆದ ಅಂಚೆ



ಗಂಡಸಿನ ಕೈಲಿ ಕೂಸಿಲ್ಲಾ
ಹೆಂಗಸಿನ ಕೈಲಿ ಕಾಸಿಲ್ಲಾ
ಕೈಗೆ ಬಂದಾಗ 'ಸುಮಧುರ' ಮಾಸಿಕ
ಕಾಸೂ ಕೂಸು ಬರ್ಲಿಲ್ಲ ದ್ಯಾಸಕ...

ಮಳೆ ನಿಂತ ನಂತರ ಹೆಂಚಿನಿಂದ ಜಾರಿ ೀಳುವ ನೀರ ಹನಿಗಳ 'ಥಟ್, ಥಟ್' ಾನದಷ್ಟೇ ಮನ ಸೆಳೆದಿದೆ 'ಭಾವನಾ'.

ಾವೇರಿ — ಮಾಲತೇಶ ಮಾಳಮ್ಮನವರ

ಮೊದಲ ಹುಟ್ಟುಹಬ್ಬದೊಳಗೇ ಎಲ್ಲರೊಂದಿಗೆ ಾವನಾತ್ಮಕ ಸಂಬಂಧವನ್ನು ಬೆಳೆಸಿಕೊಂಡಿರುವ ಭಾವನಾ', ಮೈಕೈ ತುಂಬಿಕೊಂಡು, ವರ್ಷವಿಡೀ ಮೆಲ್ಲಬಹುದಾದಷ್ಟು ಹೂರಣದೊಂದಿಗೆ ಮನ ಗೆ ತುಂಬಾ ಮುದ ಕೊಟ್ಟಿತು.

ಮೊದಲು ಪುಟಗಳನ್ನೆಲ್ಲಾ ಒಮ್ಮೆ ತಿರುವಿ ಾಕೋಣ ಎಂದುಕೊಂಡೆ. ಆದರದು ಸಾಧ್ಯವಾಗ ಿಲ್ಲ. ಯಾವ ಪುಟವೂ ಅದನ್ನು ಓದಿ ಮುಗಿಸದೆ, ನನ್ನನ್ನು ಮುಂದಿನ ಪುಟಕ್ಕೆ ಬಿಡುತ್ತಿಲ್ಲವೆಂಬ ಅರಿ ವಾಯಿತು. ಯುಗಾದಿ ಹಬ್ಬದಂದು 'ಭಾವನಾ' ೂಟ್ಟ ಬೆಲ್ಲ (ಮುತ್ತು)ವನ್ನು ಮರೆಯಲಾದೀತೆ?

ುಬ್ಬಳ್ಳಿ — ಅಜಿತ ಕುಲಕರ್ಣಿ

ಇದೊಂದು ಅನಿವಾರ್ಯ ಕರ್ಮವೆಂಬಂತೆ ಾಲಂಗೋಚಿ ಸಮೇತ ಪ್ರತಿವರ್ಷವೂ ಹೊರಬರುತ್ತಿರುವ ವಿಶೇಷಾಂಕಗಳಿಗಿಂತ ತೀರ ಭಿನ್ನವಾಗಿದೆ. ವಿಶೇಷಾಂಕವೆಂದರೆ ಬರೀ ಸುಪ್ರಸಿದ್ಧರೇ ಮಿಂಚಬೇಕೆಂಬ ಸಂಪ್ರದಾಯವನ್ನು ಕೂಡ ನೀವು ಮುರಿದಿದ್ದೀರಿ.

ಬೆಂಗಳೂರು — ಎಂ.ಎಚ್. ನಾಯಕಬಾಡ

ವಿಶೇಷಾಂಕ ಹೊಸ ಬಗೆಯಲ್ಲಿ, ಅರ್ಥಪೂರ್ಣವಾಗಿ, ಸಾಂದರ್ಭಿಕವಾಗಿ ಹಾಗೂ ಸರ್ವಾಂಗ ಸುಂದರವಾಗಿ ಮೂಡಿಬಂದಿದೆ.

ಚಿಂತಾಮಣಿ — ಬಿ.ಆರ್. ಲಕ್ಷ್ಮಣ್‌ರಾವ್

ಒಂದು ವಾರದಿಂದ ಕಾದು ವಿಶೇಷಾಂಕವನ್ನು ಖರೀದಿಸಿ ಪುಟ ತಿರುವಿದಾಗ ಇಲ್ಲಿಯವರೆಗೆ ಓದಿರುವ ವಿಶೇಷಾಂಕಗಳಿಗಿಂತ ಭಿನ್ನವಾಗಿ, ವೈವಿಧ್ಯತೆಯಿಂದ ಕೂಡಿದೆ ಅನಿಸಿತು. ಸೃಜನಶೀಲ ಸಂಸ್ಕೃತಿಯ ಹೊಸತನವಿದೆ.

ಬಿಜಾಪುರ — ಶಂಕರ ಕಟಗಿ

'ಭಾವನಾ'ಕ್ಕೆ ವರುಷ ತುಂಬಿತೆಂದರೆ ನಂಬುವುದೇ ಕಷ್ಟವಾಗುತ್ತದೆ. ನಿನ್ನೆ ಮೊನ್ನೆಯಷ್ಟೇ ಮೊದಲ ಸಂಚಿಕೆ ಓದಿದಂತೆ ನೆನಪು. 'ಭಾವನಾ' ಬಹುಕಾಲ ಬಾಳಲಿ.

ಶಿವಮೊಗ್ಗ — ಮಧು ಜಿ.ಎಮ್.

ನೀವೇ ಹೇಳಿದಂತೆ ನುಡಿದ ಹಾದಿ, ನಡೆದ ಹಾದಿಯ ಸಾರ್ಥಕತೆ, ಸಾಫಲ್ಯತೆ ಈ ವಿಶೇಷಾಂಕದಲ್ಲಿ ಪಡಮೂಡಿದೆ. ಯಾವಾಗಲೂ 'ಭಾವನಾ' ಅದೇಕೋ ನಮ್ಮವಳೇ ಅನಿಸುತ್ತಿರುತ್ತದೆ.

ತುರ್ವಿಹಾಳ — ಪ್ರಮೋದ

ಕವಿತೆ, ಕತೆ, ಚಿತ್ರ, ಚಿಂತನೆ ಎಲ್ಲದರಲ್ಲೂ ಒಂದು ನಾವೀನ್ಯ ಎದ್ದುಕಾಣುತ್ತಲೇ ಇದೆ. ಪ್ರತಿಪುಟ ಅರ್ಥಪೂರ್ಣ.

ಧಾರವಾಡ ಗುರುಲಿಂಗ ಕಾಪಸೆ

ಜಾನ್‌ಫರ್ನಾಂಡಿಸ್‌ರ ಉಳಿದ ಚಿತ್ರಗಳಂತೆ ಮುಖಪುಟವೂ ಚೆನ್ನಾಗಿದೆ. ಚಿತ್ರಕಲೆಯನ್ನು ಸಾಹಿತ್ಯಕ್ಕೆ ಪೂರಕವಾಗಿ 'ಭಾವನಾ' ಬಳಸಿಕೊಳ್ಳುತ್ತಿರುವಂತೆ ಬೇರಾವ ಪತ್ರಿಕೆಯೂ ಬಳಸಿಕೊಳ್ಳುತ್ತಿಲ್ಲ. 'ಸುದಾಮ' ಕತೆಗೆ ಬಳಸಿರುವ ಚಿತ್ರಗಳು ಚೆನ್ನಾಗಿವೆ.

ತೀರ್ಥಹಳ್ಳಿ ಎಲ್.ಸಿ. ಸುಮಿತ್ರಾ

ಜಾನ್ ಫರ್ನಾಂಡಿಸ್‌ರ ವರ್ಣಲೀಲೆ ಸುಂದರವಾಗಿತ್ತು. ಪ್ರತಿ ಚಿತ್ರವೂ ಆಕರ್ಷಿಸಿತು. ಎದೆಯೊಳಗಿನ ನಮ್ಮದೇ ಭಾವನೆಗಳು ಬಣ್ಣದಲ್ಲಿ ಮುಳುಗೆದ್ದು ಬಂದಂತೆ ಅನುಭವವಾಯಿತು.

ಕುಂದರಗಿ ಗಣಪತಿ ಬಾಳೆಗದ್ದೆ

ನಾನೇನೂ ಕಲಾವಿದನಲ್ಲ. ಕಲಾಭಿಮಾನಿಯಷ್ಟೇ. ಆದರೆ ನಾನು 'ಭಾವನಾ' ಖರೀದಿಸುವುದೇ ಕ್ಯಾನ್‌ವಾಸಿಗಾಗಿ. ಈ ಸಲ ಜಾನ್ ಫರ್ನಾಂಡಿಸ್‌ರ ವರ್ಣಲೀಲೆ ಅದ್ಭುತವಾಗಿತ್ತು.

ಕಾರವಾರ ಐ.ಬಿ. ರಾಠೋಡ

ದೊಡ್ಡ ಆಕಾರದಲ್ಲಿ, ಹೆಚ್ಚಿನ ಪುಟಗಳೊಂದಿಗೆ ಮೈತುಂಬಿಕೊಂಡು ಬಂದ 'ಭಾವನಾ'ಳನ್ನು ಓದುವುದೊಂದು ಖುಷಿ. 'ಭಾವನಾ' ಹುಟ್ಟು ಸುಂದರಿ. ಈ ಹಬ್ಬದುಡುಗೆಯಲ್ಲಿ ಮತ್ತೂ ಆಕರ್ಷಕವಾಗಿ ಕಂಡಳು. ಜಾನ್ ಫರ್ನಾಂಡಿಸ್‌ರ ಕಲಾಕೃತಿಗಳು ಸಂಚಿಕೆಗೆ ಮೆರಗು ನೀಡಿವೆ.

ಉಪ್ಪಿನಗಂಡಿ ಲಿಂಗಪ್ಪ

ವ್ಹಾರೆ ವಾಹ್! ಏನು ಹೂರಣ, ಎಂತೆಂಥ ಅಂಕಣಗಳು. ಬೆಚ್ಚನೆ ಕತೆಗಳು, ಒಂದೇ ಎರಡೇ. ಯುಗಾದಿ ವಿಶೇಷಾಂಕ ಮನ ತಣಿಸಿತು.

ಹುಬ್ಬಳ್ಳಿ ಅರಾಟೆ ಅಣ್ಣಪ್ಪ ಎಸ್ ಶೆಟ್ಟ

ನಿರೀಕ್ಷೆ ಸುಳ್ಳಾಗಲಿಲ್ಲ. ವಿಶೇಷಾಂಕ ಈಗಷ್ಟೇ ಮಿಂದ ಹುಡುಗಿಯಂತೆ ಮನಸೆಳೆಯಿತು. ಅದರ ತುಂಬೆಲ್ಲಾ ಕವಿತೆಗಳೇ ತುಂಬಿರುವುದೊಂದು ವಿಶಿಷ್ಟ ಪ್ರಯೋಗ. ಸಾಲ್ಮಿಂಚು ಖುಷಿ ಕೊಟ್ಟಿತು. ಜಾನ್ ಫರ್ನಾಂಡಿಸರ ಕುಂಚದ ಲಘು ಸ್ಪರ್ಶದಲ್ಲಿ ಮೂಡಿ ಬಂದ ಅಪ್ಸರೆಯರು ಕನಸಿನಲ್ಲೂ ಕಾಡಿದರು.

ಆಚವೆ ಫಾಲ್ಗುಣ ಗೌಡ

ವಿಶೇಷಾಂಕ ಅಂದ, ಚೆಂದ, ರಂಜಕ ಮತ್ತು ಜ್ಞಾನ ಪ್ರಚೋದಕ.

ಬಲ್ಲೇನಹಳ್ಳಿ ಮಂಜುನಾಥ್

ಕವಿತೆಗಳ ಗುಂಪು ನಕ್ಷತ್ರಗಳಿಂದ ತುಂಬಿದ ಆಕಾಶದ ಹಾಗಿತ್ತು. ಅಷ್ಟೇ ಖುಷಿಕೊಟ್ಟಿತು. 'ವ್ಯಕ್ತಿ'ಯಾಗಿ ಕವಿ ಗಮನಾರ್ಹವಾಗದೆ ಹೋಗಿ, ಒಂದು ಸಮೂಹ ಯತ್ನದ 'ಕಾವ್ಯಗುಡ್ಡ'ದ ಹಾಗೆ ಕಾಣಿಸಿಕೊಂಡು ದಂಗಾಗಿ ತೋಗುತ್ತದೆ ಮನಸ್ಸು. ಇಂತಹ ಪ್ರಯತ್ನ ಬಹುಶಃ ಎಲ್ಲೂ ನಡೆದಿಲ್ಲ.

ಕಾಸರಗೋಡು ಎಂ. ವ್ಯಾಸ

ಕಾವ್ಯದ ಸೆಕ್ಷನ್ ಸೊಗಸಾಗಿದೆ. ಪುಟಪೂರ್ತಿ ಫ್ರೇಮ್ ಹಾಕಿ ಹಿರಿ ಕವಿಗಳ ಕವನ ಪ್ರಕಟಿಸೋ ವಿಶೇಷಾಂಕಗಳನ್ನೇ ನೋಡಿ ದಣಿವಾಗಿತ್ತು. ನಿಮ್ಮ ಕವಿಗಳ ಗ್ರೂಪ್ ಫೋಟೋ ಬ್ರಿಲಿಯಂಟ್ ಐಡಿಯಾ!

ಕುಕ್ಕು ಜಡ್ಡ ಸುರೇಶ್ ಕೆ.ಪಿ.

ಎಷ್ಟೊಂದು ಕವಿಗಳಿಗೆ ಅವಕಾಶ ನೀಡಿದ್ದೀರಿ. ಭಾವ ಜಗತ್ತಿಗೆ ಸಾಕಷ್ಟು ಸಾಂತ್ವನ ದೊರೆತಂತಾಗಿದೆ.

ಹಗರಿಬೊಮ್ಮನಹಳ್ಳಿ ಗುರುಮೂರ್ತಿ ಪೆಂಡಕೂರು

ವಿಶೇಷಾಂಕ, ಅಚ್ಚುಕಟ್ಟು ಮತ್ತು ರುಚಿಕಟ್ಟು. ಚರ್ಚಾಕೂಟಗಳು ಅರ್ಥಪೂರ್ಣ. ಇಷ್ಟೊಂದು ಹಿರಿ ಕಿರಿ ಕವಿಗಳನ್ನು ಒಟ್ಟಿಗೆ ಕಂಡದ್ದು ಇದೇ ಮೊದಲ ಸಲ. ಹಬ್ಬದ ತಿಂಡಿಗಳನ್ನು ಲಂಗದಲ್ಲಿ ಬಚ್ಚಿಟ್ಟುಕೊಂಡು ತಿನ್ನುವ ರೋಮಾಂಚನವೇ ವಿಶೇಷಾಂಕ ಓದುವಾಗಲೂ.

ತಗಡೂರು ಮಂಜುನಾಥ್ ಗೀತಾ

'ವೈಜ್ಞಾನಿಕ ದೃಷ್ಟಿಕೋನ', 'ಪುಸ್ತಕೀಯ', 'ಲೇಖಕನೇ ವಿಮರ್ಶಕನಾದಾಗ' ಲೇಖನಗಳು ಕುತೂಹಲಕರವಾಗಿರುವುದಲ್ಲದೆ, ಆಯಾ ಸಮಸ್ಯೆಗಳ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಮಾಹಿತಿಪೂರ್ಣವಾಗಿಯೂ ಇವೆ.

e-mail ಸಿ.ಎಸ್. ರಾಮಚಂದ್ರನ್

ವ್ಯಂಗ್ಯಚಿತ್ರಗಳು ನಗಿಸಿದವು. ವೈಜ್ಞಾನಿಕ ವಿಶ್ಲೇಷಣೆಯಲ್ಲಿ ರಾಮಶೇಷರ ನಿರೂಪಣೆ ಚೆನ್ನಾಗಿದೆ; ಮಿಕ್ಕ ಫೀಚರ್‌ಗಳೂ ಓಕೆ. 'ಸ್ಫೂರ್ತಿದೇವತೆ', 'ಕಾಗದದ ದೋಣಿ'ಗಳು ವೈವಿಧ್ಯಕ್ಕಾಗಿ ಮಾತ್ರ ಮರೆಯಾಗಿವೆಯೆಂದರೆ No problem. ಭಾವತುಂಬಿದ ಮುಖಪುಟ ನನ್ನ ಟೇಬಲ್ ಮೇಲಿನ ಗ್ಲಾಸಿನಡಿಯಲ್ಲಿ ನನ್ನನ್ನೇ ನೋಡುತ್ತ ಕುಳಿತಿದೆ.

ಪಾವಗಡ ಕೆ. ಪುರುಷೋತ್ತಮ ರೆಡ್ಡಿ

15ರೂಗೆ ಎಂಥ ಸೊಗಸಾದ ಪುಸ್ತಕ! ಕರೆಂಟು, ಭಯ್ಯಾ ಭಯ್ಯಾ, ಕಿಟಕಿಯೊಳಗಿನ ಬಿಸಿಲು, ಆಕಾಶಕ್ಕೊಂದು ಏಣಿ, ಮುತ್ತೇ ಮಣ್ಣಾಗಬೇಡ ಕತೆಗಳು ಹಿಡಿಸಿದವು. ಕೈ ಬಿಟ್ಟ ಅಂಕಣಗಳನ್ನು ಮತ್ತೆ ಮುಂದುವರೆಸಿ.

ಕುರದೋಡ ಬಸವರಾಜ ಐನಾಪುರ

'ಮಧುವನ'ದಲ್ಲಿ ವಸುಮತಿ ಉಡುಪರ 'ಋಣ' ಮನಸ್ಸಿಗೆ ಹತ್ತಿತು.

ಮಳ್ಳಿ ವಿಜಯೀಂದ್ರ ಕುಲಕರ್ಣಿ

ಗೀತಾ ವಸಂತರವರ 'ಮಳೆ ಬಂತೋ ಮಾರಾಯ' ಕತೆ ಮಲೆನಾಡಿನ ಹಳ್ಳಿಗಳ ಹವ್ಯಕ ಜೀವನದ ಪ್ರತಿಬಿಂಬವಾಗಿದೆ. ಓದುವಾಗ ನನ್ನ ಬಾಲ್ಯ ನೆನಪಾಯಿತು.

ಸಿಸಿಕನರ ಶಾಂತಲಾ ಸಾಯೀಮನೆ

ಸುಮಂಗಲಾ ಬಾದರದಿನ್ನಿಯವರ 'ಭಯ್ಯಾ... ಭಯ್ಯಾ' ಕತೆ ಮನಮಿಡಿಸಿತು. ಆರಂಭ, ಅಂತ್ಯಗಳ ಹಂಗಿಲ್ಲದೆ ಕಾದಂಬರಿಯ ನಡುವಿನ ಭಾಗದಂತಿತ್ತು. ಆದರೆ ಕಥಾವಸ್ತು ಚೆನ್ನಾಗಿದೆ. ಹೆಣಿಕೆಯೂ ಮೆಚ್ಚುಗೆಯಾಯಿತು.

ನಂದನಗದ್ದಾ ಹ.ಸ. ಬಾಕೋಡ

ವಿಶೇಷಾಂಕದ 'ಶಬ್ದತೀರ' ಓದಿದೆ. ಕಾವ್ಯದಂತಿದೆ. ಮನದಾಳದಲ್ಲೇನೋ ಮಿಸುಕಾಡಿದಂತಾಯ್ತು. ನಮ್ಮ ಗತ್ತಿನ ಬದುಕು ಈ ಮಣ್ಣನ್ನು, ಕೊಚ್ಚೆಯನ್ನು ಮರೆತು ವಿಮಾನದಲ್ಲಿ ಹಾರಿದರೂ ಈ ಮಣ್ಣ ಬಿಡಲಾದೀತೆ?

ಬಂದಗದ್ದೆ ರಾಧಾಕೃಷ್ಣ

ಹುಟ್ಟುಹಬ್ಬದ ಸಂಚಿಕೆ ವಿಶಿಷ್ಟವಾಗಿದೆ. ಹೊಸ್ತಿಲಲ್ಲಿ ನಿಂತು ಅದಕ್ಕಾಗಿ ಎದಿರುನೋಡುತ್ತಿದ್ದೆ. ಶಬ್ದತೀರ-ಅದೆಷ್ಟು ಚೆನ್ನಾಗಿ ಬರೆಯುತೀರ! 'ದೇವರ ಹೊಸ್ತಿಲಲ್ಲಿ' ತುಂಬಾ ಇಷ್ಟವಾಯಿತು.

ಕ್ಯಾತ್ಸಂದ್ರ ಕೆ.ಎಸ್. ಜಗನ್ನಾಥ್

ಹೃದಯವಂತಿಕೆಯ, ಸಂವೇದನಾಶೀಲತೆಯ ಅಭಾವದಿಂದಾಗಿ ನಾವೆಷ್ಟೊಂದು ಸುಂದರ ಅವಕಾಶಗಳನ್ನು ಪ್ರತಿದಿನ ಕಳೆದುಕೊಳ್ಳುತ್ತೇವೆಂಬ ಅಂಶ, 'ದೇವರ ಹೊಸ್ತಿಲಲ್ಲಿ' ಓದುವಾಗ ಸ್ಪಷ್ಟವಾಯ್ತು. ಹೂ ಮಾರುವ ಹುಡುಗಿಯರಲ್ಲಿನ ಸೊಬಗನ್ನು ತೋರಿಸಲು ನಿಮ್ಮಂಥವರು ಬೇಕು. ದೇವರಿರುವುದು ಹೊಸ್ತಿಲ ಒಳಗಲ್ಲ; ಹೂಗಳ ನಗೆ ಕೇಳುವುದು ಹೊರಗಿರುವ ಪುಟ್ಟಿಯರಿಗೆ ಮಾತ್ರ.


ಬೆಂಗಳೂರು ಹಾಲಾಡಿ ಮಾರುತಿ ರಾವ್

ಹೊಸ ಹೊಸ ಪ್ರಯೋಗ ಮಾಡುತ್ತಿರುವಿರಿ, ಪ್ರಶಂಸನೀಯ. ಕತೆಗಳು, ವಿಶ್ವ ಭಾರತಿ, ವಿಚಾರ ಸಂಗಮಗಳು ಚೆನ್ನಾಗಿ ಮೂಡಿವೆ.

ಕೊಲ್ಹಾಪುರ ಅ.ರಾ. ತೋರೊ

ವಿಶೇಷಾಂಕದ ಬೆಲೆಯನ್ನು ಕಡಿಮೆ ಇಟ್ಟಿರುವುದು ಸೂಕ್ತವಲ್ಲ. ಬೇಕಾದವರಿಗೆ ಬೆಲೆ ಮುಖ್ಯವಾಗದು. ವಿಶೇಷಾಂಕ ಕಿಕ್ಕಿರಿದ ಸಿಟಿ ಬಸ್ಸಿನಂತಾಗಿದೆ. ಕತೆ ಕವಿತೆಗಳು ತೀರಾ ಹೆಚ್ಚಾದವು. ಅದು ವಿನ್ಯಾಸದ ಮೇಲೆ ಪರಿಣಾಮವುಂಟು ಮಾಡಿದೆ. ಕುಸನೂರರ ಕತೆ ಇಷ್ಟವಾಯಿತು.

ಜಮಖಂಡಿ ಅರ್ಜುನ ಕೋರಟಕರ



ಕೊನೇ-ಸಿಪ್

ಚಂದಮಾಮ್

- ಬೋರ್ ಹೊಡೆಸಿದ ಕಲಾತ್ಮಕ ಚಿತ್ರವೊಂದನ್ನು ನೋಡಿ ಹೊರಬಂದ ಒಬ್ಬರು ಚಿತ್ರದ ನಿರ್ದೇಶಕರಿಗೊಂದು ಸಲಹೆಯಿತ್ತರು: 'ಎಲ್ಲ ಸರಿ, ಆದರೆ ಕೊನೆಗೆ ನಾಯಕಿ ಆತ್ಮಹತ್ಯೆ ಮಾಡಿಕೊಳ್ಳುವ ದೃಶ್ಯದಲ್ಲಿ, ನಿದ್ದೆ ಮಾತ್ರೆಯ ಬದಲಿಗೆ ರಿವಾಲ್ವಾರ್ ಬಳಸಿದ್ದಿದ್ದರೆ ಚೆನ್ನಾಗಿತ್ತು. ಮಲಗಿದ ಪ್ರೇಕ್ಷಕನಿಗೆ ಗುಂಡಿನ ಶಬ್ದದಿಂದಾದರೂ ಎಚ್ಚರಗೊಳ್ಳಲು ಅನುಕೂಲವಾಗುತ್ತಿತ್ತು.'
- ಹೊಸ ಅಲೆಯ ಚಿತ್ರವೊಂದನ್ನು ನೋಡಲು ಹೋದ ವಿಮರ್ಶಕರೊಬ್ಬರು ಶುರುವಿನಿಂದ ಕೊನೆವರೆಗೂ ನಿದ್ದೆ ಮಾಡಿಬಿಟ್ಟರು. 'ಹೇಗಿತ್ತು ಸಾರ್ ಸಿನಿಮಾ?' ಎಂದು ಕೇಳಿದ ನಿರ್ದೇಶಕನಿಗೆ, 'it was refreshing' ಎಂದರು!
- ಚಿತ್ರಮಂದಿರದ ಕತ್ತಲಲ್ಲಿ, ಹುಡುಗಿಯ ಹಿಂದೆ ಕುಳಿತಿದ್ದವನೊಬ್ಬ ಚಿತ್ರದುದ್ದಕ್ಕೂ ಅವಳ ಕಾಲು ತುಳಿಯುತ್ತಲೇ ಇದ್ದ. ಚಿತ್ರ ನೋಡಿ ಹೊರಬಂದ ಹುಡುಗಿ, 'ಫಿಲ್ಮ್ ಹೇಗಿತ್ತು?' ಎಂದ ಗೆಳತಿಗೆ ಪ್ರಾಮಾಣಿಕವಾಗಿ ಹೇಳಿದ್ದು: 'it was touching!'
- ಚಲನಚಿತ್ರ ಶಿಬಿರವೊಂದು ನಡೆಯುತ್ತಿತ್ತು. ದೇಶ ವಿದೇಶಗಳ ಗಂಭೀರ ಕಲಾತ್ಮಕ ಚಿತ್ರಗಳನ್ನು ಕುರಿತ ಚರ್ಚೆ, ವಿಚಾರ ಸಂಕಿರಣ, ಪ್ರದರ್ಶನಗಳು ಒಂದು ವಾರದವರೆಗೂ ನಡೆದವು. ನಾಡಿನ ಮೂಲೆ ಮೂಲೆಯಿಂದ ಅನೇಕ ಆಸಕ್ತರು ಭಾಗವಹಿಸಿದ್ದರು. ಎಂಟನೇ ದಿನ ಅವರ ಗುಂಪಿನಲ್ಲಿನ ಇಬ್ಬರು ದಿಢೀರ್ ನಾಪತ್ತೆಯಾದರು.

  ಸಂಜೆ ಸಿಕ್ಕ ಅವರನ್ನು ಉಳಿದವರು 'ಬೆಳಗಿನಿಂದ ಎಲ್ಲಿ ಹೋಗಿದ್ದಿರಿ?' ಎಂದು ಕೇಳಿದ್ದಕ್ಕೆ, 'ತುಂಬಾ ಬೇಜಾರಾಗಿತ್ತು. ಸೈಕಲ್ ತಗೊಂಡು ಸಿಟಿಗೆ ಹೋಗಿ ಪಿಚ್ಚರ್ ನೋಡಿ ಬಂದ್ವಿ' ಎಂದರು.
- ಸಿನಿಮಾ ನಿರ್ದೇಶಕ ಟಿ.ಎನ್. ಸೀತಾರಾಂ ತಮ್ಮ ಹತ್ತಿರದ ಬಳಗದವರೊಬ್ಬರನ್ನು 'ಸಿಂಡ್ರೆಲಾ' ಎನ್ನುತ್ತಾರೆ. ಯಾಕೆಂದರೆ ಆಕೆ ಯಾವಾಗಲೂ ಮುಖ ಸಿಂಡರಿಸಿಕೊಂಡೇ ಇರುತ್ತಾರಂತೆ!
- ಸೊಳ್ಳೆ ಪರದೆ ತಯಾರಿಸುವುದು ಹೇಗೆ ಗೊತ್ತೆ? ಮೊದಲು ಸಾವಿರಾರು ರಂಧ್ರಗಳನ್ನು ತೆಗೆದುಕೊಳ್ಳಿ. ನಂತರ ಅವನ್ನೆಲ್ಲಾ ಸೇರಿಸಿ ಹೊಲಿದು ಬಿಡಿ!
- ಮಲೆಯಾಳಿಯೊಬ್ಬಳು ಗಾಬರಿಯಿಂದ ಹೇಳುತ್ತಿದ್ದಳು; 'ನಿನ್ನೆ ರಾತ್ರಿ ಮಲಗುವಾಗ ಒಂದು ಗಂಡ; ಬೆಳಿಗ್ಗೆ ಏಳುವಾಗ ಹನ್ನೊಂದು ಗಂಡ' (ಅವಳು ವೇಳೆಯ ಬಗ್ಗೆ ಹೇಳುತ್ತಿದ್ದಾಳೆ!)
- ಮಲೆಯಾಳಿಯೊಬ್ಬನ ರಾಮಾಯಣ: 'ಹನುಮಂಧ ಲಂಗದೊಳಕ್ಕೆ ಪ್ರವೇಶಿಸಿದೊಡನೆ, ಇಡೀ ಲಂಗ ಹೊತ್ತಿಕೊಂಡು ಉರಿಯತೊಡಗಿತು...'

ಕಚಗುಳಿ : ಫ್ಯಾಷನ್ ಎಂದರೆ ಬಟ್ಟೆ ತೊಡುವ ಬಯಕೆ ಮತ್ತು ಬಟ್ಟೆ ಬಿಚ್ಚುವ ಬಯಕೆಗಳ ನಡುವಣ ರಾಜಿ.

Printed, published and owned by **Vijay Sankeshwar**, Published at 1st Floor, "Giriraj Annexe", P.W.D. Circuit House Road, HUBLI - 580 029 Karnataka Ph: 253656, 253657, 253658. Fax: 0836-253630
Printed at Anand Printers & Publishers, 9/A, Pantharapalya Village, Nayandahalli, Mysore Road, Bangalore - 560 039
Editor: **Jayant Kaikini**
© All rights reserved. Reproduction without permission is prohibited.

A treasure of Kancheepuram Silk Sarees at Govt. Subsidised Prices

** A Treasure of Kancheepuram Silk Sarees **

KANCHHI APEX SOCIETY

KANCHI APEX SOCIETY

(Air Conditioned)

254, 1st Floor, B.V.K. Iyengar Road,
Chickpet Square, Bangalore-560 053. Ph : 2875751

Head Office:
Kancheepuram Annai Kasthuribai Womens Silk Handloom Weavers
Co-Op. Production & Sale Society Limited. KH : 227
62/1, Gandhi Road, Kancheepuram-631 501. Tamil Nadu




"ಸಮಾರಂಭಗಳಲ್ಲಿ ಪಾಲ್ಗೊಂಡಿದ್ದಾಗ
ನಿಮಗೆ ಕಹಿ ಅನುಭವ ಆಗಿದೆಯೆ..?
...ಚಿಂತಿಸದಿರಿ, **ಬಾಡಿ ಫೋಕಸ್**
ನಿಮ್ಮ ಚಿಂತೆಯನ್ನು ದೂರ ಮಾಡುತ್ತದೆ"

*"ಸಮಾರಂಭಗಳಿಗೆ ಹೋದರೆಯೆಲ್ಲಾ ಜನರ ಸಹಾನುಭೂತಿ
ಸಲಹೆ ನನಗೆ ಬೇಸರ ತಂದಿತ್ತು.
ಕೊನೆಗೆ ಸಮಾರಂಭಗಳಿಗೆ ಹೋಗುವುದನ್ನೆ ನಿಲ್ಲಿಸಬೇಕಾಗಿದೆ.
ಆದರೆ ಬಾಡಿ ಫೋಕಸ್‌ಗೆ ಹೋಗತೊಡಗಿದಾಗಿನಿಂದ
ನನ್ನ ಚಿಂತೆಯೆಲ್ಲಾ ದೂರವಾಗಿದೆ.
ನನ್ನ ಹೆಚ್ಚಿನ ತೂಕವನ್ನೆಲ್ಲಾ ಕಳೆದುಕೊಂಡಿದ್ದೇನೆ.
ಈಗ ನನಗೆ ಸಮಾರಂಭಗಳಿಗೆ ಹೋಗುವುದೆಂದರೆ ತುಂಬಾ ಖುಷಿ"*

-ಅಂಜು
ಗೃಹಿಣಿ



ಕೂದಲಿನ ಚಿಕಿತ್ಸೆ



ಅಮೇರಿಕನ್ ತಂತ್ರಜ್ಞಾನದಿಂದ
3ಗಂಟೆಯಲ್ಲಿ
ಬೋಳು ತಲೆಯಲ್ಲಿ ಕಸಿ ಮಾಡುವಿಕೆ.

ಕಂಪ್ಯೂಟರೀಕೃತ
ಬಾಡಿ ಸ್ಕ್ಯಾನ್
(ಒಬೇಸಿಟಿಗಾಗಿ)
ಕೇವಲ ರೂ. 500/-

ವಾರದಲ್ಲಿ 7 ದಿನವೂ ತೆರೆದಿರುತ್ತದೆ
ಸಮಯ: ಬೆ. 8.00 ರಿಂದ ಸಂ. 8.00
ಭಾನುವಾರ ಬೆ. 10.00 ರಿಂದ ಸಂ. 5.00

ಮಹಿಳೆ ಮತ್ತು ಪುರುಷರಿಗಾಗಿ

ವೈಜ್ಞಾನಿಕ ಸೌಂದರ್ಯ ಚಿಕಿತ್ಸೆಗಳು

ತೂಕ ಕಡಿಮೆಗೊಳಿಸುವಿಕೆ ● ಬಾಡಿ ರೀ ಶೇಪಿಂಗ್
ಕಪ್ಪು ಕಲೆಗಳನ್ನು ಹೋಗಲಾಡಿಸುವುದು ● ಡಬಲ್ ಚಿನ್ ರಿಡಕ್ಷನ್
ಫೇಸ್ ಲಿಫ್ಟ್ ಮತ್ತು ಬ್ರೆಸ್ಟ್ ಲಿಫ್ಟಿಂಗ್ ● ವಿಟಲಿಗೋ (ತೊನ್ನು)
ತ್ವಚೆ ಚಿಕಿತ್ಸೆ-ಮೊಡವೆ ● ಹೊಟ್ಟು ಹೋಗಲಾಡಿಸುವ ಚಿಕಿತ್ಸೆ
ಕೂದಲು ಕಸಿ ಮಾಡುವಿಕೆ ● ಕೂದಲು ಉದುರುವಿಕೆಗೆ ಚಿಕಿತ್ಸೆ
ಡೀಪ್ ಹೀಟ್ ಸೆಲ್ಯೂಲೈಟ್ ಚಿಕಿತ್ಸೆ

BODY FOCUS
INDIA'S 1st EURO-TECH NON-SURGICAL AESTHETIC CLINIQUE
Lose weight. Without losing health.

3157, 12ನೇ ಮುಖ್ಯ ರಸ್ತೆ, ಇಂದಿರಾನಗರ, ಎಚ್.ಎ.ಎಲ್,
2ನೇ ಹಂತ, (ಇ.ಎಸ್.ಐ. ಆಸ್ಪತ್ರೆ ಎದುರು), ಬೆಂಗಳೂರು-8.
ಫೋನ್: 5214655/5214656
Website : www.bodyfocus.org
e-mail : blrbodyfocus@eth.net

ವೈದ್ಯರು ಮತ್ತು ತಜ್ಞರ ಸಲಹೆ ಮೇರೆಗೆ ಎಲ್ಲಾ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ.